ಮಂಗಳವಾರ, ಮಾರ್ಚ್ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 86 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಖಿನ್ನತೆ-ಉನ್ಮಾದಗಳೆರಡೂ ವಿಭಿನ್ನ ಧ್ರುವಗಳು. ಒಬ್ಬರಲ್ಲಿಯೇ ಇರಬಹುದಾದ ಈ ಅಸಹಜ ಸ್ವಭಾವಕ್ಕೆ ಸಕಾಲದಲ್ಲಿ ಚಿಕಿತ್ಸೆ ಆಗಬೇಕು



ಆಳ-ಅಗಲ
'ಬಿಜೆಪಿ ಸೇರಿ ತನಿಖೆ ತಪ್ಪಿಸಿಕೊಂಡರು'

ಇಬ್ಬರು ನ್ಯಾಯಮೂರ್ತಿಗಳಿಗೆ ಬೆದರಿಕೆ ಕರೆ 5

ಮತ ಬುಟ್ಟಿ ಅಲ್ಲಾಡಿಸಲಿದೆಯೆ ಬೆಲೆ ಏರಿಕೆ? 9

ಚಿನ್ನ (Std. 10g) ₹68,520 (ಬೆಂಗಳೂರು) ▲
ಶುದ್ಧ ಬೆಳ್ಳಿ (kg) ₹76,300 (ಬೆಂಗಳೂರು) ▲

'ಸ್ವಚ್ಛ'ವಾಗಲು ಬಿಜೆಪಿಯತ್ತ ನಾಯಕರ ದೌಡು?

ಪ್ರಜಾವಾಣಿ ವಿಶೇಷ

ಭ್ರಷ್ಟಾಚಾರ ಆರೋಪದಲ್ಲಿ ಶಿಕ್ಷೆ ಅನುಭವಿಸಿದ್ದ ಗಾಲಿ ಜನಾರ್ದನ ರೆಡ್ಡಿ ಅವರು ತಮ್ಮ ಪಕ್ಷವನ್ನು ಬಿಜೆಪಿ ಜತೆ ವಿಲೀನ ಮಾಡಿದ್ದಾರೆ ಮತ್ತು ತಾವೂ ಬಿಜೆಪಿ ಸೇರಿದ್ದಾರೆ. 'ಭ್ರಷ್ಟಾಚಾರವನ್ನು ತೊಲಗಿಸುತ್ತೇವೆ' ಎಂದು ಕೇಂದ್ರದ ಬಿಜೆಪಿ ನಾಯಕರು ಹೇಳುತ್ತಲೇ ಇರುತ್ತಾರೆ. ಆದರೆ, ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವಂತಹ ವಿರೋಧ ಪಕ್ಷಗಳ ಹಲವು ನಾಯಕರನ್ನು ಬಿಜೆಪಿ ತನ್ನಲ್ಲಿಗೆ ಬರಮಾಡಿಕೊಂಡಿದೆ. ಆನಂತರ ಅಂತಹ ನಾಯಕರ ವಿರುದ್ಧದ ಪ್ರಕರಣಗಳು ರದ್ದಾಗುತ್ತವೆ ಅಥವಾ ತನಿಖೆ ನಿಂತೇ ಹೋಗುತ್ತದೆ. ಇದನ್ನೇ ವಿರೋಧ ಪಕ್ಷಗಳು, 'ಬಿಜೆಪಿ ವಾಷಿಂಗ್ ಮೆಷಿನ್ ಇದ್ದಂತೆ. ಈ ಕಡೆಯಿಂದ ಅಲ್ಲಿಗೆ ಹೋಗುವ ಭ್ರಷ್ಟರೆಲ್ಲಾ, ಸ್ವಚ್ಛವಾಗಿ ಬಿಡುತ್ತಾರೆ' ಎಂದು ಲೇವಡಿ ಮಾಡುತ್ತಿವೆ. ಹೀಗೆ ಭ್ರಷ್ಟಾಚಾರದ ಆರೋಪ ಹೊತ್ತು ಬಿಜೆಪಿ ಸೇರಿದವರು ಮತ್ತು ಬಿಜೆಪಿಯಲ್ಲಿ ಲಾಭದಾಯಕ ಹುದ್ದೆ ಪಡೆದ ಕೆಲವರ ವಿವರ ಇಲ್ಲಿದೆ

ಅಜಿತ್ ಪವಾರ್
ಎನ್‌ಸಿಪಿ ಜತೆಗೆ ಮೈತ್ರಿ

ಮಹಾರಾಷ್ಟ್ರದ ಎನ್‌ಸಿಪಿ ನಾಯಕರಾಗಿದ್ದ ಅಜಿತ್ ಪವಾರ್, ಅವಿಭಜಿತ ಶಿವಸೇನಾ–ಅವಿಭಜಿತ ಎನ್‌ಸಿಪಿ–ಕಾಂಗ್ರೆಸ್ 'ಮಹಾ ವಿಕಾಸ ಆಘಾಡಿ' ಮೈತ್ರಿಕೂಟದಲ್ಲಿ ಸಚಿವರಾಗಿದ್ದರು. ಅಜಿತ್ ಅವರು ಹಲವು ಭ್ರಷ್ಟಾಚಾರ ಪ್ರಕರಣಗಳಲ್ಲಿ ಪ್ರಮುಖ ಆರೋಪಿ ಯಾಗಿದ್ದರು. 2022 ಮತ್ತು 2023ರಲ್ಲಿ ಅಜಿತ್ ಅವರನ್ನು ಜಾರಿ ನಿರ್ದೇಶನಾಲಯವು ಹಲವು ಬಾರಿ ವಿಚಾರಣೆಗೆ ಕರೆದಿತ್ತು. 2023ರ ಆರಂಭದಲ್ಲಿ ಆರೋಪ ಪಟ್ಟಿಯನ್ನೂ ಸಲ್ಲಿಸಿತ್ತು.

ವಿಚಾರಣೆ ತೀವ್ರಗೊಂಡ ಬೆನ್ನಲ್ಲೇ ಅಜಿತ್ ಅವರು ಎನ್‌ಸಿಪಿಯ ಹಲವು ಶಾಸಕರೊಂದಿಗೆ ಪಕ್ಷವನ್ನು ಇಬ್ಭಾಗ ಮಾಡಿದರು. ಅವರು ಬಿಜೆಪಿ ಸೇರಲಿಲ್ಲವಾದರೂ, 2023ರಲ್ಲಿ ಬಿಜೆಪಿ ಜತೆ ಸೇರಿ ಸರ್ಕಾರದ ಭಾಗವಾದರು. ಅಜಿತ್ ಪವಾರ್ ಅವರಿಗೆ ಬಿಜೆಪಿಯು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಹುದ್ದೆಯನ್ನು ಒದಗಿಸಿ ಕೊಟ್ಟಿತು. ನಂತರ ಅವರ ವಿರುದ್ಧ ಇದ್ದ ಪ್ರಕರಣಗಳ ತನಿಖೆ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಪ್ರಕರಣಗಳು
- ₹70,000 ಕೋಟಿ ಮೊತ್ತದ ನೀರಾವರಿ ಹಗರಣ
- ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ ಅಕ್ರಮ ಸಾಲ ವಿತರಣೆ ಹಗರಣ
- ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನ ದುರ್ಬಳಕೆ ಮತ್ತು ಭ್ರಷ್ಟಾಚಾರ ಆರೋಪ

ಬಿಜೆಪಿ ಜತೆ ಕೈಜೋಡಿಸಿದ ನಂತರ
ಅಜಿತ್ ಪವಾರ್ ಅವರಿಗೆ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಹುದ್ದೆ ದೊರೆತದ್ದು ಅಲ್ಲದೇ, ಹಲವು ಗಂಭೀರ ಪ್ರಕರಣಗಳಲ್ಲಿ ಕ್ಲೀನ್‌ಚಿಟ್ ದೊರೆತಿದೆ

ಸುವೇಂಧು ಅಧಿಕಾರಿ
ಟಿಎಂಸಿಯಿಂದ ಬಿಜೆಪಿಗೆ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಉತ್ತರಾಧಿಕಾರಿ ಎಂದೇ ಸುವೇಂಧು ಅಧಿಕಾರಿ ಅವರನ್ನು ಕರೆಯಲಾಗುತ್ತಿತ್ತು. ಟಿಎಂಸಿ ಸ್ಥಾಪನೆಯಾದ ದಿನದಿಂದಲೂ ಮಮತಾ ಅವರ ಜತೆಗೆ ನಿಂತಿದ್ದ ಸುವೇಂಧು ಅಧಿಕಾರಿಯವರ ವಿರುದ್ಧ ಭ್ರಷ್ಟಾಚಾರದ ಹಲವು ಆರೋಪಗಳಿದ್ದವು. ಕೇಂದ್ರದ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಗಳು ಹಲವು ಪ್ರಕರಣಗಳನ್ನೂ ದಾಖಲಿಸಿದ್ದವು.

ಸುವೇಂಧು ಅಧಿಕಾರಿಯವರ ವಿಚಾರಣೆ ಮತ್ತು ಬಂಧನಕ್ಕೆ ಎಂದು ಬಂದ ಸಿಬಿಐ ಅಧಿಕಾರಿಗಳ ವಿರುದ್ಧ ಮಮತಾ ಬ್ಯಾನರ್ಜಿ ಸರ್ಕಾರವು ಕ್ರಮವನ್ನೂ ತೆಗೆದುಕೊಂಡಿತ್ತು. ಅವರ ಬಂಧನ ಇನ್ನೇನು ನಡೆದೇ ಹೋಗುತ್ತದೆ ಎಂಬ ಸ್ಥಿತಿ 2020ರ ಅಂತ್ಯದ ವೇಳೆಗೆ ನಿರ್ಮಾಣವಾಗಿತ್ತು. ಎಲ್ಲರನ್ನೂ ಚಕಿತಗೊಳಿಸುವಂತೆ 2020ರ ಡಿಸೆಂಬರ್‌ನಲ್ಲಿ ಸುವೇಂಧು ಬಿಜೆಪಿ ಸೇರಿದರು.

ಪ್ರಕರಣಗಳು
- ನಾರದಾ ಚಿಟ್‌ಫಂಡ್ ಹಗರಣ
- ಶಾರದಾ ಚಿಟ್‌ಫಂಡ್ ಹಗರಣ
- ಲಾಟರಿ ಹಗರಣ
- ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ಹಗರಣ

ಬಿಜೆಪಿ ಸೇರಿದ್ದಕ್ಕೆ ಆದ ಲಾಭ
- ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನ
- ಎಲ್ಲಾ ಪ್ರಕರಣಗಳ ತನಿಖೆ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ನಾರಾಯಣ ರಾಣೆ
ಬಿಜೆಪಿ ಜತೆ ಪಕ್ಷ ವಿಲೀನ

ತೊಂಬತ್ತರ ದಶಕದಲ್ಲಿ ಶಿವಸೇನಾ–ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ನಾರಾಯಣ ರಾಣೆ ಅವರು, ಆನಂತರದಲ್ಲಿ ಕಾಂಗ್ರೆಸ್ ಸೇರಿದ್ದರು. ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದಾಗ ಭ್ರಷ್ಟಾಚಾರ ಎಸಗಿದ ಹಲವು ಆರೋಪಗಳು ರಾಣೆ ಅವರ ಮೇಲಿದ್ದವು. ಈ ಸಂಬಂಧ ಮಹಾರಾಷ್ಟ್ರ ಭ್ರಷ್ಟಾಚಾರ ನಿಗ್ರಹ ದಳ ಮತ್ತು ಕೇಂದ್ರ ಸರ್ಕಾರದ ಜಾರಿ ನಿರ್ದೇಶನಾಲಯವೂ ರಾಣೆ ವಿರುದ್ಧ ಪ್ರಕರಣ ದಾಖಲಿಸಿದ್ದವು. 2018ರಲ್ಲಿ ಅವರು ಕಾಂಗ್ರೆಸ್ ತೊರೆದು, ತಮ್ಮದೇ ಪ್ರತ್ಯೇಕ ಪಕ್ಷವನ್ನು ಸ್ಥಾಪಿಸಿದ್ದರು. 2018–19ರಲ್ಲಿ ಇ.ಡಿ, ರಾಣೆ ಅವರನ್ನು ಹಲವು ಬಾರಿ ವಿಚಾರಣೆಗೆ ಒಳಪಡಿಸಿತ್ತು. ಅದರ ಬೆನ್ನಲ್ಲೇ ರಾಣೆ ಬಿಜೆಪಿ ಸೇರಿದ್ದರು. ತಮ್ಮ ಪಕ್ಷವನ್ನು ಬಿಜೆಪಿ ಜತೆ ವಿಲೀನ ಮಾಡಿದ್ದರು. 2019ರಲ್ಲಿ ರಾಣೆ ಅವರನ್ನು ಬಿಜೆಪಿಯು ರಾಜ್ಯಸಭೆಗೆ ಆಯ್ಕೆ ಮಾಡಿತು.

ಪ್ರಕರಣಗಳು
- ಹಣ ಅಕ್ರಮ ವರ್ಗಾವಣೆ ಪ್ರಕರಣ
- ಭ್ರಷ್ಟಾಚಾರ ಆರೋಪ

ಬಿಜೆಪಿ ಸೇರಿದ ನಂತರ
- ರಾಜ್ಯಸಭೆ ಸದಸ್ಯತ್ವ ಮತ್ತು ಕೇಂದ್ರ ಸಚಿವ ಸ್ಥಾನ
- ಪ್ರಕರಣ ತನಿಖೆ ಮಾಹಿತಿ ಇಲ್ಲ

ಅಶೋಕ್ ಚವ್ಹಾಣ್
ಕಾಂಗ್ರೆಸ್‌ನಿಂದ ಬಿಜೆಪಿಗೆ

ಆದರ್ಶ್ ಹೌಸಿಂಗ್ ಸೊಸೈಟಿ ಹಗರಣದಲ್ಲಿ ಸಿಬಿಐ ಅಶೋಕ್ ಚವ್ಹಾಣ್ ಅವರನ್ನು ಪ್ರಮುಖ ಆರೋಪಿ ಎಂದು ಹೇಳಿತ್ತು. ಕಾರ್ಗಿಲ್ ಯುದ್ಧದಲ್ಲಿ ಹೋರಾಡಿದ ಸೈನಿಕರಿಗೆ ಹಾಗೂ ಯುದ್ಧದಲ್ಲಿ ಮಡಿದ ಕುಟುಂಬದವರಿಗಾಗಿ 31 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗಿತ್ತು. ಈ ಕಟ್ಟಡದಲ್ಲಿ ಅಂದಿನ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ ಅವರ ಕುಟುಂಬಸ್ಥರಿಗೆ ಮನೆ ನೀಡಲಾಗಿದೆ ಎಂದೂ ಆರೋಪಿಸಲಾಗಿತ್ತು. ಈ ಸಂಬಂಧ ಅಶೋಕ್ ಮೇಲೆ ಅವರು ಹಲವು ವರ್ಷಗಳಿಂದ ತನಿಖೆ ನಡೆಯುತ್ತಿತ್ತು.

ಇತ್ತೀಚೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಶ್ವೇತಪತ್ರವನ್ನು ಹೊರಡಿಸಿತ್ತು. ಈ ಪತ್ರದಲ್ಲಿ ಆದರ್ಶ್ ಹಗರಣದ ಪ್ರಸ್ತಾಪವೂ ಇತ್ತು. ಇದಾಗಿ ಕೆಲವು ದಿನಗಳ ಬಳಿಕ, ಅಶೋಕ್ ಅವರು ಬಿಜೆಪಿ ಪಾಳಯ ಸೇರಿಕೊಂಡರು. ಬಿಜೆಪಿ ಸೇರುತ್ತಿದ್ದಂತೆಯೇ, ಮಹಾರಾಷ್ಟ್ರದಿಂದ ಅಶೋಕ್ ಅವರನ್ನು ರಾಜ್ಯಸಭೆಗೆ ನಿಲ್ಲಿಸಲಾಯಿತು. ಚುನಾವಣೆಯಲ್ಲಿ ಅಶೋಕ್ ಅವರು ಅವಿರೋಧವಾಗಿ ಆಯ್ಕೆಯಾದರು.

ಪ್ರಕರಣ
- ಆದರ್ಶ ಹೌಸಿಂಗ್ ಸೊಸೈಟಿ ಹಗರಣ

ಬಿಜೆಪಿ ಸೇರಿದ ನಂತರ
- ರಾಜ್ಯಸಭಾ ಸದಸ್ಯತ್ವ

ನವೀನ್ ಜಿಂದಾಲ್
ಕಾಂಗ್ರೆಸ್‌ನಿಂದ ಬಿಜೆಪಿಗೆ

ಜಿಂದಾಲ್ ಸ್ಟೀಲ್ಸ್ ಮತ್ತು ಪವರ್ ಲಿಮಿಟೆಡ್‌ನ ಮುಖ್ಯಸ್ಥರಾದ ನವೀನ್ ಜಿಂದಾಲ್ ಅವರು ಹರಿಯಾಣದ ಕುರುಕ್ಷೇತ್ರ ಲೋಕಸಭಾ ಕ್ಷೇತ್ರವನ್ನು 10 ವರ್ಷ ಕಾಂಗ್ರೆಸ್ ಸಂಸದನಾಗಿ ಪ್ರತಿನಿಧಿಸಿದ್ದರು. ಉಕ್ಕು ಕಾರ್ಖಾನೆಗೆ ಅಗತ್ಯವಿರುವ ಕಬ್ಬಿಣದ ಅದಿರಿನ ಗಣಿಗಳ ಹಂಚಿಕೆಯಲ್ಲಿ ಅಕ್ರಮ ಎಸಗಿದ ಆರೋಪ ನವೀನ್ ಜಿಂದಾಲ್ ಮತ್ತು ಅವರ ಕಂಪನಿಯ ವಿರುದ್ಧ ಇತ್ತು.

ಮಧ್ಯ ಪ್ರದೇಶದ ಮತ್ತು ಜಾರ್ಖಂಡ್‌ನಲ್ಲಿನ ಕಬ್ಬಿಣದ ಅದಿರಿನ ಗಣಿಗಳ ಹಂಚಿಕೆ ವೇಳೆ ವಂಚನೆ ಎಸಗಿದ ಮತ್ತು ಅದಕ್ಕಾಗಿ ಸಂಚುರೂಪಿಸಿದ ಆರೋಪಗಳ ಅಡಿಯಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಗಳಲ್ಲಿ ಪ್ರಮುಖ ಆರೋಪಿಯಾಗಿದ್ದ ನವೀನ್ ಅವರು ವಿದೇಶ ಪ್ರಯಾಣ ಕೈಗೊಳ್ಳದಂತೆ ನಿರ್ಬಂಧವಿತ್ತು. ಈಚೆಗಷ್ಟೇ ಆ ನಿರ್ಬಂಧವನ್ನು ಸಡಿಲಗೊಳಿಸಲಾಗಿತ್ತು. ಈಗ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ನವೀನ್ ಜಿಂದಾಲ್ ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದ್ದಾರೆ. ಹರಿಯಾಣದ ಕುರುಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲಿದ್ದಾರೆ.

ಪ್ರಕರಣಗಳು
- ಕಬ್ಬಿಣ ಮತ್ತು ಕಲ್ಲಿದ್ದಲು ಗಣಿ ಹಂಚಿಕೆಯಲ್ಲಿ ಅಕ್ರಮ ಆರೋಪ, ಸಿಬಿಐ ಮತ್ತು ಜಾರಿ ನಿರ್ದೇಶನಾಲಯದಲ್ಲಿ ಪ್ರಕರಣ

ಬಿಜೆಪಿ ಸೇರಿದ ನಂತರ
- ಕುರುಕ್ಷೇತ್ರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ

ಹಿಮಂತ ಬಿಸ್ವ ಶರ್ಮಾ
ಕಾಂಗ್ರೆಸ್‌ನಿಂದ ಬಿಜೆಪಿಗೆ

ಅಸ್ಸಾಂ ಕಾಂಗ್ರೆಸ್‌ನಲ್ಲಿ ಸಚಿವರಾಗಿದ್ದ ಹಿಮಂತ ಬಿಸ್ವ ಶರ್ಮಾ ವಿರುದ್ಧ ಹಲವು ಪ್ರಕರಣಗಳು ಇದ್ದವು. ಶಾರದಾ ಚಿಟ್ ಫಂಡ್ ಹಗರಣದಲ್ಲಿ ಶರ್ಮಾ ಅವರೂ ಪ್ರಮುಖ ಆರೋಪಿಯಾಗಿದ್ದರು. ಅವರ ವಿರುದ್ಧ ಸಿಬಿಐ ಮತ್ತು ಜಾರಿ ನಿರ್ದೇಶನಾಲಯಗಳು ಪ್ರಕರಣ ದಾಖಲಿಸಿದ್ದವು. ಸಿಬಿಐ ಎಫ್‌ಐಆರ್ ಸಹ ದಾಖಲಿಸಿತ್ತು. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ (2014ರಲ್ಲಿ) ಬಂದ ನಂತರ ಈ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಲಾಗಿತ್ತು. ಹಿಮಂತ ಅವರನ್ನು ಸಿಬಿಐ ಮತ್ತು ಜಾರಿ ನಿರ್ದೇಶನಾಲಯವು ಹಲವು ಬಾರಿ ವಿಚಾರಣೆಗೆ ಕರೆದಿದ್ದವು.

ತಮ್ಮ ವಿರುದ್ಧದ ತನಿಖೆ ಮತ್ತು ವಿಚಾರಣೆ ತೀವ್ರವಾಗುತ್ತಿದ್ದ ಹೊತ್ತಿನಲ್ಲೇ ಹಿಮಂತ ಅವರು 2015ರಲ್ಲಿ ಬಿಜೆಪಿ ಸೇರಿದರು. ಆವರೆಗೆ ಹಿಮಂತ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದ ಬಿಜೆಪಿ ನಾಯಕರು, ಅವರನ್ನೇ ಪಕ್ಷಕ್ಕೆ ಸೇರಿಸಿಕೊಂಡಿದ್ದರ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಪಕ್ಷದ ನಿರ್ಧಾರವನ್ನು ಅಮಿತ್ ಶಾ ಅವರು ಸಾರ್ವಜನಿಕ ಸಭೆಯಲ್ಲಿ ಸಮರ್ಥಿಸಿಕೊಂಡಿದ್ದರು. ತಕ್ಷಣವೇ ಅವರನ್ನು ಎನ್‌ಡಿಎಯ ಈಶಾನ್ಯ ಪ್ರಜಾಸತ್ತಾತ್ಮಕ ಒಕ್ಕೂಟದ ಸಂಚಾಲಕರನ್ನಾಗಿ ಮಾಡಲಾಯಿತು. 2021ರ ಅಸ್ಸಾಂ ಚುನಾವಣೆಯಲ್ಲಿ ಬಿಜೆಪಿ ಗೆದ್ದ ನಂತರ ಅವರನ್ನೇ ಮುಖ್ಯಮಂತ್ರಿ ಮಾಡಲಾಯಿತು.

ಪ್ರಕರಣಗಳು
- ಶಾರದಾ ಚಿಟ್ ಫಂಡ್ ಹಗರಣ
- ಲೂಯಿಸ್ ಬರ್ಗರ್ ಲಂಚ ಹಗರಣ

ಬಿಜೆಪಿ ಸೇರಿದ ನಂತರ
- ಅಸ್ಸಾಂ ಮುಖ್ಯಮಂತ್ರಿ ಹುದ್ದೆ
- ಪ್ರಕರಣಗಳ ತನಿಖೆ ಬಗ್ಗೆ ಮಾಹಿತಿ ಇಲ್ಲ.

ಪ್ರಮುಖರ ಸಭೆ ಇಂದು • ಹುರಿಯಾಳು ಆಖೈರು ಸಾಧ್ಯತೆ • ಮಂಡ್ಯದಲ್ಲಿ ಸ್ಪರ್ಧೆ: ಎಚ್‌ಡಿಕೆಗೆ ಒತ್ತಡ

ಕ್ಷೇತ್ರ ಮೂರು: ದಳ ಅಭ್ಯರ್ಥಿ ಯಾರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ, ಮಂಡ್ಯ ಮತ್ತು ಕೋಲಾರ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲು ಜೆಡಿಎಸ್ ನಾಯಕರಿಗೆ ಇನ್ನೂ ಸಾಧ್ಯವಾಗಿಲ್ಲ. ಪಕ್ಷದ 'ಕೋರ್ ಕಮಿಟಿ' ಸಭೆ ಮಂಗಳವಾರ ನಡೆಯಲಿದ್ದು, ಆ ಬಳಿಕ ತೀರ್ಮಾನ ಪ್ರಕಟಿಸುವ ಸಾಧ್ಯತೆ ಇದೆ.

ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರ ಸ್ಪರ್ಧೆಗೆ ಒತ್ತಡ ಹೆಚ್ಚುತ್ತಲೇ ಇದೆ. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡರ ಮನವೊಲಿಕೆ ಬಳಿಕವೇ ಮಂಡ್ಯ ಸ್ಪರ್ಧೆ ಕುರಿತು ತೀರ್ಮಾನ ಪ್ರಕಟಿಸಲು ಕುಮಾರಸ್ವಾಮಿ ಮುಂದಾಗಿದ್ದಾರೆ. ಈ ಕಾರಣದಿಂದ ಅಭ್ಯರ್ಥಿಗಳ ಘೋಷಣೆ ವಿಳಂಬವಾಗುತ್ತಿದೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಹಾಸನ ಕ್ಷೇತ್ರದಲ್ಲಿ ಪ್ರಜ್ವಲ್ ಬದಲಿಗೆ ಬೇರೊಬ್ಬರನ್ನು ಕಣಕ್ಕಿಳಿಸುವಂತೆ ಬಿಜೆಪಿಯ ಎ.ಟಿ. ರಾಮಸ್ವಾಮಿ ಮತ್ತು ಪ್ರೀತಂ ಗೌಡ ಒತ್ತಡ ಹೇರುತ್ತಿದ್ದಾರೆ. ಬಿಜೆಪಿ ವರಿಷ್ಠರ ಮೂಲಕವೇ ಅವರಿಬ್ಬರ ಮನವೊಲಿಕೆ ಪ್ರಯತ್ನ ನಡೆದಿದೆ.

5ನೇ ಪುಟ ನೋಡಿ

ಬಿಜೆಪಿಗೆ ಮುಗಿಯದ ಸಂಕಷ್ಟ

ಚಿತ್ರದುರ್ಗ ಕ್ಷೇತ್ರ ಬಿಟ್ಟು ಉಳಿದ ಎಲ್ಲ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದರೂ, ಸುಮಾರು ಎಂಟು ಕ್ಷೇತ್ರಗಳಲ್ಲಿ ಬಂಡಾಯ ಮತ್ತು ಅಸಮಾಧಾನದ ಧ್ವನಿ ತಗ್ಗಿಲ್ಲ. ಇದು ಬಿಜೆಪಿ ನಾಯಕರಿಗೆ ತಲೆನೋವಾಗಿ ಪರಿಣಮಿಸಿದೆ.

ತುಮಕೂರಿನಲ್ಲಿ ಜೆ.ಸಿ.ಮಾಧುಸ್ವಾಮಿ ಬಿಜೆಪಿಯನ್ನು ಬಿಡುವುದಿಲ್ಲ ಎಂದು ಹೇಳಿದ್ದರೂ, ಸೋಮಣ್ಣ ಪರ ಪ್ರಚಾರ ಮಾಡುವುದಿಲ್ಲ ಎಂದಿದ್ದಾರೆ. ಕೊಪ್ಪಳದಲ್ಲಿ ಇದೇ ನಿಲುವು ತಾಳಿರುವ ಹಾಲಿ ಸಂಸದ ಕರಡಿ ಸಂಗಣ್ಣ, ಪ್ರಚಾರದ ನೇತೃತ್ವ ವಹಿಸುವುದಿಲ್ಲ ಎಂದಿದ್ದಾರೆ.

ಶಿವಮೊಗ್ಗದಲ್ಲಿ ಈಶ್ವರಪ್ಪ ತಮ್ಮ ಪಟ್ಟು ಸಡಿಲಿಸಿಲ್ಲ. ಇವರು ಕಣದಲ್ಲೇ ಉಳಿದರೆ ಪಕ್ಷದ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಅವರ ಮತಗಳಿಗೆ ಕತ್ತರಿ ಬೀಳುವುದು ನಿಶ್ಚಿತ. ಬೆಳಗಾವಿಯಲ್ಲಿ ಜಗದೀಶ ಶೆಟ್ಟರ್ ವಿರುದ್ಧ ಸ್ಥಳೀಯ ನಾಯಕರ ಕೋಪ ತಣಿದಿಲ್ಲ. ಅಸಮಾಧಾನಗೊಂಡವರನ್ನು ತಣಿಸುವ ಕೆಲಸ ನಡೆದಿದೆ. ದಾವಣಗೆರೆಯಲ್ಲಿ ಸಂಸದ ಸಿದ್ದೇಶ್ವರ ವಿರುದ್ಧ ಸಿಡಿದು ನಿಂತವರು ಇನ್ನೂ ತಣ್ಣಗಾಗಿಲ್ಲ. ಇದರಿಂದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಸ್ಪರ್ಧೆ ಕಠಿಣವಾಗಲಿದೆ. ಬೀದರ್‌ನಲ್ಲೂ ಕೇಂದ್ರ ಸಚಿವ ಭಗವಂತ ಖೂಬಾ ಇದೇ ಸ್ಥಿತಿಯನ್ನೂ ಎದುರಿಸುತ್ತಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಡಾ.ಕೆ.ಸುಧಾಕರ್ ಅವರಿಗೆ ಟಿಕೆಟ್ ನೀಡಿದ ಬಳಿಕ ಯಲಹಂಕ ಶಾಸಕ ಎಸ್‌.ಆರ್‌.ವಿಶ್ವನಾಥ್ ಕಡೆಯವರು 'ಗೋಬ್ಯಾಕ್ ಸುಧಾಕರ್' ಎಂಬ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.

ಚಿತ್ರದುರ್ಗದಲ್ಲಿ ಅಭ್ಯರ್ಥಿ ಆಯ್ಕೆಯೇ ಕಗ್ಗಂಟಾಗಿದೆ. ಈ ಕ್ಷೇತ್ರದಲ್ಲೂ ಹೊರಗಿನವರನ್ನು ತಂದು ಕಣಕ್ಕಿಳಿಸುವ ಬಗ್ಗೆ ತೀವ್ರ ಅಸಮಾಧಾನವಿದೆ.

ಸೋನಿಯಾಗೆ ಮೊಯಿಲಿ ಮೊರೆ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಟಿಕೆಟ್‌ಗಾಗಿ ಹಟ ಹಿಡಿದಿರುವ ಮಾಜಿ ಸಂಸದ ವೀರಪ್ಪ ಮೊಯಿಲಿ, ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿಯವರ ಮೊರೆ ಹೋಗುವ ಮೂಲಕ ರಾಜ್ಯ ನಾಯಕರಿಗೆ ಸಡ್ಡು ಹೊಡೆದಿದ್ದಾರೆ. ಇತ್ತ ತಮಗೇ ಟಿಕೆಟ್ ನೀಡುವಂತೆ ರಕ್ಷಾ ರಾಮಯ್ಯ ಮತ್ತು ಎಚ್‌.ಎನ್‌. ಶಿವಶಂಕರ ರೆಡ್ಡಿ ಒತ್ತಡ ಹಾಕುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಕ್ಷಾ ರಾಮಯ್ಯ ಅವರನ್ನು ಕಣಕ್ಕಿಳಿಸಲು ಒಲವು ಹೊಂದಿದ್ದಾರೆ ಎಂಬ ಸುಳಿವು ಸಿಗುತ್ತಿದ್ದಂತೆ ಮೊಯಿಲಿಯವರು ಸೋನಿಯಾ ಮನೆಯ ಕದ ತಟ್ಟಿದ್ದಾರೆ ಎನ್ನಲಾಗಿದೆ.

'ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ಹಂಚಿಕೆಗೆ ಸಂಬಂಧಿಸಿದಂತೆ ನಡೆದ ಸಭೆಗಳಲ್ಲಿ ಭಾಗವಹಿಸದ ಮೊಯಿಲಿ, 'ನಾನು ಎಐಸಿಸಿ ಮಾಜಿ ಅಧ್ಯಕ್ಷರಿಂದಲೇ ಟಿಕೆಟ್ ತೆಗೆದುಕೊಂಡು ಬರುತ್ತೇನೆ ಎಂದು ಸವಾಲು ಹಾಕಿದ್ದಾರೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡೆಸಿದ ಸಭೆಗಳಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಪಕ್ಷದ ಎಲ್ಲ ಮುಖಂಡರು ಹಾಜರಾದರೂ ಮೊಯಿಲಿ ಮಾತ್ರ ದೂರ ಉಳಿದಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಮೊಯಿಲಿ ನಡೆಯಿಂದ ಬೇಸತ್ತಿರುವ ರಾಜ್ಯ ನಾಯಕರು, ಇತ್ತೀಚಿನ ಯಾವ ಸಭೆಗಳಿಗೂ ಅವರಿಗೆ ಆಹ್ವಾನ ನೀಡಿಲ್ಲ. ಸೋನಿಯಾ ಗಾಂಧಿ ಅವರಿಂದಲೇ ಟಿಕೆಟ್ ತೆಗೆದುಕೊಂಡು ಬರಲಿ ಎಂಬ ನಿಲುವು ತಾಳಿರುವ ರಾಜ್ಯ ನಾಯಕರು, ಈ ಕ್ಷೇತ್ರದಿಂದ ರಕ್ಷಾ ರಾಮಯ್ಯ ಹೆಸರನ್ನು ಹೈಕಮಾಂಡ್‌ಗೆ ಶಿಫಾರಸು ಮಾಡಿದ್ದಾರೆ ಎಂದೂ ಗೊತ್ತಾಗಿದೆ.

ಮಹಾಕಾಲ ದೇಗುಲದಲ್ಲಿ ಅಗ್ನಿ ಅವಘಡ

ಉಜ್ಜೈನಿ (ಪಿಟಿಐ): ಮಧ್ಯ ಪ್ರದೇಶದ ಉಜ್ಜೈನಿಯಲ್ಲಿರುವ ಮಹಾಕಾಲ ದೇಗುಲದಲ್ಲಿ ಸೋಮವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಸೇವಕರು (ಸಹಾಯಕರು) ಸೇರಿದಂತೆ 14 ಮಂದಿ ಅರ್ಚಕರು ಗಾಯಗೊಂಡಿದ್ದಾರೆ.

'ಮುಂಜಾನೆ 5.50ರ ಸುಮಾರಿಗೆ 'ಭಸ್ಮ ಆರತಿ' ಸಂದರ್ಭದಲ್ಲಿ ದೇಗುಲದ ಗರ್ಭಗುಡಿಯಲ್ಲಿ ಬೆಂಕಿ ಕಾಣಿಸಿಕೊಂಡು ಈ ದುರ್ಘಟನೆ ಸಂಭವಿಸಿತು. ಘಟನೆಯಲ್ಲಿ ಗಾಯಗೊಂಡವರ ಪೈಕಿ ಕೆಲವರನ್ನು ಜಿಲ್ಲಾ ಆಸ್ಪತ್ರೆಗೆ ಹಾಗೂ ಇನ್ನೂ ಕೆಲವರನ್ನು ಇಂದೋರ್‌ನ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಯಿತು' ಎಂದು ಜಿಲ್ಲಾಧಿಕಾರಿ ನೀರಜ್ ಕುಮಾರ್ ಸಿಂಗ್ ತಿಳಿಸಿದರು.

'ಪ್ರಕರಣದ ಬಗ್ಗೆ ಮ್ಯಾಜಿಸ್ಟ್ರೇಟ್ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ. ಜಿಲ್ಲಾ ಪಂಚಾಯತ್ ಸಿಇಒ ಮೃಣಾಲ್ ಮೀನಾ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿ ಅನುಕೂಲ್ ಜೈನ್ ಅವರು ತನಿಖೆ ನಡೆಸಿ, ಮೂರು ದಿನಗಳ ಒಳಗಾಗಿ ವರದಿ ನೀಡಲಿದ್ದಾರೆ' ಎಂದರು.

11ನೇ ಪುಟ ನೋಡಿ

ರಸ್ತೆ ಗುಂಡಿಗೆ ಹೋಳಿ ರಂಗು
ಬೆಂಗಳೂರಿನ ಆರ್‌.ಟಿ.ನಗರದ ಆತ್ಮಾನಂದ ಕಾಲೊನಿಯ ರಸ್ತೆ ಗುಂಡಿಗೆ ಕಲಾವಿದ ಬಾದಲ್ ನಂಜುಂಡಸ್ವಾಮಿ ಅವರು ಹೋಳಿ ಹಬ್ಬದ ದಿನ ಬಣ್ಣ ಬಳಿದು ಗಮನ ಸೆಳೆದರು
–ಪ್ರಜಾವಾಣಿ ಚಿತ್ರ / ಕಿಶೋರ್ ಕುಮಾರ್ ಬೋಳಾರ್

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹ 6025/gm
ಬೆಳ್ಳಿ ದರ: ₹ 76/gm
ವೇಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಚಿನಕುರಳಿ
ಪ್ರಕಾಶ್ ಶೆಟ್ಟಿ

ಮೂವರು ಶಿಕ್ಷಕರು ಅಮಾನತು, ಒಬ್ಬ ವಿದ್ಯಾರ್ಥಿ ಡಿಬಾರ್

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿಗೆ ಸಹಕರಿಸಿದ ಮೂವರು ಕೊಠಡಿ ಮೇಲ್ವಿಚಾರಕರ ಅಮಾನತು, ಕೆಲವೆಡೆ 15 ನಿಮಿಷ ತಡವಾಗಿ ಪ್ರಶ್ನೆಪತ್ರಿಕೆ ವಿತರಿಸಿದ ಪ್ರಕರಣ ಹೊರತುಪಡಿಸಿ, ಮೊದಲ ದಿನದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರವಾಗಿ ನಡೆಯಿತು.

ಕನ್ನಡ ಸೇರಿದಂತೆ ಪ್ರಥಮ ಭಾಷೆಗಳಾದ ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ ವಿಷಯಗಳಿಗೆ ನಡೆದ ಪರೀಕ್ಷೆಗೆ 8.32 ಲಕ್ಷ ವಿದ್ಯಾರ್ಥಿಗಳು (ಶೇ 98.41) ಹಾಜರಾಗಿದ್ದರು. ಹೆಸರು ನೋಂದಾಯಿಸಿದ್ದವರಲ್ಲಿ 13,468 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ಯಾದಗಿರಿ ಜಿಲ್ಲೆಯ ಏವೂರ, ಸುರಪುರದ ಪರೀಕ್ಷಾ ಕೇಂದ್ರಗಳಲ್ಲಿ ನಕಲು ಮಾಡಲು ಸಹಕರಿಸಿದ ಆರೋಪದ ಮೇಲೆ ಶಿಕ್ಷಕರಾದ ಸಾಹೇಬಗೌಡ ಉಕ್ಕಾಲಿ, ಹಣಮಂತ್ರಾಯ ಅವರನ್ನು ಅಮಾನತು ಮಾಡಲಾಗಿದೆ.

5ನೇ ಪುಟ ನೋಡಿ

ಸಿಗದ ಪ್ರವೇಶ ಪತ್ರ; ಅಣಕು ಪರೀಕ್ಷೆ

ಹಾವೇರಿ: 'ಮುಖ್ಯಶಿಕ್ಷಕರ ನಿರ್ಲಕ್ಷ್ಯದಿಂದ 2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪ್ರವೇಶ ಪತ್ರ ಬಂದಿಲ್ಲ' ಎಂದು ಆರೋಪಿಸಿ ರಾಣೆಬೆನ್ನೂರು ತಾಲ್ಲೂಕು ಹರನಗಿರಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಅಭಿಷೇಕ್ ಜರಮಲ್ಲ ತನ್ನ ಪೋಷಕರೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಕುಳಿತು ಅಣಕು ಪರೀಕ್ಷೆ ಬರೆದು ಪ್ರತಿಭಟನೆ ನಡೆಸಿದರು.

'ಪ್ರಸಕ್ತ ಶೈಕ್ಷಣಿಕ ವರ್ಷದ ಪ್ರಾರಂಭದಿಂದ ನಿತ್ಯ ಶಾಲೆಗೆ ಹೋಗುತ್ತಿದ್ದೆ. ಅರ್ಧ ವಾರ್ಷಿಕ ಪರೀಕ್ಷೆ ಸೇರಿ ಮೂರು ಕಿರು ಪರೀಕ್ಷೆ ಬರೆದೆ. ಜನವರಿಯಲ್ಲಿ ಅಲರ್ಜಿ ಕಾರಣ ಮುಖ್ಯಶಿಕ್ಷಕರ ಗಮನಕ್ಕೆ ತಂದು ಶಾಲೆಗೆ ರಜೆ ಹಾಕಿದೆ. ಮನೆಯಲ್ಲಿ ಚೆನ್ನಾಗಿ ಅಭ್ಯಾಸ ಮಾಡು ಎಂದು ಧೈರ್ಯ ಹೇಳಿದ ಗುರುಗಳು ಈಗ ಪ್ರವೇಶ ಪತ್ರ ಬಂದಿಲ್ಲ ಎಂದು ಮೋಸ ಮಾಡಿದರು. ದಯವಿಟ್ಟು ಪೂರಕ ಪರೀಕ್ಷೆಯಲ್ಲಾದರೂ ಅವಕಾಶ ಕೊಡಿ' ಎಂದು ಅಭಿಷೇಕ ಅಲವತ್ತುಕೊಂಡರು.

ಅಹವಾಲು ಆಲಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ವೀರಮಲ್ಲಪ್ಪ ಮತ್ತು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸುರೇಶ್ ಹುಗ್ಗಿ, 'ಮುಖ್ಯಶಿಕ್ಷರರ ನಿರ್ಲಕ್ಷ್ಯವಿದ್ದರೆ, ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಪೂರಕ ಪರೀಕ್ಷೆಯಲ್ಲಿ ಅವಕಾಶ ಕಲ್ಪಿಸಲು ಪ್ರಯತ್ನಿಸುತ್ತೇವೆ' ಎಂದು ಭರವಸೆ ನೀಡಿದರು.

ಹಾವೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ವಂಚಿತ ವಿದ್ಯಾರ್ಥಿ ಅಭಿಷೇಕ್ ಜರಮಲ್ಲ ಅಣಕು ಪರೀಕ್ಷೆ ಬರೆದು ತನ್ನ ಪೋಷಕರೊಂದಿಗೆ ಪ್ರತಿಭಟಿಸಿದರು. ಎಸ್‌ಎಫ್‌ಐ ಜಿಲ್ಲಾ ಘಟಕದ ಸಹ ಕಾರ್ಯದರ್ಶಿ ಬಸವರಾಜ ಎಸ್‌. ಜೊತೆಗಿದ್ದರು.

ಅಧಿಕಾರಿಗಳಿಂದ ಶಿಫಾರಸು • ಅರಣ್ಯ ಸಚಿವರಿಂದ ತಡೆ

ಗೋವಾ ಯೋಜನೆಗೆ ಇಲ್ಲ ರಾಜ್ಯದ 435 ಎಕರೆ ಕಾಡು

• ಮಂಜುನಾಥ ಹೆಬ್ಬಾರ್

ನವದೆಹಲಿ: ಗೋವಾ– ತಮ್ನಾರ್ 400 ಕೆ.ವಿ. ವಿದ್ಯುತ್ ಮಾರ್ಗಕ್ಕೆ ಕರ್ನಾಟಕದ 435 ಎಕರೆ ಅರಣ್ಯ ಒದಗಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಡಿದ್ದ ಶಿಫಾರಸಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ತಡೆ ಒಡ್ಡಿದ್ದಾರೆ.

ಧಾರವಾಡ ಜಿಲ್ಲೆಯ ನರೇಂದ್ರದಿಂದ ಗೋವಾಕ್ಕೆ 400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಮಾರ್ಗ ನಿರ್ಮಿಸಲು ಮುಂದಾಗಿರುವ 'ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್', ಅರಣ್ಯವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಒಪ್ಪಿಗೆ ನೀಡುವಂತೆ ಪ್ರಸ್ತಾವ ಸಲ್ಲಿಸಿತ್ತು. ಈ ಯೋಜನೆಗೆ ಅರಣ್ಯ ಬಳಸಲು ಅನುಮತಿ ನೀಡಬಹುದು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್), ಕೆನರಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಶಿಫಾರಸು ಮಾಡಿದ್ದರು.

'ಉದ್ದೇಶಿತ ವಿದ್ಯುತ್ ಮಾರ್ಗವು ದಾಂಡೇಲಿ ಆನೆ ಕಾರಿಡಾರ್, ಭೀಮಗಡ ಅಭಯಾರಣ್ಯದ ಪರಿಸರ ಸೂಕ್ಷ್ಮವಲಯ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮವಲಯ ಹಾಗೂ ದಾಂಡೇಲಿ ಅಭಯಾರಣ್ಯಗಳ ಮೂಲಕ ಹಾದುಹೋಗಲಿದೆ. ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗಲಿದೆ' ಎಂದು ಪರಿಸರ ಕಾರ್ಯಕರ್ತರು ಸಚಿವರಿಗೆ ದೂರು ನೀಡಿದ್ದರು. ಆ ಬಳಿಕ ಕಡತ ತರಿಸಿಕೊಂಡು ಪರಿಶೀಲಿಸಿದ ಸಚಿವರು, ಪ್ರಸ್ತಾವ ತಿರಸ್ಕರಿಸುವಂತೆ ತಾಕೀತು ಮಾಡಿದ್ದಾರೆ.

11ನೇ ಪುಟ ನೋಡಿ

ಈ ಯೋಜನೆಗೆ ಒಪ್ಪಿಗೆ ನೀಡದಂತೆ ಅರಣ್ಯ ಇಲಾಖೆಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದೆ. ಯೋಜನೆಯನ್ನು ತಿರಸ್ಕರಿಸಿರುವ ಸರ್ಕಾರದ ನಿರ್ಧಾರದಿಂದ ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವನ್ಯಜೀವಿ ಸಂರಕ್ಷಣಾ ಪ್ರಯತ್ನಗಳಿಗೆ ಬಲ ಬಂದಂತಾಗಿದೆ. ಸುಸ್ಥಿರವಲ್ಲದ ಅಭಿವೃದ್ಧಿ ಯೋಜನೆಗಳ ಬದಲು ಪಶ್ಚಿಮ ಘಟ್ಟಗಳ ರಕ್ಷಣೆಗೆ ಆದ್ಯತೆ ನೀಡಿದ ಸಚಿವರ ನಿರ್ಧಾರ ಪ್ರಶಂಸನೀಯ.
ಗಿರಿಧರ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಅಗಾಧ ಪ್ರಮಾಣದ ಕಾಡು ನಾಶವಾಗುವ ಯೋಜನೆಯ ಪ್ರಸ್ತಾವವನ್ನು ಶಿಫಾರಸು ಮಾಡಿದ ಇಲಾಖೆಯ ಅಧಿಕಾರಿಗಳಿಗೆ ನೋಟಿಸ್ ನೀಡಲು ಸೂಚಿಸಲಾಗಿದೆ.
ಎನ್‌.ಮಂಜುನಾಥ ಪ್ರಸಾದ್, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

ಬಿ.ಕೆ. ಶಿವರಾಂಗೆ 'ಡಾ. ರಾಜ್‌ಕುಮಾರ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರವು ನೀಡುವ 'ವರನಟ ಡಾ. ರಾಜ್ ಕುಮಾರ್ ಸಿರಿಗನ್ನಡ ಪ್ರಶಸ್ತಿ'ಗೆ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಂ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25 ಸಾವಿರ ನಗದು, ಕಂಚಿನ ಫಲಕ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

ಏಪ್ರಿಲ್ 18ರಂದು ಸಂಜೆ 5ಕ್ಕೆ ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಚಿಂತಕ ಮೋಹನದೇವ್ ಆಳ್ವ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಐಜಿಪಿ ಗೋಪಾಲ್ ಬಿ. ಹೊಸೂರು, ಕೆ. ಮೋಹನರಾವ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಶಾಶ್ವತ ವಿದ್ಯುತ್ ಸಂಪರ್ಕ ವಿಳಂಬ: ನಾಡಪ್ರಭು ಕೆಂಪೇಗೌಡ ಬಡಾವಣೆಯ ನಾಗರಿಕರ ಅಳಲು

ವಿದ್ಯುತ್ ಉಪಕರಣ: ಕಳ್ಳರ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ (ಎನ್‌ಪಿಕೆಎಲ್) ವಿದ್ಯುತ್ ಉಪಕರಣಗಳ ಮೇಲೆ ಕಳ್ಳರ ಕಣ್ಣು ಬಿದ್ದಿದೆ. ಸಾವಿರಾರು ರೂಪಾಯಿ ಮೌಲ್ಯದ ವಿದ್ಯುತ್ ಪರಿಕರಗಳನ್ನು ಕಳ್ಳರು ಕದ್ದೊಯ್ಯುತ್ತಿದ್ದಾರೆ.

ಕಳ್ಳರ ಕಾಟಕ್ಕೆ ಬೆದರಿದ 'ಎಲ್ ಆ್ಯಂಡ್ ಟಿ' ಹಾಗೂ ಎಸ್‌ಪಿಎಂಎಲ್ ಅಮೃತ ಕಂಪನಿಯ ಗುತ್ತಿಗೆದಾರರು ವಿವಿಧ ಬ್ಲಾಕ್‌ಗಳಲ್ಲಿ ಅಳವಡಿಸಿದ್ದ ವಿದ್ಯುತ್ ಉಪಕರಣಗಳನ್ನು ಸ್ಥಳದಿಂದ ತೆರವು ಮಾಡುತ್ತಿದ್ದಾರೆ.

'ವಿದ್ಯುತ್ ಉಪಕೇಂದ್ರ ಕಾಮಗಾರಿ ಮುಕ್ತಾಯವಾದ ನಂತರವೇ ಮತ್ತೆ ಕಾಮಗಾರಿ ಆರಂಭಿಸುತ್ತೇವೆ' ಎಂದು ಗುತ್ತಿಗೆದಾರರು ಪಟ್ಟು ಹಿಡಿದಿದ್ದಾರೆ. ಶಾಶ್ವತ ವಿದ್ಯುತ್ ಸಂಪರ್ಕ ಪಡೆಯುವುದಕ್ಕೆ ಬಡಾವಣೆಯ ಮನೆ ಮಾಲೀಕರು ಮತ್ತಷ್ಟು ದಿನ ಕಾಯಬೇಕಾದ ಸ್ಥಿತಿ ಎದುರಾಗಿದೆ.

ಬಡಾವಣೆಗೆ ಸ್ವಾಧೀನ ಪಡಿಸಿಕೊಂಡಿದ್ದ 4,040 ಎಕರೆ ಪ್ರದೇಶದಲ್ಲಿ, 2,694 ಎಕರೆಯಲ್ಲಿ ಬಡಾವಣೆ ನಿರ್ಮಿಸಲಾಗಿದೆ.

ಮುಖ್ಯಾಂಶಗಳು
- ಅಕ್ಕಪಕ್ಕದ ಹಳ್ಳಿಗಳಿಂದ ವಿದ್ಯುತ್ ಸಂಪರ್ಕ
- ಎರಡು ವರ್ಷ ಕಳೆದರೂ ಕಾರ್ಯಾರಂಭ ಮಾಡದ ಉಪಕೇಂದ್ರ
- ಬೀದಿ ದೀಪಗಳನ್ನು ಅಳವಡಿಸಿಲ್ಲ

> ಎಂಟು ವರ್ಷಗಳ ಹಿಂದೆಯೇ ಬಡಾವಣೆ ಕಾಮಗಾರಿ ಆರಂಭವಾಗಿದ್ದರೂ ಸಮಗ್ರ ಅಭಿವೃದ್ಧಿ ಕಂಡಿಲ್ಲ
> **ಸೂರ್ಯಕಿರಣ್,** ವಕ್ತಾರ, ಎನ್‌ಪಿಕೆಎಲ್

ಬಡಾವಣೆಯಲ್ಲಿ ಐದು ಉಪ ಕೇಂದ್ರಗಳನ್ನು ನಿರ್ಮಿಸಲು ನಿರ್ಧರಿಸಲಾಗಿತ್ತು. ಮೊದಲ ಹಂತದಲ್ಲಿ ಬಡಾವಣೆಯ 1 ರಿಂದ 9ನೇ ಬ್ಲಾಕ್‌ಗಳಿಗೆ ಕೊಮ್ಮಘಟ್ಟದಲ್ಲಿ ನಿರ್ಮಿಸುತ್ತಿರುವ ವಿದ್ಯುತ್ ಉಪಕೇಂದ್ರದಿಂದ ಸಂಪರ್ಕ ಕೊಡಲು ಹಲವು ಪ್ರದೇಶಗಳಲ್ಲಿ ವಿದ್ಯುತ್ ಕಂಬಗಳು, ಲಿಂಕಿಂಗ್ ಬಾಕ್ಸ್, ಎಲೆಕ್ಟ್ರಿಕ್ ವೈರ್‌ಗಳನ್ನು ಅಳವಡಿಕೆ ಮಾಡಲಾಗಿತ್ತು.

ಎನ್‌ಪಿಕೆಎಲ್ ಬಡಾವಣೆಯಲ್ಲಿ ಅಳವಡಿಸಿರುವ ವಿದ್ಯುತ್ ಸಂಪರ್ಕ ಕಾಮಗಾರಿ

ಉಪ ಕೇಂದ್ರ ನಿರ್ಮಾಣವಾಗದ ಕಾರಣಕ್ಕೆ ವಿದ್ಯುತ್ ಸಂಪರ್ಕ ಇನ್ನೂ ಸಿಕ್ಕಿಲ್ಲ. ವಿದ್ಯುತ್ ಪರಿವರ್ತಕ ಅಳವಡಿಕೆ ಸ್ಥಳದಲ್ಲಿ ಜೋಡಿಸಿದ್ದ ತಾಮ್ರದ ತಂತಿ, ರಿಂಗ್‌ಮೈನ್ ಯೂನಿಟ್, ತಾಮ್ರದ ಪ್ಲೇಟ್‌ಗಳು ಕಳ್ಳರ ಪಾಲಾಗಿವೆ ಎಂದು ನಿವೇಶನದಾರರು ಹೇಳುತ್ತಾರೆ.

ಕಳ್ಳರು ರಿಂಗ್‌ಮೈನ್ ಯೂನಿಟ್‌ಗೆ ಬೆಂಕಿ ಹಚ್ಚಿದ್ದಾರೆ. ಗುತ್ತಿಗೆದಾರರ ಸಿಬ್ಬಂದಿಗೆ ರಾತ್ರಿ ಹೊತ್ತಿನಲ್ಲಿ ಚಾಕು ತೋರಿಸಿ ದರೋಡೆ ನಡೆಸಿದ್ದಾರೆ. ಬೀದಿದೀಪದ ಕಂಬಗಳಿಗೆ ಅಳವಡಿಸಲಾಗಿದ್ದ ಲಿಂಕ್ ಬಾಕ್ಸ್‌ಗೆ ಹಾರೆಯಿಂದ ಒಡೆದು ಹಾಳು ಮಾಡಲಾಗಿದೆ. ಸಣ್ಣ ಮಕ್ಕಳನ್ನು ಕಳುಹಿಸಿ ಕೇಬಲ್ ಕಳವು ಮಾಡಿ ಮಾರಾಟ ಮಾಡಿದ್ದಾರೆ ಎಂದು ಎನ್‌ಪಿಕೆಎಲ್ ಫೋರಂನ ಸದಸ್ಯರು ಹೇಳಿದರು.

ನಿವೇಶನದಾರರ ಅಳಲು: 2022ರ ಮೇನಲ್ಲಿ ವಿದ್ಯುತ್ ಉಪ ಕೇಂದ್ರದ ಕಾಮಗಾರಿಯು ಪ್ರಾರಂಭವಾಗಿದ್ದರೂ ಇನ್ನೂ ಕೆಲಸ ಮುಕ್ತಾಯಗೊಂಡು ಕೇಂದ್ರ ಕಾರ್ಯಾರಂಭ ಮಾಡಿಲ್ಲ. ಮನೆ ನಿರ್ಮಿಸಲು ಅಗತ್ಯವಾದ ತಾತ್ಕಾಲಿಕ ವ್ಯವಸ್ಥೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಬೆಸ್ಕಾಂಗೆ ಅರ್ಜಿ ಸಲ್ಲಿಸಿದರೆ ಅಕ್ಕಪಕ್ಕದ ಖಾಸಗಿ ಲೇಔಟ್ ಹಾಗೂ ಹಳ್ಳಿಗಳಿಂದ ಸಂಪರ್ಕ ಕಲ್ಪಿಸಲಾಗುತ್ತಿದೆ.

'ವಿದ್ಯುತ್ ಸಂಪರ್ಕಕ್ಕಾಗಿ ಬೆಸ್ಕಾಂ, ಬಿಡಿಎಗೆ ₹50 ಕೋಟಿ ಪಾವತಿಸಿದೆ. ಆದರೆ, ಬಿಡಿಎ ಉಪ ಕೇಂದ್ರ ಕಾಮಗಾರಿಯನ್ನು ಪೂರ್ಣಗೊಳಿಸದೇ ಸಮಸ್ಯೆ ಎದುರಾಗಿದೆ. ನಿವೇಶನದಾರರು ಮನೆ ನಿರ್ಮಿಸಲು ತಾತ್ಕಾಲಿಕ ವ್ಯವಸ್ಥೆ ಅಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅರ್ಜಿ ಸಲ್ಲಿಸಿದರೆ ಸಂಪರ್ಕ ದೊರೆಯುವುದು ವಿಳಂಬವಾಗುತ್ತಿದೆ. ಒಂದು ವೇಳೆ ಈ ವ್ಯವಸ್ಥೆ ಅಡಿ ಸಂಪರ್ಕ ಕಲ್ಪಿಸಿದರೂ ಅದರ ಹೊರೆಯನ್ನೂ ನಮ್ಮ ಮೇಲೆಯೇ ಹಾಕಲಾಗುತ್ತಿದೆ' ಎಂದು ನಿವೇಶನದಾರರು ಹೇಳುತ್ತಾರೆ.

ಬೀದಿ ದೀಪಗಳ ಅಳವಡಿಕೆಯನ್ನೂ ಮಾಡಿಲ್ಲ. ಇದರಿಂದ ಬಡಾವಣೆಯಲ್ಲಿ ಕಗ್ಗತ್ತಲು ವಾತಾವರಣ ಇದೆ. ಬೀದಿ ದೀಪ ಅಳವಡಿವಂತೆ ಮನವಿ ಮಾಡಿದರೆ ಮನೆ ಸಂಪರ್ಕದಿಂದಲೇ ವ್ಯವಸ್ಥೆ ಮಾಡಿಕೊಳ್ಳುವಂತೆ ಹೇಳುತ್ತಿದ್ದಾರೆ ಎಂದು ಫೋರಂ ಸದಸ್ಯರೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ದೀರ್ಘ ಕಾಲದ ಗೈರು: ವಜಾ ಆದೇಶ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಅನಾರೋಗ್ಯದ ಕಾರಣ ನೀಡಿ ಅನಧಿಕೃತವಾಗಿ ಎಂಟು ತಿಂಗಳ ಕಾಲ ಕರ್ತವ್ಯಕ್ಕೆ ಗೈರಾಗಿದ್ದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿ ಉದ್ಯೋಗಿಯೊಬ್ಬರ ವಜಾ ಆದೇಶವನ್ನು ಎತ್ತಿ ಹಿಡಿದಿರುವ ಹೈಕೋರ್ಟ್, 'ಇದೊಂದು ಗಂಭೀರ ದುರ್ನಡತೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಸಂಬಂಧ ಎಚ್‌ಎಎಲ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ. ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶದಂತೆ ಉದ್ಯೋಗಿಯಿಂದ ಪಡೆಯಲಾಗಿದ್ದ ₹2.2 ಲಕ್ಷ ಮೊತ್ತವನ್ನು ಹಿಂತಿರುಗಿಸುವಂತೆ ಎಚ್‌ಎಎಲ್‌ಗೆ ಆದೇಶಿಸಿದೆ.

ಪ್ರಕರಣವೇನು?: ಎಚ್‌ಎಎಲ್‌ನ ವಿನ್ಯಾಸ ವಿಭಾಗದಲ್ಲಿ ಎಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಎ.ಕೆ.ಸಿನ್ಹಾ ಅನಾರೋಗ್ಯದ ಕಾರಣ ನೀಡಿ 2016ರ ಸೆಪ್ಟೆಂಬರ್ 22ರಿಂದ 2017ರ ಜನವರಿ 6ರವರೆಗೆ ಸತತ 107 ದಿನಗಳ ಕಾಲ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರಾಗಿದ್ದರು. ಇಲಾಖಾ ವಿಚಾರಣೆ ನಂತರ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ಅಂತೆಯೇ, ಸೇವಾ ಗುತ್ತಿಗೆ ಉಲ್ಲಂಘನೆ ಆರೋಪದಡಿ ₹ 2.2 ಲಕ್ಷ ಪಾವತಿಸುವಂತೆ ಆದೇಶಿಸಲಾಗಿತ್ತು. ಇದನ್ನು ಪ್ರಶ್ನಿಸಿ ಸಿನ್ಹಾ ಮೇಲ್ಮನವಿ ಪ್ರಾಧಿಕಾರದ ಮೊರೆ ಹೋಗಿದ್ದರು.

ವಜಾ ಆದೇಶವನ್ನು ಪರಿಷ್ಕರಿಸಿದ್ದ ಮೇಲ್ಮನವಿ ಪ್ರಾಧಿಕಾರ, ಸೇವೆಯಿಂದ ವಜಾಗೊಳಿಸಿದ್ದನ್ನು 'ತೆಗೆದು ಹಾಕಲಾಗಿದೆ' ಎಂಬ ಕಾರಣ ನೀಡಿ ಆದೇಶವನ್ನು ಮಾರ್ಪಾಡು ಮಾಡಿತ್ತು. ಪ್ರಾಧಿಕಾರದ ಈ ಆದೇಶವನ್ನು ಏಕಸದಸ್ಯ ನ್ಯಾಯಪೀಠದಲ್ಲಿ ಪ್ರಶ್ನಿಸಲಾಗಿತ್ತು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ 2023ರ ನವೆಂಬರ್‌ನಲ್ಲಿ ವಜಾ ಆದೇಶವನ್ನು ರದ್ದುಗೊಳಿಸಿ, ಕಂಪನಿಯು, ಉದ್ಯೋಗಿಯಿಂದ ಪಡೆದಿದ್ದ ಹಣವನ್ನು ವಾಪಸು ನೀಡುವಂತೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಎಚ್‌ಎಎಲ್ ಮೇಲ್ಮನವಿ ಸಲ್ಲಿಸಿತ್ತು.

ಮೆಟ್ರೊ ಪಿಲ್ಲರ್‌ಗೆ ಲಾರಿ ಡಿಕ್ಕಿ: ಸಾವು

ಬೆಂಗಳೂರು: ಬಳ್ಳಾರಿ ರಸ್ತೆಯಲ್ಲಿರುವ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್‌ಗೆ ಲಾರಿಯೊಂದು ಡಿಕ್ಕಿ ಹೊಡೆದು ಚಾಲಕ ಸಾಹೀದ್ ಖಾನ್ (40) ಅವರು ಮೃತಪಟ್ಟಿದ್ದಾರೆ.

'ಮಧ್ಯಪ್ರದೇಶದ ಗ್ವಾಲಿಯರ್‌ನ ಸಾಹೀದ್ ಖಾನ್, ಸರಕು ಸಾಗಣೆಯ ಲಾರಿ ಚಲಾಯಿಸಿಕೊಂಡು ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಮೆಟ್ರೊ ನಿರ್ಮಾಣ ಕಾಮಗಾರಿ ನಡೆದಿದೆ. ಮೀನುಕುಂಟೆ ಹೊಸೂರು ಬಳಿ ಮೆಟ್ರೊ ಪಿಲ್ಲರ್‌ಗಳನ್ನು ನಿರ್ಮಿಸಲಾಗಿದೆ. ಇದೇ ರಸ್ತೆಯಲ್ಲಿ ಲಾರಿ ಹೊರಟಿತ್ತು. ಸಾಹೀದ್ ಖಾನ್, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಲಾರಿ ಚಲಾಯಿಸಿದ್ದರು.'

'ನಿಯಂತ್ರಣ ತಪ್ಪಿದ್ದ ಲಾರಿ, ಪಿಲ್ಲರ್‌ಗೆ ಗುದ್ದಿತ್ತು. ಲಾರಿ ಮುಂಭಾಗ ಸಂಪೂರ್ಣ ಜಖಂಗೊಂಡು, ಚಾಲಕ ಮೃತಪಟ್ಟಿದ್ದಾರೆ. ಕ್ಲೀನರ್ ಸಹ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ತಿಳಿಸಿದರು.

'ರಿಯಲ್ ಎಸ್ಟೇಟ್ ಯೋಜನೆ ಕೊಡಗಿನ ಪರಿಸರಕ್ಕೆ ಆಪತ್ತು'

ಪ್ರಜಾವಾಣಿ ವಾರ್ತೆ

ಮುತ್ತಣ್ಣ

ಬೆಂಗಳೂರು: 'ಕೊಡಗು ಜಿಲ್ಲೆಯಲ್ಲಿ ನಡೆಯುತ್ತಿರುವ ರಿಯಲ್ ಎಸ್ಟೇಟ್ ಯೋಜನೆಗಳಿಂದ ಕಾವೇರಿ ನದಿ ಹಾಗೂ ಪರಿಸರಕ್ಕೆ ಆಪತ್ತು ಎದುರಾಗಿದೆ' ಎಂದು 'ಕೊಡಗು ಮತ್ತು ಕಾವೇರಿ ಉಳಿಸಿ ಅಭಿಯಾನ'ದ ಸದಸ್ಯರು ಅಳಲು ತೋಡಿಕೊಂಡರು.

'ವಾಣಿಜ್ಯ ಉದ್ದೇಶಕ್ಕೆ ಅವ್ಯಾಹತವಾಗಿ ಭೂಪರಿವರ್ತನೆ ನಡೆಯುತ್ತಿದೆ. ಅಲ್ಲದೇ ಕಾವೇರಿ ನದಿಯಲ್ಲಿ ಒಳಹರಿವು ಕ್ಷೀಣಿಸುತ್ತಿದೆ. ಇದೇ ರೀತಿ ಭೂಪರಿವರ್ತನೆಗೆ ಅವಕಾಶ ಮುಂದುವರಿದರೆ ಸಾಕಷ್ಟು ಸಮಸ್ಯೆಗಳು ಎದುರಾಗಲಿವೆ' ಎಂದು ಅಭಿಯಾನದ ಸಂಯೋಜಕ ಸಿ.ಪಿ. ಮುತ್ತಣ್ಣ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಈ ವರ್ಷ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆ ಎದುರಾಗಿದೆ. ಬೆಂಗಳೂರಿನಲ್ಲಿ ನೆಲೆಸಿರುವ 1.30 ಕೋಟಿ ಜನಸಂಖ್ಯೆಗೆ ಕಾವೇರಿ ನದಿ ಕುಡಿಯುವ ನೀರು ಒದಗಿಸುತ್ತಿದೆ. ಜಿಲ್ಲೆಯಲ್ಲಿ ನಡೆಯುತ್ತಿರುವ ವಾಣಿಜ್ಯ ಭೂಪರಿವರ್ತನೆ ಹಾಗೂ ಅರಣ್ಯ ನಾಶವೇ ಈ ಸಮಸ್ಯೆಗೆ ಕಾರಣ' ಎಂದು ಹೇಳಿದರು.

'ವಿರಾಜಪೇಟೆ ತಾಲ್ಲೂಕಿನ ಬಿಟ್ಟಂಗಾಲದಲ್ಲಿ ನೂರಾರು ಎಕರೆ ಕಾಫಿ ತೋಟ ನಾಶಪಡಿಸಿ, ಐಷಾರಾಮಿ ಕಾಲೊನಿ ನಿರ್ಮಿಸಲಾಗುತ್ತಿದೆ. ಚಿನ್ನಾಭರಣ ಮಳಿಗೆ ಮಾಲೀಕರೊಬ್ಬರು ಮಡಿಕೇರಿಯಲ್ಲಿ ಪ್ರತಿಷ್ಠಿತ ಕಾಲೊನಿ ನಿರ್ಮಿಸಿದ್ದಾರೆ. ತಮಿಳುನಾಡಿನ ಉದ್ಯಮಿಯೊಬ್ಬರು ಕಾವೇರಿ ಜಲಾನಯನ ಪ್ರದೇಶವನ್ನೇ ನಾಶ ಪಡಿಸುತ್ತಿದ್ದಾರೆ. ಗೋಣಿಕೊಪ್ಪಲು ಹಾಗೂ ಹಾತೂರು ಭಾಗದಲ್ಲಿ ಲೇಔಟ್ ತಲೆಯೆತ್ತಿದೆ. ಸಿದ್ದಾಪುರದ ಬಳಿ ರೆಸಾರ್ಟ್ ಮಾಲೀಕರೊಬ್ಬರು ಬಿಬಿಟಿಸಿ ಕಂಪನಿ ಆಸ್ತಿ ಖರೀದಿಸಿ ಅದನ್ನು ರಿಯಲ್ ಎಸ್ಟೇಟ್‌ಗೆ ಬಳಸಿಕೊಳ್ಳಲು ನಿರ್ಧರಿಸಿದ್ದಾರೆ. ಭತ್ತದ ಗದ್ದೆಗಳೂ ಬಡಾವಣೆಗಳಾಗಿ ಪರಿವರ್ತನೆ ಆಗುತ್ತಿವೆ' ಎಂದು ವಿವರಿಸಿದರು.

'ಕೊಡಗು ಹಾಗೂ ಬೆಂಗಳೂರು ಜನರ ಹಿತದೃಷ್ಟಿಯಿಂದ ರಿಯಲ್ ಎಸ್ಟೇಟ್ ಯೋಜನೆ ಸ್ಥಗಿತಗೊಳಿಸಬೇಕು' ಎಂದು ಮನವಿ ಮಾಡಿದರು.

ಹಣ ಪಡೆದು ಎನ್‌ಒಸಿ: 'ಗ್ರಾಮ ಪಂಚಾಯಿತಿಗಳಲ್ಲಿ ಹಣ ಪಡೆದು ನಿರಾಪೇಕ್ಷಣಾ ಪತ್ರ (ಎನ್‌ಒಸಿ) ನೀಡಲಾಗುತ್ತಿದೆ. ಪಂಚಾಯಿತಿ ಸದಸ್ಯರು ಜಿಲ್ಲೆಯ ಜನರ ಹಿತಕಾಪಾಡುವ ಬದಲಿಗೆ, ಜಿಲ್ಲೆಗೆ ಹೆಚ್ಚು ಜನರು ಪ್ರವೇಶಿಸಲು ಅನುಕೂಲ ಮಾಡಿಕೊಡುತ್ತಿದ್ದಾರೆ' ಎಂದರು.

ಪರಿಸರವಾದಿ ಜೋಸೆಫ್ ಹೂವರ್, 'ರಿಯಲ್ ಎಸ್ಟೇಟ್ ಯೋಜನೆಗಳ ವಿರುದ್ಧ ಸರ್ಕಾರಕ್ಕೆ ಪತ್ರ ಬರೆಯುತ್ತೇವೆ. ಅಗತ್ಯ ಬಿದ್ದರೆ ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಸಿದರು.

ಕಾಫಿ ಬೆಳೆಗಾರ ದೇವಯ್ಯ, 'ಭತ್ತದ ಗದ್ದೆಗಳನ್ನೂ ಲೇಔಟ್ ಮಾಡಲಾಗುತ್ತಿರುವುದರಿಂದ ಅಂತರ್ಜಲ ಸಮಸ್ಯೆ ಉಂಟಾಗಿದೆ. ಗದ್ದೆಗಳಲ್ಲಿ ನೀರು ನಿಂತು ಅಂತರ್ಜಲ ವೃದ್ಧಿ ಆಗುತ್ತಿತ್ತು. ಈಗ ಬೇಸಿಗೆಯಲ್ಲಿ ನೀರು ಲಭಿಸುತ್ತಿಲ್ಲ' ಎಂದರು.

ನಗರದ ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ವೈಲ್ಡ್‌ಲೈಫ್ ಫಸ್ಟ್‌ನ ಟ್ರಸ್ಟಿ ಪ್ರವೀಣ್ ಭಾರ್ಗವ್ ಅವರ 'ವೈಲ್ಡ್‌ಲೈಫ್ ಲಾ ಫಾರ್ ಕನ್ಸರ್‌ವೇಷನ್' ಕೃತಿಯನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಪ್ರವೀಣ್ ಭಾರ್ಗವ್, ಕರ್ನಾಟಕ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ, ಹೈಕೋರ್ಟ್ ನ್ಯಾಯಮೂರ್ತಿ ಕೆ.ಸೋಮಶೇಖರ್ ಪಾಲ್ಗೊಂಡಿದ್ದರು

9 ನಾಟಕಗಳಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಟಕ ಬೆಂಗ್ಳೂರು' 16ನೇ ರಂಗಸಂಭ್ರಮದ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ನಾಟಕ ರಚನೆ ಸ್ಪರ್ಧೆಯಲ್ಲಿ ವಿದ್ಯಾರ್ಥಿ ನಾಟಕ ಸೇರಿದಂತೆ ಒಂಬತ್ತು ನಾಟಕಗಳ ಕೃತಿಗಳು ಬಹುಮಾನಕ್ಕೆ ಆಯ್ಕೆಯಾಗಿವೆ.

ರವೀಂದ್ರ ಕಲಾಕ್ಷೇತ್ರಕ್ಕೆ 60 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ನಡೆಯುತ್ತಿರುವ 'ಕಲಾಕ್ಷೇತ್ರ 60' ವಜ್ರಮಹೋತ್ಸವದ ನೆನಪನ್ನು ಹಸಿರಾಗಿಡಲು ಈ ನಾಟಕ ರಚನೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸ್ಪರ್ಧೆಗೆ ಒಟ್ಟು 40 ನಾಟಕಗಳ ಕೃತಿಗಳು ಬಂದಿದ್ದವು. ಅದರಲ್ಲಿ ಎರಡು ವಿದ್ಯಾರ್ಥಿ ನಾಟಕಗಳು.

ಬಹುಮಾನಕ್ಕೆ ಆಯ್ಕೆಯಾಗಿರುವ ನಾಟಕಗಳು ಹೀಗಿವೆ; 1) ಸುಮ್ಮನಿರು ಡಯೋಜಿನೆಸ್ – ಎನ್.ಸಿ.ಮಹೇಶ್ 2) ಚಿನಿವಾರನ ಮಗಳು – ಉಷಾ ನರಸಿಂಹನ್ 3)ಸನಿಮಾತ್ಮೆ – ಸಂತೋಷ್ ಗುಡ್ಡಿಯಂಗಡಿ 4)ಕಿಂಡ್ಸುಗಿ – ಚಂದನಾ ನಾಗ್, 5) ಯಾನ – ಕೃಷ್ಣ ಜನಮನ 6) ಎಮ್ಮಯ ಕೂಸ ಕಂಡಿರಾ– ಅನುಪಮಾ ಪ್ರಸಾದ್, 7) ಶೇಷಗ್ರಸ್ತರು – ರಮೇಶ್ ಚಂದ್ ಎಚ್.ಸಿ. 8) ಹದ್ದು ಮೀರಿತೆ ಹಾದಿ – ಭದ್ರಪ್ಪ ಶಿ. ಹೆನ್ಲಿ 9) ಯಾಜ್ಞಸೇನಿಯ ಆತ್ಮಕಥನ – ವಿಜಯಲಕ್ಷ್ಮಿ (ವಿದ್ಯಾರ್ಥಿ ವಿಭಾಗ). ಬಹುಮಾನಕ್ಕೆ ಆಯ್ಕೆಯಾದ ಮೂರು ನಾಟಕಗಳಿಗೆ ತಲಾ ₹ 10 ಸಾವಿರ, ಉಳಿದ ಆರು ನಾಟಕಗಳಿಗೆ ತಲಾ ₹ 5 ಸಾವಿರ ನಗದು ಬಹುಮಾನ ನೀಡಲಾಗುತ್ತಿದೆ.

ಬೆಂಗಳೂರಿನ ಕಲಾಗಂಗೋತ್ರಿ ರಂಗತಂಡ ನಗದು ಬಹುಮಾನವನ್ನು ಪ್ರಾಯೋಜಿಸಿದೆ. ಬೆಂಗಳೂರಿನ ಭಾಗವತರು ಸಾಂಸ್ಕೃತಿಕ ಸಂಘಟನೆ ನಾಟಕಗಳನ್ನು ಪ್ರಕಟಿಸುತ್ತಿದೆ.

ಮಂಗಳವಾರ ಸಂಜೆ 6.30ಕ್ಕೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ 'ರವೀಂದ್ರ ಕಲಾಕ್ಷೇತ್ರ-60' ವಜ್ರಮಹೋತ್ಸವ ಸಂಭ್ರಮ ಸಮಾರೋಪ ಸಮಾರಂಭ ಹಾಗೂ ವಿಶ್ವ ರಂಗಭೂಮಿ ದಿನಾಚರಣೆಯಲ್ಲಿ ನಾಟಕ ರಚನಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುತ್ತಿದೆ ಎಂದು ನಾಟಕ ಬೆಂಗ್ಳೂರು, ಸಂಚಾಲನಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಬಹುಮಾನ ವಿತರಣೆ

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಮಂಗಳವಾರ ಸಂಜೆ 6.30ಕ್ಕೆ, 'ರವೀಂದ್ರ ಕಲಾಕ್ಷೇತ್ರ–60' ವಜ್ರಮಹೋತ್ಸವ ಸಂಭ್ರಮ ಸಮಾರೋಪ ಸಮಾರಂಭ, ವಿಶ್ವ ರಂಗಭೂಮಿ ದಿನಾಚರಣೆಯನ್ನು ಆಯೋಜಿಸಲಾಗಿದೆ.

'ನಾಟಕ ಬೆಂಗ್ಳೂರು' ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ನಾಟಕ ಅಕಾಡೆಮಿ, ರಂಗಕಲಾವಿದರ ವಿವಿಧೋದ್ದೇಶ ಸಹಕಾರ ಸಂಘದ ಸಹಯೋಗದಲ್ಲಿ ನಡೆಯುತ್ತಿರುವ ಈ ಸಮಾರಂಭದಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆ ಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಗುತ್ತಿದೆ. ರಂಗನಿರ್ದೇಶಕ, ವಿನ್ಯಾಸಕಾರ ಎಂ.ಎಸ್. ಸತ್ಯು ಅವರಿಗೆ 'ರಂಗ ಅಭಿನಂದನೆ' ಸಲ್ಲಿಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ, ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಮ್, ಚಿತ್ರಕಲಾವಿದ ಎಂ.ಎಸ್.ಮೂರ್ತಿ, ನಾಟಕಕಾರರಾದ ರಾಜಪ್ಪ ದಳವಾಯಿ, ಬೇಲೂರು ರಘುನಂದನ, ಲೇಖಕಿ ಸಂಧ್ಯಾರಾಣಿ ಭಾಗವಹಿಸಲಿದ್ದಾರೆ. ಅಂದು ರಾತ್ರಿ 7.30ಕ್ಕೆ ಟಿ.ಪಿ.ಕೈಲಾಸಂ ಅವರ ದಾಕ್ಷಾಯಿಣಿ ಭಟ್ ನಿರ್ದೇಶನದ, ದೃಶ್ಯ ರಂಗ ತಂಡ ಅಭಿಯನದ 'ಪೋಲಿ ಕಿಟ್ಟಿ' ನಾಟಕ ಪ್ರದರ್ಶನವಿದೆ ಎಂದು ಪ್ರಕಟಣೆ ತಿಳಿಸಿದೆ.

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಕನಕಪುರ

ಮಿಸ್ ನಂ.5064/2019

ಅರ್ಜಿದಾರರು : ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ–209, ಮಳವಳ್ಳಿ

ವಿರುದ್ಧ

ಪ್ರತಿ ಅರ್ಜಿದಾರರು : ಶ್ರೀ. ಖಮರ್ ಜಹಾನ್ ಮತ್ತು ಇತರರು

ಪ್ರತಿವಾದಿ ಸಂ.3 – ಶ್ರೀಮತಿ ಶೀಮಾ ರಫತ್ ಕೋಂ ಸೈಯದ್ ಹುಸೇನ್ @ ನವಾಬ್ ಜಾನ್ ವಯಸ್ಸು 50 ವರ್ಷಗಳು

ಪ್ರತಿವಾದಿ ಸಂ.4 – ಶ್ರೀ.ಮಹಮ್ಮದ್ ಇಫ್ತಖಾನ್ ಬಿನ್ ಸೈಯದ್ ಹುಸೇನ್ @ ನವಾಬ್ ಜಾನ್ ವಯಸ್ಸು 48 ವರ್ಷಗಳು

ಪ್ರತಿವಾದಿ ಸಂ.8 – ಶ್ರೀ.ಮಹಮ್ಮದ್ ಉನ್ನಿಸ್ ವಯಸ್ಸು 57 ವರ್ಷಗಳು

ಪ್ರತಿವಾದಿ ಸಂ.9 – ಶ್ರೀ.ಸೈಯದ್ ಉನ್ನಿಸ್ ವಯಸ್ಸು 56 ವರ್ಷಗಳು

ಪ್ರತಿವಾದಿ ಸಂ.19 – ಶ್ರೀಕೃಷ್ಣ ಬಿನ್ ಬೋಳೆಗೌಡ ವಯಸ್ಸು 55 ವರ್ಷಗಳು

ಪ್ರತಿವಾದಿ ಸಂ.26 – ಶ್ರೀಮತಿ, ಸಮೀನಾ ಫಿರ್ದೋಸ್ ಬಿನ್ ಲೇಟ್ ಸೈಯದ್ ನವಾಬ್ ಜಾನ್ C/o ಎಂ.ಎ.ಕೆ ಅನ್ಸಾರಿ, ವ್ಯವಸ್ಥಾಪಕ ಅಮನಥ್ ಸಹಕಾರಿ ಬ್ಯಾಂಕ್, ಬ್ರಿಗೇಡ್ ರೋಡ್ ಶಾಖೆ, ಬೆಂಗಳೂರು 560001

ಪ್ರತಿವಾದಿ ಸಂ.28 – ಶ್ರೀಮತಿ ಅಖ್ತರ್ ಜಾಹನ್ ಕೋಂ ನಿಸಾರ್ ಅಹಮ್ಮದ್ ವಯಸ್ಸು 48 ವರ್ಷಗಳು ನಂ.60, 2ನೇ ಕ್ರಾಸ್, 5ನೆ ಮೇನ್, ಮಿತಾಜ್ ನಗರ ಕುಮಾರಸ್ವಾಮಿ ಬಡಾವಣೆ, ಬೆಂಗಳೂರು–78

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ಸಲ್ಲಿಸುವುದರ ಮೂಲಕ ಪ್ರತಿವಾದಿ– 3,4,8,9,19,26 ಮತ್ತು 28, ಇವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಅಚಲು ಗ್ರಾಮದ ಮೂಲ ನಿವಾಸಿಗಳಾಗಿದ್ದು, ಮೇಲ್ಕಂಡ ಪ್ರತಿವಾದಿ 3,4,8,9,19,26 ಮತ್ತು 28, ಆದ ತಮಗೆ ನ್ಯಾಯಾಲಯದ ಮೂಲಕ ನೋಟಿಸ್ ಹಾಗೂ ಹಲವಾರು ಬಾರಿ ರಿಜಿಸ್ಟರ್ ಪೋಸ್ಟ್ (ಆರ್.ಪಿ.ಎ.ಡಿ) ಮೂಲಕ ನ್ಯಾಯಲಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಆದರೆ ತಾವುಗಳು ಘನ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ, ಆದುದರಿಂದ ತಮಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ಪ್ರಕರಣವನ್ನು ದಿನಾಂಕ: 26.04.2024 ರಂದು ಗೊತ್ತು ಪಡಿಸಿದ್ದು ಅ ದಿನದಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರು ತಕರಾರು ಇದ್ದಲ್ಲಿ ಯವುದೇ ಪಕ್ಷಗಾರರು ತಾವಾಗಲಿ ಅಥವಾ ಪರ ವಕೀಲರಾಗಲಿ ನ್ಯಾಯಾಲಯವು ನಿಗದಿ ಪಡಿಸಿರುವ ಆ ದಿನ ಬೆಳ್ಳಿಗೆ 11:00 ಗಂಟೆಗೆ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ಯಾರು ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ನ್ಯಾಯಾಲಯವು ಯಾರದೂ ತಕರಾರು ಇಲ್ಲವೆಂದು ಆದೇಶ ಹೊರಡಿಸುತ್ತದೆ ಎಂದು ತಿಳಿಸುವುದಕ್ಕಾಗಿ ಈ ಪತ್ರಿಕಾ ಪ್ರಕಟಣೆ.

ದಾವ ಷಡ್ಯೂಲ್

Sl. No.	Particulars	Remarks				
1	Land bearing	340/1	167	170/1	169/1	171/3
2.	Acquired Extent	360 sq.mtrs	170 sq.mtrs	80 sq.mtrs	245 sq.mtrs	415 sq.mtrs
3	Name of Village	Achalu				
4	Name of Taluk	Kanakapura				
5	Name of District	Ramanagara				
6	Award Amount	24,36,663/-				

ದಿನಾಂಕ: 18.03.2024 ರಂದು ನನ್ನ ಸ್ವಹಸ್ತಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು

ಮಾನ್ಯ ನ್ಯಾಯಾಲದ ಆದೇಶದ ಮೇರೆಗೆ
ಶಿರಸ್ತೇದಾರ್
2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಕನಕಪುರ, ರಾಮನಗರ

ಸ್ಥಳ ; ಕನಕಪುರ
ದಿನಾಂಕ; 18.03.2024

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

ಆರ್ಟಿಸನ್ಸ್ ಬಜಾರ್
Artisans Bazaar
There is a memory in every single piece of art.
Date : 22nd to 31st March, 2024
Timings: 11 AM to 7 PM
10 Days Exhibition / Entry Free
Arts, Crafts & Handlooms Exhibition
100+ Shopping Stalls | Live Performance & More
Entry Free!

Organized By
Grand Flea Market
For Details Contact
9036658774 / 6364685716
Karnataka Chitrakala Parishath,
Kumara Krupa Road, Near Shivananda Circle
Bengaluru -560 001.
HANDLOOMS | HOME DECOR | HANDICRAFTS | CLOTHING | JEWELLERS

PUBLIC NOTICE

SCRAP SALE
TOYOTA BOSHOKU AUTOMOTIVE INDIA PVT LTD
Plant -1: #41,Bhimenahalli, MN Halli Post, Bidadi, Ramanagaram, Bangalore 562 109

Sl No	Material	Appx qty /yr (Ton)
1	Wood scrap	60
2	Carton Box / Paper Board	185
3	Plastic & PVC	90
4	MS Scrap	135
5	PU Foam	30
6	Felt cut pieces	5
7	Empty Barrels	125
8	MS rail with Plastic wheels	5
9	Plastics Painted & Nylon parts	18
10	Cut pieces of Cable/Wire (Al)	1
11	Recyclable Glass	4
12	Waste Scarp of Airfilter Paper	20
13	Used Batteries	4
	Incineration/Reprocessing	
14	WS cut pieces Carpet, Fabric, PVC with Foam & Waste (Used) Isocyanate, Proglide & Polyol	400

Plant -2: Gundukurki Road, Nallaganakothapalli Village, Hosur taluk, Krishnagiri dist, Tamil nadu. Pin : 635 117

Sl No	Material	Appx qty /yr (Ton)
1	Wood Scrap	20
2	Paper Board	20
3	MS Scrap	50
4	MS Headrest Pipes	40
5	MS Steel & Wood (Metal Box)	20
6	Plastics	15
7	Incineration	25
8	Used Batteries	2

Note:
1.State pollution control board approval for all above materials is mandatory.
2.Interested parties can inspect the scrap in the above premises b/w 25th Apr' 24 to 27th Apr'24 from 2.0 pm to 5.0 pm.
3.Quotation to Be submitted on or Before 10.04.2024.
4.Quotation can be sent to following E-Mail IDs "gy.narasimhamurthy@toyota-boshoku.com" & "sriram.shetty@toyota-boshoku.com"
5.Agreement period: 1st May 2024 to 30th April 2025
Interested parties can contact the following person for scrap inspection at site Plant-1/2
Mr. G Y Narasimhamurthy - 09663881794
Mr.Sriram shetty K - 08904067146

PUBLIC NOTICE
The General Public is hereby notified that my client, **Vijayananth Tamilarasu,** S/o. Mr.Tamilarasu Arumugam, residing at No.M-69, Manickampalayam Housing Unit, Erode-638011, **has lost General Power of Attorney dated 28.08.2014,** executed by my client in favour of his wife **Mrs. Dhanya Gopurathinkal Krishnankutty alias Dhanya G.K.,** for the purpose of purchase of the apartment bearing No.A0802 on the 8th Floor of A-Wing Tower, forming part of the `SMONDO 2.0" building, constructed on the property bearing Sy.No.273, situated at Hulimangala Village, Jigani Hobli, Anekal Taluk, Bangalore, Accordingly the Apartment has been purchased under the absolute Sale Deed dated 09.10.2014, vide registered Document No, CMP-1-05303/2014-15, Stored in CD No.CMPD119. In this connection my client has also lodged a Police Complaint No. PO1333240600810 dated on 24-03-2024.
The finders of the said document are hereby requested to return the said document to the undersigned **within 7 days** from the date of this notice.
Advocate : Hanumanthappa
No. 155, First Floor,
Next to NMH Diagonal Road,
V.V.Puram, Bangalore-560 004
Mob: 9741077598
Place: Bangalore Date: 26-03-2024

PUBLIC NOTICE
This is for notice of the general publicthat a political party is proposed to beregistered by the name of BAHUJANJANASHAKTHI PARTY. The office of the party is located at#No. 136/A. UZHAIPAVAR MAIYAM, 8th MAIN, NEW BAGALUR LAYOUT, D.DEVARAJ URS NAGAR, St THOMASTOWN, Bangalore. 560084. Thisparty has submitted application tothe Election Commission of India, New Delhi. For its registration aspolitical party under section 29A of therepresentation of people Act, 1951.Name/ address of the office-bearers of theparty are as follows; National president: ADISATHYANARAYAN, S/o ADIMOOLAM Residing at No. 15, JV Shrtty Road,Ramasamy playa, Bangalore. 560033. National Secretary- General- Mr. JAMES No. 27/A, 5th cross, 5th main, BSV Reddy layout, RM Nagar Main Road, Bengaluru- 560016. National Treasurer: Mrs. MOKSHA MARY No. 27/A, 5th cross, 5th main, BSV Reddy layout, RM NagarMain Road, Bengaluru- 560016. If anyonehas any objection to the registration of BAHUJAN JANASHAKTHI PARTY Theymay send their Objection with reasonsthereof, to the Secretary (political party)Election Commission of India, Nirvanchansadan, Ashka Road, New Delhi-110001. Within 30 days of the publication of this notice.

PUBLIC NOTICE
To Place your Classified Ads Contact
9731810277

PERSONAL

Change of Name

CHANGE OF NAME
I, **SHAZIA NISAR,** Residing at No.42, Cockburn Road, Opp. HBS Hospital, Shivajinagar, Bangalore-560051 have changed my name to **SHAZIA** vide affidavit dt. 25-03-2024, before Notary K. Venkateshan, Bangalore. Henceforth I shall be called as **SHAZIA** only

I, K SUBHA ANANTHI D/o Late Sri A.S Govinda Sarma and late Smt G Choodamani residing at No.60 1st Main Road. 6th Block, 2nd phase. BSK 3rd Stage, Bangalore South, Bengaluru 560085, declare that I had changed my name initials is from G SUBHA ANANTHI to K SUBHA ANANTHI after my marriage with Mr. K Kasturi (husband) vide affidavit dated 23-03-2024 Sworn before Notary KS Chandreshekar, Bangalore Henceforth I shall be known as KSUBHA ANANTHI in all future Documents

I, B.K. LEELAVATHI W/o A.S. PRAKASH R/a#155, 9th`Cross Concord Layout, Near Srinivasapura, RV.College Post Bengaluru- 560059 have changed my minor Son's Name from PRABHAV RAJ MANJU to PRANAV ARUVANAHALLI (DOB:17.04.2011) vide affidavit dated: 25.3.2024 sworn before Notary Deepa.M. Bengaluru

I CHARLOTTE PETER residing at No.22, D.Chinnappa Road, Kammanahalli, Bangalore-84 have changed my name to CHARLOTTE CHRISTOPHER, vide affidavit dated 10-01-2024, before notary K.Venkateshan Bangalore.

BUSINESS

Business Offers

General

DRYFRUITS, FLAVOURED Cashews, Gift Boxes. Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

ಟೆಂಡರ್ ಆಹ್ವಾನಿಸಿದ ಬಿಎಂಆರ್‌ಸಿಎಲ್: 120 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಷರತ್ತು

40 ನಿಲ್ದಾಣಗಳಲ್ಲಿ ಮಳೆ ನೀರು ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ 40 ನಿಲ್ದಾಣಗಳಲ್ಲಿ ಮಳೆ ನೀರು ಸಂಗ್ರಹಿಸುವ ಹಾಗೂ ಇಂಗಿಸುವ ವಿಧಾನ ಅಳವಡಿಸಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸಿದೆ.

ಸದ್ಯ ಮೆಟ್ರೊ ಮಾರ್ಗಗಳ ಕೆಲವು ಕಡೆಗಳಲ್ಲಷ್ಟೇ ಈ ವ್ಯವಸ್ಥೆ ಇದ್ದು, ಅದನ್ನು ವಿಸ್ತರಿಸುವ ಯೋಜನೆಯನ್ನು ರೂಪಿಸಿದೆ.

ನಗರದಲ್ಲಿ ಮೆಟ್ರೊ ರೈಲು ಸಂಚಾರ ಆರಂಭವಾದಾಗಲೇ, 'ನಮ್ಮ ಮೆಟ್ರೊ' ನೇರಳೆ ಮಾರ್ಗದ ನಿಲ್ದಾಣಗಳಲ್ಲಿ (ಎಂ.ಜಿ.ರಸ್ತೆಯಿಂದ ಬೈಯಪ್ಪನಹಳ್ಳಿವರೆಗೆ) ಮಳೆ ನೀರು ಸಂಗ್ರಹ ಮತ್ತು ಇಂಗಿಸುವ ಪದ್ಧತಿಯನ್ನು ಅಳವಡಿಸಲಾಗಿತ್ತು. ಈ ಮಾರ್ಗದಲ್ಲಿ ಹಳಿಗಳ ಮೇಲೆ ಸುರಿಯುವ ಮಳೆ ನೀರನ್ನು ಪೈಪ್ ಮೂಲಕ ಕೆಳಗಿರುವ 3 ಮೂರು ಸಾವಿರ ಲೀಟರ್‌ನ ಟ್ಯಾಂಕ್‌ಗಳಿಗೆ ತುಂಬಿಸಲಾಗುತ್ತದೆ. ಟ್ಯಾಂಕ್ ತುಂಬಿದ ಮೇಲೆ ಹೆಚ್ಚಾದ ನೀರನ್ನು 18 ಅಡಿ ಆಳದ ಇಂಗುಗುಂಡಿಗೆ ಹರಿಸಲಾಗುತ್ತದೆ.

ಇದೇ ರೀತಿ ಇನ್ನೂ ಕೆಲವು ಭಾಗಗಳಲ್ಲಿ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಲು ಆರಂಭಿಸಿದ್ದರೂ, ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿಲ್ಲ. ಈಗ ನೇರಳೆ ಮಾರ್ಗದ 20 ನಿಲ್ದಾಣಗಳು, ಹಸಿರು ಮಾರ್ಗದ 20 ನಿಲ್ದಾಣಗಳು ಮತ್ತು ವಯಾಡಕ್ಟ್ ಪ್ರದೇಶದಲ್ಲಿ ಮಳೆ ನೀರು ಸಂಗ್ರಹಕ್ಕೆ ಯೋಜನೆ ರೂಪಿಸಿದೆ. ಅದಕ್ಕಾಗಿ ಟೆಂಡರ್ ಆಹ್ವಾನಿಸಿದೆ.



'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಎಂ.ಜಿ. ರಸ್ತೆಯಲ್ಲಿ ಹಳಿಗೆ ಬಿದ್ದ ಮಳೆ ನೀರು, ಕೆಳಗಿರುವ ಟ್ಯಾಂಕ್‌ಗೆ ಹರಿಯಲು ಪೈಪ್‌ಲೈನ್ ಜೋಡಿಸಿರುವುದು —ಪ್ರಜಾವಾಣಿ ಚಿತ್ರ

ಯೋಜನೆ ವಿವರ : ₹ 65.11 ಲಕ್ಷ ಅಂದಾಜು ವೆಚ್ಚದ ಈ ಯೋಜನೆಗೆ ಬಿಡ್ ಮಾಡಲು ಏ.15 ಕೊನೇ ದಿನಾಂಕ. ಏ.16 ರಂದು ತಾಂತ್ರಿಕ ಟೆಂಡರ್ ಹಾಗೂ ಏ.17ರಂದು ಹಣಕಾಸು ಟೆಂಡರ್ ತೆರೆಯಲಾಗುತ್ತದೆ. ಬಿಡ್ ಮಾಡಿದವರು 120 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಷರತ್ತು ವಿಧಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಎತ್ತರಿಸಿದ ಮಾರ್ಗದಲ್ಲಿ: ಮೆಟ್ರೊ ಸಂಚರಿಸುವ ಎತ್ತರಿಸಿದ ಮಾರ್ಗದಲ್ಲಿ ಮಾತ್ರ ಮಳೆ ನೀರು ಸಂಗ್ರಹ ಮತ್ತು ಇಂಗಿಸುವ ವಿಧಾನವನ್ನು ಅಳವಡಿಸಲಾಗುತ್ತಿದೆ. ಪಿಲ್ಲರ್‌ಗಳಿಗೆ ಪೈಪ್‌ಲೈನ್ ಜೋಡಿಸಲಾಗುತ್ತದೆ. ಹಳಿಯ ಭಾಗದಲ್ಲಿ ಸಂಗ್ರಹವಾಗುವ ಮಳೆ ನೀರು ಪೈಪ್ ಮೂಲಕ ಕೆಳಕ್ಕೆ ಇಳಿಯುತ್ತದೆ. ಕೆಳಕ್ಕೆ ಇಳಿದ ನೀರನ್ನು ನೇರವಾಗಿ ಇಂಗು ಗುಂಡಿಗೆ ಹರಿಸಲಾಗುತ್ತದೆ. 'ನಿಲ್ದಾಣಗಳಿರುವ ಕಡೆ ಮಳೆ ನೀರನ್ನು ಸಂಗ್ರಹಿಸಿ, ಹೆಚ್ಚಾದ ನೀರನ್ನು ಭೂಮಿಗೆ ಇಂಗಿಸುವ ವ್ಯವಸ್ಥೆ ಮಾಡಲಾಗುತ್ತದೆ. ನಗರದಲ್ಲಿ ಅಂತರ್ಜಲ ವೃದ್ಧಿಸಲು ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ' ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ್ ಚವಾಣ್ 'ಪ್ರಜಾವಾಣಿ'ಗೆ ತಿಳಿಸಿದರು.

ಪೂರ್ವ ಬೆಂಗಳೂರು–ಪಶ್ಚಿಮ ಬೆಂಗಳೂರನ್ನು ಸಂಪರ್ಕಿಸುವ ವೈಟ್‌ಫೀಲ್ಡ್ (ಕಾಡುಗೋಡಿ)– ಚಲ್ಲಘಟ್ಟ ಮಾರ್ಗವು 43.49 ಕಿ.ಮೀ. ದೂರ ಹೊಂದಿದೆ. ಉತ್ತರ ಬೆಂಗಳೂರು–ದಕ್ಷಿಣ ಬೆಂಗಳೂರು ಸಂಪರ್ಕದ ನಾಗಸಂದ್ರ–ರೇಷ್ಮೆ ಸಂಸ್ಥೆ ಮಾರ್ಗ 30.32 ಕಿ.ಮೀ. ಹೊಂದಿದೆ. ಎರಡು ಮಾರ್ಗಗಳು ಒಟ್ಟು 73.81 ಕಿ.ಮೀ. ಉದ್ದವಿದ್ದು, ಅದರಲ್ಲಿ ಭೂಗತ ಮಾರ್ಗವನ್ನು ಹೊರತುಪಡಿಸಿ ಉಳಿದ 58 ಕಿ.ಮೀ. ಮಾರ್ಗದಲ್ಲಿ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಲು ಯೋಜನೆ ರೂಪಿಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

'ಕೆರೆ ನೀರು ಕುಡಿಯಲು ಬಳಸಬೇಡಿ'

ಬೆಂಗಳೂರು: ಅಂತರ್ಜಲ ವೃದ್ಧಿಸಲು ನಗರದಲ್ಲಿ 14 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲಾಗುತ್ತಿದೆ. ಈ ಕೆರೆಗಳ ನೀರನ್ನು ಕುಡಿಯಲು, ಗೃಹ ಬಳಕೆಗೆ ಬಳಸಬಾರದು ಎಂದು ಜಲಮಂಡಳಿ ತಿಳಿಸಿದೆ.

ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಎರಡನೇ ಹಂತದಲ್ಲಿ ಸಂಸ್ಕರಿಸಿ, ನಗರದ ಅಂತರ್ಜಲ ವೃದ್ಧಿಯ ದೃಷ್ಟಿಯಿಂದ ಕೆರೆಗಳಿಗೆ ತುಂಬಿಸಲಾಗುತ್ತಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಟ್ಟುನಿಟ್ಟಿನ ಮಾನದಂಡಗಳ ಆಧಾರದ ಮೇಲೆ ನೀರು ಸಂಸ್ಕರಿಸಲಾಗುತ್ತಿದೆ. ಈ ನೀರನ್ನು ನೇರವಾಗಿ ಉಪಯೋಗಿಸುವುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿದ್ದು, ಸಾರ್ವಜನಿಕರು ಕೆರೆಯ ನೀರನ್ನು ಬಳಸಬಾರದು ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕೆಂಗೇರಿ ಕೆರೆಗೆ ಸಂಸ್ಕರಿಸಿದ ನೀರನ್ನು ಹರಿಸುವ ಮೂಲಕ ಕುಸಿದಿರುವ ಅಂತರ್ಜಲವನ್ನು ಮರುಪೂರಣಗೊಳಿಸಲು ಜಲಮಂಡಳಿ ಮುಂದಾಗಿದೆ. ಬೆಂಗಳೂರು ನಗರದಲ್ಲಿ ಅವ್ಯಾಹತವಾಗಿ ಅಂತರ್ಜಲ ಬಳಕೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ನೀರಿನ ಅವಶ್ಯಕತೆ ಪೂರೈಸಲು ಅಂತರ್ಜಲ ಮರುಪೂರಣ ಮಾಡಬೇಕಿದೆ. ಹೀಗಾಗಿ, ಮುನ್ನೆಚ್ಚರಿಕೆ ಕ್ರಮಗಳನ್ನು ಜಲಮಂಡಳಿ ಕೈಗೊಳ್ಳುತ್ತಿದೆ' ಎಂದು ಹೇಳಿದ್ದಾರೆ.

ವೃಷಭಾವತಿ ವ್ಯಾಲಿಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ನಾಯಂಡಹಳ್ಳಿ ಕೆರೆ, ಕೆಂಗೇರಿ ಎಸ್‌ಟಿಪಿ ಮಂಡಳಿ ವತಿಯಿಂದ ಸಂಸ್ಕರಿಸಿದ ನೀರನ್ನು ಕೆಂಗೇರಿ ಕೆರೆಗೆ ತುಂಬಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮಂಡಳಿ ವತಿಯಿಂದ ಸಂಸ್ಕರಿಸಿ ನೀರನ್ನು ದುಬಾಸಿಪಾಳ್ಯ, ಹೊಸಕೆರೆಹಳ್ಳಿ ಹಾಗೂ ಹಲಗೇವಡೆರಹಳ್ಳಿ ಕೆರೆಗಳಿಗೆ ತುಂಬಿಸಲಾಗುವುದು ಎಂದು ರಾಮ್‌ಪ್ರಸಾತ್ ಮಾಹಿತಿ ನೀಡಿದ್ದಾರೆ.

ರಾಜೀವ್ ಗಾಂದಿ ನಗರದಲ್ಲಿ ಜಲಮಂಡಳಿ ತಾತ್ಕಾಲಿಕ ವ್ಯವಸ್ಥೆ ಮಾಡಿರುವ ಟ್ಯಾಂಕರ್‌ನಿಂದ ನಾಗರಿಕರು ನೀರು ತುಂಬಿಕೊಂಡರು

ರಾಜೀವ್‌ಗಾಂಧಿ ನಗರ ನೀರಿಗಾಗಿ ಪರದಾಟ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಆರ್.ಆರ್. ನಗರ ಕ್ಷೇತ್ರದ ಜ್ಞಾನಭಾರತಿ ವಾರ್ಡ್‌ನ ರಾಜೀವ್‌ಗಾಂಧಿ ನಗರ (ಕೆಬ್ಬೆಹಳ್ಳ) ಕುಡಿಯುವ ನೀರಿಗಾಗಿ ಜನರು ಬಿಂದಿಗೆ ಹಿಡಿದು ಚಾತಕ ಪಕ್ಷಿಯಂತೆ ಕಾಯಬೇಕಾಗಿದೆ. ಯಾರಾದರೂ ನೀರಿನ ಟ್ಯಾಂಕರ್ ಉಚಿತವಾಗಿ ಕಳುಹಿಸಿದಾಗ ನೀರಿಗಾಗಿ ನೂಕುನುಗ್ಗಲು ಉಂಟಾಗುತ್ತಿದೆ.

'ಕೂಗಳತೆಯ ದೂರದಲ್ಲಿರುವ ನಾಗರಬಾವಿ, ಅನ್ನಪೂರ್ಣೇಶ್ವರಿ ನಗರ ಮತ್ತು ನಾಗರಬಾವಿಯ ಬಿಡಿಎ ಪ್ರದೇಶದ ವ್ಯಾಪ್ತಿಯ ಜನರಿಗೆ ಮನೆಮನೆಗೆ ಮೂರು ದಿನಕ್ಕೊಮ್ಮೆ ಕಾವೇರಿ ನೀರು ಪೂರೈಕೆಯಾಗುತ್ತಿದೆ. ಬಡವರು ವಾಸಿಸುವ ಮನೆಗಳಿಗೆ ಕಾವೇರಿ ನೀರು ಬರುತ್ತಿಲ್ಲ. ತಾತ್ಕಾಲಿಕ ನೀರು ಪೂರೈಸಲು ಜಲಮಂಡಳಿ ಅಲ್ಲಲ್ಲಿ ನೀರಿನ ಟ್ಯಾಂಕ್‌ಗಳನ್ನು ಇಟ್ಟಿದ್ದಾರೆ. ಮುಂಜಾನೆ ಒಂದು ಬಾರಿ ಲಾರಿಯಲ್ಲಿ ತಂದು ನೀರು ಸುರಿದು ಹೋಗುತ್ತಾರೆ. ಒಂದು ಟ್ಯಾಂಕ್ ನೀರು ನಮಗೆ ಯಾವುದಕ್ಕೂ ಸಾಕಾಗುವುದಿಲ್ಲ' ಎಂದು ಮಹಿಳೆಯರು ದೂರಿದರು.

'ಕೂಲಿ ಕಾರ್ಮಿಕರು, ಬಡವರು, ಸಣ್ಣ ಕೈಗಾರಿಕೆಗಳಲ್ಲಿ ದುಡಿದು ಜೀವನ ಸಾಗಿಸುವ ನಿವಾಸಿಗಳಿಗೆ ಕಾವೇರಿ ನೀರು, ಮೂಲ ಸೌಕರ್ಯಗಳು ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ತಾತ್ಕಾಲಿಕ ವ್ಯವಸ್ಥೆ: ರಾಜೀವ್‌ಗಾಂಧಿ ನಗರ ಸುತ್ತಮುತ್ತ ಪ್ರತಿ ರಸ್ತೆಗೆ ತಾತ್ಕಾಲಿಕವಾಗಿ ನೀರಿನ ಟ್ಯಾಂಕ್‌ಗಳನಿಟ್ಟು ಲಾರಿಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಇಂದಿನಿಂದ ಬೆಳಿಗ್ಗೆ ಜೊತೆಗೆ, ಸಂಜೆಯೂ ನೀರು ಪೂರೈಕೆ ಮಾಡಲಾಗುವುದು' ಎಂದು ಬೆಂಗಳೂರು ಜಲಮಂಡಳಿ ನಾಗರಬಾವಿ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹರಿಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಕೊಳವೆಬಾವಿ ನಿರ್ವಹಣೆಗೆ 'ಎಐ'

ಚೆನ್ನಪ್ಪ ಗಾರ್ಡನ್‌ನಲ್ಲಿ ತಂತ್ರಜ್ಞಾನಕ್ಕೆ ಪ್ರಾಯೋಗಿಕ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಳವೆ ಬಾವಿಗಳ ಸಮರ್ಪಕ ನಿರ್ವಹಣೆಗೆ ಬೆಂಗಳೂರು ಜಲಮಂಡಳಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ (ಎಐ) ಹಾಗೂ 'ಐಓಟಿ'ಯಂತಹ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಚೆನ್ನಪ್ಪ ಗಾರ್ಡನ್‌ನಲ್ಲಿ ಎಐ ಮತ್ತು ಐಒಟಿ ತಂತ್ರಜ್ಞಾನ ಅಳವಡಿಸಲಾಗಿರುವ ಕೊಳವೆ ಬಾವಿಯ ಪ್ರಾಯೋಗಿಕ ಕಾರ್ಯಾಚರಣೆಯನ್ನು ಸೋಮವಾರ ಪರಿಶೀಲಿಸಿ ಅವರು ಮಾತನಾಡಿದರು.

'ನಗರದಲ್ಲಿ 14 ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ಇವುಗಳಲ್ಲಿ ಹಲವು ಕೊಳವೆಬಾವಿಗಳು ಬತ್ತಿ ಹೋಗಿವೆ. ಹೆಚ್ಚಿನ ಸಮಯ ಪಂಪ್‌ಸೆಟ್‌ಗಳನ್ನು ಬಳಸುವುದರಿಂದ, ನೀರು ಇಲ್ಲದ ಸಮಯದಲ್ಲೂ ಮೋಟರ್ ಚಾಲನೆಯಲ್ಲಿರುವುದರಿಂದ ಕೊಳವೆಬಾವಿಗಳು ರಿಪೇರಿಗೆ ಬರುತ್ತಿವೆ. ಪದೇಪದೇ ತಾಂತ್ರಿಕ ಸಮಸ್ಯೆಗೆ ಸಿಲುಕುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಆಧುನಿಕ ಎಐ ಮತ್ತು ಐಒಟಿ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತದೆ' ಎಂದು ರಾಮ್‌ಪ್ರಸಾತ್ ತಿಳಿಸಿದರು.

ಉಪಯೋಗಗಳು: ಈ ನೂತನ ತಂತ್ರಜ್ಞಾನದ ಅಳವಡಿಕೆಯಿಂದ ಕೊಳವೆಬಾವಿಗಳನ್ನು ಸಮರ್ಥ ಹಾಗೂ ವೈಜ್ಞಾನಿಕವಾಗಿ ನಿರ್ವಹಿಸಬಹುದು. ಬಾವಿಯಲ್ಲಿ ನೀರಿಲ್ಲದ ಸಮಯದಲ್ಲಿ ಮೋಟರ್ ಬಳಸುವುದನ್ನು ತಪ್ಪಿಸಿ, ಕೊಳವೆ ಬಾವಿಗಳು ನಿಷ್ಕ್ರಿಯವಾಗುವುದನ್ನು ತಡೆಯಬಹುದು.

ಚೆನ್ನಪ್ಪ ಗಾರ್ಡನ್‌ನಲ್ಲಿ ಎಐ ಮತ್ತು ಐಒಟಿ ತಂತ್ರಜ್ಞಾನ ಅಳವಡಿಸಲಾಗಿರುವ ಕೊಳವೆಬಾವಿಯ ಪ್ರಾಯೋಗಿಕ ಕಾರ್ಯಾಚರಣೆಯನ್ನು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಸೋಮವಾರ ಪರಿಶೀಲಿಸಿದರು.

ಟ್ಯಾಂಕರ್ ಚಾಲಕನ ಮೇಲೆ ಎಫ್‌ಐಆರ್

ಉಚಿತ ನೀರನ್ನು ವಾಣಿಜ್ಯ ಉದ್ದೇಶಕ್ಕೆ ವಿತರಿಸಿದ ಖಾಸಗಿ ಚಾಲಕನ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಸಾರ್ವಜನಿಕರಿಗೆ ಉಚಿತವಾಗಿ ಕುಡಿಯುವ ನೀರನ್ನು ಪೂರೈಸಲು ಸುನೀಲ್ ಎನ್ನುವವರಿಗೆ ಸೇರಿದ ಖಾಸಗಿ ಟ್ಯಾಂಕರ್ (ಕೆಎ-52 ಸಿ-0204) ಪಡೆದುಕೊಳ್ಳಲಾಗಿತ್ತು. ವಾರ್ಡ್ ನಂ.130ರಲ್ಲಿರುವ ಸಾರ್ವಜನಿಕರಿಗೆ ವಿತರಿಸಲು ಸೂಚಿಸಲಾಗಿತ್ತು. ಆದರೆ ಖಾಸಗಿ ಟ್ಯಾಂಕರ್ ಮಾಲೀಕ ಸುನೀಲ್ ಅವರು ಶೆಟ್ಟಿಹಳ್ಳಿ ಮುಖ್ಯರಸ್ತೆಯ ಮಲ್ಲಸಂದ್ರ ವಾರ್ಡ್ ನಂ.14ರಲ್ಲಿ ವಾಣಿಜ್ಯ ಉದ್ದೇಶಕ್ಕೆ ನೀರು ವಿತರಿಸಿರುವುದು ಮಾರ್ಚ್ 24ರಂದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಸುನೀಲ್ ಅವರ ಮೇಲೆ ಜಲಮಂಡಳಿ ಸಹಾಯಕ ಎಂಜಿನಿಯರ್ ಕಾರ್ತಿಕ್ ಮಂಜು ಅವರು ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಚ್ಚರಿಕೆ: ಜಲಮಂಡಳಿ ಹಾಗೂ ಬಿಬಿಎಂಪಿ ವತಿಯಿಂದ ಸಾರ್ವಜನಿಕರಿಗೆ ಉಚಿತವಾಗಿ ಕುಡಿಯುವ ನೀರನ್ನು ಪೂರೈಸಲು ಖಾಸಗಿ ಟ್ಯಾಂಕರ್‌ಗಳನ್ನು ಪಡೆದುಕೊಳ್ಳಲಾಗಿದೆ. ಈ ನೀರನ್ನು ಅನ್ಯ ಉದ್ದೇಶಗಳಿಗೆ ಮಾರಾಟ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಎಚ್ಚರಿಸಿದ್ದಾರೆ.

ಕೊಳವೆ ಬಾವಿಗಳನ್ನು ಸುಸ್ಥಿರವಾಗಿ ಹಾಗೂ ತಾಂತ್ರಿಕವಾಗಿ ಬಳಸುವುದಲ್ಲದೆ, ಪದೇಪದೇ ಮೋಟರ್ ಸುಟ್ಟು ಹೋಗುವಂತಹ ಹಾಗೂ ಇನ್ನಿತರ ತಾಂತ್ರಿಕ ಸಮಸ್ಯೆಗೆ ಸಿಲುಕುವುದನ್ನು ತಪ್ಪಿಸುವುದಲ್ಲದೆ ನಿರ್ವಹಣೆಯ ವೆಚ್ಚವನ್ನು ಕಡಿಮೆಗೊಳಿಸಬಹುದಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪ್ರಕರಣ ಬಾಕಿ ಮಾಹಿತಿ ಮುಚ್ಚಿಟ್ಟು ವರ್ಗಾವಣೆ

ಸಿಇ ನಂಜುಂಡಪ್ಪಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ವಿರುದ್ಧ ಮೂರು ಪ್ರಕರಣಗಳು ಲೋಕಾಯುಕ್ತದಲ್ಲಿ ವಿಚಾರಣೆಗೆ ಬಾಕಿ ಇರುವ ಮಾಹಿತಿ ಮುಚ್ಚಿಟ್ಟು ತನಿಖಾ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯಸ್ಥರ ಹುದ್ದೆಗೆ ವರ್ಗಾವಣೆಯಾಗಿ ಬಂದಿರುವ ಆರೋಪದ ಮೇಲೆ ಮುಖ್ಯ ಎಂಜಿನಿಯರ್ (ಸಿಇ) ಟಿ.ಡಿ. ನಂಜುಂಡಪ್ಪ ಅವರಿಗೆ ಲೋಕಾಯುಕ್ತರು ನೋಟಿಸ್ ಜಾರಿ ಮಾಡಿದ್ದಾರೆ.

ಲೋಕಾಯುಕ್ತದ ತಾಂತ್ರಿಕ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದ ಎಂ.ವಿ. ಪ್ರಸಾದ್ ಅವರನ್ನು ಮಾರ್ಚ್ 15ರಂದು ವರ್ಗಾವಣೆ ಮಾಡಲಾಗಿತ್ತು. ಈ ಹುದ್ದೆಗೆ ನಂಜುಂಡಪ್ಪ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು.

ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದ ಅವಧಿಯಲ್ಲಿ ಕೆಂಗೇರಿಯ ಬಂಡೆಮಠ ಕೆಎಚ್‌ಬಿ ಬಡಾವಣೆಯ ಕಾಮಗಾರಿಯಲ್ಲಿ ಅವ್ಯವಹಾರ ನಡೆಸಿದ ಆರೋಪದ ಮೇಲೆ ನಂಜುಂಡಪ್ಪ ವಿರುದ್ಧ ಬಂಡೆಮಠ ಕೆಎಚ್‌ಬಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಲೋಕಾಯುಕ್ತಕ್ಕೆ ದೂರು ಸಲ್ಲಿಸಿತ್ತು. 2023ರಿಂದಲೂ ಈ ಪ್ರಕರಣದ ವಿಚಾರಣೆ ನಡೆಯುತ್ತಿದೆ.

ಲೋಕಾಯುಕ್ತದಲ್ಲಿ ವಿಚಾರಣೆ ಬಾಕಿ ಇರುವ ಅಧಿಕಾರಿಯನ್ನು ಅದೇ ತನಿಖಾ ಸಂಸ್ಥೆಯ ಮುಖ್ಯ ಎಂಜಿನಿಯರ್ ಹುದ್ದೆಗೆ ನೇಮಿಸಿರುವುದನ್ನು ಪ್ರಶ್ನಿಸಿ ಬಂಡೆಮಠ ಕೆಎಚ್‌ಬಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ. ರಾಮಕೃಷ್ಣೇಗೌಡ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು. ಆ ಬಳಿಕ ಸಂಸ್ಥೆಯ ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ನಂಜುಂಡಪ್ಪ ವಿರುದ್ಧ ಮೂರು ದೂರುಗಳ ವಿಚಾರಣೆ ಬಾಕಿ ಇರುವ ಮಾಹಿತಿ ಲಭಿಸಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, 'ನಂಜುಂಡಪ್ಪ ವಿರುದ್ಧ ಮೂರು ಪ್ರಕರಣಗಳ ವಿಚಾರಣೆ ಬಾಕಿ ಇರುವ ಮಾಹಿತಿ ಸಿಕ್ಕಿದೆ. ಮಾಹಿತಿ ಮುಚ್ಚಿಟ್ಟು ಸಂಸ್ಥೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ನೋಟಿಸ್ ಜಾರಿ ಮಾಡಿದ್ದೇವೆ' ಎಂದರು.

'ಲೋಕಾಯುಕ್ತದಲ್ಲಿ ವಿಚಾರಣೆ ಎದುರಿಸುತ್ತಿರುವವರನ್ನು ನಮ್ಮ ಸಂಸ್ಥೆಯಲ್ಲೇ ನೇಮಿಸಿಕೊಳ್ಳುವುದಿಲ್ಲ. ನಂಜುಂಡಪ್ಪ ಅವರ ಉತ್ತರವನ್ನು ಪರಿಶೀಲಿಸಿದ ಬಳಿಕ ಅವರನ್ನು ವಾಪಸ್ ಕಳುಹಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ಗ್ಯಾರಂಟಿ: ಎತ್ತಿಗೆ ಜ್ವರ, ಎಮ್ಮೆಗೆ ಬರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಲಾದ ಗ್ಯಾರಂಟಿ ಯೋಜನೆಗಳನ್ನು ಸಿದ್ದರಾಮಯ್ಯ ವೈಯಕ್ತಿಕವಾಗಿ ಘೋಷಿಸಿ ಚುನಾವಣೆಯಲ್ಲಿ ಅಕ್ರಮ ಎಸಗಿ ಜಯ ಗಳಿಸಿದ್ದಾರೆ ಎಂಬ ಆರೋಪ ಸರ್ವಥಾ ಸಮರ್ಥನೀಯವಲ್ಲ' ಎಂದು ಸಿದ್ದರಾಮಯ್ಯ ಪರ ವಕೀಲ ಕೆ.ರವಿವರ್ಮ ಕುಮಾರ್ ಹೈಕೋರ್ಟ್‌ಗೆ ಅರುಹಿದರು.

'ಸಿದ್ದರಾಮಯ್ಯ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಮೈಸೂರಿನ ವರುಣ ಹೋಬಳಿಯ ಕೂಡನಹಳ್ಳಿ ನಿವಾಸಿ ಕೆ.ಎಂ.ಶಂಕರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರವಿವರ್ಮ ಕುಮಾರ್ ವಾದ ಮುಂದುವರಿಸಿ, 'ಅರ್ಜಿದಾರರ ಆರೋಪ ಗಮನಿಸಿದರೆ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವ ರೀತಿಯಂತಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಿ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಪ್ರಚಾರ ಮಾಡಲಾಗಿದೆ. ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರದ ಹಣವನ್ನು ಬಳಸಲಾಗುತ್ತಿದೆಯೇ ಹೊರತು ಸಿದ್ದರಾಮಯ್ಯನವರ ವೈಯಕ್ತಿಕ ಆದಾಯವನ್ನಲ್ಲ' ಎಂದು ನ್ಯಾಯಪೀಠಕ್ಕೆ ಸ್ಪಷ್ಟಪಡಿಸಿದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ಪರ ವಕೀಲರು ಕೆಲವು ದಾಖಲೆಗಳನ್ನು ಸಲ್ಲಿಸಿದ್ದು, ಇದಕ್ಕೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಿ' ಎಂದು ಪ್ರತಿವಾದಿಗಳ ಪರ ವಕೀಲರಿಗೆ 15 ದಿನಗಳ ಕಾಲ ಕಾಲಾವಕಾಶ ನೀಡಿದ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿದೆ.

ಬಾಬಾಬುಡನ್ ಸ್ವಾಮಿ ದರ್ಗಾ: ಉರುಸ್ ಇಂದಿನಿಂದ

ಚಿಕ್ಕಮಗಳೂರು: ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಪ್ರದೇಶದಲ್ಲಿ ಮೂರು ದಿನ ಉರುಸ್ ಕಾರ್ಯಕ್ರಮ ನಡೆಯಲಿವೆ.

ಮಂಗಳವಾರ ಸಂದಲ್ ನಡೆಯಲಿದ್ದು, ಗಂಧವನ್ನು ಮೆರವಣಿಗೆಯಲ್ಲಿ ಭಕ್ತರು ತರಲಿದ್ದಾರೆ. ಬುಧವಾರ ಉರುಸ್, ಗುರುವಾರ ಜನ್ನತನಗರ ಸಂದಲ್ ಉರುಸ್ ನಡೆಯಲಿದೆ.

ಆರ್‌ಬಿಐ
ರಿಟೇಲ್ ಡೈರೆಕ್ಟ್ ಸ್ಕೀಮ್
ಭೇಟಿ ನೀಡಿ: https://rbiretaildirect.org.in
ಸರ್ಕಾರಿ ಭದ್ರತೆಗಳಲ್ಲಿ ನೇರವಾಗಿ ಹೂಡಿಕೆ ಮಾಡಿ

ಇವೆಲ್ಲಾ ಒಳಗೊಂಡಿವೆ
- ಟ್ರೆಶರಿ ಬಿಲ್ಸ್
- ಸಾವರಿನ್ ಗೋಲ್ಡ್ ಬಾಂಡ್
- ಫ್ಲೋಟಿಂಗ್ ರೇಟ್ ಉಳಿತಾಯ ಬಾಂಡ್, 2020

- ಬ್ರೋಕರೇಜ್ ಶೂನ್ಯ ಮತ್ತು ಯಾವುದೇ ಇತರ ಶುಲ್ಕವಿಲ್ಲ
- ಸುಲಭ ಮತ್ತು ಅನುಕೂಲಕರ ಪಾವತಿ ವಿಧಾನ



ಕರೆ ಮಾಡಿ 1800-267-7955 ಅಥವಾ +91-22-61546335
ಹೆಚ್ಚಿನ ಮಾಹಿತಿಗಾಗಿ: ಬೆಳಿಗ್ಗೆ 10 ರಿಂದ ಸಂಜೆ 6 ರತನಕ ಸೋಮವಾರ– ಶನಿವಾರ
ನಮಗೆ ಬರೆಯಿರಿ: support@rbiretaildirect.org.in

ಸಾರ್ವಜನಿಕರ ಹಿತಾಸಕ್ತಿಗಾಗಿ ಜಾರಿಗೊಳಿಸುವವರು
ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in

ನಗರದ ಅರಮನೆ ಮೈದಾನದಲ್ಲಿ ಸೋಮವಾರ ಹೋಳಿ ಆಚರಿಸಿ ಸಂಭ್ರಮಿಸಿದ ಯುವಸಮೂಹ (ಎಡಚಿತ್ರ). ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದ ಮಕ್ಕಳು —ಪ್ರಜಾವಾಣಿ ಚಿತ್ರಗಳು

ಬಣ್ಣದಲ್ಲಿ ಮಿಂದೆದ್ದ ಬೆಂಗಳೂರು

ಸ್ನೇಹ, ಪ್ರೀತಿಯ ಸಂಕೇತವಾಗಿ ಬಣ್ಣ ಎರಚಿ ಸಂಭ್ರಮಿಸಿದ ಯುವಸಮೂಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಸೋಮವಾರ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಮಕ್ಕಳು, ಯುವಜನರು ಸೇರಿದಂತೆ ಎಲ್ಲ ವಯೋಮಾನದವರು ಬೆಳಿಗ್ಗೆಯಿಂದ ಸಂಜೆಯವರೆಗೂ ಬಣ್ಣದಲ್ಲಿ ಮಿಂದೆದ್ದರು.

ಯುವಜನರು ರಸ್ತೆ, ಬೀದಿಗಳಲ್ಲಿ ಪರಸ್ಪರ ಬಣ್ಣ ಎರಚಿಕೊಂಡು ಸಂಭ್ರಮಿಸಿದರು. ಹೋಟೆಲ್‌ಗಳು, ಮೈದಾನಗಳಲ್ಲಿಯೂ ಹೋಳಿ ಆಚರಿಸಲಾಯಿತು. ಕೆಲ ವಸತಿ ಸಮುಚ್ಚಯ ಹಾಗೂ ಮನೆಗಳಲ್ಲಿ ಪರಸ್ಪರ ಹೋಳಿ ಆಚರಿಸಿ, ನಂತರ ಸಿಹಿ ಹಂಚಿ ಸವಿದರು.

ಯುವಕ, ಯುವತಿಯರು, ಮಕ್ಕಳು, ಮಹಿಳೆಯರು ಪರಸ್ಪರ ಬಣ್ಣದಾಟದಲ್ಲಿ ತೊಡಗಿಸಿಕೊಂಡಿರುವ ದೃಶ್ಯ ಸಾಮಾನ್ಯವಾಗಿತ್ತು. ಚಿಕ್ಕಮಕ್ಕಳು ಪಿಚಕಾರಿಯಿಂದ ದೊಡ್ಡವರಿಗೆ ಬಣ್ಣ ಎರೆಚುತ್ತಿರುವುದು ಕಂಡು ಬಂತು. ಬಣ್ಣವಾಟವಾಡಿದ ಮನೆ ಮುಂದೆ ವಿವಿಧ ಬಣ್ಣದ ಅಲಂಕಾರ ಕಂಡುಬಂದಿತು. ನಗರದ ರಸ್ತೆಗಳೆಲ್ಲ ಬಣ್ಣಮಯವಾಗಿದ್ದವು.

ಸೋಮವಾರ ಹೋಳಿ ಹಬ್ಬದ ದಿನದಂದು ಬಣ್ಣದೋಕುಳಿಯಲ್ಲಿ ಮಿಂದೆದ್ದ ಜೋಡಿ —ಪ್ರಜಾವಾಣಿ ಚಿತ್ರ

ಬಿಸಿಲಿನ್ನೂ ಲೆಕ್ಕಿಸದೇ ಮಕ್ಕಳು ಪಿಚಕಾರಿ ಹಿಡಿದುಕೊಂಡು ಪರಸ್ಪರ ಬಣ್ಣದ ನೀರನ್ನು ಸಿಡಿಸುತ್ತ ಸಂಭ್ರಮಿಸಿದರು. ಕೆಲವೆಡೆ ಡಿ.ಜೆ ಸಂಗೀತಕ್ಕೆ ಮೈಮರೆತು ಯುವಜನರು ಕುಣಿದು ಕುಪ್ಪಳಿಸಿದರು. ಚರ್ಚ್ ಸ್ಟ್ರೀಟ್, ಶೇಷಾದ್ರಿಪುರ, ಕುಮಾರಕೃಪಾ ಮತ್ತು ಶಿವಾನಂದ ವೃತ್ತದಲ್ಲಿ ಮತ್ತು ಅರಮನೆ ಮೈದಾನದಲ್ಲಿ ಯುವಕ– ಯುವತಿಯರು ಬಣ್ಣದಾಟದಲ್ಲಿ ತೊಡಗಿದ್ದರು. ಖಾಸಗಿ ಕಂಪನಿಗಳ ಕಚೇರಿಗಳಲ್ಲಿ ಹೋಳಿ ಸಂಭ್ರಮ ಕಂಡು ಬಂದಿತು.

ನಗರದ ಬಹುತೇಕ ಎಲ್ಲೆಡೆ ಹೋಳಿ ಸಂಭ್ರಮ. ಪಂಚತಾರಾ ಹೋಟೆಲ್‌ಗಳು ಸೇರಿದಂತೆ ಹಲವು ಪ್ರದೇಶಗಳಲ್ಲಿ ಹೋಳಿ ಹಬ್ಬವನ್ನು ಅದ್ದೂರಿ ಕಾರ್ಯಕ್ರಮದ ರೀತಿಯಲ್ಲಿ ಆಚರಿಸಲಾಯಿತು. ವಿವಿಧ ಬಡಾವಣೆಗಳಲ್ಲಿಯೂ ಮತಭೇದ ಮರೆತು ಹೋಳಿಯಲ್ಲಿ ಪಾಲ್ಗೊಂಡರು. ಸ್ನೇಹ, ಪ್ರೀತಿಯ ಸಂಕೇತವಾಗಿ ಬಣ್ಣಗಳ ಎರಚಿ ಸಂಬಂಧಗಳ ರಂಗು ಹೆಚ್ಚಿಸಿಕೊಂಡರು. ಕಾಲೇಜುಗಳಲ್ಲಿ ವಿದ್ಯಾರ್ಥಿ –ವಿದ್ಯಾರ್ಥಿನಿಯರು ಮುಖಕ್ಕೆ, ತಲೆಗೆಲ್ಲ ಪರಸ್ಪರ ಬಣ್ಣ ಹಚ್ಚಿಕೊಂಡು ಕೇಕೆ ಹಾಕುತ್ತ ನೃತ್ಯ ಮಾಡುತ್ತ ಸಂಭ್ರಮಿಸಿದರು. ಬಳಿಕ ಹೋಳಿ ಆಡಿರುವುದನ್ನು ಊರಿಗೆ ಸಾರಬೇಕು ಎಂಬಂತೆ ಯುವಕರು ಬೈಕ್‌ಗಳಲ್ಲಿ ನಗರದಲ್ಲೆಲ್ಲ ಸುತ್ತಾಡಿದರು.

ಕ್ಷೇಮ ಕುಶಲ

ಸೋರಿಯಾಸಿಸ್‌ನ ಕಿರಿಕಿರಿಗಳು

ಡಾ. ಎಸ್. ಶ್ರೀನಿವಾಸ್

ಸೋರಿಯಾಸಿಸ್ ಒಂದು ದೀರ್ಘಕಾಲದ, ಹೆಚ್ಚಿನ ಸಂದರ್ಭಗಳಲ್ಲಿ ಮತ್ತೆ ಮತ್ತೆ ಮರುಕಳಿಸುವ ಚರ್ಮದ ಸಮಸ್ಯೆ. ಈ ಕಾಯಿಲೆಗೆ ನಿಖರವಾದ ಕಾರಣವಿನ್ನೂ ತಿಳಿದಿಲ್ಲ. ಆದರೆ ಮುಖ್ಯವಾಗಿ ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆಯ ದೋಷದಿಂದ ಉಂಟಾಗುವ ಸಮಸ್ಯೆಯಿದು. ಆದ್ದರಿಂದ ಆನುವಂಶೀಯತೆಯ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಆದರೆ, ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವಂತಹದ್ದಲ್ಲ. ಹಾಗೆಯೇ ಯಾವುದೇ ಸೂಕ್ಷ್ಮಾಣು ಅಥವಾ ವೈರಾಣು ಕೂಡ ಇದಕ್ಕೆ ಕಾರಣವಲ್ಲ. ಇದು ಯಾವುದೇ ವಸ್ತುವಿನ ಅಲರ್ಜಿಯಿಂದ ಉಂಟಾಗುವಂತಹದ್ದೂ ಅಲ್ಲ.

ಗುಣಲಕ್ಷಣಗಳೇನು..?

ಈ ಸಮಸ್ಯೆಯು ಮಹಿಳೆ ಹಾಗೂ ಪುರುಷರಿಬ್ಬರನ್ನೂ ಸಮನಾಗಿ ಕಾಡುತ್ತದೆ. ದೇಹದ ವಿವಿಧ ಭಾಗದ ಚರ್ಮದ ಮೇಲೆ ಸಣ್ಣ ಸಣ್ಣ ಬಿಲ್ಲೆಗಳಂತಹ ಗಂದೆಗಳು ಕಂಡುಬರುತ್ತವೆ. ಈ ಬಿಲ್ಲೆಗಳು ಒಂದು ಬಗೆಯ ಬೆಳ್ಳಿಬಣ್ಣದ ಒಣ ಚರ್ಮದಿಂದ ಮುಚ್ಚಲ್ಪಟ್ಟಿರುತ್ತವೆ. ಆ ಒಣಚರ್ಮವನ್ನು ಕಿತ್ತ ಕೂಡಲೇ ಅಲ್ಲಿ ಸಣ್ಣ ಸಣ್ಣ ರಕ್ತ ಸ್ರಾವದ ಬಿಂದುಗಳಿರುತ್ತವೆ. ಕೈ, ಕಾಲು, ಮೊಣ ಕೈ, ಮೊಣ ಕಾಲು, ನೆತ್ತಿಯ ಚರ್ಮ.. ಹೀಗೆ ದೇಹದ ಯಾವುದೇ ಭಾಗದಲ್ಲಿಯೂ ಇವು ಕಂಡುಬರಬಹುದು. ಈ ಗಂದೆಗಳಲ್ಲಿ ಸಾಮಾನ್ಯವಾಗಿ ತುರಿಕೆ ಇರುತ್ತದೆ. ಒಮ್ಮೊಮ್ಮೆ ಇಲ್ಲದೆಯೂ ಇರಬಹುದು.

ಚರ್ಮದ ಪದರಗಳ ಜೀವಕೋಶಗಳು ವಿಭಜನೆಗೊಳ್ಳುವ ಪ್ರಕ್ರಿಯೆಯಲ್ಲಿನ ದೋಷವೇ ಈ ಕಾಯಿಲೆಗೆ ಮುಖ್ಯ ಕಾರಣ. ಸಾಮಾನ್ಯವಾಗಿ ಚರ್ಮದ ಪದರಗಳ ಜೀವಕೋಶಗಳು ಕೆಳಪದರದಿಂದ ಮೇಲಿನ ಪದರಕ್ಕೆ ಪಕ್ವವಾಗಿ ಬರಲು ಐವತ್ತೆರಡರಿಂದ ಎಪ್ಪತ್ತೈದು ದಿನಗಳು ಬೇಕಾಗುತ್ತವೆ. ಆದರೆ, ಈ ಸಮಸ್ಯೆಯಲ್ಲಿ ಕೇವಲ ಎಂಟರಿಂದ ಹತ್ತು ದಿನಗಳ ಒಳಗಾಗಿ ಈ ಜೀವಕೋಶಗಳು ಕೆಳ ಪದರದಿಂದ ಮೇಲಿನ ಪದರಗಳಿಗೆ ಪಕ್ವವಾಗಿ ಬರುತ್ತವೆ. ಬಹಳ ವೇಗವಾಗಿ ಜೀವಕೋಶಗಳು ವಿಭಜನೆ ಹೊಂದುವುದೇ ಇದಕ್ಕೆ ಕಾರಣ.

ಅನೇಕ ಬಗೆಗಳು

ಬಗೆ 1: ಈ ಬಗೆಯಲ್ಲಿ ಕೈ, ಕಾಲು, ಮಂಡಿ, ಮೊಣ ಕೈ ಮೊದಲಾದ ಭಾಗಗಳಲ್ಲಿ ಸುಸ್ಪಷ್ಟವಾದ ಬೆಳ್ಳಿಬಣ್ಣದ ಒಣಚರ್ಮದಿಂದ ಮುಚ್ಚಲ್ಪಟ್ಟ ಗಂದೆಗಳು ಕಂಡುಬರುತ್ತವೆ. ಒಣಚರ್ಮವನ್ನು ಕಿತ್ತ ಕೂಡಲೇ ಅಲ್ಲಿ ರಕ್ತಸ್ರಾವದ ಬಿಂದುಗಳಿರುತ್ತವೆ.

ಬಗೆ 2: ಇನ್ನೊಂದು ಬಗೆಯ ಸೋರಿಯಾಸಿಸ್‌ನಲ್ಲಿ ಕೆಂಪು ಕೆಂಪಾದ ಗಂದೆಗಳು ಹೊಟ್ಟೆ, ಬೆನ್ನು ಹಾಗೂ ಕೈಗಳ ಮೇಲೆ ಕಾಣಿಸಿಕೊಳ್ಳಬಹುದು. ಈ ಬಗೆಯು ಸಾಮಾನ್ಯವಾಗಿ ಮಕ್ಕಳಲ್ಲಿ ಹಾಗೂ ಹದಿಹರೆಯದವರಲ್ಲಿ ಕಂಡುಬರುತ್ತದೆ.

ಬಗೆ 3: ಚರ್ಮದ ಮಡಿಕೆಗಳಿರುವ ದೇಹದ ಭಾಗಗಳಲ್ಲಿ ಗಂದೆಗಳು ಗೋಚರಿಸುತ್ತವೆ. ಕಂಕುಳ, ತೊಡೆಗಳ ಸಂಧುಗಳಲ್ಲಿ, ಮಹಿಳೆಯರಲ್ಲಿ ಸ್ತನಗಳ ಕೆಳ ಭಾಗದಲ್ಲಿ ಗಂದೆಗಳು ಕಂಡುಬರುತ್ತವೆ.

ಬಗೆ 4: ಶರೀರದ ಸುಮಾರು ತೊಂಬತ್ತಕ್ಕೂ ಹೆಚ್ಚು ಭಾಗವು ಕೆಂಪು ಬಣ್ಣದ ಗಂದೆಗಳನ್ನು ಹೊಂದಿರುತ್ತದೆ.

ಬಗೆ 5: ಗಂದೆಗಳು ಕೇವಲ ನೆತ್ತಿಯ ಚರ್ಮದ ಮೇಲೆ ಕಂಡು ಬರುತ್ತವೆ.

ಬಗೆ 6: ಚರ್ಮದ ಗಂದೆಗಳ ಜೊತೆಯಲ್ಲಿಯೇ ವ್ಯಕ್ತಿಯ ಉಗುರುಗಳಲ್ಲಿಯೂ ಬದಲಾವಣೆಗಳು ಕಂಡುಬರುತ್ತವೆ. ಉಗುರು ಹಳದಿಬಣ್ಣಕ್ಕೆ ತಿರುಗುವುದು, ಉಗುರುಗಳ ಮೇಲೆ ಸಣ್ಣ ಸಣ್ಣ ತಗ್ಗುಗಳಾದಂತಾಗುವುದು.. ಉಗುರು ಟೊಳ್ಳಾಗುವುದು.

ಬಗೆ 7: ಕೀಲುಗಳಲ್ಲಿಯೂ ಉರಿಯೂತದಂತಹ ಬದಲಾವಣೆ. ಸಾಮಾನ್ಯವಾಗಿ ಅಂಗೈನ ಸಣ್ಣ ಕೀಲುಗಳು, ಕೆಲವೊಮ್ಮೆ ದೊಡ್ಡ ಕೀಲುಗಳೂ ಬದಲಾವಣೆ ತೋರಬಹುದು.

ಪತ್ತೆ ಹೇಗೆ?

ಸಾಮಾನ್ಯವಾಗಿ ರೋಗಿಯ ಗುಣಲಕ್ಷಣಗಳನ್ನು ಆಧರಿಸಿಯೇ ಕಾಯಿಲೆಯನ್ನು ಪತ್ತೆ ಮಾಡಲಾಗುತ್ತದೆ. ಕಾಯಿಲೆಯನ್ನು ದೃಢಪಡಿಸಲು ಗಾಯದ ಅಂಗಾಂಶದ ತುಣುಕೊಂದನ್ನು ಬಯಾಪ್ಸಿ ಪರೀಕ್ಷೆ ಮಾಡಿ ಚರ್ಮದ ಜೀವಕೋಶಗಳ, ಪದರಗಳಲ್ಲಿನ ನಿರ್ದಿಷ್ಟ ಬದಲಾವಣೆಗಳನ್ನು ಗಮನಿಸಬಹುದು.

ಚಿಕಿತ್ಸೆ ಏನು?

- ಸೋರಿಯಾಸಿಸ್ ಕಾಯಿಲೆಯನ್ನು ಹೆಚ್ಚಿನ ಸಂದರ್ಭಗಳಲ್ಲಿ ಸಂಪೂರ್ಣವಾಗಿ ಗುಣಪಡಿಸಲಾಗುವುದಿಲ್ಲ. ಆದರೆ ಅದರ ನಿಯಂತ್ರಣ ಖಂಡಿತ ಸಾಧ್ಯ. ವ್ಯಕ್ತಿಯ ಕಾಯಿಲೆಯ ತೀವ್ರತೆಯನ್ನು ಅಳೆದು ಚಿಕಿತ್ಸೆಯ ಸೂಕ್ತ ವಿಧಾನವನ್ನು ಆರಿಸಿಕೊಳ್ಳಬಹುದು.
- ಗಂದೆಗಳ ಮೇಲೆ ಹಚ್ಚಲು ಕಾರ್ಟಿಕೋಸ್ಟಿರಾಯ್ಡ್ ಔಷಧ, ವಿಟಮಿನ್ ಡಿ ಮುಲಾಮುಗಳು.
- ಫೋಟೋಥೆರಪಿ ಅಥವಾ ಲೈಟ್ ಥೆರಪಿ (ನೇರಳಾತೀತ ವಿಕಿರಣ - ನ್ಯಾರೊಬ್ಯಾಂಡ್ ಕಿರಣಗಳು) NB-UVB ಬಳಸಿ ಚಿಕಿತ್ಸೆ.
- ರೆಟಿನಾಯ್ಡ್ ಗುಂಪಿನ ಔಷಧಗಳ ಬಳಕೆ.
- ಸೊರಲೇನ್ ಎಂಬ ಔಷಧ ಬಳಸಿ ಚಿಕಿತ್ಸೆ
- ರೋಗನಿರೋಧಕ ಶಕ್ತಿಯನ್ನು ಕುಂದಿಸುವ ಔಷಧಗಳು (ಮೆಥೋಟ್ರೆಕ್ಸೇಟ್, ಸೈಕ್ಲೋಸ್ಪೋರಿನ್)
- ಜೈವಿಕ ಉತ್ಪನ್ನಗಳನ್ನು ಬಳಸಿ ಚಿಕಿತ್ಸೆ – ಇವು ರೋಗನಿರೋಧಕ ವ್ಯವಸ್ಥೆಯ ನಿರ್ದಿಷ್ಟ ಅಂಶಗಳನ್ನು ಗುರಿಯಾಗಿರಿಸಿಕೊಂಡು ಕಾರ್ಯನಿರ್ವಹಿಸುತ್ತವೆ. ಈ ಕಾಯಿಲೆಗೆ ಉತ್ತಮ, ಸುರಕ್ಷಿತ ಔಷಧಗಳು ಹಾಗೂ ಇನ್ನೂ ಹೆಚ್ಚು ಖಚಿತವಾದ ಚಿಕಿತ್ಸಾತಂತ್ರಗಳನ್ನು ಅನ್ವೇಷಿಸುವ ಅವಶ್ಯಕತೆ ಇದೆ.

ನೆನಪಿನಲ್ಲಿಡಬೇಕಾದ ಅಂಶಗಳು

- ಹೇಗೆ, ಮಧುಮೇಹ, ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳು ಒಮ್ಮೆ ಪತ್ತೆಯಾದರೆ ಸಂಪೂರ್ಣವಾಗಿ ಗುಣಪಡುವುದಿಲ್ಲವೋ ಹಾಗೆಯೇ ಸೋರಿಯಾಸಿಸ್ ಕೂಡ.
- ಕೆಲವು ಅಂಶಗಳು ಸೋರಿಯಾಸಿಸ್ ಕಾಯಿಲೆಯನ್ನು ಪ್ರಚೋದಿಸುತ್ತವೆ. ಅವೆಂದರೆ, ಶರೀರಕ್ಕೆ ಆಗುವ ಆಘಾತ, ಕೆಲವು ಬಗೆಯ ಸೋಂಕುಗಳು, ಕೆಲವು ಔಷಧಗಳು, ಒತ್ತಡ ತುಂಬಿದ ಜೀವನಶೈಲಿ, ಸೂರ್ಯನ ಬಿಸಿಲಿಗೆ ಅತಿಯಾಗಿ ಮೈಯೊಡ್ಡುವಿಕೆ, ಪದೇ ಪದೇ ಡಯಾಲಿಸಿಸ್‌ಗೆ ಒಳಪಡುವುದು, ಕ್ಯಾಲ್ಸಿಯಂ ಕೊರತೆ, ಮದ್ಯಪಾನ, ಧೂಮಪಾನ, ಮುಂತಾದುವು
- ಚಳಿಗಾಲದಲ್ಲಿಯೂ ಒಮ್ಮೊಮ್ಮೆ ಈ ಕಾಯಿಲೆಯು ಉಲ್ಬಣಗೊಳ್ಳುತ್ತದೆ. ಆ ಸಂದರ್ಭದಲ್ಲಿ ಚರ್ಮವನ್ನು ಮೃದುಗೊಳಿಸುವ ಔಷಧಗಳನ್ನು ಬಳಸಬಹುದು. - ಈ ಕಾಯಿಲೆಯು ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದಿಲ್ಲ.
- ಸೋರಿಯಾಸಿಸ್ ಮಾರಣಾಂತಿಕ ಕಾಯಿಲೆಯಲ್ಲ. ಸಾಮಾನ್ಯವಾಗಿ ಯಾವುದೇ ಅಪಾಯಕರ ಸಂಭವನೀಯ ಪರಿಣಾಮಗಳಿಗೆ ಕಾರಣವಾಗುವುದಿಲ್ಲ.
- ಈ ಕಾಯಿಲೆಯು ಪತ್ತೆಯಾದಾಗ, ವ್ಯಕ್ತಿಯು ಮಾನಸಿಕವಾಗಿ ಕುಗ್ಗಿ ಹೋಗದೇ ಸುರಕ್ಷಿತವಾದ ಚಿಕಿತ್ಸೆಯನ್ನು ಪಡೆದು ಸಾಮಾನ್ಯ ಜೀವನ ನಡೆಸಲು ದೃಢ ಮನಸ್ಸು ಮಾಡಬೇಕು.

ಸೋರಿಯಾಸಿಸನ್ನು ನಿಯಂತ್ರಿಸುವಲ್ಲಿ ಸಹಕರಿಸುವ ಇತರ ಅಂಶಗಳು:

ದಿನನಿತ್ಯದ ವ್ಯಾಯಾಮ, ಪ್ರಾಣಾಯಾಮ, ಸಮತೋಲನ ಆಹಾರದ ಸೇವನೆ, ಹೆಚ್ಚು ನೀರಿನ ಬಳಕೆ, ಚರ್ಮದ ಮೃದುಕಾರಕಗಳ ಬಳಕೆ, ಮದ್ಯಪಾನ-ಧೂಮಪಾನಗಳ ವರ್ಜನೆ.

ಧ್ರುವದಿಂದ ಧ್ರುವಕೆ ಹೊಯ್ದಾಡುವ ಮನಸ್ಸು

ಡಾ. ಅರುಣಾ ಯಡಿಯಾಳ್

'ಶರಪಂಜರ' ಸಿನಿಮಾದ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೆ ಚುಂಬಕ ಗಾಳಿಯು ಬೀಸುತ್ತಿದೆ...' ಎಂಬ ಸುಮಧುರ ಹಾಡು ಕೇಳಿದಾಗಲೆಲ್ಲಾ ಆಹ್ಲಾದವಾಗುವುದೇನೋ ನಿಜ! ಆದರೆ, ಗಾಳಿ ಬೀಸಿದಂತೆ ಮನಸ್ಸೂ ಒಂದು ಧ್ರುವದಿಂದ ಇನ್ನೊಂದು ಧ್ರುವದೆಡೆಗೆ ಹೊಯ್ದಾಡುತ್ತಿದ್ದರೆ, ಮನಸ್ಸಿನ ಅಂತರಾಳದಲ್ಲಿ ತಳಮಳವುಂಟಾಗಿ, ಮನೋವ್ಯಾಕುಲತೆ ಉಂಟಾಗುವುದೂ ನಿಜವೇ!

ಪ್ರತಿ ವರ್ಷ ಮಾರ್ಚ್ ತಿಂಗಳ ಮೂವತ್ತರಂದು 'ವಿಶ್ವ ಬೈಪೋಲಾರ್ ದಿನ' (ದ್ವಿ-ಧ್ರುವ ಮನೋವ್ಯಾಕುಲತೆ/ ಚಿತ್ತಲಹರಿಯ ಅಸ್ವಸ್ಥತೆ) ಎಂದು ಹಮ್ಮಿಕೊಳ್ಳಲಾಗುತ್ತದೆ. ಈ ದಿನಂದಂದು ಈ ಬೈಪೋಲಾರ್ 'mood disorder' ಎಂಬ ಮಾನಸಿಕ ಕಾಯಿಲೆಯ ಬಗ್ಗೆ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಲಕ್ಷಣಗಳು: ಮನಸ್ಸಿನ ಭಾವನೆಗಳು ಮಿತಿಮೀರಿ ಅತಿರೇಕದ, ವಿರೂಪದ ಸ್ವರೂಪ ತಾಳಿದಾಗ ಮನೋವ್ಯಾಕುಲತೆಗಳು ಅಥವಾ ಚಿತ್ತಲಹರಿಯ ಅಸ್ವಸ್ಥತೆ (mood disorder) ಉಂಟಾಗುತ್ತದೆ. ಇಲ್ಲಿ 'ಖಿನ್ನತೆ' (depression) ಎಂಬ ಕಾಯಿಲೆ ಒಂದು ಧ್ರುವದಲ್ಲಿದ್ದರೆ, ತದ್ವಿರುದ್ಧ ಧ್ರುವದಲ್ಲಿ 'ಉನ್ಮಾದ' (mania) ಎಂಬ ಕಾಯಿಲೆ ಇರುವುದು. ಎರಡೂ ಮನೋಬೇನೆಗಳು ಬಿಟ್ಟು ಬಿಟ್ಟು ಒಂದರ ನಂತರ ಒಂದರಂತೆ, ಒಂದಿಷ್ಟು ನಿರ್ದಿಷ್ಟಾವಧಿಯ ಕಾಲದಲ್ಲಿ (3-6 ತಿಂಗಳುಗಳ ಕಾಲ) ಬರುತ್ತಿದ್ದರೆ, ಆ ರೀತಿಯ ಅಸ್ವಸ್ಥತೆಗೆ 'bipolar mood disorder' ಅಥವಾ 'ದ್ವಿ-ಧ್ರುವ ಮನೋವ್ಯಾಕುಲತೆ' ಅಥವಾ ಚಿತ್ತಲಹರಿಯ ಅಸ್ವಸ್ಥತೆ ಎನ್ನಲಾಗುತ್ತದೆ.

ಸದಾ ಕಾಲ ಬೇಸರ, ಬೇಜಾರು, ನಿರಾಸಕ್ತಿ, ಅಸಂತೋಷ, ಅತಿಯಾದ ಸುಸ್ತು, ನಿಃಶಕ್ತಿ, ನಿದ್ದೆ-ಆಹಾರಸೇವನೆಯಲ್ಲಿ ಏರುಪೇರು, ಗಮನ ಕೇಂದ್ರೀಕರಿಸಲು ಆಗದಿರುವಿಕೆ, ಅತಿ ಕಡಿಮೆ ಆತ್ಮವಿಶ್ವಾಸ, ಅನವಶ್ಯಕ ಸಿಟ್ಟು/ ಸಿಡುಕು, ತೀವ್ರತರವಾದ ತಪ್ಪಿತಸ್ಥ ಭಾವನೆಗಳು, ಆತ್ಮಹತ್ಯೆಯ ಯೋಚನೆ-ಯೋಜನೆಗಳು ಈ ರೀತಿಯ ಗುಣಲಕ್ಷಣಗಳು, ಕನಿಷ್ಠ ಪಕ್ಷ ಎರಡು ವಾರದವರೆಗೂ ಸತತವಾಗಿ ಇದ್ದು, ಆ ವ್ಯಕ್ತಿಯ ಕೆಲಸ/ಕಾರ್ಯಗಳಲ್ಲಿ ತೊಡಕುಂಟುಮಾಡುತ್ತಿದ್ದರೆ, ಆ ಕಾಯಿಲೆಯನ್ನು 'ಖಿನ್ನತೆ' ಎನ್ನಬಹುದು.

ಇದರ ವಿರುದ್ಧ ದಿಕ್ಕಿನಲ್ಲಿ, ಅತಿಯಾದ ಸಂತೋಷ/ ಉದ್ರೇಕದ ಮನಃಸ್ಥಿತಿ, ತೀವ್ರವಾದ ಚಡಪಡಿಕೆ, ಅತಿಯಾದ ಆತ್ಮವಿಶ್ವಾಸ, ದುಡುಕಿನ ಸ್ವಭಾವ, ತನ್ನ ಬಗ್ಗೆ ತಾನೇ ಕೊಚ್ಚಿಕೊಳ್ಳುವಿಕೆ, ಅತಿ ಕಡಿಮೆ ನಿದ್ದೆಯ ಅವಶ್ಯಕತೆ, ಅತಿಯಾದ ಮಾತು/ಚಟುವಟಿಕೆ, ಅತಿ ವೇಗದ ಯೋಚನಾ ಲಹರಿಗಳು, ಅತಿಯಾದ ಕೋಪ, ಮನೋಚಾಪಲ್ಯ, ಅತಿ ಚಂಚಲತೆ, ತೀವ್ರ ಕಾಮಾತುರತೆ, ಸುಖಾನ್ವೇಷಣೆಯಲ್ಲಿ ಅತಿಯಾಗಿ ತೊಡಗಿಕೊಳ್ಳುವಿಕೆ (ಉದಾಹರಣೆಗೆ, ಅತಿಯಾದ ಕೊಳ್ಳುವಿಕೆ, ಖರೀದಿಗಳು, ಲೈಂಗಿಕ ಕ್ರಿಯೆಗಳು, ಮಾದಕ ವಸ್ತುಗಳ ದುರ್ಬಳಕೆ, ಅತಿಯಾದ ಭಕ್ತಿ, ದೈವಾರಾಧನೆ, ಇತ್ಯಾದಿ) - ಇವುಗಳೆಲ್ಲಾ ಒಂದು ವಾರದವರೆಗಾದರೂ ಸತತವಾಗಿ ಕಾಡಿ, ಆ ವ್ಯಕ್ತಿಯ ಔದ್ಯೋಗಿಕ/ ಸಾಮಾಜಿಕ ಹಾಗೂ ವೈಯಕ್ತಿಕ ಜೀವನದಲ್ಲಿ ಹಾವಳಿಯನ್ನುಂಟುಮಾಡುತ್ತಿದ್ದರೆ, ಆ ಕಾಯಿಲೆಗೆ 'ಉನ್ಮಾದ ಮನೋವ್ಯಾಧಿ' ಎನ್ನುತ್ತೇವೆ. ಈ ರೀತಿಯ ಮನೋವ್ಯಾಕುಲತೆಗಳು, ಎಂದರೆ ಕೆಲವೊಮ್ಮೆ ಖಿನ್ನತೆ, ಕೆಲವೊಮ್ಮೆ ಉನ್ಮಾದ, ಬಿಟ್ಟು ಬಿಟ್ಟು ಬರುತ್ತಿದ್ದರೆ, ಅದಕ್ಕೆ 'ದ್ವಿ-ಧ್ರುವ ಚಿತ್ತಲಹರಿಯ ಅಸ್ವಸ್ಥತೆ' ಎನ್ನಲಾಗುತ್ತದೆ.

ತಪ್ಪು ತಿಳಿವಳಿಕೆಗಳು ಹಾಗೂ ನಿಜಾಂಶಗಳು:

ತಪ್ಪು ತಿಳಿವಳಿಕೆ **(ತ):** 'ಖಿನ್ನತೆ' ಎಂದರೆ ಬೇಜಾರಾಗಿರುವುದು, 'ಉನ್ಮಾದ: ಎಂದರೆ ಖುಷಿಯಾಗಿರುವುದು. ಇಂಥ ವಿಂಗಡಣೆಯಿಂದ ರೋಗಿಯೇ ಸ್ವ-ಇಚ್ಛೆಯಿಂದ ಹೊರಬರಬೇಕು.

ನಿಜಾಂಶ (ನಿ): ಖಿನ್ನತೆ ಹಾಗೂ ಉನ್ಮಾದ ಎಂಬುದು ಮನೋವ್ಯಾಕುಲತೆಗಳು ಕೇವಲ ಮನೋಸಹಜ ಭಾವನೆಗಳಿಗಲ್ಲ. ಬೇರೆ ಮಾನಸಿಕ ಕಾಯಿಲೆಗಳಲ್ಲಾಗುವಂತೆ ಇಲ್ಲಿಯೂ ಮಿದುಳಿನ ರಸಾಯನಿಕಗಳಲ್ಲಿ ಏರುಪೇರಾಗುತ್ತದೆ. ಇದರಿಂದ ರೋಗಿ ತನ್ನಿಂದ ತಾನೇ ಹೊರಬರಲು ಸಾಧ್ಯವಿಲ್ಲ. ನಿರ್ದಿಷ್ಟ ಔಷಧಗಳು, ಸಮಾಲೋಚಕರ ಮನೋಚಿಕಿತ್ಸೆ, ಕುಟುಂಬ ಹಾಗೂ ಸಮಾಜದ ಪ್ರೀತಿ, ಆಸರೆ - ಇವು ಇದ್ದರೆ, ಆಗ ರೋಗಿ ಕಾಯಿಲೆಯಿಂದ ಗುಣಮುಖನಾಗಲು ಸಾಧ್ಯ.

(ತ): ಖಿನ್ನತೆ ಇರುವವರು ಬೇರೆಯವರನ್ನೂ ಬೇಜಾರು ಮಾಡುತ್ತಾರೆ.

(ನಿ): ಖಿನ್ನತೆ ಇದ್ದಾಗ ಬೇರೆಯವರೊಡನೆ ತಮ್ಮ ಭಾವನೆಗಳನ್ನು ಹಂಚಿಕೊಂಡು, ಅವರಿಂದ ಸಹಾಯವನ್ನು ಪಡೆದು, ಅದರಿಂದ ಹೊರಬರಲು ಸಾಧ್ಯ. ಖಿನ್ನತೆ ಅಥವಾ ಉನ್ಮಾದಗಳು ಸೋಂಕುಕಾಯಿಲೆಯಂತೆ ಒಬ್ಬರಿಂದ ಇನ್ನೊಬ್ಬರಿಗೆ ಬರದು.

(ತ): ಉನ್ಮಾದದಲ್ಲಿರುವಾಗ ರೋಗಿ ಖುಷಿಯಾಗಿರುತ್ತಾನೆ. ಅದರಿಂದ ಅವನಿಗೆ ಚಿಕಿತ್ಸೆ ಕೊಡಿಸಿ, ಆ ಸಂತೋಷವನ್ನು ಕಿತ್ತುಕೊಳ್ಳುವ ಅವಶ್ಯಕತೆ ಇಲ್ಲ.

(ನಿ): ಉನ್ಮಾದದಲ್ಲಿರುವಾಗಿನ ಖುಷಿ ಸಹಜವಾದುದಲ್ಲ. ನಶ್ವರವಾದ, ಕ್ಷಣಿಕವಾದ, ಚಂಚಲವಾದ, ಅತಿರೇಕವೆನಿಸುವ ಅಸಂಬದ್ಧ ಸಂತೋಷವದು. ಆ ಸಮಯದಲ್ಲಿ ರೋಗಿ ಎಷ್ಟೋ ಸಲ, ಮುಜುಗರ ಉಂಟು ಮಾಡುವ, ಜೀವನವನ್ನೇ ಬದಲಿಸುವ, ತಮ್ಮ ಹಾಗೂ ಇತರರ ಜೀವಕ್ಕೆ ಕುತ್ತು ತರುವ ಅಪಾಯಕಾರಿ ಕಾರ್ಯಗಳಿಗೆ ಕೈ ಹಾಕುವಂತಾಗುತ್ತದೆ. ಈ ರೀತಿಯ ಪ್ರಮಾದಗಳನ್ನು ತಪ್ಪಿಸಲಾದರೂ ಚಿಕಿತ್ಸೆ ಅತ್ಯಗತ್ಯ.

(ತ): ಅತ್ತರೆ ಖಿನ್ನತೆ, ನಕ್ಕರೆ ಉನ್ಮಾದ.

(ನಿ): ಅಳು-ನಗು, ಸುಖ-ದುಃಖ, ಮಾನವನ ಸಹಜ ಭಾವನೆಗಳು. ಪರಿಸ್ಥಿತಿಗೆ ಪ್ರಸ್ತುತವಾಗಿ ನಿರ್ದಿಷ್ಟ ಕಾಲದಲ್ಲಿ ಆಗುವ ಈ ಭಾವನೆಗಳು ಕಾಯಿಲೆ ಎನಿಸಿಕೊಳ್ಳಲಾರವು. ಅತಿಯಾದ ದುಃಖ, ಅತಿರೇಕದ ಸಂತೋಷ, ಪರಿಸ್ಥಿತಿಗೆ ಅಪ್ರಸ್ತುತವಾಗುತ್ತಾ, ದೀರ್ಘಾವಧಿ ವ್ಯಕ್ತಿಯಲ್ಲಿ ವೈಯಕ್ತಿಕ ಸಂಕಟವನ್ನು ಉಂಟುಮಾಡಿ, ಅವನ ಔದ್ಯೋಗಿಕ, ಕೌಟುಂಬಿಕ, ಸಾಮಾಜಿಕ ವಲಯವನ್ನೂ ಹಾಳುಗೆಡವುದರ ಮಟ್ಟಿಗೆ ಬೆಳೆದಿದ್ದರೆ, ಆಗ ಮಾತ್ರ ಈ ಭಾವನೆಗಳು ಕಾಯಿಲೆಯ ಸ್ವರೂಪವನ್ನು ಪಡೆದು ಕೊಳ್ಳುತ್ತವೆ.ಅತಿರೇಕದ ಭಾವನೆಗಳು ನಿಮ್ಮನ್ನು ಕಾಡುತ್ತಿದ್ದರೆ ಕೂಡಲೇ ಮನೋವೈದ್ಯರ ಸಲಹೆಯನ್ನು ಪಡೆಯಿರಿ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

14) ದಸ್ತಕ್‌ಗಳನ್ನು ಯಾರು ದುರುಪಯೋಗ ಮಾಡಿಕೊಳ್ಳತೊಡಗಿದರು?

ಉತ್ತರ:– ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗ ಮಾಡಿಕೊಳ್ಳತೊಡಗಿದರು

15) ಯಾವ ರಾಜ್ಯದಲ್ಲಿ ಅತಿ ಹೆಚ್ಚು ಅರಣ್ಯ ಕ್ಷೇತ್ರವಿದೆ?

ಉತ್ತರ:– ಮಧ್ಯಪ್ರದೇಶ

16) ಭೂ ಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರವಾಗಿದೆ?

ಉತ್ತರ:– ಏಳನೇ ದೊಡ್ಡ ರಾಷ್ಟ್ರವಾಗಿದೆ.

17) ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಯಾರು?

ಉತ್ತರ:– ಅನಿಬೆಸೆಂಟ್ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಆಗಿದ್ದರು.

18) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ

ಉತ್ತರ:– ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್ ಕ್ಲೈವನು ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

19) ಎಲೆ ಉದುರುವ ಮಾನ್ಸೂನ್ ಅರಣ್ಯಗಳಲ್ಲಿ ಬೆಳೆಯುವ ಪ್ರಮುಖ ಮರಗಳನ್ನು ಹೆಸರಿಸಿ

ಉತ್ತರ:– ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ತೇಗ, , ಶ್ರೀಗಂಧ, ಕೆಂದಾಳ, ತಪಸಿ ಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮೊದಲಾದವು

15) ಯಾವ ರಾಜ್ಯದಲ್ಲಿ ಅತಿ ಕಡಿಮೆ ಅರಣ್ಯ ಕ್ಷೇತ್ರವಿದೆ?

ಉತ್ತರ:– ಹರಿಯಾಣ

16) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?

ಉತ್ತರ:– ನೀಲಗಿರಿ ಬೆಟ್ಟ

17) ತುಂಗಭದ್ರ ಯೋಜನೆಯಡಿ ಕರ್ನಾಟಕದಲ್ಲಿ ನಿರ್ಮಿಸಲಾದ ಅಣೆಕಟ್ಟುಗಳ ಬಗ್ಗೆ ಬರೆಯಿರಿ

ಉತ್ತರ:– ಅಣೆಕಟ್ಟೆಯನ್ನು ಕೃಷ್ಣಾ ನದಿಯ ಉಪ ನದಿಯಾದ ತುಂಗಭದ್ರ ನದಿಗೆ ಕರ್ನಾಟಕದ ಬಳ್ಳಾರಿ ಜಿಲ್ಲೆಗೆ ಸೇರಿದ ಹೊಸಪೇಟೆಯ ಬಳಿ ಮಲ್ಲಾಪುರಂ ಎಂಬಲ್ಲಿ ನಿರ್ಮಿಸಲಾಗಿದೆ. ಇದರಿಂದ ನಿರ್ಮಾಣಗೊಂಡ ಜಲಾಶಯಕ್ಕೆ "ಪಂಪ ಸಾಗರ" ಎಂದು ಹೆಸರಿಸಲಾಗಿದೆ.

18) ಭಾರತದಲ್ಲಿ ಅರಣ್ಯ ಹೊಂದಿರುವ ಪ್ರದೇಶದಲ್ಲಿ ಕರ್ನಾಟಕದ ಸ್ಥಾನ ಏನು?

ಉತ್ತರ:– ಹದಿಮೂರು

19) ಭಾರತದಲ್ಲಿರುವ ಪ್ರಮುಖ ಬಂದರುಗಳನ್ನು ಪಟ್ಟಿ ಮಾಡಿ

ಉತ್ತರ : ಭಾರತವು ಪೂರ್ವ ತೀರದ ಮತ್ತು ಪಶ್ಚಿಮ ತೀರದ ಬಂದರುಗಳನ್ನು ಹೊಂದಿದೆ.

ಪೂರ್ವತೀರದ ಬಂದರುಗಳು: ತೂತುಕುಡಿ, ಚೆನ್ನೈ, ವಿಶಾಖಪಟ್ಟಣ, ಪಾರಾದೀಪ್, ಹಾಲ್ದಿಯಾ, ಕಲ್ಕತ್ತಾ ಇತ್ಯಾದಿ.

ಪಶ್ಚಿಮ ತೀರದ ಬಂದರುಗಳು : ಕೊಚ್ಚಿನ್, ನವಮಂಗಳೂರು, ಮರ್ಮಗೋವಾ, ಮುಂಬೈ, ಕಾಂಡ್ಲಾ ಇತ್ಯಾದಿ

20) ವಿಶ್ವಸಂಸ್ಥೆಯ ಉದ್ದೇಶಗಳನ್ನು ಬರೆಯಿರಿ

ಉತ್ತರ :– ವಿಶ್ವ ಸಂಸ್ಥೆಯ ಸನ್ನದು ಈ ಜಾಗತಿಕ ಸಂಸ್ಥೆಯ ಪ್ರಧಾನ ದಾಖಲೆ ಎನಿಸಿದ್ದು ಇದರಲ್ಲಿ 19 ಅಧ್ಯಾಯಗಳಿಗಿದ್ದು 111 ವಿಧಿಗಳನ್ನು ಹೊಂದಿವೆ. " ವಿಶ್ವದ ಜನಸಮುದಾಯವೆನಿಸಿದ ನಾವು ....'' ಎಂಬ ವಾಕ್ಯದೊಂದಿಗೆ ವಿಶ್ವ ಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ.

ವಿಶ್ವ ಸಂಸ್ಥೆಯ ಧ್ಯೇಯೋದ್ದೇಶಗಳು :

1. ಅಂತಾರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು.
2. ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
3. ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು.
4. ಅಂತಾರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತಾರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಹುಡುಕುವುದು.
5. ಅಂತಾರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು
6. ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

21) ಚಂಡಮಾರುತಗಳು ಉಂಟಾಗಲು ಕಾರಣಗಳೇನು? ಇದರ ಪರಿಣಾಮಗಳೇನು?

ಉತ್ತರ: ಪೃಥ್ವಿಯ ಮೇಲೆ ಸಂಭವಿಸುವ ನೈಸರ್ಗಿಕ ವಿಕೋಪಗಳಲ್ಲಿ ಆವರ್ತ ಗಾಳಿಗಳು ಅತ್ಯಂತ ಹಾನಿಕಾರಕ ಮತ್ತು ವಿನಾಶಕಾರಕಗಳಾಗಿವೆ. ಈ ಗಾಳಿಗಳನ್ನು ಸಾಮಾನ್ಯವಾಗಿ ಚಂಡಮಾರುತಗಳೆಂದು ಕರೆಯಲಾಗುವುದು.

ಚಂಡಮಾರುತಗಳು ಉಂಟಾಗಲು ಕಾರಣಗಳು :

ಚಂಡಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ. ಮೂರು ಕಡೆಗಳಲ್ಲಿ ಭೂಭಾಗವಿದ್ದು ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವಾಗಿವೆ.

ಸಾಮಾನ್ಯವಾಗಿ ಇವು ಬಂಗಾಳ ಉಪಸಾಗರದಲ್ಲಿ ಉಗಮಗೊಂಡು ಪಶ್ಚಿಮದ ಕಡೆಗೆ ಚಲಿಸಿ ತಮಿಳುನಾಡು ಅಥವಾ ಆಂಧ್ರಪ್ರದೇಶದ ತೀರಕ್ಕೆ ಅಪ್ಪಳಿಸುತ್ತದೆ. ಕೆಲವೊಮ್ಮೆ ವಾಯವ್ಯಕ್ಕೆ ಚಲಿಸಿ ಒಡಿಶಾ ತೀರವನ್ನು ಅಪ್ಪಳಿಸುತ್ತವೆ. ಭಾರತದಲ್ಲಿ ಚಂಡಮಾರುತಗಳು ಎರಡು ಅವಧಿಯಲ್ಲಿ ಹೆಚ್ಚು ಸಂಭವಿಸುತ್ತದೆ. ಇವುಗಳು ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಹೆಚ್ಚು ಸಂಭವಿಸುತ್ತದೆ. ಮೇ–ಜೂನ್ ತಿಂಗಳಲ್ಲಿಯೂ ಸಂಭವಿಸುತ್ತದೆ.

ಚಂಡಮಾರುತದ ಪರಿಣಾಮಗಳು :

1. ಕೆಲವು ವೇಳೆ ಚಂಡಮಾರುತ ಅಪ್ಪಳಿಸಿದ ಪ್ರದೇಶದ ಜನಜೀವನವೇ ಸಂಪೂರ್ಣ ಮಾರ್ಪಾಡು ಹೊಂದುವುದು.
2. ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.
3. ಸಾಗರದ ಅಲೆಗಳು ಒಳನಾಡಿಗೆ ಚಾಚಿ ಜಲರಾಶಿಗಳು ಲವಣಯುಕ್ತವಾಗುತ್ತವೆ.
4. ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.

22) ಅಸ್ಪೃಶ್ಯತಾ ನಿವಾರಣೆಯಲ್ಲಿ ಪಾತ್ರವಹಿಸಿದ ಸಮಾಜ ಸುಧಾರಕರನ್ನು ಹೆಸರಿಸಿ

ಉತ್ತರ:– ಸುಧಾರಣಾವಾದಿಗಳು, ಧಾರ್ಮಿಕ ನೇತಾರರು, ಬರಹಗಾರರು ಮತ್ತು ವಿಚಾರವಾದಿಗಳು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಲೇ ಬಂದಿದ್ದಾರೆ. ಸ್ವಾಮಿ ವಿವೇಕಾನಂದ, ಡಾ॥ ಬಿ. ಆರ್. ಅಂಬೇಡ್ಕರ್, ಜ್ಯೋತಿ ಬಾಪುಲೆ, ಗಾಂಧೀಜಿ, ಮೊದಲಾದವರು ಅಸ್ಪೃಶ್ಯತೆ ಹಾಗೂ ಅಸಮಾನತೆಯ ವಿರುದ್ಧ ಹೋರಾಟ ನಡೆಸಿದರು.

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

30) Power alcohol is a mixture of ....

a) 80% Petrol + 20% Benzene + Small quantity of Ethanol
b) 80% Petrol + 20% Ethanol + Small quantity of Benzene
c) 80% Ethanol + 20% Benzene + Small quantity of Petrol
d) 50% Petrol + 50% Ethanol + Small quantity of Benzene

Ans:- b

31) Dalda is prepared from oils by -

a) oxidation b) reduction
c) hydrolysis d) distillation

Ans:- b

32) In the brown ring test, the brown colour of the ring is due to ....

a) ferrous nitrate b) a mixture of NO and NO_2
c) ferric nitrate d) nitrosoferrous sulphate

Ans:- d

33) On heating with concentrated NaOH solution in an inert atmosphere of CO_2, white phosphorus gives a gas. Which of the following statement is incorrect about gas?

a) It is highly poisonous and has smell like fish.
b) It's solution in water decomposes in the presence of light.
c) It is more basic than NH_3.
d) It is less basic than NH_3.

Ans:- c

34) During osmosis, flow of water through a semipermeable membrane is:

a) from both sides of the semipermeable membrane with equal flow rates
b) from both sides of semipermeable membrane with unequal flow rate
c) from solution having lower concentration only
d) from solution having higher concentration only.

Ans:- c

35) Negative deviation from Raoult's Law is observed in which of the following binary liquid mixtures:

a) ethanol and acetone **b) benzene and toluene**
c) acetone and chloroform
d) chloroethane and bromoethane

Ans:- c

36) The sharp melting point of crystalline solids is due to

a) a regular arrangement of constituent particles observed over a short distance in the crystal lattice.
b) a regular arrangement of constituent particles observed over a long distance in the crystal lattice.
c) Same arrangement of constituent particles in different directions.
d) different arrangement of constituent particles in different directions.

Ans:- b

37) Which of the following is not the characteristic of ionic solids?

a) Very low value of electrical conductivity in the molten state.
b) Brittle nature. c) Anisotropic nature.
d) very strong forces of interactions.

Ans:- a

38) The correct arrangement for the ions in the increasing order of their radii is

a) Na^+, Cl^-, Ca^{2+} b) Ca^{2+}, K^+, S^{2-}
c) Na^+, Al^{3+}, Be^{2+} d) Cl^-, F^-, S^{2-}

Ans:- b

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

39) The factors that influence the rate of a reaction are ....

a) Nature of the reactants
b) Concentration of the reactants
c) Temperature of the reaction d) all of these

Ans:- d

40) Silicon doped with electron-rich impurity forms .... semiconductor.

a) p-type b) n-type
c) intrinsic d) insulator

Ans:- b

41) The statement that is not correct is

a) Aldose or ketose sugars in alkaline medium to not isomerise
b) Carbohydrates are optically active.
c) Pentaacetate of glucose does not react with hydroxylamine.
d) Lactose has glycosidic linkage between C_4 of glucose and C_1 of galactose unit.

Ans:- a

ತಪ್ಪದೇ ಮತದಾನ ಮಾಡುವಂತೆ ಪ್ರೇರೇಪಿಸಲು ತುಷಾರ್ ಗಿರಿನಾಥ್ ಸಲಹೆ

‘ಮತದಾನದ ಅರಿವು ಮೂಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡ ಅಪಾರ್ಟ್‌ಮೆಂಟ್‌ಗಳು ಹಾಗೂ ಹೆಚ್ಚು ಮತದಾರರಿರುವ ವಸತಿ ಸಮುಚ್ಚಯಗಳಲ್ಲಿರುವ ಸಂಘಗಳ ಸದಸ್ಯರು ಮತದಾನದ ಪ್ರಮಾಣ ಹೆಚ್ಚಾಗಲು ಎಲ್ಲರಲ್ಲೂ ಅರಿವು ಮೂಡಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳೊಂದಿಗೆ ಸೋಮವಾರ ವಿಡಿಯೊ ಸಂವಾದ ನಡೆಸಿದರು.

‘ಚುನಾವಣೆಯ ಸಂಪೂರ್ಣ ಮಾಹಿತಿಯನ್ನು ಚುನಾವಣಾ ವಿಭಾಗದಿಂದ ನೀಡಲಾಗುವುದು. ಆ ಮಾಹಿತಿಯನ್ನು ತಮ್ಮ ಸಮುಚ್ಚಯಗಳಲ್ಲಿ ಬಿತ್ತರಿಸಿಕೊಂಡು ಮತದಾನದ ಕುರಿತು ಅರಿವು ಮೂಡಿಸಬೇಕು. ಜೊತೆಗೆ ತಪ್ಪದೆ ಮತದಾನ ಮಾಡುವಂತೆ ಎಲ್ಲರಿಗೂ ಪ್ರೇರೇಪಿಸಬೇಕು’ ಎಂದು ತಿಳಿಸಿದರು.

‘ಬಿಬಿಎಂಪಿ ವ್ಯಾಪ್ತಿಯ 28 ವಿಧಾನ ಸಭೆ ಕ್ಷೇತ್ರಗಳು ನಾಲ್ಕು ಲೋಕಸಭಾ ಕ್ಷೇತ್ರಗಳಿಗೆ ಬರಲಿದ್ದು, ಮತದಾನದ ಪ್ರಮಾಣವನ್ನು ಕಳೆದ ಬಾರಿಗಿಂತ ಹೆಚ್ಚಳ ಮಾಡಬೇಕಿದೆ. ಅದಕ್ಕೆ ತಮ್ಮ ಸಹಕಾರ ಅತ್ಯಗತ್ಯವಿದೆ’ ಎಂದು ಹೇಳಿದರು.

‘85 ವರ್ಷ ಮೇಲ್ಪಟ್ಟವರು ಹಾಗೂ ಅಂಗವಿಕಲರಿಗೆ ಅಂಚೆ ಮತದಾನ ಮಾಡುವ ಅವಕಾಶವಿದ್ದು, ಆ ಕುರಿತು ಮಾಹಿತಿ ನೀಡಿ ಬೂತ್ ಮಟ್ಟದ ಅಧಿಕಾರಿಗಳಿಂದ 12ಡಿ ನಮೂನೆಗಳನ್ನು ಭರ್ತಿ ಮಾಡಿಸಬೇಕು’ ಎಂದು ಹೇಳಿದರು.

ಮತಗಟ್ಟೆಗಳ ಬಳಿ ಶೌಚಾಲಯ, ಕುಡಿಯುವ ನೀರು, ಕುರ್ಚಿಗಳು, ಫ್ಯಾನ್, ವಿದ್ಯುತ್ ವ್ಯವಸ್ಥೆ, ಅಂಗವಿಕಲರಿಗೆ ರ‍್ಯಾಂಪ್ ವ್ಯವಸ್ಥೆ ಸೇರಿದಂತೆ ಇನ್ನಿತರೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಸ್ವೀಪ್ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷ ಕಾಂತರಾಜು, ಬೆಂಗಳೂರು ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಪ್ರತಿಭಾ, ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ – 2024

ಮಾರ್ಚ್ 25ರವರೆಗೆ ವಶಪಡಿಸಿಕೊಂಡಿರುವ ವಿವರ

₹67	ಲಕ್ಷ ನಗದು
30,909	ಲೀಟರ್ ಮದ್ಯ
21.99	ಕೆ.ಜಿ ಮಾದಕ ವಸ್ತು
18.409	ಕೆ.ಜಿ ಚಿನ್ನ/ಬೆಳ್ಳಿ
22	ವಾಹನಗಳ ಜಪ್ತಿ
₹2.83	ಕೋಟಿ ಒಟ್ಟಾರೆ ಮೌಲ್ಯ
240	ಎಫ್‌ಐಆರ್

ಸ್ವೀಪ್ ಕಾರ್ಯಕ್ರಮ ಹೆಚ್ಚಿಸಲು ಸೂಚನೆ

ಮತದಾನದ ಪ್ರಮಾಣವನ್ನು ಶೇಕಡವಾರು ಹೆಚ್ಚಿಸುವ ನಿಟ್ಟಿನಲ್ಲಿ ನಗರದಾದ್ಯಂತ ವ್ಯವಸ್ಥಿತ ಯೋಜನೆ ರೂಪಿಸಿಕೊಂಡು, ವಿವಿಧ ರೀತಿಯಲ್ಲಿ ಸ್ವೀಪ್ ಚಟುವಟಿಕೆಗಳನ್ನು ನಡೆಸಲು ಕ್ರಮ ಕೈಗೊಳ್ಳಬೇಕು. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜೊತೆ ಮಾತುಕತೆ ನಡೆಸಿ ಮತದಾನದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರೇರೇಪಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ ಮಾತನಾಡಿ, ‘ಮರಣ ಹೊಂದಿದ ವ್ಯಕ್ತಿಯ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಲು ಕ್ರಮ ಕೈಗೊಳ್ಳಬೇಕು. ಮರಣ ಹೊಂದಿದ ವ್ಯಕ್ತಿಯ ಕುಟುಂಬದವರಿಂದ ಮರಣ ಪ್ರಮಾಣ ಪತ್ರ ಸಂಗ್ರಹಿಸಿಕೊಂಡು, ನಮೂನೆ 7ನೀಡಿ ಪಟ್ಟಿಯಿಂದ ತೆಗೆಯಬೇಕು’ ಎಂದು ಹೇಳಿದರು.

17 ಕೆ.ಜಿ ಮಾದಕ ವಸ್ತು ವಶ

ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಸಾಗಿಸಲಾಗುತ್ತಿದ್ದ 17 ಕೆ.ಜಿ ಮಾದಕ ವಸ್ತುಗಳನ್ನು ಚುನಾವಣಾಧಿಕಾರಿಗಳು ಸೋಮವಾರ ವಶಪಡಿಸಿಕೊಂಡಿದ್ದಾರೆ. 216 ಲೀಟರ್ ಮದ್ಯ ಹಾಗೂ ಒಂದು ವಾಹನ ಸೇರಿದಂತೆ ಒಟ್ಟಾರೆ ₹3.69 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. 29 ಎಫ್‌ಐಆರ್ ದಾಖಲಿಸಲಾಗಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ವಿಶೇಷ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಜನಶಕ್ತಿ ಮುಂದೆ ಬೇರೇನೂ ನಡೆಯದು’

ಡಿ.ಕೆ. ಸಹೋದರರ ತವರಿನಲ್ಲಿ ಬಿಜೆಪಿ– ಜೆಡಿಎಸ್ ಕಾರ್ಯಕರ್ತರ ಸಭೆ

ಪ್ರಜಾವಾಣಿ ವಾರ್ತೆ

ಕನಕಪುರ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ತವರು ಕ್ಷೇತ್ರವಾದ ಕನಕಪುರ ಮತ್ತು ಪಕ್ಕದ ಹಾರೋಹಳ್ಳಿಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಸೋಮವಾರ ಶಕ್ತಿ ಪ್ರದರ್ಶಿಸಿತು.

ಪಟ್ಟಣದಲ್ಲಿ ನಡೆದ ಎರಡೂ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮೈತ್ರಿಕೂಟದ ಅಭ್ಯರ್ಥಿಯಾಗಿ ಬಿಜೆಪಿಯಿಂದ ಕಣಕ್ಕಿಳಿದಿರುವ ಡಾ. ಸಿ.ಎನ್. ಮಂಜುನಾಥ್, ‘ಜನಶಕ್ತಿಯ ಮುಂದೆ ಯಾವ ಶಕ್ತಿಯು ನಡೆಯುವುದಿಲ್ಲ. ಕ್ಷೇತ್ರದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ಹೃದಯಗಳು ಒಂದಾಗಿವೆ. ಕನಕಪುರದಲ್ಲಿ ಒಂದೊಂದು ಮತವೂ ಸ್ವಾಭಿಮಾನದ ಮತವಾಗಿವೆ. ಅಂಗಾಂಗ ದಾನ ಮಾಡುವುದರಿಂದ ಬೇರೊಂದು ಮನೆಯ ದೀಪ ಬೆಳಗುತ್ತದೆ. ನೀವು ಹಾಕುವ ಮತದಿಂದ ಸಮಾಜದ ದೀಪ ಪ್ರಜ್ವಲಿಸುತ್ತದೆ’ ಎಂದರು.

‘ಬಿಜೆಪಿಗೆ ಮತ ನೀಡಿದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಂದಾದೀಪವಾಗುತ್ತದೆ. ಕ್ಷೇತ್ರದಲ್ಲಿ ಚುನಾವಣೆಯು ಪಾರದರ್ಶಕವಾಗಿ ಮತ್ತು ನಿರ್ಭೀತಿಯಿಂದ ನಡೆಯಬೇಕು. ಟೀಕೆಗಳು ಸಾಯುತ್ತವೆ, ಸಾಧನೆಗಳು ಉಳಿಯುತ್ತವೆ. ಕಾರ್ಯಕರ್ತರು ಟೀಕೆಗೆ ಕಿವಿಗೊಡದೆ ಗೆಲುವಿಗಾಗಿ ಶ್ರಮಿಸಬೇಕು. ಇಲ್ಲಿನ ಜವಾಬ್ದಾರಿಯನ್ನು ಸೈನಿಕ ಎನಿಸಿಕೊಂಡಿರುವ ಯೋಗೇಶ್ವರ್ ವಹಿಸಿಕೊಂಡಿದ್ದಾರೆ’ ಎಂದು ತಿಳಿಸಿದರು.

ಕನಕಪುರದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಬಿಜೆಪಿ–ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು

‘ಸಹೋದರರದ್ದು ರಕ್ತ ಚರಿತ್ರೆ’: ಸಿ.ಪಿ. ಯೋಗೇಶ್ವರ್

‘ರಾಜಕಾರಣದಲ್ಲಿ ಡಿ.ಕೆ. ಸಹೋದರರದ್ದು ರಕ್ತ ಚರಿತ್ರೆ. ದಮನಕಾರಿ ನೀತಿ ಮತ್ತು ದಬ್ಬಾಳಿಕೆ ಮಾಡಿಕೊಂಡೇ ಬಂದಿದ್ದಾರೆ. ಜನರನ್ನು ಪ್ರೀತಿಯಿಂದ ಗೆಲ್ಲುವ ಬದಲು ದೌರ್ಜನ್ಯದ ಮೂಲಕ ನಿಯಂತ್ರಿಸುತ್ತಿದ್ದಾರೆ. ಹಾಗಾಗಿ, ಜನರೇ ಈ ಚುನಾವಣೆಯು ರಾಮ–ರಾವಣ ಮತ್ತು ಧರ್ಮ–ಅಧರ್ಮದ ನಡುವಣ ಹೋರಾಟ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ರಾಮನ ಪಕ್ಷದ ಅಭ್ಯರ್ಥಿಯೇ ಇಲ್ಲಿ ಗೆಲ್ಲುತ್ತಾರೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಇಂದು

‘ದಿವ್ಯದರ್ಶನ’ ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ಬಿ.ವಿ. ವೇಣುಗೋಪಾಲ್, ಆಯೋಜನೆ: ರಂಗಸೇತುವೆ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

ರವಿ ಹಂಜ್ ಅವರ ‘ರ ಠ ಈ ಕ’ ಇಂಗ್ಲಿಷ್ ಪುಸ್ತಕ ಬಿಡುಗಡೆ: ಎಂ.ವಿ. ರೇವಣಸಿದ್ಧಯ್ಯ, ಅಧ್ಯಕ್ಷತೆ: ಡಾ. ಗೌತಮ್ ಹಂಜಿ, ಅತಿಥಿಗಳು: ಮಲ್ಲೇಶಪ್ಪ, ತೇಜೇಶ್ ಕುಮಾರ್, ಚಂದ್ರಕಾಂತ್ ವಡ್ಡು, ಉಪಸ್ಥಿತಿ: ಡಿ.ಎನ್. ಲೋಕಪ್ಪ, ಸ್ಥಳ: ಮಲ್ಲೇಶ್ವರ ಕ್ಲಬ್, ಸಂಜೆ 6

‘ಮೇಕಿಂಗ್ ರೈಟ್ಸ್ ರಿಯಲ್’ ಲೊಕೇಟಿಂಗ್ ಜೆಂಡರ್ ಇಕ್ವಾಲಿಟಿ ಇನ್ ದಿ ಪ್ರೈವೇಟ್ ಸ್ಫಿಯರ್ : ಭಾಷಣಕಾರರು: ಸರಸು ಎಸ್ತರ್ ಥಾಮಸ್, ಸಿಂಥಿಯಾ ಸ್ಟೀಫನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಶಕ್ತಿ ಕರುಮಾರಿಯಮ್ಮ 58ನೇ ಜಾತ್ರಾ ಮಹೋತ್ಸವ: ವಿದ್ಯಾನಗರ ಕ್ರಾಸ್ ಗಂಗೆಯಿಂದ ಶಕ್ತಿಕರಗವನ್ನು ಕರೆತರುವುದು, ಸ್ಥಳ: ಶಕ್ತಿ ಕರುಮಾರಿಯಮ್ಮ ದೇವಸ್ಥಾನ ಸಮಿತಿ, ವಿದ್ಯಾನಗರ ಕ್ರಾಸ್, ಕಾಡಿಗಾನಹಳ್ಳಿ, ಜಾಲ ಹೋಬಳಿ, ಯಲಹಂಕ, ಸಂಜೆ 7.15

ತಕ್ಕ ಉತ್ತರ ನೀಡುವೆವು: ವಚನಾನಂದ ಸ್ವಾಮೀಜಿ

‘ಟಿಕೆಟ್ ಹಂಚಿಕೆಯಲ್ಲಿ ಅನ್ಯಾಯ’

ಪ್ರಜಾವಾಣಿ ವಾರ್ತೆ

ವಚನಾನಂದ ಸ್ವಾಮೀಜಿ

ಹರಿಹರ: ‘ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಪಂಚಮಸಾಲಿ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಹರಿಹರ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

‘ಸಮಾಜಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು ಇನ್ನೂ ಅವಕಾಶ ಇದೆ. ಈ ನಿಟ್ಟಿನಲ್ಲಿ ಉಭಯ ಪಕ್ಷಗಳೂ ಮುಂದಾಗಬೇಕು. ಇಲ್ಲದೇ ಹೋದರೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತೇವೆ. ಈ ಸಂಬಂಧ ಏಪ್ರಿಲ್ ಮೊದಲ ವಾರದಲ್ಲಿ ಪ್ರಮುಖರ ಸಭೆ ನಡೆಸಿ ಚರ್ಚಿಸುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

‘ಕಾಂಗ್ರೆಸ್ ಹಾಗೂ ಬಿಜೆಪಿ ವರಿಷ್ಠರನ್ನು ಭೇಟಿಯಾಗಿ ಟಿಕೆಟ್ ಹಂಚಿಕೆಯಲ್ಲಿ ಅನ್ಯಾಯ ಮಾಡದಂತೆ ವಿನಂತಿಸಿದ್ದೆವು. ಆದರೂ ನಮ್ಮ ಕೋರಿಕೆಗೆ ಮನ್ನಣೆ ನೀಡಿಲ್ಲ. ರಾಜಕೀಯವಾಗಿ ಸಮುದಾಯವನ್ನು ತುಳಿಯುವ ಹುನ್ನಾರ ನಡೆಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

‘ನಾವು ಬಿಜೆಪಿಗೆ ಮತ ಹಾಕುತ್ತೇವೆ ಎಂಬ ಭ್ರಮೆ ಬೇಡ. ಸಮುದಾಯವನ್ನು ವ್ಯವಸ್ಥಿತವಾಗಿ ಹತ್ತಿಕ್ಕುತ್ತಿರುವುದನ್ನು ನೋಡಿಯೂ ಸುಮ್ಮನಿರುವುದಿಲ್ಲ. ದಾವಣಗೆರೆ, ಹಾವೇರಿ, ಧಾರವಾಡ, ಕೊಪ್ಪಳ, ವಿಜಯಪುರ, ಕಲಬುರಗಿ, ಉತ್ತರ ಕನ್ನಡ, ಚಿಕ್ಕೋಡಿ ಸೇರಿ 15 ಕ್ಷೇತ್ರಗಳಲ್ಲಿ ಪಂಚಮಸಾಲಿ ಸಮುದಾಯದ ಮತದಾರರೇ ನಿರ್ಣಾಯಕರಾಗಿದ್ದಾರೆ’ ಎಂದರು.

‘ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸಮುದಾಯದ ಇಬ್ಬರಿಗೆ ಟಿಕೆಟ್ ನೀಡಿದೆ. ಬಿಜೆಪಿ ಒಬ್ಬನ್ನಷ್ಟೇ ಕಣಕ್ಕಿಳಿಸಿದೆ. ಬೆಳಗಾವಿಯಲ್ಲಿ ಬಹುಸಂಖ್ಯಾತರಿರುವ ನಮ್ಮ ಸಮುದಾಯವನ್ನು ಬಿಟ್ಟು ಬೇರೆ ಸಮುದಾಯದವರಿಗೆ ಬಿಜೆಪಿ ಮನ್ನಣೆ ನೀಡಿದೆ. ಟಿಕೆಟ್ ಕೊಡದಿದ್ದರೂ ಸಮುದಾಯದವರು ನಮಗೇ ಮತ ನೀಡುತ್ತಾರೆಂಬ ಭ್ರಮೆ ಬೇಡ’ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸೋಮನಗೌಡ ಪಾಟೀಲ್ ಕಿಡಿಕಾರಿದರು.

‘ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಎರಡೂ ಪಕ್ಷದವರೂ ಸರಿದೂಗಿಸಬೇಕು. ಮುಂಚಿನ ಹಾಗೆ ನಾವು ಸುಮ್ಮನಿರುವುದಿಲ್ಲ’ ಎಂದು ಗುರುಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಹೇಳಿದರು.

‘ಮಣ್ಣಿನ ಫಲವತ್ತತೆಗೆ ನೈಸರ್ಗಿಕ ಕೃಷಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೀಟನಾಶಕ ಹಾಗೂ ರಸಗೊಬ್ಬರದ ಅತಿಯಾದ ಬಳಕೆಯಿಂದ ಮಣ್ಣಿನ ಫಲವತ್ತತೆ ಕುಂಠಿತಗೊಂಡಿದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಿಬ್ಬಂದಿ ತರಬೇತಿ ಘಟಕ ಹಾಗೂ ಹೈದರಾಬಾದ್‌ನ ರಾಷ್ಟ್ರೀಯ ಕೃಷಿ ನಿರ್ವಹಣಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿರುವ ‘ನೈಸರ್ಗಿಕ ಕೃಷಿ’ ಕುರಿತು ಐದು ದಿನಗಳ ತರಬೇತಿ ಉದ್ಘಾಟಿಸಿದ ಅವರು ಮಾತನಾಡಿದರು.

‘ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಶೇ 0.5ರಷ್ಟು ಇರಬೇಕು. ಆದರೆ, ಈಗ ಶೇ 0.35ರಷ್ಟಿದೆ. ಇಂತಹ ಮಣ್ಣಿನಲ್ಲಿ ಬೆಳೆದ ಕೃಷಿ ಉತ್ಪನ್ನಗಳಲ್ಲಿ ಪೋಷಕಾಂಶಗಳು ಕಡಿಮೆ ಇರುತ್ತವೆ’ ಎಂದು ತಿಳಿಸಿದರು.

‘ಶಿಫಾರಸು ಪ್ರಮಾಣದ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆ ಹಾಗೂ ಸಾಂಪ್ರದಾಯಿಕ ಕೃಷಿಗೆ ಒತ್ತು ನೀಡಿದಾಗ ಮಾತ್ರ ವಿಷಮುಕ್ತ ಆಹಾರ ಉತ್ಪಾದಿಸಲು ಸಾಧ್ಯ. ಈ ನಿಟ್ಟಿನಲ್ಲಿ ಸಾವಯವ ಹಾಗೂ ನೈಸರ್ಗಿಕ ಕೃಷಿಯನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಸತ್ವಯುತ ಆಹಾರ ಉತ್ಪಾದಿಸಬಹುದು’ ಎಂದರು.

ವಿಸ್ತರಣಾ ನಿರ್ದೇಶಕ ಮಧುಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಹೈದರಾಬಾದ್‌ನ ರಾಷ್ಟ್ರೀಯ ಕೃಷಿ ನಿರ್ವಹಣಾ ಸಂಸ್ಥೆಯ ಮಹದೇವಸ್ವಾಮಿ, ಬೆಂಗಳೂರು ವಿ.ವಿ. ತರಬೇತಿ ಘಟ ಕದ ಮುಖ್ಯಸ್ಥ ಕೆ. ಶಿವರಾಮು ಪಾಲ್ಗೊಂಡಿದ್ದರು.

ಕೆ.ಆರ್.ಪುರದಲ್ಲಿ ಮಾರುತಿ ಬಲಿಜ ಸಂಘದಿಂದ ಹಮ್ಮಿಕೊಂಡಿದ್ದ ಯೋಗಿ ನಾರೇಯಣ ಕೈವಾರ ತಾತಯ್ಯನವರ ಜಯಂತ್ಯುತ್ಸವದಲ್ಲಿ ತಾತಯ್ಯ ವಿಗ್ರಹವನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಸಮಾಜದ ಮುಖಂಡರಾದ ಯಲ್ಲಪ್ಪ, ಎನ್. ಶಿವಪ್ರಸಾದ್, ಅಮರಜ್ಯೋತಿ ಮೋಹನ್, ಎಚ್.ಎ.ಎಲ್. ರಮೇಶ್, ಉಮಾಶಂಕರ್, ಮಂಜುಳಾದೇವಿ, ವೇಣು, ಚಲಪತಿ ಭಾಗವಹಿಸಿದ್ದರು

ಸಪ್ತಋಷಿ ಆವಾಹನ ಪೂಜೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆವಲಗುರ್ಕಿಯ ಈಶಾ ಯೋಗ ಕೇಂದ್ರದಲ್ಲಿ ಸೋಮವಾರ ಕಾಶಿ ವಿಶ್ವನಾಥ ದೇಗುಲದ ಏಳು ಅರ್ಚಕರು ಸಪ್ತಋಷಿ ಆವಾಹನ ಪೂಜಾ ಕಾರ್ಯಕ್ರಮ ನಡೆಸಿದರು.

ಸಂಜೆ 6ಕ್ಕೆ ಆರಂಭವಾದ ಪೂಜಾ ಕಾರ್ಯಕ್ರಮ 8.15ಕ್ಕೆ ಕೊನೆಗೊಂಡಿತು.ಅಪಾರ ಸಂಖ್ಯೆಯ ಭಕ್ತರು ಈ ಪೂಜೆಯಲ್ಲಿ ಭಾಗಿಯಾಗಿದ್ದರು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ; ಶಾಸಕ ವಿಶ್ವನಾಥ್ ಬೆಂಬಲಿಗರ ಆಕ್ರೋಶ

ಸುಧಾಕರ್‌ಗೆ ‘ಗೋ ಬ್ಯಾಕ್’ ಬಿಸಿ

ಪ್ರಜಾವಾಣಿ ವಾರ್ತೆ

ಯಲಹಂಕದ ಕೆಂಪೇಗೌಡ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಶಾಸಕ ವಿಶ್ವನಾಥ್ ಬೆಂಬಲಿಗರು, ‘ಕೋವಿಡ್ ವೇಳೆ ಡಾ. ಸುಧಾಕರ್ ಭ್ರಷ್ಟಾಚಾರ ಮಾಡಿದ್ದಾರೆ’ ಎಂದು ಆರೋಪಿಸಿ ರೋಗಿಗಳ ಶವಸಂಸ್ಕಾರದ ಅಣುಕು ಪ್ರದರ್ಶಿಸಿದರು

ಯಲಹಂಕ: ಡಾ. ಕೆ. ಸುಧಾಕರ್ ಅವರಿಗೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡಿರುವ ಕ್ರಮವನ್ನು ವಿರೋಧಿಸಿ ‘ಗೋ ಬ್ಯಾಕ್ ಸುಧಾಕರ್’ ಅಭಿಯಾನ ಆರಂಭಿಸಿರುವ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಬೆಂಬಲಿಗರು, ಕೆಂಪೇಗೌಡ ವೃತ್ತದಲ್ಲಿ ರಸ್ತೆ ಸಂಚಾರ ತಡೆದು ಸೋಮವಾರ ಪ್ರತಿಭಟನೆ ನಡೆಸಿದರು.

ಕೆಂಪೇಗೌಡ ಪ್ರತಿಮೆಯ ಬಳಿ ಜಮಾಯಿಸಿದ್ದ ಕಾರ್ಯಕರ್ತರು, ಸುಧಾಕರ್ ವಿರುದ್ಧ ಘೋಷಣೆ ಕೂಗಿದರು. ಟೈರ್ ಸುಟ್ಟು ಆಕ್ರೋಶ ವ್ಯಕ್ತ-ಪಡಿಸಿದರು. ‘ಕೋವಿಡ್ ಸಂದರ್ಭದಲ್ಲಿ ಸಾಮಗ್ರಿಗಳ ಖರೀದಿಯಲ್ಲಿ ಸುಧಾಕರ್ ಭ್ರಷ್ಟಾಚಾರ ಮಾಡಿದ್ದಾರೆ’ ಎಂದು ಆರೋಪಿಸಿ ರೋಗಿಗಳ ಶವ ಸಂಸ್ಕಾರದ ಅಣುಕು ಪ್ರದರ್ಶಿಸಿದರು.

ಬಿಜೆಪಿ ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿ ಸತೀಶ್ ಕಡತನಮಲೆ, ‘ಮುಖಂಡರು ಹಾಗೂ ಕಾರ್ಯಕರ್ತರ ಕಷ್ಟ ಕೇಳದ ಮತ್ತು ಮತದಾರರಿಗೆ ಕಿಂಚಿತ್ತೂ ಸ್ಪಂದಿಸದ ಸುಧಾಕರ್‌ಗೆ ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡಿರುವುದು ಸರಿಯಲ್ಲ. ಜನಸಾಮಾನ್ಯರ ಬಳಿಗೆ ತೆರಳಿ ಮತ ಕೇಳಲು ಮುಜುಗರ ಉಂಟಾಗುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಇಂತಹ ವ್ಯಕ್ತಿಗೆ ಟಿಕೆಟ್ ನೀಡಿರುವುದರಿಂದ ಕಾರ್ಯಕರ್ತರು ಹಾಗೂ ಮುಖಂಡರು ತೀವ್ರ ಅಸಮಾಧಾನಗೊಂಡಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ದಿಬ್ಬೂರು ಜಯಣ್ಣ ಮಾತನಾಡಿ, ‘ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಸುಧಾಕರ್ ಕೊಡುಗೆ ಏನು ಇಲ್ಲ. ಕೋವಿಡ್ ಸಂದರ್ಭದಲ್ಲಿ ಭ್ರಷ್ಟಾಚಾರ-ದಲ್ಲಿ ಮುಳುಗಿ ಬಿಜೆಪಿ ಪಕ್ಷಕ್ಕೆ ಮುಜುಗರ ಉಂಟುಮಾಡಿದ್ದರು. ಇದರ ಪರಿಣಾಮ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹೀನಾಯ ಸೋಲಾಯಿತು’ ಎಂದು ಆರೋಪಿಸಿದರು.

ಬಿಜೆಪಿ ಮುಖಂಡ ಅದ್ದೆ ವಿಶ್ವನಾಥಪುರ ಮಂಜುನಾಥರೆಡ್ಡಿ ಮಾತನಾಡಿ, ‘ಯುವ ಮುಖಂಡ ಅಲೋಕ್ ವಿಶ್ವನಾಥ್ ಅವರಿಗೆ ಟಿಕೆಟ್ ಸಿಗುವುದಾಗಿ ಕ್ಷೇತ್ರದ ಜನರು ವಿಶ್ವಾಸ-ವಿಟ್ಟಿದ್ದರು. ಈಗ ಸುಧಾಕರ್ ಅವರಿಗೆ ಟಿಕೆಟ್ ನೀಡಿರುವುದರಿಂದ ಜನರಿಗೆ ನಿರಾಸೆಯಾಗಿದೆ. ಜನರ ಕೂಗು ಬಿಜೆಪಿ ಹೈಕಮಾಂಡ್‌ಗೆ ತಲುಪುವವರೆಗೂ ‘ಗೋ ಬ್ಯಾಕ್ ಸುಧಾಕರ್’ ಅಭಿಯಾನ ನಡೆಸುತ್ತೇವೆ’ ಎಂದರು.

ಬಿಜೆಪಿ ಮುಖಂಡರಾದ ಎಸ್.ಎನ್. ರಾಜಣ್ಣ, ಎಂ. ಸತೀಶ್, ಸಿ. ವೆಂಕಟೇಶ್, ಎಸ್.ಜಿ. ನರಸಿಂಹಮೂರ್ತಿ, ಎಸ್.ಜಿ. ಪ್ರಶಾಂತ್ ರೆಡ್ಡಿ, ಡಾ. ಶಶಿಕುಮಾರ್, ಎ.ಸಿ. ಮುನಿಕೃಷ್ಣಪ್ಪ, ಕೆಂಪೇಗೌಡ, ಟಿ. ಮುನಿರೆಡ್ಡಿ, ಎಚ್.ಸಿ. ರಾಜೇಶ್, ಪಿ.ಕೆ. ರಾಜಣ್ಣ, ಶಿವಕೋಟೆ ಅಶೋಕ್, ಸಾದೇನಹಳ್ಳಿ ಪ್ರಕಾಶ್‌ಗೌಡ ಪ್ರತಿಭಟನೆ-ಯಲ್ಲಿದ್ದರು.

ಸಂಚಾರ ದಟ್ಟಣೆ: ಪ್ರತಿಭಟನೆಯಿಂ-ದಾಗಿ ಕೆಂಪೇಗೌಡ ವೃತ್ತ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು. ಕಿ.ಮೀ.ಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದರು.

ಅಕ್ಕನ ಕೊಲೆ: ತಂಗಿ ಸ್ನೇಹಿತ ಬಂಧನ

ಮೊಬೈಲ್‌ನಲ್ಲಿ ಹೆಚ್ಚು ಮಾತನಾಡುತ್ತಿದ್ದಕ್ಕೆ ಆಕ್ಷೇಪ: ಸಹೋದರಿಯರ ಜಗಳ

ಪ್ರಜಾವಾಣಿ ವಾರ್ತೆ

ರಾಜೇಶ್ ಕುಮಾರ್

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಗುಡಿಯಾ ದೇವಿ (42) ಎಂಬುವವರ ಕೊಲೆ ನಡೆದಿದ್ದು, ಕೃತ್ಯ ಎಸಗಿದ್ದ ಆರೋಪದಡಿ ತಂಗಿಯ ಸ್ನೇಹಿತ ರಾಜೇಶ್‌ಕುಮಾರ್‌ನನ್ನು (29) ಪೊಲೀಸರು ಬಂಧಿಸಿದ್ದಾರೆ.

‘ಬಿಹಾರದ ಗುಡಿಯಾ ದೇವಿ ಹಾಗೂ ತಂಗಿ ಗೀತಾಕುಮಾರಿ ಅವರು ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಇಬ್ಬರೂ ಕೆಲಸ ಮಾಡುತ್ತಿದ್ದರು. ಸಿಂಗಸಂದ್ರದ ಮನೆಯಲ್ಲಿ ನೆಲೆಸಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿ ರಾಜೇಶ್‌ಕುಮಾರ್ ಸಹ ಬಿಹಾರದವನು. ನಗರದಲ್ಲಿ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದ. ಗೀತಾಕುಮಾರಿ ಸ್ನೇಹಿತನಾಗಿದ್ದ ಈತ, ಆಗಾಗ ಮನೆಗೂ ಹೋಗಿ ಬರುತ್ತಿದ್ದ’ ಎಂದು ತಿಳಿಸಿದರು.

ಮೊಬೈಲ್‌ನಲ್ಲಿ ಹೆಚ್ಚು ಮಾತು: ‘ಗುಡಿಯಾ ದೇವಿ ಅವರು ನಿತ್ಯವೂ ಮೊಬೈಲ್‌ನಲ್ಲಿ ಹೆಚ್ಚು ಮಾತನಾಡುತ್ತಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದ ಗೀತಾಕುಮಾರಿ, ಮಾತನಾಡದಂತೆ ತಾಕೀತು ಮಾಡುತ್ತಿದ್ದರು. ಇದೇ ವಿಚಾರವಾಗಿ ಸಹೋದರಿಯರ ನಡುವೆ ನಿತ್ಯವೂ ಜಗಳ ಆಗುತ್ತಿತ್ತು’ ಎಂದು ಪೊಲೀಸರು ಹೇಳಿದರು.

‘ಗುಡಿಯಾ ದೇವಿ ಹಾಗೂ ಗೀತಾಕುಮಾರಿ ಭಾನುವಾರ ಮನೆ-ಯಲ್ಲಿದ್ದರು. ಪಾನಮತ್ತನಾಗಿದ್ದ ರಾಜೇಶ್‌ಕುಮಾರ್ ಸಹ ಮನೆಗೆ ಹೋಗಿದ್ದ. ಮೂವರು ರಾತ್ರಿ ಒಟ್ಟಿಗೆ ಊಟ ಮಾಡಿದ್ದರು. ಬಳಿಕ, ಸಹೋದರಿಯರ ನಡುವೆ ಜಗಳ ಶುರುವಾಗಿತ್ತು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು.’

‘ಜಗಳದಲ್ಲಿ ಮಧ್ಯಪ್ರವೇಶಿ-ಸಿದ್ದ ರಾಜೇಶ್‌ಕುಮಾರ್, ಜಗಳ ಬಿಡಿಸಲು ಮುಂದಾಗಿದ್ದ. ಇದೇ ಸಂದರ್ಭದಲ್ಲಿ ಗುಡಿಯಾ ದೇವಿ ಮೇಲೆ ಹಲ್ಲೆ ಮಾಡಿ ಕತ್ತು ಹಿಸುಕಿದ್ದ. ಅಸ್ವಸ್ಥಗೊಂಡು ಗುಡಿಯಾದೇವಿ ಕುಸಿದು ಬಿದ್ದಿದ್ದರು. ಗೀತಾಕುಮಾರಿ ಹಾಗೂ ರಾಜೇಶ್‌ಕುಮಾರ್ ಇಬ್ಬರೂ ಸೇರಿಕೊಂಡು ಆಸ್ಪತ್ರೆಗೆ ಕರೆದೊಯ್ದರು. ತಪಾಸಣೆ ನಡೆಸಿದ ವೈದ್ಯರು, ಗುಡಿಯಾದೇವಿ ಮೃತಪಟ್ಟಿರುವುದಾಗಿ ಹೇಳಿದರು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಜಗಳ ಬಿಡಿಸುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಕತ್ತು ಹಿಡಿದಿದ್ದೆ. ಕೊಲ್ಲುವ ಉದ್ದೇಶ ನನಗಿರಲಿಲ್ಲ’ ಎಂಬುದಾಗಿ ರಾಜೇಶ್‌ಕುಮಾರ್ ಹೇಳುತ್ತಿದ್ದಾನೆ. ಪ್ರಕರಣದಲ್ಲಿ ಗೀತಾಕುಮಾರಿ ಅವರದ್ದು ಯಾವುದೇ ಪಾತ್ರವಿಲ್ಲ ವೆಂಬುದು ಸದ್ಯಕ್ಕೆ ಗೊತ್ತಾಗಿದೆ. ಅವರಿಂದಲೇ ಹೇಳಿಕೆ ಪಡೆದು ರಾಜೇಶ್‌ಕುಮಾರ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಚಾಲಕನ ಮನೆಗೆ ನುಗ್ಗಿ ಹಲ್ಲೆ: 3 ಜನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ನಿಲುಗಡೆ ವಿಚಾರವಾಗಿ ಜಗಳ ತೆಗೆದು ಚಾಲಕರೊಬ್ಬರ ಮನೆಗೆ ನುಗ್ಗಿ ಹಲ್ಲೆ ಮಾಡಿದ್ದ ಮೂವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಪ್ರಗತಿಪುರದ ಸೈಯದ್ ಮೊಹಮ್ಮದ್ ತಾಹಾ, ಇವರ ತಂದೆ ಕರೀಂ ಹಾಗೂ ಸ್ನೇಹಿತ ಆಫ್ರೀದ್ ಪಾಷಾ ಬಂಧಿತರು. ಆಟೊ ಚಾಲಕ ಸುಕುಮಾರ್ ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಎಲ್ಲರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳ ಜೊತೆಯಲ್ಲಿ ಮತ್ತಷ್ಟು ಮಂದಿ ಆಟೊ ಚಾಲಕನ ಮನೆಗೆ ನುಗ್ಗಿ ಗಲಾಟೆ ಮಾಡಿರುವ ಆರೋಪವಿದೆ. ಸ್ಥಳೀಯ ವ್ಯಕ್ತಿಯೊಬ್ಬ-ರು ತಮ್ಮ ಮೊಬೈಲ್‌ನಲ್ಲಿ ಘಟನೆಯ ವಿಡಿಯೊ ಚಿತ್ರೀಕರಿಸಿದ್ದಾರೆ. ಅದೇ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ವಿಡಿಯೊ ಆಧರಿಸಿ ಎಲ್ಲರ ಗುರುತು ಪತ್ತೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಹಲವು ದಿನಗಳ ಜಗಳ: ‘ದೂರುದಾರ ಸುಕುಮಾರ್ ಅವರ ಮನೆಯ ಪಕ್ಕದಲ್ಲಿ, ಆರೋಪಿ ಸೈಯದ್ ಮೊಹಮ್ಮದ್ ತಾಹಾ ಮಾವ ವಾಸವಿದ್ದಾರೆ. ಆಟೊ ಚಾಲಕನಾಗಿದ್ದ ಮೊಹಮ್ಮದ್ ತಾಹಾ, ನಿತ್ಯವೂ ರಾತ್ರಿ ಮಾವನ ಮನೆ ಎದುರು ಆಟೊ ನಿಲ್ಲಿಸುತ್ತಿದ್ದ. ದೂರುದಾರ ಸುಕುಮಾರ್ ಸಹ ತಮ್ಮ ಮನೆ ಎದುರು ಆಟೊ ನಿಲ್ಲಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಕೋಮು ಗಲಭೆಯೆಂದು ಸುಳ್ಳು ಸುದ್ದಿ’

‘ಆಟೊ ನಿಲುಗಡೆ ವಿಚಾರವಾಗಿ ಅಕ್ಕ-ಪಕ್ಕದ ಮನೆಯವರ ನಡುವೆ ಗಲಾಟೆ ಆಗಿದೆ. ಆದರೆ, ಕೆಲವರು ಇದನ್ನು ಕೋಮು ಗಲಭೆ ಎಂಬುದಾಗಿ ಸುಳ್ಳು ಸುದ್ದಿ ಹಬ್ಬಿಸಿದ್ದರು. ಅಂಥ ಯಾವುದೇ ಸಂಗತಿ ತನಿಖೆಯಲ್ಲಿ ಕಂಡುಬಂದಿಲ್ಲ’ ಎಂದು ದಕ್ಷಿಣ ವಿಭಾಗದ ಡಿಸಿಪಿ (ಪ್ರಭಾರ) ಶಿವಪ್ರಕಾಶ್ ದೇವರಾಜ್ ತಿಳಿಸಿದರು.

‘ಆಟೊ ನಿಲ್ಲಿಸುವ ವಿಚಾರವಾಗಿ ಭಾನುವಾರ ರಾತ್ರಿ ಮೊಹಮ್ಮದ್ ತಾಹಾ ಹಾಗೂ ಸುಕುಮಾರ್ ನಡುವೆ ಜಗಳ ಶುರುವಾಗಿತ್ತು. ಸ್ಥಳದಿಂದ ಹೊರಟು ಹೋಗಿದ್ದ ಮೊಹಮ್ಮದ್ ತಾಹಾ, ತಂದೆ ಹಾಗೂ ಸ್ನೇಹಿತರನ್ನು ಕರೆತಂದು ಸುಕುಮಾರ್ ಅವರ ಮನೆಗೆ ನುಗ್ಗಿದ್ದ. ಸುಕುಮಾರ್ ಮೇಲೆ ಹಲ್ಲೆ ಮಾಡಿದ್ದ. ಪತ್ನಿ ಹಾಗೂ ಮಕ್ಕಳ ಮೇಲೂ ಹಲ್ಲೆಗೆ ಯತ್ನಿಸಿ ಜೀವ ಬೆದರಿಕೆಯೊಡ್ಡಿದ್ದ. ಮೊಬೈಲ್ ಹಾಗೂ ಚಿನ್ನದ ಸರ ಕಿತ್ತುಕೊಂಡು ಹೋಗಿದ್ದ ಆರೋಪವೂ ಇದೆ’ ಎಂದು ಪೊಲೀಸರು ತಿಳಿಸಿದರು.

‘ಮಾಹಿತಿ ಬರುತ್ತಿದ್ದಂತೆ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಗಲಾಟೆ ಹೆಚ್ಚಾಗಿ-ದ್ದರಿಂದ, ಮನೆ ಎದುರು ಜನರು ಸೇರಿದ್ದರು. ಆರೋಪಿಗಳು ಪರಾರಿಯಾ-ಗಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಹೇಳಿದರು.

ಪುಸ್ತಕ ಬಿಡುಗಡೆ...

ಬುದ್ಧ ಬಸವ ಗಾಂಧಿ ಸಾಂಸ್ಕೃತಿ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿ.ದೇ. ಸೌಮ್ಯ ಅವರು ಬರೆದಿರುವ ‘ಕನ್ನಡದ ಕನ್ನಡಿಯಲ್ಲಿ’ ಹಾಗೂ ‘ಮಧ್ಯಕಾಲೀನ ಭಾರತದ ಸಂತ ಮಹಿಳೆಯರು’ ಪುಸ್ತಕಗಳನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅವರು ಬಿಡುಗಡೆ ಮಾಡಿದರು. ಅಧ್ಯಾಪಕಿಯರಾದ ಎಸ್. ಪೂರ್ಣಿಮಾ, ಜಯಶ್ರೀ ರಾಜು, ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಸರ್ವೇಗೆ ಲಂಚ: ₹80 ಸಾವಿರ ವಶ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಜಮೀನಿನ ಸರ್ವೆ ನಕ್ಷೆ ಮಾಡಿಕೊಡಲು ಹಣಕ್ಕೆ ಬೇಡಿಕೆಯಿಟ್ಟ ಆರೋಪದಡಿ ಸೋಮವಾರ ಮಧ್ಯಾಹ್ನ ತಾಲ್ಲೂಕು ಕಚೇರಿಯಲ್ಲಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. ಈ ವೇಳೆ ರೈತರೊಬ್ಬರಿಂದ ಹಣ ಪಡೆಯುತ್ತಿದ್ದ ಮಧ್ಯವರ್ತಿ ಸತೀಶ್ ಎಂಬಾತನನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದು ₹80 ಸಾವಿರ ಹಣವನ್ನು ವಶಕ್ಕೆ ಪಡೆದಿದ್ದಾರೆ.

ದೊಡ್ಡಬೆಳವಂಗಲ ಹೋಬಳಿಯ ಗುಂಡ್ಲಹಳ್ಳಿ ಬಳಿಯ ಜಮೀನಿನ ಪೋಡಿ ಮಾಡದೆ ಅಧಿಕಾರಿಗಳು ಮೂರು ವರ್ಷಗಳಿಂದ ರೈತರನ್ನು ಅಲೆದಾಡಿ-ಸುತ್ತಿದ್ದರು. ಅಂತಿಮವಾಗಿ ಸರ್ವೆಯರ್ ಒಬ್ಬರು ₹3ಲಕ್ಷಕ್ಕೆ ಬೇಡಿಕೆಯಿಟ್ಟಿದ್ದರು.

ಬಾಲಕಿಯನ್ನು ಅಕ್ರಮವಾಗಿ ದತ್ತು ಪಡೆದಿದ್ದ ಆರೋಪದ ಪ್ರಕರಣ

ನಟಿ ಸೋನು ಶ್ರೀನಿವಾಸ್ ಗೌಡ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯೊಬ್ಬರ-ನ್ನು ಅಕ್ರಮವಾಗಿ ದತ್ತು ಪಡೆದಿದ್ದ ಆರೋಪದಡಿ ಬಂಧಿಸಲಾಗಿರುವ ಕಿರುತೆರೆ ಸಹನಟಿ ಸೋನು ಶ್ರೀನಿವಾಸ್ ಗೌಡ ಅಲಿಯಾಸ್ ಶಾಂಭವಿ (29) ಅವರನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಘಟಕದ (ಬೆಂಗಳೂರು ಪಶ್ಚಿಮ) ಕಾನೂನು ಪರಿವೀಕ್ಷಣಾ ಅಧಿಕಾರಿ ಗೀತಾ ನೀಡಿದ್ದ ದೂರು ಆಧರಿಸಿ ಬಾಲ ನ್ಯಾಯ ಕಾಯ್ದೆ ಹಾಗೂ ಐಪಿಸಿ ಸೆಕ್ಷನ್ ಅಡಿ ಎಫ್‌ಐಆರ್ ದಾಖಲಾಗಿತ್ತು. ಸೋನು ಶ್ರೀನಿವಾಸ್ ಗೌಡ ಅವರನ್ನು ಮಾರ್ಚ್ 22ರಂದು ಬಂಧಿಸಿದ್ದ ಪೊಲೀಸರು, ವಿಚಾರಣೆಗಾಗಿ ಮಾರ್ಚ್ 25ರವರೆಗೆ ಕಸ್ಟಡಿಗೆ ಪಡೆದು-ಕೊಂಡಿದ್ದರು.

‘ಸೋನು ಅವರನ್ನು ವಾಸವಿದ್ದ ಮನೆಗೆ ಹಾಗೂ ಬಾಲಕಿಯ ರಾಯಚೂರಿನ ಮನೆಗೆ ಕರೆದೊಯ್ದು ಮಹಜರು ನಡೆಸಲಾಗಿದೆ. ಜೊತೆಗೆ, ಮಗು ದತ್ತು ಸಂಬಂಧ ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ಕಸ್ಟಡಿ ಅವಧಿ ಮುಗಿದಿದ್ದರಿಂದ, ಅವರನ್ನು ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಚಾರಣೆ ನಡೆಸಿದ ನ್ಯಾಯಾಲಯ, ಆರೋಪಿಯನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿದೆ. ಸದ್ಯ ಆರೋಪಿ ಪರಪ್ಪನ ಅಗ್ರಹಾರದ ಕೇಂದ್ರ ಮಹಿಳಾ ಕಾರಾಗೃ-ಹದಲ್ಲಿದ್ದಾರೆ’ ಎಂದು ತಿಳಿಸಿವೆ.

ಮಾರಾಟದ ಮಾಹಿತಿ: ‘ಪೋಷಕರಿಗೆ ಹಣ ಕೊಟ್ಟು ಬಾಲಕಿಯನ್ನು ಕರೆತಂದಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯನ್ನು ಪೋಷಕರು ನಿರಾಕರಿಸಿದ್ದಾರೆ. ಈ ಆರೋಪದ ಬಗ್ಗೆ ಪುರಾವೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಮುಂಬೈ ಪೊಲೀಸರ ಸೋಗಿನಲ್ಲಿ ದೂರವಾಣಿ ಕರೆ ಮಾಡಿ ಬ್ಲ್ಯಾಕ್‌ಮೇಲ್; ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲು

ಇಬ್ಬರು ನ್ಯಾಯಮೂರ್ತಿಗಳಿಗೆ ಬೆದರಿಕೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳಿಗೆ ಮುಂಬೈ ಪೊಲೀಸರ ಸೋಗಿನಲ್ಲಿ ದೂರವಾಣಿ ಕರೆ ಮಾಡಿ ಬ್ಲ್ಯಾಕ್‌ಮೇಲ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಅಪರಿಚಿತರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ.

ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಹಾಗೂ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರ ನಿರ್ದೇಶನದ ಮೇರೆಗೆ ಹೈಕೋರ್ಟ್ ಭದ್ರತಾ ಇನ್‌ಸ್ಪೆಕ್ಟರ್ ಜಿ.ಶೋಭಾ ಹಾಗೂ ಸಬ್ ಇನ್‌ಸ್ಪೆಕ್ಟರ್ ಎ.ಆರ್.ರಘುನಾಯ್ಕ ನೀಡಿರುವ ದೂರಿನ ಅನುಸಾರ ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

ಹಣಕ್ಕೆ ಬೇಡಿಕೆ: ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರ ಅವರ ಮೊಬೈಲ್ ಫೋನ್‌ಗೆ ಇದೇ 15ರಂದು ಸಂಜೆ 4 ಗಂಟೆಗೆ ಅಪರಿಚಿತನೊಬ್ಬ ಕರೆ ಮಾಡಿದ್ದ. 'ನಾನು ಡಿಒಪಿಟಿ (ಆಡಳಿತ ಸುಧಾರಣೆ ಮತ್ತು ತರಬೇತಿ) ಇಲಾಖೆಯಿಂದ ಕರೆ ಮಾಡುತ್ತಿದ್ದೇನೆ' ಎಂದು ಹೇಳಿಕೊಂಡಿದ್ದ ಆತ, 'ನಿಮ್ಮ ಸಿಮ್ ಕಾರ್ಡ್‌ನಿಂದ ಕಾನೂನುಬಾಹಿರವಾಗಿ ಜಾಹೀರಾತು ಹಾಗೂ ಆಕ್ಷೇಪಾರ್ಹ ಸಂದೇಶಗಳನ್ನು ಪ್ರಕಟಿಸುತ್ತಿದ್ದೀರಿ. ಹೀಗಾಗಿ, ನಿಮ್ಮ ಮೇಲೆ ಮುಂಬೈನಲ್ಲಿ ಪ್ರಕರಣ ದಾಖಲಾಗಿದೆ. ಬೇಕಾದರೆ ಈ ಕರೆಯನ್ನು ಪೊಲೀಸರಿಗೆ ವರ್ಗಾವಣೆ ಮಾಡುತ್ತೇನೆ' ಎಂದಿದ್ದ. ಬಳಿಕ ಮತ್ತೊಬ್ಬ ವ್ಯಕ್ತಿ ಪೊಲೀಸ್ ಅಧಿಕಾರಿಯ ಸೋಗಿನಲ್ಲಿ ನ್ಯಾಯಮೂರ್ತಿಯವರಿಗೆ ಏರು ದನಿಯಲ್ಲಿ ಮಾತನಾಡಿದ್ದ. ಕರೆ ಸ್ಥಗಿತಗೊಳಿಸಿದ್ದ ನ್ಯಾಯಮೂರ್ತಿಯವರು ದೂರು ದಾಖಲಿಸುವಂತೆ ಹೈಕೋರ್ಟ್ ಭದ್ರತಾ ವಿಭಾಗದ ಪೊಲೀಸರಿಗೆ ನಿರ್ದೇಶಿಸಿದ್ದರು.

ಮತ್ತೊಂದು ಪ್ರಕರಣ: ಅದೇ ದಿನ ಬೆಳಿಗ್ಗೆ 9 ಗಂಟೆಗೆ ಅಪರಿಚಿತ ವ್ಯಕ್ತಿಯೊಬ್ಬ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಹೆರೂರು ಅವರಿಗೆ ಕರೆ ಮಾಡಿ ನ್ಯಾಯಮೂರ್ತಿ ಪಂಡಿತ್ ಅವರಿಗೆ ಬೆದರಿಕೆ ಹಾಕಿದ್ದ ರೀತಿಯಲ್ಲಿ ಬೆದರಿಕೆ ಹಾಕಿದ್ದ. 'ನಿಮ್ಮ ಮೇಲೆ ಮುಂಬೈನ ಅಂಧೇರಿ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೇಕಾದರೆ ಈ ಕರೆಯನ್ನು ಪೊಲೀಸರಿಗೆ ವರ್ಗಾವಣೆ ಮಾಡುತ್ತೇನೆ. ಅವರ ಜತೆ ಮಾತನಾಡಿ ನಿಮ್ಮ ಪ್ರಕರಣ ಇತ್ಯರ್ಥ ಮಾಡಿಕೊಳ್ಳಿ' ಎಂದು ಹೇಳಿ ಕರೆಯನ್ನು ಮತ್ತೊಬ್ಬನಿಗೆ ವರ್ಗಾವಣೆ ಮಾಡಿದ್ದ. ಆ ವ್ಯಕ್ತಿಯೂ ನ್ಯಾಯಮೂರ್ತಿಗಳ ಜೊತೆಗೆ ಏರು ಧ್ವನಿಯಲ್ಲಿ ಮಾತನಾಡಿದ್ದ. 'ದುಡ್ಡು ಕೊಟ್ಟರೆ ನಿಮ್ಮ ಸಮಸ್ಯೆ ಬಗೆಹರಿಸುತ್ತೇನೆ' ಎಂದು ತಿಳಿಸಿದ್ದ ಎಂಬುದಾಗಿ ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ನ್ಯಾ. ಎಸ್. ಜಿ.ಪಂಡಿತ್

ನ್ಯಾ. ಪ್ರದೀಪ್ ಸಿಂಗ್ ಯೆರೂರು

ವ್ಯವಸ್ಥಿತ ಸಂಚು

'ಇದೊಂದು ವ್ಯವಸ್ಥಿತವಾಗಿ ಸಂಚು ರೂಪಿಸಿಕೊಂಡು ಸಾರ್ವಜನಿಕರಿಗೆ ಬೆದರಿಕೆ ಒಡ್ಡಿ ಹಣ ಪಡೆದು ಮೋಸ ಮಾಡುವ ಗುಂಪು ಇರಬಹುದು. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಸಾರ್ವಜನಿಕರಿಗೆ ಮೋಸ ಮಾಡುತ್ತಾರೆ. ಆದ್ದರಿಂದ, ಇಂತಹ ಗುಂಪಿನ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಮೂರ್ತಿಗಳು ನಿರ್ದೇಶಿಸಿದ್ದಾರೆ.

ಮುಖ್ಯಾಂಶಗಳು

- ಇಬ್ಬರು ನ್ಯಾಯಮೂರ್ತಿಗಳಿಗೆ ಫೋನ್ ಕರೆ
- ಪೊಲೀಸರ ಸೋಗಿನಲ್ಲಿ ಮಾತು
- ಇಬ್ಬರಿಗೂ ಒಂದೇ ದಿನ ಫೋನ್

ಹಣಕ್ಕೆ ಬೇಡಿಕೆ

'ನೀವು ಬಳಸುತ್ತಿರುವ ಮೊಬೈಲ್ ಫೋನ್ ಸಿಮ್ ಕಾರ್ಡ್‌ಗಳ ಮೂಲಕ ಕಾನೂನು ಬಾಹಿರ ಜಾಹೀರಾತು ಹಾಗೂ ಆಕ್ಷೇಪಾರ್ಹ ಸಂದೇಶಗಳನ್ನು ಹಾಕುತ್ತಿದ್ದೀರಿ' ಎಂದು ನ್ಯಾಯಮೂರ್ತಿಗಳಿಗೆ ಫೋನ್ ಕರೆಯ ಮೂಲಕ ಬ್ಲ್ಯಾಕ್‌ಮೇಲ್ ಮಾಡಿ ಹಣಕ್ಕೆ ಬೇಡಿಕೆ ಇರಿಸಲಾಗಿತ್ತು. ಹೈಕೋರ್ಟ್ ಭದ್ರತಾ ವಿಭಾಗದ ಪೊಲೀಸ್ ಅಧಿಕಾರಿಗಳು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

ಬಾಲ ನ್ಯಾಯ ಮಂಡಳಿ: ನೇಮಕಕ್ಕೆ ಗಡುವು

ಬೆಂಗಳೂರು: 'ಬಾಲ ನ್ಯಾಯ ಕಾಯ್ದೆ' ವ್ಯಾಪ್ತಿಗೆ ಒಳಪಡುವ ಕಾನೂನು ಜೊತೆ ಸಂಘರ್ಷಕ್ಕೆ ಒಳಗಾದ ಮಕ್ಕಳ ಪ್ರಕರಣಗಳ ನಿರ್ವಹಣೆಗೆ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ 'ಬಾಲ ನ್ಯಾಯ ಮಂಡಳಿ'ಗೆ (ಜೆಜೆಬಿ) ಅಗತ್ಯ ಸಿಬ್ಬಂದಿ ಒದಗಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಾಲ್ಕು ವಾರಗಳ ಗಡುವು ನೀಡಿದೆ.

ರಾಜ್ಯದಲ್ಲಿ ಬಾಲ ನ್ಯಾಯ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದಕ್ಕಾಗಿ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಹಾಗೂ 'ಬಚಪನ್ ಬಚಾವೊ ಆಂದೋಲನ್' ಸ್ವಯಂಸೇವಾ ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾನೂನು ಸೇವಾ ಪ್ರಾಧಿಕಾರದ ಪರ ವಕೀಲೆ ಮೈತ್ರೇಯಿ ಕೃಷ್ಣನ್, 'ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಹೈಕೋರ್ಟ್‌ನ ಹಾಲಿ ನಾಲ್ವರು ನ್ಯಾಯಮೂರ್ತಿಗಳನ್ನು ಒಳಗೊಂಡ ಬಾಲ ನ್ಯಾಯ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಗೆ ಪ್ರತ್ಯೇಕ ಸಚಿವಾಲಯ (ಅಧಿಕಾರಿ ಮತ್ತು ಸಿಬ್ಬಂದಿ) ಸ್ಥಾಪಿಸಬೇಕು ಎಂದು 2019ರಲ್ಲೇ ಹೈಕೋರ್ಟ್ ಆದೇಶಿಸಿದೆ. ಮಂಡಳಿಗೆ ಅಗತ್ಯವಿರುವ ಹುದ್ದೆಗಳನ್ನು ರಾಜ್ಯ ಸರ್ಕಾರ ಅನುಮೋದಿಸಬೇಕು. ಅವುಗಳನ್ನು ಹೈಕೋರ್ಟ್ ಮೂಲಕ ಭರ್ತಿ ಮಾಡಿಕೊಳ್ಳಬೇಕು. ಈವರೆಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದ ಮಂಡಳಿಯು ಪರಿಣಾಮಕಾರಿಯಾಗಿ ಕೆಲಸ ಮಾಡಲು ಆಗುತ್ತಿಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಸರ್ಕಾರದ ಪರ ವಕೀಲರು ಪ್ರತಿಕ್ರಿಯಿಸಿ, 'ಈ ಕುರಿತು ಕ್ರಮ ಕೈಗೊಳ್ಳಲು ನಾಲ್ಕು ವಾರಗಳ ಕಾಲಾವಕಾಶ ಬೇಕು' ಎಂದು ಕೋರಿದರು. ನ್ಯಾಯಪೀಠ ವಿಚಾರಣೆಯನ್ನು ಜೂನ್ 13ಕ್ಕೆ ಮುಂದೂಡಿದೆ.

ಹೈಕೋರ್ಟ್ ಬಾಲ ನ್ಯಾಯ ಮಂಡಳಿಗೆ ನ್ಯಾಯಮೂರ್ತಿಗಳಾದ ಕೆ.ಎಸ್. ಮುದಗಲ್ ಅಧ್ಯಕ್ಷರಾಗಿದ್ದು, ಎಸ್.ಸುನೀಲ್ ದತ್ ಯಾದವ್, ಎಂ.ಜಿ.ಉಮಾ, ಜೆ.ಎಂ.ಖಾಜಿ ಸದಸ್ಯರಾಗಿದ್ದಾರೆ.

ಲೆಕ್ಕ ಕೊಡಲು ಸಿದ್ಧರಿದ್ದೀರಾ: ಸುಧಾಕರ್‌ಗೆ ಪ್ರದೀಪ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಪ್ರದೀಪ್ ಈಶ್ವರ್

ಬೆಂಗಳೂರು: 'ನಾನು ಗಳಿಸಿದ ಪ್ರತಿ ಆದಾಯಕ್ಕೆ ಲೆಕ್ಕ ಕೊಡಲು ಸಿದ್ಧನಿದ್ದೇನೆ. ನೀವು ಲೆಕ್ಕ ಕೊಡಲು ಸಿದ್ಧರಿದ್ದೀರಾ' ಎಂದು ಚಿಕ್ಕಬಳ್ಳಾಪುರ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್‌ಗೆ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕಳೆದ ಐದು ವರ್ಷದ ನನ್ನ ವ್ಯವಹಾರದ ಲೆಕ್ಕ ಕೊಡುತ್ತೇನೆ. ನನ್ನ ಪತ್ನಿ, ಸಂಬಂಧಿಕರ ಖಾತೆಯ ಲೆಕ್ಕವನ್ನೂ ಕೊಡುತ್ತೇನೆ. ನೀವು ನಿಮ್ಮ ಹಾಗೂ ನಿಮ್ಮ ಬಾವಮೈದುನನ ಖಾತೆಯಲ್ಲಿರುವ ಹಣದ ಲೆಕ್ಕ ಕೊಡುತ್ತೀರಾ' ಎಂದು ಸುಧಾಕರ್ ಅವರನ್ನು ಪ್ರಶ್ನಿಸಿದರು.

'ಐ.ಟಿ, ಇ.ಡಿ ದಾಳಿ ಎದುರಿಸಲು, ಸ್ವಚ್ಛ ಎಂದು ದೇವರ ಎದುರು ಪ್ರಮಾಣ ಮಾಡಲು ನಾನು ಸಿದ್ಧನಿದ್ದೇನೆ. ನೀವು ಪ್ರಮಾಣ ಮಾಡಲು ಸಿದ್ಧ ಇದ್ದೀರಾ' ಎಂದೂ ಪ್ರಶ್ನಿಸಿದರು.

'ಕೋವಿಡ್ ಸಂದರ್ಭದಲ್ಲಿ ಸುಧಾಕರ್ ವಿರುದ್ಧ ₹2,200 ಕೋಟಿ ಅಕ್ರಮದ ಆರೋಪ ಮಾಡಿದ್ದೆವು. ಅವರದ್ದೇ ಪಕ್ಷದ ಶಾಸಕ ಯತ್ನಾಳ್ ₹40 ಸಾವಿರ ಕೋಟಿ ಅಕ್ರಮದ ಆರೋಪ ಮಾಡಿದ್ದರು. ಅಷ್ಟು ದೊಡ್ಡ ಆರೋಪ ಇದ್ದವರಿಗೆ ಬಿಜೆಪಿ ಟಿಕೆಟ್ ಏಕೆ ನೀಡಿದೆ' ಎಂದು ಪ್ರಶ್ನಿಸಿದರು.

'ವಿನಾಶಕಾರಿ ವ್ಯಕ್ತಿಯೊಬ್ಬ ಸಂಸತ್‌ಗೆ ಹೋದರೆ ಹೇಗೆ? ಕೇಂದ್ರ ಸರ್ಕಾರವೇ ಚಿಕ್ಕಬಳ್ಳಾಪುರಕ್ಕೆ ಬಂದರೂ ಸುಧಾಕರ್ ಅವರನ್ನು ಸಂಸತ್ ಮೆಟ್ಟಿಲು ತುಳಿಯಲು ಬಿಡುವುದಿಲ್ಲ' ಎಂದು ಗುಡುಗಿದರು.

'ರಾಜ್ಯದ ಕೆಲವು ಬಿಜೆಪಿ ನಾಯಕರಿಗೆ ವಿವಿಧ ಯೋಗಾಸನಗಳ ಮೂಲಕ ಅವರು ಸಹಾಯ ಮಾಡಿದ್ದಾರೆ. ಅವರನ್ನು ಸಂಸತ್‌ಗೆ ಕಳುಹಿಸಿದರೆ, ಕೇಂದ್ರದ ಬಿಜೆಪಿ ನಾಯಕರಿಗೂ ಆಸನಗಳನ್ನು ಕಲಿಸುತ್ತಾರೆ' ಎಂದು ಲೇವಡಿ ಮಾಡಿದರು.

'ನಾನು ಮಾತನಾಡಿದರೆ ಸಿನಿಮಾ ಡೈಲಾಗ್ ಹೇಳುತ್ತೀಯಾ ಎಂದು ಹೇಳುತ್ತಾರೆ. ಇದು ಡೈಲಾಗ್ ಅಲ್ಲ. ಹೊಟ್ಟೆಯಲ್ಲಿ ಇರುವ ನೋವು. ಅವರ ಕಿರುಕುಳದಿಂದ ನಾನು ಶಾಸಕನಾದೆ. ಸುಧಾಕರ್ ಕಾಂಗ್ರೆಸ್‌ಗೆ ಅಪಾಯವಲ್ಲ. ಅವರು ಬಿಜೆಪಿಗೆ ಅಪಾಯ. ಒಂದು ತಿಂಗಳು ನನ್ನ ಮತ್ತು ಸುಧಾಕರ್ ನಡುವೆ ಯುದ್ಧ ನಡೆಯಲಿದೆ' ಎಂದರು.

'ದೇವೇಗೌಡರಿಂದ ಸಲಹೆ ಪಡೆಯಲಿ'

'ಮೇಕೆದಾಟು ಯೋಜನೆಯನ್ನು ವಿರೋಧಿಸುತ್ತಿರುವ ಬಿಜೆಪಿಯ ಆರ್. ಅಶೋಕ ಮತ್ತು ಇತರ ನಾಯಕರು ದೇವೇಗೌಡರಿಂದ ಸಲಹೆ ಪಡೆಯಲಿ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದರು.

'ಈ ಯೋಜನೆ ಜಾರಿಗೆ ಕಾಂಗ್ರೆಸ್ ಪಕ್ಷ ದೊಡ್ಡ ಹೋರಾಟ ಮಾಡಿತ್ತು. ಯೋಜನೆಗೆ ಅನುಮೋದನೆ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಈ ಮಧ್ಯೆ, ಹಿರಿಯರಾದ ದೇವೇಗೌಡರು ಈ ಯೋಜನೆಯ ಪರವಾಗಿ ಮಾತನಾಡಿದ್ದಾರೆ. ಅವರ ಹೇಳಿಕೆಯನ್ನು ಕಾಂಗ್ರೆಸ್ ಪಕ್ಷದ ಪರವಾಗಿ ಸ್ವಾಗತಿಸುತ್ತೇನೆ' ಎಂದರು.

ಆಕ್ಷೇಪಕ್ಕೆ ಪ್ರತಿಕ್ರಿಯಿಸಲು ಸರ್ಕಾರಕ್ಕೆ ನಿರ್ದೇಶನ

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ; ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಂಡಿರುವ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರೂ ಸೇರಿದಂತೆ 16 ಸಾವಿರಕ್ಕೂ ಹೆಚ್ಚಿನ ವೈದ್ಯಕೀಯ ಸಿಬ್ಬಂದಿ ಕೊರತೆ ಇದ್ದು, ಇದು ವ್ಯವಸ್ಥೆಯ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿದೆ. ಆದ್ದರಿಂದ, ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸುವಂತೆ ನಿರ್ದೇಶಿಸಬೇಕು' ಎಂದು ಪ್ರಕರಣದ ಅಮಿಕಸ್ ಕ್ಯೂರಿ ಹೈಕೋರ್ಟ್‌ಗೆ ಮನವಿ ಮಾಡಿದರು.

ಈ ಸಂಬಂಧ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಶ್ರೀಧರ ಪ್ರಭು ವಾದ ಮಂಡಿಸಿ, 'ರಾಜ್ಯದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರೂ ಸೇರಿದಂತೆ 16,500 ಸಂಖ್ಯೆಯ ವೈದ್ಯಕೀಯ ಸಿಬ್ಬಂದಿ ಕೊರತೆ ಇದೆ. ಇಷ್ಟೊಂದು ದೊಡ್ಡ ಪ್ರಮಾಣದ ಹುದ್ದೆಗಳು ಖಾಲಿ ಬಿದ್ದಿರುವ ಪರಿಣಾಮ, ಗ್ರಾಮೀಣ ಭಾಗದಲ್ಲಿ ಜನ ಸಾಮಾನ್ಯರಿಗೆ ವೈದ್ಯಕೀಯ ಸೇವೆಯೇ ದುರ್ಲಭವಾಗಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ವೈದ್ಯರ ಗ್ರಾಮೀಣ ಸೇವೆಯನ್ನು ಕಡ್ಡಾಯಗೊಳಿಸಿ ಈ ಹಿಂದೆ ಕಾಯ್ದೆ ಜಾರಿಗೆ ತಂದಾಗ ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಆಗ ರಾಜ್ಯ ಸರ್ಕಾರ ತನ್ನ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿತ್ತು. ಅಂತೆಯೇ, ಸರ್ಕಾರದ ಕ್ರಮವನ್ನು ಎತ್ತಿಹಿಡಿದಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸಂಬಂಧ ವಿವರವಾದ ತೀರ್ಪು ಕೊಟ್ಟಿತ್ತು' ಎಂದರು.

'ಈಗ ಇದೇ ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು, ಮಂಜೂರಾತಿ ಹುದ್ದೆಗಳಿಗೆ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯ ಸೇವೆಗೆ ಅವಕಾಶ ನೀಡಲಾಗುವುದು ಎಂದು ಸರ್ಕಾರ ತೀರ್ಮಾನಿಸಿದೆ. ಈ ಮೂಲಕ ವೈದ್ಯರ ಕಡ್ಡಾಯ ಗ್ರಾಮೀಣ ಸೇವೆಗೆ ವಿನಾಯ್ತಿ ನೀಡಿದೆ. ಇದರಿಂದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ' ಎಂದು ಆಕ್ಷೇಪಿಸಿದರು.

'ತಿದ್ದುಪಡಿಗೆ ಒಂದು ಸ್ಪಷ್ಟತೆ ಇಲ್ಲ. ಸದ್ಯದ ಕೊರತೆ ನೀಗಿಸಲು ಸರ್ಕಾರದ ಬಳಿ ಪರ್ಯಾಯ ವ್ಯವಸ್ಥೆ ಇಲ್ಲ. 16 ಸಾವಿರಕ್ಕೂ ಹೆಚ್ಚು ವೈದ್ಯಕೀಯ ಹುದ್ದೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ನರ್ಸ್‌ಗಳು, ಲ್ಯಾಬ್ ಟೆಕ್ನೀಷಿಯನ್‌ಗಳು, ಡಿ-ಗ್ರೂಪ್ ಹುದ್ದೆಗಳ ನೌಕರರ ಹುದ್ದೆಗಳು ದೊಡ್ಡ ಸಂಖ್ಯೆಯಲ್ಲಿ ಖಾಲಿ ಇವೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಆಲಿಸಿದ ನ್ಯಾಯಪೀಠ, 'ಅಮಿಕಸ್ ಕ್ಯೂರಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ತಿಳಿಸಿ' ಎಂದು ರಾಜ್ಯ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಿ ವಿಚಾರಣೆಯನ್ನು ಜೂನ್ ಮೊದಲ ವಾರಕ್ಕೆ ಮುಂದೂಡಿದೆ.

16,000ಕ್ಕೂ ಹೆಚ್ಚು ಸಿಬ್ಬಂದಿ ಕೊರತೆ

'ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಂಬಿಬಿಎಸ್ ವೈದ್ಯರೂ ಸೇರಿದಂತೆ 16 ಸಾವಿರಕ್ಕೂ ಹೆಚ್ಚು ವೈದ್ಯಕೀಯ, ಅರೆ ವೈದ್ಯಕೀಯ ಹಾಗೂ ಡಿ ಗ್ರೂಪ್ ನೌಕರರ ಕೊರತೆ ಇದೆ' ಎಂಬ ಬಗ್ಗೆ 'ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ' (ಎಫ್‌ಐಸಿಸಿಐ) ವರದಿಯೊಂದನ್ನು ಬಿಡುಗಡೆ ಮಾಡಿತ್ತು.

'ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 723 ಎಂಬಿಬಿಎಸ್ ವೈದ್ಯರು, 7,492 ಶುಶ್ರೂಷಕಿಯರು, 1,517 ಲ್ಯಾಬ್ ಟೆಕ್ನೀಷಿಯನ್‌ಗಳು, 1,512 ಫಾರ್ಮಾಸಿಸ್ಟ್‌ಗಳು, 1,752 ಸಹಾಯಕರು 3,253 ಗ್ರೂಪ್ ಡಿ ನೌಕರರೂ ಸೇರಿದಂತೆ 16,500ಕ್ಕೂ ಹೆಚ್ಚು ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ತಾಂತ್ರಿಕ ವಿಭಾಗದಲ್ಲಿ ಕೊರತೆ ಇದೆ. ನಗರ ಪ್ರದೇಶಗಳಲ್ಲಿ 245 ಮತ್ತು ಗ್ರಾಮೀಣ ಪ್ರದೇಶದಲ್ಲಿ 209 ಸೇರಿದಂತೆ ಒಟ್ಟು 454 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕೊರತೆ ಇದೆ' ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ಈ ವರದಿ ಆಧರಿಸಿ ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿತ್ತು.

₹20 ಕೋಟಿ ಮೌಲ್ಯದ ಡ್ರಗ್ಸ್ ವಶ ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಮುಂಬೈ: ₹20 ಕೋಟಿ ಮೌಲ್ಯದ ಮಾದಕ ವಸ್ತುವನ್ನು ಸಾಗಿಸುತ್ತಿದ್ದ ಆರೋಪದ ಮೇಲೆ ಸಿಯೆರಾ ಲಿಯೋನಿ ಮೂಲದ ಮಹಿಳಾ ಪ್ರಯಾಣಿಕರೊಬ್ಬರನ್ನು ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯವು ಬಂಧಿಸಿದೆ. ಸದ್ಯ ಅವರನ್ನು ನ್ಯಾಯಾಂಗದ ವಶಕ್ಕೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್
(ಭಾರತ ಸರಕಾರದ ಒಂದು ಉದ್ಯಮ)

ಪ್ರಕಟಣೆ

BSNL, ಬೆಂಗಳೂರಿನ EB CRM ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಎಂ ರಾಜು, TT (HR No.199803933) ಅವರು 14/12/2018 ರಿಂದ ಅನಧಿಕೃತವಾಗಿ ಕರ್ತವ್ಯಕ್ಕೆ ಗೈರು ಹಾಜರು ಇರುತ್ತಾರೆ. ಅವರೊಂದಿಗೆ ಸಂಪರ್ಕ ಸಾಧಿಸಲು ಮಾಡಿದ ಇದುವರೆಗಿನ ಪ್ರಯತ್ನಗಳು ಫಲ ನೀಡಿಲ್ಲ. ಈಗಾಗಲೇ 5 ವರ್ಷಕ್ಕಿಂತ ಮೇಲ್ಪಟ್ಟು ಅನಧಿಕೃತ ಗೈರು ಹಾಜರಾಗಿರುವುದರಿಂದ, **BSNL** ಅನುಸರಿಸುತ್ತಿರುವ ಅಧಿನಿಯಮಗಳ ಪ್ರಕಾರ, **ಶ್ರೀ ಎಂ ರಾಜು** ಅವರು **BSNL** ನ ಸೇವೆಗೆ ರಾಜಿನಾಮೆ ಸಲ್ಲಿಸಿದ್ದಾರೆ ಎಂದು ಪರಿಗಣಿಸಲಾಗುತ್ತಿದೆ, ಅಲ್ಲದೇ ಅವರಿಗೆ ನಿವೃತ್ತಿ ಸಂಬಂಧಿತ ಲಾಭಗಳು ಸಿಗುವುದಿಲ್ಲ. ಅದಾಗ್ಯೂ ಈ ಮೂಲಕ ಶ್ರೀ ರಾಜು ಎಂ ಅವರಿಗೆ ತಿಳಿಸುವುದೇನೆಂದರೆ, ಈ ನಿಟ್ಟಿನಲ್ಲಿ ತಮ್ಮ ಪರವಾಗಿ ಏನಾದರೂ ಹೇಳುವುದಿದ್ದರೆ, ಈ ಸೂಚನೆ ಪ್ರಕಟಗೊಂಡ 15 ದಿನಗಳ ಒಳಗಾಗಿ **BSNL** ನ ಸಂಬಂಧಿತ ವಿಭಾಗಕ್ಕೆ ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರ

ಒಂದನೇ ಪುಟದಿಂದ...

ಇಂಡಿ ಪಟ್ಟಣದ ಸಾಯಿ ಪಬ್ಲಿಕ್ ಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿನಿಯನ್ನು ಡಿಬಾರ್ ಮಾಡಲಾಗಿದ್ದು, ನಿರ್ಲಕ್ಷ್ಯದ ಆರೋಪದ ಮೇಲೆ ಕೇಂದ್ರದ ಮೇಲ್ವಿಚಾರಕ ರಾಜಶೇಖರ ಬಂಡೆ ಅವರನ್ನು ಅಮಾನತು ಮಾಡಿಲಾಗಿದೆ.

ತುಮಕೂರು, ವಿಜಯಪುರ ಜಿಲ್ಲೆ ಸೇರಿದಂತೆ ಕೆಲವಡೆ ಪ್ರಶ್ನೆಪತ್ರಿಕೆಗಳು ಪರೀಕ್ಷಾ ಕೊಠಡಿಗೆ ತಡವಾಗಿ ತಲುಪಿವೆ. ಹಲವೆಡೆ 15 ನಿಮಿಷ ತಡವಾಗಿ ಪ್ರಶ್ನೆ ಪತ್ರಿಕೆ ವಿತರಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬೆಳಿಗ್ಗೆ ನಡೆದರೆ, ಮಧ್ಯಾಹ್ನದ ನಂತರ 5, 8 ಹಾಗೂ 9ನೇ ತರಗತಿಯ ಬೋರ್ಡ್ ಪರೀಕ್ಷೆಗಳೂ ಸುಸೂತ್ರವಾಗಿ ನಡೆದವು.

ಪಾಲಬಾವಿ: ಪರೀಕ್ಷೆ ಬರೆದ ತಾಯಿ–ಮಕ್ಕಳು

ಪ್ರಜಾವಾಣಿ ವಾರ್ತೆ

ಹಂದಿಗುಂದ(ಬೆಳಗಾವಿ ಜಿಲ್ಲೆ): ಪಾಲಬಾವಿಯ ದಿ.ಮಲಗೌಡ ನಾಯಿಕ (ಪಾಟೀಲ) ಸರ್ಕಾರಿ ಪ್ರೌಢಶಾಲೆಯ ಕೇಂದ್ರದಲ್ಲಿ ಸೋಮವಾರ ಇಬ್ಬರು ತಾಯಂದಿರು ಮತ್ತು ಅವರ ಮಕ್ಕಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದರು.

ಈ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿರುವ ಶ್ರೀಶೈಲ ಮೇತ್ರಿ ರೆಗ್ಯುಲರ್ ವಿದ್ಯಾರ್ಥಿಯಾಗಿ ಪರೀಕ್ಷೆ ಬರೆದರೆ, ಅವರ ತಾಯಿ, ಇದೇ ಪ್ರೌಢಶಾಲೆಯ ಬಿಸಿಯೂಟ ತಯಾರಿಕೆ ಸಹಾಯಕಿ ಶಶಿಕಲಾ ಪುನರಾವರ್ತಿತ ವಿದ್ಯಾರ್ಥಿಯಾಗಿ ಪರೀಕ್ಷೆಗೆ ಹಾಜರಾದರು.

ಮತ್ತೊಬ್ಬ ವಿದ್ಯಾರ್ಥಿ ಭರಮಲಿಂಗ ಮೇತ್ರಿ ರೆಗ್ಯುಲರ್ ಆಗಿ ಪರೀಕ್ಷೆ ಬರೆದರೆ, ಗೃಹಿಣಿಯಾದ ಅವರ ತಾಯಿ ಸುನಂದಾ ಪುನರಾವರ್ತಿತ ವಿದ್ಯಾರ್ಥಿಯಾಗಿ ಪರೀಕ್ಷೆಗೆ ಹಾಜರಾದರು.

ಹಂದಿಗುಂದ ಸಮೀಪದ ಪಾಲಬಾವಿಯಲ್ಲಿ ಸೋಮವಾರ ಎಸ್ಸೆಸ್ಸೆಲ್ಸಿ ಬರೆದ ಶಶಿಕಲಾ ಮೇತ್ರಿ ಮತ್ತು ಅವರ ಪುತ್ರ ಶ್ರೀಶೈಲ

ನನಗೀಗ 34 ವರ್ಷ ವಯಸ್ಸು. ಬಡತನದಿಂದ ಬಾಲ್ಯದಲ್ಲಿ ಶಿಕ್ಷಣ ಪೂರ್ಣಗೊಳಿಸಲಾಗಲಿಲ್ಲ. ಈಗ ಉದ್ಯೋಗದ ನಿರೀಕ್ಷೆಯಿಂದ ಪರೀಕ್ಷೆಗೆ ಹಾಜರಾಗಿದ್ದೇನೆ

–ಶಶಿಕಲಾ ಮೇತ್ರಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದವರು

ಕ್ಷೇತ್ರ ಮೂರು: ದಳ ಅಭ್ಯರ್ಥಿ ಯಾರು?

ಒಂದನೇ ಪುಟದಿಂದ...

ಕೋಲಾರದಲ್ಲಿ ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್, ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಮತ್ತು ಮುಖಂಡ ಮಲ್ಲೇಶ್ ಬಾಬು ಹೆಸರುಗಳು ಪರಿಶೀಲನೆಯಲ್ಲಿವೆ.

'ಜೆ.ಪಿ. ನಗರದ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ಕುಮಾರಸ್ವಾಮಿ, ಅಲ್ಲಿಯೇ ಮಂಗಳವಾರ ಬೆಳಿಗ್ಗೆ 'ಕೋರ್ ಕಮಿಟಿ' ಸದಸ್ಯರೊಂದಿಗೆ ಸಭೆ ನಡೆಸುವರು. ಆ ಸಭೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಬಹುತೇಕ ಅಂತಿಮಗೊಳ್ಳಲಿದೆ. ಹಾಸನ ಜಿಲ್ಲೆಯ ಪ್ರವಾಸದಲ್ಲಿರುವ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ಬೆಂಗಳೂರಿಗೆ ವಾಪಸಾದ ಬಳಿಕ ಅಭ್ಯರ್ಥಿಗಳ ಹೆಸರು ಘೋಷಣೆಯಾಗಲಿದೆ' ಎಂದು ಮೂಲಗಳು ಹೇಳಿವೆ. ರಾಮನಗರ ಜಿಲ್ಲೆ ಹಾಗೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡರ ಜತೆ ಸೋಮವಾರ ಸಭೆ ನಡೆಸಿದ ಕುಮಾರಸ್ವಾಮಿ, 'ಚನ್ನಪಟ್ಟಣ ಕ್ಷೇತ್ರ ಮತ್ತು ರಾಮನಗರ ಜಿಲ್ಲೆಯನ್ನು ನಾನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಯಾವುದೇ ಸಂದರ್ಭದಲ್ಲೂ ನಿಮ್ಮ ಜತೆ ಇರುತ್ತೇನೆ. ಆದರೆ, ಪಕ್ಷದ ಹಿತದೃಷ್ಟಿಯಿಂದ ನಾನು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾದ ಅನಿವಾರ್ಯ ಎದುರಾಗಿದೆ' ಎಂದು ಮನವೊಲಿಸುವ ಪ್ರಯತ್ನ ಮಾಡಿದ್ದಾರೆ.

ಚನ್ನಪಟ್ಟಣ– ಮಂಡ್ಯ ಕಾರ್ಯಕರ್ತರ ಜಟಾಪಟಿ

ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಎಚ್.ಡಿ. ಕುಮಾರಸ್ವಾಮಿ ಅವರ ಮನೆ ಎದುರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಹಾಗೂ ಮಂಡ್ಯ ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರ ಮಧ್ಯೆ ಸೋಮವಾರ ಜಟಾಪಟಿ ನಡೆಯಿತು.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಬಿಟ್ಟು ಹೋಗದಂತೆ ಆಗ್ರಹಿಸಿ ಅಲ್ಲಿನ ಕಾರ್ಯಕರ್ತರು ಘೋಷಣೆ ಕೂಗಿದರು. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಅಲ್ಲಿನ ಕಾರ್ಯಕರ್ತರು ಒತ್ತಾಯಿಸಿದರು. ಜಟಾಪಟಿಯ ಮಧ್ಯೆಯೇ ಮಳವಳ್ಳಿಯ ಕಾರ್ಯಕರ್ತರೊಬ್ಬರು ಕೈ ಕುಯ್ದುಕೊಂಡರು. ಅವರನ್ನು ಕರೆಸಿದ ಕುಮಾರಸ್ವಾಮಿ ಬುದ್ಧಿವಾದ ಹೇಳಿ ಕಳುಹಿಸಿಕೊಟ್ಟರು.

Khadi India
सूक्ष्म, लघु एवं मध्यम उद्यम मंत्रालय, भारत सरकार
Ministry of Micro, Small and Medium Enterprises, Govt. of India

ಸಂಖ್ಯೆ: KNT/legal/Panel Advocate/2023-24 ದಿನಾಂಕ:25.03.2024

ವಕೀಲರುಗಳ ನೇಮಕಾತಿ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ (ಕೆವಿಐಸಿ), ರಾಜ್ಯ ಕಛೇರಿ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ವಿವಿಧ ನ್ಯಾಯಾಲಯಗಳಲ್ಲಿರುವ ಸಿವಿಲ್, ಕ್ರಿಮಿನಲ್, ಕಾರ್ಮಿಕ ಹಾಗೂ ಸೇವಾ ವಿಷಯಗಳ ಪ್ರಕರಣಗಳನ್ನು ನಡೆಸಲು ವಕೀಲರ ಸಂಘದಲ್ಲಿ ಸುಮಾರು ಹತ್ತು ವರ್ಷಗಳ ವಕೀಲ ವೃತ್ತಿಯಲ್ಲಿ ಅಭ್ಯಾಸ ಹಾಗೂ ಅನುಭವ ಹೊಂದಿರುವ ವಕೀಲರುಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು website **www.kvic.org.in** link-*Circulars>Orders>Standing Orders>Panel of Advocates and Advocates fee Scheme 2015 Standing order No.1738*. ನಿಂದ ಪಡೆದುಕೊಳ್ಳಬಹುದು. ಸ್ವ ದೃಢೀಕೃತ ಪ್ರಮಾಣಪತ್ರಗಳೊಂದಿಗೆ ಅರ್ಜಿಗಳನ್ನು (ಪಾಸ್‌ಪೋರ್ಟ್ ಅಳತೆಯ ಫೋಟೋದೊಂದಿಗೆ) ಕೆಳಸಹಿದಾರರಿಗೆ ದಿನಾಂಕ:**19.04.2024**ರೊಳಗೆ ಸಲ್ಲಿಸುವುದು. ಈ ಮೊದಲು ಜಾಹೀರಾತಿಗೆ ಪ್ರತಿಕ್ರಿಯೆಯಾಗಿ ಅರ್ಜಿ ಸಲ್ಲಿಸಿದವರು ಮತ್ತೆ ಅರ್ಜಿ ಸಲ್ಲಿಸಬೇಕಾಗಿಲ್ಲ. ಹೆಚ್ಚಿನ ವಿವರಗಳಿಗಾಗಿ ರಾಜ್ಯ ಕಛೇರಿ, ವಿಜಿನಾಪುರ, ದೂರವಾಣಿ ನಗರ, ಎಫ್‌ಸಿಐ ಗೋಡೌನ್ ಹತ್ತಿರ, ಬೆಂಗಳೂರು–560 016. ಕಚೇರಿಯನ್ನು ಸಂಪರ್ಕಿಸಬಹುದು. ದೂರವಾಣಿ: 080–25665883 / 9543425594, email : kvicblr@gmail.com

ಸಹಿ/– ರಾಜ್ಯ ನಿರ್ದೇಶಕರು

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ
(ಎಂ.ಎಸ್.ಎಂ.ಇ, ಭಾರತ ಸರ್ಕಾರ)

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/ಜೆ.ಡಿ.(ಟಿ.)/ಆರ್.ಇ.ಟ್ಯಾರೀಫ್/2024/1546 ದಿನಾಂಕ: 25–03–2024

ಸಾರ್ವಜನಿಕ ವಿಚಾರಣಾ ನೋಟೀಸ್

ವಿಷಯ: ದಿನಾಂಕ: 01.04.2024 ರಿಂದ 31.03.2027 ರ ಅವಧಿಯಲ್ಲಿ ಸ್ಥಾಪಿತವಾಗುವ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಮಿನಿ ಹೈಡಲ್, ಕಬ್ಬಿನ ಸಿಪ್ಪೆ ಆಧಾರಿತ ಕೋ–ಜನರೇಷನ್ ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ವಾಟರ್ ಕೂಲ್ಡ್‌ಕಂಡೆನ್ಸರ್ ಮತ್ತು ಏರ್ ಕೂಲ್ಡ್‌ಕಂಡೆನ್ಸರ್ ಹೊಂದಿರುವ ಬಯೋಮಾಸ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಿಗೆ ದರ ನಿಗದಿಪಡಿಸುವ ಬಗ್ಗೆ.

ವಿದ್ಯುಚ್ಛಕ್ತಿ ಕಾಯಿದೆ 2003 ರ ಸೆಕ್ಷನ್ 62 (1) (ಎ) ಜೊತೆಗೆ ಓದಿಕೊಳ್ಳಲಾದ ಸೆಕ್ಷನ್ 64 ಮತ್ತು 86 (1) (ಇ) ಹಾಗೂ ಇದರ ಪರವಾಗಿ ದತ್ತವಾದ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 01.04.2024 ರಿಂದ 31.03.2027 ರ ಅವಧಿಯಲ್ಲಿ ಸ್ಥಾಪಿತವಾಗುವ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಮಿನಿ ಹೈಡಲ್, ಕಬ್ಬಿನ ಸಿಪ್ಪೆ ಆಧಾರಿತ ಕೋ–ಜನರೇಷನ್ ವಿದ್ಯುತ್ ಉತ್ಪಾದನಾ ಘಟಕಗಳು (ಬಿಡ್ಡಿಂಗ್‌ಗಾಗಿ ಸೀಲಿಂಗ್ ದರ) ಮತ್ತು ವಾಟರ್ ಕೂಲ್ಡ್‌ಕಂಡೆನ್ಸರ್ ಮತ್ತು ಏರ್ ಕೂಲ್ಡ್‌ಕಂಡೆನ್ಸರ್ ಹೊಂದಿರುವ ಬಯೋಮಾಸ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಅನ್ವಯವಾಗುವಂತೆ ದರ ನಿಗದಿಪಡಿಸಲು ನಿಶ್ಚಯಿಸಿದೆ. ಈ ನಿಟ್ಟಿನಲ್ಲಿ ಆಯೋಗವು ವಿದ್ಯುತ್‌ದರ ನಿಗದಿಪಡಿಸಲು ಪ್ರಸ್ತಾವಿತ ಮಾಪನಗಳನ್ನು ಒಳಗೊಂಡ ಸಮಾಲೋಚನ ಪತ್ರವನ್ನು ಹೊರಡಿಸಿದೆ. ಮೇಲ್ಕಂಡ ಸಮಾಲೋಚನಾ ಪತ್ರವು ಆಯೋಗದ ಅಂತರ್ಜಾಲ ತಾಣ **https://kerc.karnataka.gov.in** ದಲ್ಲಿ ಲಭ್ಯವಿದೆ.

ಆಸಕ್ತರು ಮೇಲಿನ ವಿಷಯದ ಬಗ್ಗೆ ತಮ್ಮ ಸಲಹೆ / ಅನಿಸಿಕೆ / ಅಭಿಪ್ರಾಯಗಳನ್ನು ಲಿಖಿತ ರೂಪದಲ್ಲಿ ಆಯೋಗಕ್ಕೆ ಸಲ್ಲಿಸಲು ಕೋರಲಾಗಿದೆ. ಆಯೋಗವು ಈ ನಡುವೆ, ಸಾರ್ವಜನಿಕ ವಿಚಾರಣೆಯನ್ನು ದಿನಾಂಕ: **19–04–2024 ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ನಡೆಸಲು ತೀರ್ಮಾನಿಸಿದೆ.** ಆಸಕ್ತ ವ್ಯಕ್ತಿಗಳು ಆಯೋಗದ ಮುಂದೆ ಮೇಲೆ ತಿಳಿಸಿರುವ ದಿನದಂದು ಹಾಜರಾಗಿ, ಮೇಲ್ಕಂಡ ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳೇನಾದರೂ ಇದ್ದಲ್ಲಿ, ಮಂಡಿಸಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/4403/2023–24

DH DECCAN HERALD | ಪ್ರಜಾವಾಣಿ

ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಟೆಲಿವಿಷನ್ ಪಾಲುದಾರರು: NEWS 1st
ಪ್ರಾಯೋಜಕರು: AD6 advertising

ಬೆಂಗಳೂರು: 06-07 ಏಪ್ರಿಲ್, 2024 ತ್ರಿಪುರವಾಸಿನಿ, ಅರಮನೆ ಮೈದಾನ
ಹುಬ್ಬಳ್ಳಿ: 13-14 ಏಪ್ರಿಲ್, 2024 ರಾಯ್ಕರ್ ಪ್ರದರ್ಶನ ಮೈದಾನ

ವಿವಿಧ ಸಾಧ್ಯತೆಗಳನ್ನು ಅನ್ವೇಷಿಸಿ, ಸರಿಯಾದ ಆಯ್ಕೆ ಮಾಡಿ!

ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!

ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಎಜುಕೇಶನ್ ಎಕ್ಸ್‌ಪೋ – ಎಡ್ಯುವರ್ಸ್'ನಲ್ಲಿ ಪಾಲ್ಗೊಳ್ಳಿರಿ ಮತ್ತು ಅಸೀಮಿತ ಸಾಧ್ಯತೆಗಳ ಬಾಗಿಲುಗಳು ತೆರೆದಿರುವ ಅನುಭವ ನಿಮ್ಮದಾಗಿಸಿಕೊಳ್ಳಿ. ಅಸಂಖ್ಯಾತ ವಿಭಿನ್ನ ಕೋರ್ಸ್‌ಗಳ ಶ್ರೇಣಿಗಳ ಬಗ್ಗೆ ತಿಳಿಯಿರಿ ಮತ್ತು ಉನ್ನತ ದರ್ಜೆಯ ಸಂಸ್ಥೆಗಳು ನೀಡುತ್ತಿರುವ ವೈವಿಧ್ಯಮಯ ಆಯ್ಕೆಗಳಲ್ಲಿನ ನಿಮ್ಮ ನೆಚ್ಚಿನ ಕೋರ್ಸ್ ಆಯ್ಕೆ ಮಾಡಿಕೊಳ್ಳಿ. ನೀವು ಇಂಜಿನಿಯರ್, ಡಾಕ್ಟರ್, ಡಿಸೈನರ್ ಅಥವಾ ಎಂಟರ್‌ಪ್ರಿನ್ಯೂರ್ ಯಾವುದೇ ಆಕಾಂಕ್ಷಿಯಾಗಿದ್ದರೂ ಸರಿ, ಈ ನಮ್ಮ ಎಕ್ಸ್‌ಪೋ'ದಲ್ಲಿ ಅತ್ಯುತ್ತ ಶೈಕ್ಷಣಿಕ ಸಂಸ್ಥೆಗಳು ನಿಮಗೆ ಒಟ್ಟಾಗಿ ಲಭಿಸುತ್ತವೆ ಮತ್ತು ನಿಮ್ಮನ್ನು ಯಶಸ್ಸಿನೆಡೆಗೆ ಮುನ್ನಡೆಸಲು ಮಾರ್ಗದರ್ಶನ ನೀಡಲು ಸಿದ್ಧವಾಗಿರುತ್ತವೆ.

ಸಿಇಟಿ ಮತ್ತು ಕಾಮೆಡ್–ಕೆ ಸಿಬ್ಬಂದಿಗಳಿಂದ ಉಚಿತ ಸಮಾಲೋಚನಾ ಉಪನ್ಯಾಸಗಳನ್ನು ಪಡೆಯಿರಿ

ಸಿಇಟಿ ಮತ್ತು ನೀಟ್ ಮಾದರಿ ಪರೀಕ್ಷೆಗಳಿಗೆ ಈಗಲೇ ನೋಂದಣಿ ಮಾಡಿಕೊಳ್ಳಿ ಮತ್ತು ಟಾಪರ್‌ಗಳು ಬಹುಮಾನ ಗೆಲ್ಲಿರಿ!
ಕೋಡ್ ಸ್ಕ್ಯಾನ್ ಮಾಡಿ

University Pavilion Sponsors
CMR UNIVERSITY
DAYANANDA SAGAR UNIVERSITY
MANIPAL ACADEMY of HIGHER EDUCATION BENGALURU CAMPUS (Institution of Eminence Deemed to be University)
RAMAIAH UNIVERSITY OF APPLIED SCIENCES
ICFAI Foundation for Higher Education (Deemed-to-be-University under Section 3 of the UGC Act, 1956)
REVA UNIVERSITY Bengaluru, India
GARDEN CITY UNIVERSITY EMPHASIS ON LIFE

Gold Sponsors
ABBS AUTONOMOUS Affiliated to Bangalore University
CAMBRIDGE INSTITUTE OF TECHNOLOGY An Autonomous Institution
EAST POINT GROUP OF INSTITUTIONS
KLE ACADEMY OF HIGHER EDUCATION AND RESEARCH, BELAGAVI (Deemed-to-be-University)
KAMMAVARI SANGHAM GROUP OF INSTITUTIONS
KLE Technological University
Karnataka Bank
NAGARJUNA COLLEGE OF ENGINEERING & TECHNOLOGY
THE Oxford EDUCATIONAL INSTITUTIONS
SAPTHAGIRI NPS UNIVERSITY

Silver Sponsors
EAST WEST GROUP OF INSTITUTIONS BENGALURU
MS ENGINEERING COLLEGE
NEW HORIZON COLLEGE OF ENGINEERING
SAMBHRAM INSTITUTIONS
JSS SCIENCE AND TECHNOLOGY UNIVERSITY MYSURU

Exhibitors
AIMS INSTITUTES Peenya, Bangalore
AMRITA School of Engineering Bengaluru
ATRIA
Don Bosco Group of Institutions
HARSHA INSTITUTIONS
IAS BABA
IIBS BENGALURU International Institute of Business Studies
HINDUSTAN COLLEGE (Affiliated to University of Mysore)
PES UNIVERSITY
SDMCET An Institution with a Difference
Dr. S.R. Chandrasekhar Institute of Speech and Hearing
ORIENT FLIGHTS AVIATION ACADEMY
MIT WORLD PEACE UNIVERSITY PUNE
VIDYASHILP UNIVERSITY
VVCE
Vision PU College

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ – 9986006598/ಬೆಂಗಳೂರು

ಸುಭಾಷಿತ

ಚಿಂತಿಸಿ, ನಂಬಿಕೆ ಇಡಿ, ಕನಸು ಕಾಣಿ ಮತ್ತು ಮುಂದಡಿ ಇಡಿ.

–ವಾಲ್ಟ್ ಡಿಸ್ನಿ

ಚುನಾವಣಾ ಬಾಂಡ್ ಯೋಜನೆ ವಿಸ್ತೃತ ತನಿಖೆ ಅಗತ್ಯ

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಬಹಳಷ್ಟು ಮಾಹಿತಿಯು ಈಚಿನ ದಿನಗಳಲ್ಲಿ ಬಹಿರಂಗಗೊಂಡಿದೆ. ಈ ಮಾಹಿತಿಯು ಸಾರ್ವಜನಿಕ ಚರ್ಚೆಗಳಿಗೆ, ರಾಜಕೀಯ ಪಕ್ಷಗಳ ನಡುವೆ ಆರೋಪ-ಪ್ರತ್ಯಾರೋಪಕ್ಕೆ ಮಾತ್ರ ಸೀಮಿತ ಆಗಬಾರದು. ಬಾಂಡ್ ವಿಚಾರವು ರಾಜಕೀಯ ವಲಯದಲ್ಲಿ ಒಂದಿಷ್ಟು ಮಾತುಗಳಿಗೆ ಆಹಾರವಾಗುತ್ತದೆ ಎಂಬುದು ನಿಜ. ಆದರೆ ಬಾಂಡ್‌ಗಳ ಕಾನೂನು ಪರಿಣಾಮಗಳು ಹಾಗೂ ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದರ ಬಗ್ಗೆ ಅಥವಾ ಬಾಂಡ್‌ಗಳು ಹೊಂದಿದ್ದ ಶಕ್ತಿಯ ಬಗ್ಗೆ ವಿಸ್ತೃತ ಪರಿಶೀಲನೆ ನಡೆಯಬೇಕು. ಯುಪಿಎ ಸರ್ಕಾರದ ಎರಡನೇ ಅವಧಿಯಲ್ಲಿ ದೇಶದಲ್ಲಿ ಭಾರಿ ಸದ್ದು ಮಾಡಿದ 2-ಜಿ ತರಂಗಾಂತರ ಹಂಚಿಕೆ ಹಗರಣಕ್ಕೂ ಚುನಾವಣಾ ಬಾಂಡ್ ಹಗರಣಕ್ಕೂ ಹೋಲಿಕೆ ಇರುವಂತಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಚುನಾವಣಾ ಬಾಂಡ್ ಯೋಜನೆಯನ್ನು ರೂಪಿಸಿ, ಅದನ್ನು ಜಾರಿಗೆ ತಂದಿತು. ಈ ಬಾಂಡ್ ಯೋಜನೆಯ ಅತಿದೊಡ್ಡ ಫಲಾನುಭವಿ ಬಿಜೆಪಿ. ಹೀಗಾಗಿ, ಬಾಂಡ್ ಯೋಜನೆ ಕುರಿತ ಪ್ರಶ್ನೆಗಳಿಗೆ ಆ ಪಕ್ಷವೇ ಉತ್ತರ ನೀಡಬೇಕು. ಆದರೆ, ಬಾಂಡ್ ಮೂಲಕ ಹಣ ಪಡೆದ ಇತರ ಪಕ್ಷಗಳು ಕೂಡ ಉತ್ತರ ನೀಡಬೇಕಾದ ಅಗತ್ಯ ಇದೆ.

ಬಾಂಡ್ ಯೋಜನೆಯಲ್ಲಿ ನೋಡಲ್ ಏಜೆನ್ಸಿಯಾಗಿ ಇದ್ದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಬಾಂಡ್‌ಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಬಹಿರಂಗ ಪಡಿಸುವಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು, ಕಾಲಕಾಲಕ್ಕೆ ಅದು ನೀಡಿದ ಕಟು ನಿರ್ದೇಶನಗಳು ಬಹುದೊಡ್ಡ ಕೆಲಸ ನಿರ್ವಹಿಸಿವೆ. ಬಾಂಡ್ ಮೂಲಕ ಆಗಿರುವ ಹಲವು ಪಾವತಿಗಳ ಹಿಂದೆ ಸ್ವಹಿತಾಸಕ್ತಿ ಇದೆ, ಅಕ್ರಮ ಅನ್ನಿಸುವ ವಿದ್ಯಮಾನಗಳು ಅದರ ಹಿಂದೆ ಇವೆ ಹಾಗೂ ಅನುಮಾನಾಸ್ಪದ ಸಂದರ್ಭಗಳು ಕೂಡ ಇವೆ. ಇವೆಲ್ಲವೂ ಭ್ರಷ್ಟಾಚಾರ, ಅಧಿಕಾರದ ದುರ್ಬಳಕೆ ಹಾಗೂ ಅಕ್ರಮಗಳನ್ನು ಸೂಚಿಸುತ್ತಿರಬಹುದು. ಮೂರು ವರ್ಷಗಳ ಅವಧಿಯಲ್ಲಿ ಲಾಭವನ್ನೇ ಕಾಣದ 16 ಕಂಪನಿಗಳು ಒಟ್ಟು ₹ 710 ಕೋಟಿ ಹಣವನ್ನು ಬಾಂಡ್ ಮೂಲಕ ಪಾವತಿಸಿವೆ ಎಂದು ವರದಿಯಾಗಿದೆ. ಬಿಜೆಪಿಗೆ ಹಣ ಪಾವತಿ ಮಾಡಿದ ಕೆಲವು ಕಂಪನಿಗಳಿಗೆ ಸರ್ಕಾರದ ಕಡೆಯಿಂದ, ಅವು ಪಾವತಿಸಿದ ಮೊತ್ತಕ್ಕಿಂತ ಹಲವು ಪಟ್ಟು ಹೆಚ್ಚಿನ ಮೊತ್ತದ ಕಾಮಗಾರಿಗಳ ಗುತ್ತಿಗೆ ಸಿಕ್ಕಿದೆ ಎನ್ನಲಾಗಿದೆ. ಕೇಂದ್ರದ ತನಿಖಾ ಸಂಸ್ಥೆಗಳಾದ ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಆದಾಯ ತೆರಿಗೆ ಇಲಾಖೆಯಿಂದ ದಾಳಿಗೆ ಒಳಗಾದ ಕೆಲವು ಕಂಪನಿಗಳು, ದಾಳಿ ನಡೆದ ನಂತರದಲ್ಲಿ ಬಾಂಡ್ ಮೂಲಕ ಹಣ ಪಾವತಿ ಮಾಡಿವೆ. ದಾಳಿ ಹಾಗೂ ದೇಣಿಗೆಯ ನಡುವೆ ಸಂಬಂಧ ಇರುವ ಸೂಚನೆಯನ್ನು ಇದು ನೀಡುತ್ತಿದೆ. ಕೆಲವು ಕಂಪನಿಗಳು ಹಾಗೂ ವ್ಯಕ್ತಿಗಳಿಗೆ ವಿರೋಧ ಪಕ್ಷಗಳ ವಿರುದ್ಧ ಮಾತನಾಡುವಂತೆ ಒತ್ತಡ ಹೇರಲಾಗಿತ್ತು ಎಂಬ ಆರೋಪಗಳು ಕೂಡ ಇವೆ. ದಾಳಿಗಳು ಹಾಗೂ ದೇಣಿಗೆಗಳ ನಡುವೆ ಸಂಬಂಧ ಇತ್ತು ಎಂದಾದರೆ ಅದು ಭ್ರಷ್ಟಾಚಾರ ಹಾಗೂ ಅಧಿಕಾರದ ದುರ್ಬಳಕೆ ಆಗುತ್ತದೆ.

ದಾಳಿಗಳು ಹಾಗೂ ದೇಣಿಗೆಗಳ ನಡುವೆ ಸಂಬಂಧ ಇತ್ತು ಎಂದಾದರೆ ಅದು ಭ್ರಷ್ಟಾಚಾರ ಹಾಗೂ ಅಧಿಕಾರದ ದುರ್ಬಳಕೆ ಆಗುತ್ತದೆ

ಬಾಂಡ್‌ಗಳು ರಾಜಕೀಯ ದೇಣಿಗೆಯ ಮುಖ್ಯ ಮೂಲವಾಗಿದ್ದ ಕಾರಣಕ್ಕೆ ದೇಣಿಗೆ ನೀಡಿದ ಸಂದರ್ಭ ಹಾಗೂ ದೇಣಿಗೆಗಳ ಬಗ್ಗೆ ತನಿಖೆ ಆಗಬೇಕು. ಬಾಂಡ್ ವಿಚಾರದಲ್ಲಿ ಯಾವ ತಪ್ಪೂ ಆಗಿಲ್ಲ ಎಂದು ಸರ್ಕಾರ ಹೇಳಿದೆ. ಹೀಗಾಗಿ, ಅದು ಯಾವುದೇ ತನಿಖೆಗೆ ಮುಂದಾಗುವುದನ್ನು ನಿರೀಕ್ಷಿಸುವಂತಿಲ್ಲ. ಆದರೆ, ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದು ಹೇಳಿರುವ ಸುಪ್ರೀಂ ಕೋರ್ಟ್ ಈ ವ್ಯವಸ್ಥೆಯ ಬಗ್ಗೆ ಇರುವ ಆರೋಪಗಳ ಬಗ್ಗೆ ಸ್ವತಂತ್ರ ತನಿಖೆಗೆ ಆದೇಶಿಸಬಹುದು. ವ್ಯಕ್ತಿಗಳಿಗೆ ಅಥವಾ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಬಾಂಡ್‌ಗಳನ್ನು ಬಳಸಲಾಗುತ್ತಿತ್ತು ಎಂದಾದರೆ ಅದು ಅಪರಾಧವೇ ಆಗುತ್ತದೆ. ಹಣ ಸುಲಿಯುವುದಕ್ಕಾಗಿ ದಾಳಿಗಳನ್ನು ಬಳಸಿಕೊಳ್ಳಲಾಗುತ್ತಿತ್ತು ಎಂದಾದರೆ ಅದು ಕೂಡ ಅಪರಾಧವೇ ಆಗುತ್ತದೆ. ಕಂಪನಿಗಳ ಮೇಲೆ ದಾಳಿ ನಡೆಸಿದ ತನಿಖಾ ಸಂಸ್ಥೆಗಳು, ಆ ಕಂಪನಿಗಳು ಬಾಂಡ್ ಖರೀದಿಸಿದ ನಂತರದಲ್ಲಿ ತನಿಖೆಯನ್ನು ಮುಂದುವರಿಸಿಲ್ಲ ಎಂದಾದರೆ, ನಿಷ್ಕ್ರಿಯತೆಗೆ ಆ ಸಂಸ್ಥೆಗಳನ್ನು ಹೊಣೆಗಾರರನ್ನಾಗಿಸಬೇಕು. ಬಾಂಡ್ ಯೋಜನೆಯು ಅಕ್ರಮ ಎಂದಾದಲ್ಲಿ, ಅದರ ಮೂಲಕ ಸಂಗ್ರಹಿಸಿದ ಹಣವನ್ನು ಮರಳಿಸುವ ಕೆಲಸ ಆಗಬೇಡವೇ? ಈ ಯೋಜನೆಯ ಕುರಿತಾದ ಸಮಗ್ರವಾದ ತನಿಖೆಯು ಎಲ್ಲ ಪಕ್ಷಗಳು ಹಾಗೂ ಅವು ಮುನ್ನಡೆಸಿದ್ದ ಸರ್ಕಾರವನ್ನು ಒಳಗೊಳ್ಳುತ್ತದೆ; ಬಿಜೆಪಿ ನೇತೃತ್ವದ ಸರ್ಕಾರವನ್ನು ಮಾತ್ರವೇ ಅಲ್ಲ. ದತ್ತಾಂಶವನ್ನು ಬಿಡುಗಡೆ ಮಾಡುವ ವಿಚಾರವಾಗಿ ಕೋರ್ಟ್‌ಗೆ ಎಸ್‌ಬಿಐ ತಪ್ಪು ಹೇಳಿಕೆ ನೀಡಿತ್ತು ಎಂಬುದು ಈಗ ಸ್ಪಷ್ಟವಾಗಿದೆ. ಹೀಗಾಗಿ, ನ್ಯಾಯಾಂಗ ನಿಂದನೆಯ ವಿಚಾರವು ಈಗಲೂ ಪ್ರಸ್ತುತವಾಗುತ್ತದೆ.

ದಿನದ ಟ್ವೀಟ್

ನಾವೂ ಜಾಗೃತರಾಗೋಣ

...ಹೈದರಾಬಾದಿನಲ್ಲಿ ಆಹಾರ ಕಲಬೆರಕೆ ಮಿತಿಮೀರಿದೆ. ಪ್ಯಾರಾಚೂಟ್ ಕೊಬ್ಬರಿಎಣ್ಣೆಯಿಂದ ರೆಡ್‌ಲೇಬಲ್ ಚಹಾದವರೆಗೆ, ಸರ್ಫ್ ಎಕ್ಸೆಲ್‌ನಿಂದ ಎವರೆಸ್ಟ್ ಮಸಾಲದವರೆಗೆ ಹಲವು ಬಗೆಯ ಕಲಬೆರಕೆ ಪದಾರ್ಥಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸುತ್ತಿದ್ದ ಗುಂಪನ್ನು ಫೆ. 24ರಂದು ಪೊಲೀಸರು ಪತ್ತೆ ಹಚ್ಚಿದ್ದಾರೆ. ಹೀಗಾಗಿ, ಕಲಬೆರಕೆ ಆಹಾರ ಪದಾರ್ಥದ ಪತ್ತೆಗೆ ಅಗತ್ಯವಾದ ಕೆಲವು ತಂತ್ರಗಳನ್ನು ಅರಿಯಬೇಕಾದ ಅಗತ್ಯವಿದೆ...

ಸುಧಾಕರ್ ಉದುಮುಲ, ಪತ್ರಕರ್ತ, ಲೇಖಕ

ಕಿಡಿನುಡಿ

ಕಾಂಗ್ರೆಸ್‌ನವರ ಪ್ರಕಾರ ಬಿಜೆಪಿ ಅಭ್ಯರ್ಥಿಗೆ ಹಿಂದಿ ಬರೋಲ್ಲ, ಹಾಗಾಗಿ ಲೋಕಸಭೆಗೆ ಹೋಗೋದು ಸೂಕ್ತವಲ್ಲ. ಬಿಜೆಪಿ ಅಭ್ಯರ್ಥಿ- '6 ತಿಂಗಳಲ್ಲಿ ಹಿಂದಿ ಕಲಿತು ಮಾತನಾಡುತ್ತೇನೆ'. ಹಿಂದಿ ಏಕೆ ಕಲಿಯಬೇಕು? ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡೋಕ್ಕೆ ಅವಕಾಶವಿದೆ. ಸ್ವಾಭಿಮಾನದಿಂದ 'ಕನ್ನಡದಲ್ಲೇ ಮಾತನಾಡುತ್ತೇನೆ' ಅಂತ ಹೇಳೋಕ್ಕೆ ಇಬ್ಬರಿಗೂ ಧೈರ್ಯವಿಲ್ಲ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 26-3-1999

• ಮಠ ವಿವಾದ: ಸಾವಳಗಿ ಸ್ವಾಮೀಜಿ ರಾಜೀನಾಮೆ

ಹುಬ್ಬಳ್ಳಿ, ಮಾರ್ಚ್ 25– ಮೂರುಸಾವಿರ ಮಠದ ಉತ್ತರಾಧಿಕಾರಿ ವಿವಾದ ಇತ್ಯರ್ಥಕ್ಕಾಗಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ರಚಿಸಲಾಗಿರುವ ಪಂಚ ಮಠಾಧೀಶ ಸಮಿತಿಗೆ ರಾಜೀನಾಮೆ ನೀಡಿರುವುದಾಗಿ ಸಮಿತಿಯ ಇನ್ನೊಬ್ಬ ಸದಸ್ಯ ಸಾವಳಗಿ ಶಿವಲಿಂಗೇಶ್ವರ ಕುಮಾರೇಂದ್ರ ಸ್ವಾಮೀಜಿ ಅವರು ಇಂದು ಪ್ರಕಟಿಸಿದ್ದಾರೆ.

ಇದೇ ವೇಳೆಗೆ ರುದ್ರಮುನಿ ದೇವರು ಅವರ ಬೆಂಬಲಿಗರು, ಪಂಚ ಮಠಾಧೀಶ ಸಮಿತಿಯು ಮಾರ್ಚ್ 27ರಂದು ಬೆಂಗಳೂರಿನಲ್ಲಿ ಸಭೆ ನಡೆಸಬಾರದು ಎಂದು ಆಗ್ರಹಿಸಿ ಹುಬ್ಬಳ್ಳಿ- ಧಾರವಾಡ ಲಿಂಗಾಯತ ಸಮಿತಿ (ಕೇಶ್ವಾಪೂರ) ಆಶ್ರಯದಲ್ಲಿ ಇಂದು ಇಲ್ಲಿ ರಸ್ತೆತಡೆ ಹಾಗೂ ಧರಣಿ ನಡೆಸಿದರು.

ಈ ಬೆಳವಣಿಗೆಗಳಿಂದಾಗಿ ಮೂರುಸಾವಿರ ಮಠದ ಉತ್ತರಾಧಿಕಾರಿ ವಿವಾದವು ಕುತೂಹಲಕರ ತಿರುವು ಪಡೆದುಕೊಂಡಿದೆ.

• ಪರೀಕ್ಷೆ ನಕಲಿಗೆ ನೆರವು, ಲಘು ಲಾಠಿಪ್ರಹಾರ

ಕಲ್ಬುರ್ಗಿ, ಮಾರ್ಚ್ 25– ಇಲ್ಲಿನ ಐವಾನ್–ಇ–ಶಾಹಿ ಪ್ರದೇಶದಲ್ಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡಲು ವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದವರ ಮೇಲೆ ಪೊಲೀಸರು ಇಂದು ಬೆಳಿಗ್ಗೆ ಲಘು ಲಾಠಿ ಪ್ರಹಾರ ನಡೆಸಿ ಅವರನ್ನು ಚದುರಿಸಿದರು.

ಭಾರಿ ಪ್ರಮಾಣದಲ್ಲಿ ಪರೀಕ್ಷಾ ಅಕ್ರಮ ಮತ್ತು ಪ್ರಶ್ನೆಪತ್ರಿಕೆ ಬಹಿರಂಗದ ಪ್ರಕರಣ ಈ ಪ್ರದೇಶದ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಿತೆಂದು ಆರೋಪಿಸಲಾಗಿದೆ. ನಕಲು ಮಾಡುತ್ತಿದ್ದ ಏಳು ಮಂದಿಯನ್ನು ಡಿಬಾರ್ ಮಾಡಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 26-3-1974

• ಏಳನೇ ವಿಕೆಟ್ಟಿಗೆ ಸೆಂಚುರಿ ಜೊತೆ ಆಟ

ಜೈಪುರ, ಮಾರ್ಚ್ 25– ಶ್ರೇಷ್ಠ ಮಟ್ಟದ ವಿಕೆಟ್ ಕೀಪರ್, ಬ್ಯಾಟ್ಸ್‌ಮನ್ ಕಿರ್ಮಾನಿ (60) ಹಾಗೂ ಎ.ವಿ. ಜಯಪ್ರಕಾಶ್ (ಔಟಾಗದೆ 51) ಅವರು 7ನೇ ವಿಕೆಟ್ ಜೋಡಿಯಲ್ಲಿ ಸೇರಿಸಿದ 114 ರನ್ನುಗಳ ನೆರವಿನಿಂದ ರಾಜಸ್ಥಾನದ ಮೇಲಿನ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕ ಉತ್ತಮ ಸ್ಥಿತಿಯಲ್ಲಿದೆ.

ರಾಜಸ್ಥಾನ ತಂಡವನ್ನು 176 ರನ್ನಿಗೆ ಔಟ್ ಮಾಡಿ 100 ರನ್ನು ಮೊದಲ ಇನ್ನಿಂಗ್ಸ್ ಲೀಡ್ ಗಿಟ್ಟಿಸಿದ ಕರ್ನಾಟಕ ತಂಡದವರು 3ನೇ ದಿನದ ಆಟ ಮುಗಿದಾಗ ತಮ್ಮ ಎರಡನೇ ಇನಿಂಗ್ಸ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 197 ರನ್ ಗಳಿಸಿದ್ದು, ಒಟ್ಟು 297 ರನ್ನು ಮುಂದೆ ಇದ್ದಾರೆ.

• ಪೊಲೀಸರ ಕಾರ್ಯದಲ್ಲಿ ಪುಢಾರಿಗಳ ಪ್ರವೇಶ ಬೇಡ: ಅರಸು ಮನವಿ

ಬೆಂಗಳೂರು, ಮಾರ್ಚ್ 25– 'ಹೆಜ್ಜೆ ಹೆಜ್ಜೆಗೆ ತೊಡಕು. ಅವರನ್ನು ಅಲ್ಲಿಗೆ ವರ್ಗ ಮಾಡಿ, ಇವರನ್ನು ಹಿಡಿಯಿರಿ, ಅವರನ್ನು ಬಿಡಿ ಎಂದು ಪ್ರಭಾವ ಬೀರುವುದು. ಪುಢಾರಿಗಳು ಮತ್ತು ರಾಜಕೀಯ ಮುಖಂಡರಿಂದಲೇ ಗೊಂದಲಮಯ ವಾತಾವರಣ ಸೃಷ್ಟಿ'– ಪೊಲೀಸರು ಕಾನೂನು ಮತ್ತು ಶಾಂತಿ ಪಾಲನೆ ಮಾಡಲು ಅಡ್ಡಿಗಳು ಬರುತ್ತಿರುವ ಬಗ್ಗೆ ಮುಖ್ಯಮಂತ್ರಿ ಡಿ.ದೇವರಾಜ ಅರಸು ಇಂದು ಇಲ್ಲಿ ವಿಷಾದಿಸಿ, 'ದಯವಿಟ್ಟು ಪೊಲೀಸರ ಕಾರ್ಯದಲ್ಲಿ ಮಧ್ಯಪ್ರವೇಶಿಸಿ ಅವರ ಹೆಸರಿಗೆ ಕಳಂಕ ತರಬೇಡಿ' ಎಂದು ಎಲ್ಲ ವರ್ಗದ ಮುಖಂಡರಿಗೆ ಮನವಿ ಮಾಡಿದರು.

ಎಂದಿನಂತೆ ಉತ್ತರವಿಲ್ಲದೇ ಉಳಿಯುವ ಪ್ರಶ್ನೆ: ಯಾರು, ಎಲ್ಲಿಂದ ಸರಿಪಡಿಸುವುದು?

ಚುನಾವಣಾ ರಾಜಕಾರಣದಲ್ಲಿ 'ಮಕ್ಕಳಾಟ'

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ನಾಗರಿಕ ಸಮಾಜ ವ್ಯವಸ್ಥೆಯ ವಿಕಸನದ ಭಾಗವಾಗಿ ಜಾರಿಯಲ್ಲಿರುವ ಪ್ರಜಾತಂತ್ರವನ್ನು ಜಗತ್ತಿನ ಬಹಳಷ್ಟು ರಾಷ್ಟ್ರಗಳು ಆಡಳಿತ ಪದ್ಧತಿಯಾಗಿ ಅಳವಡಿಸಿಕೊಂಡಿವೆ. ಆದರೆ ಈ ವ್ಯವಸ್ಥೆ ಎಲ್ಲೆಡೆ ಒಂದೇ ನಮೂನೆ ಆಗಿಲ್ಲ. ಕೆಲವೆಡೆ ಬೆಳೆದು ಪ್ರಬುದ್ಧತೆ ಗಳಿಸಿದ್ದರೆ, ಹಲವೆಡೆ ಇನ್ನೂ ಎಳಸು, ಉಳಿದೆಡೆ ಕಲಸುಮೇಲೋಗರ. ನಮ್ಮದೇ ಅತ್ಯಂತ ಹಳೆಯದು ಎಂದು ಹೆಮ್ಮೆಪಡುವವರು ಇರುವಂತೆ, ತಮ್ಮದು ಅತಿದೊಡ್ಡದು ಎಂದು ಬೆನ್ನು ತಟ್ಟಿಕೊಳ್ಳುವವರೂ ಇದ್ದಾರೆ. ಪ್ರಜಾಪ್ರಭುತ್ವ ಎಂಬುದು ಶೋಷಕ ಪರಂಪರೆಯ ಮತ್ತೊಂದು ರೂಪವಷ್ಟೇ ಎಂಬ ವಾದದ ಜೊತೆಗೆ, ಅದಕ್ಕಿಂತ ಉತ್ತಮ ವ್ಯವಸ್ಥೆ ಆವುದು ಎಂಬ ಪ್ರಶ್ನೆಯೂ ಇದೆ.

ಇವೆಲ್ಲದರ ನಡುವೆ, ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂಬ ಬಲವಾದ ಕೂಗು ಕೂಡ ಎಲ್ಲೆಡೆ ಕೇಳಿಬರುತ್ತಿದೆ. ಹಾಗಾದರೆ ಪ್ರಜಾತಂತ್ರಕ್ಕೆ ಒದಗಿರುವ ಅಪಾಯ ಯಾವ ಬಗೆಯದು? ಯಾರು ಕಾರಣ?

ಸ್ವೀಡನ್ ದೇಶದ ಗೋಥೆನ್‌ಬರ್ಗ್ ವಿಶ್ವವಿದ್ಯಾಲಯದ ವಿ-ಡೆಮ್ (ವೆರೈಟೀಸ್ ಆಫ್ ಡೆಮಾಕ್ರಸೀಸ್) ಸಂಸ್ಥೆ ಹಿಂದಿನ ಎಂಟು ವರ್ಷಗಳಿಂದ ತನ್ನದೇ ಆದ ಬಹು ಆಯಾಮದ ಅಳತೆಗೋಲು ಬಳಸಿ, ವಿಶ್ವದೆಲ್ಲೆಡೆ ಪ್ರಜಾಪ್ರಭುತ್ವ ವ್ಯವಸ್ಥೆಯ ಆಗುಹೋಗುಗಳನ್ನು ಅವಲೋಕಿಸುತ್ತಿದೆ. ಈ ಸಂಸ್ಥೆ ಬಿಡುಗಡೆ ಮಾಡಿರುವ 2024ನೇ ಸಾಲಿನ ಡೆಮಾಕ್ರಸಿ ರಿಪೋರ್ಟಿನಲ್ಲಿ, 'ವಿಶ್ವದೆಲ್ಲೆಡೆ ಪ್ರಜಾಪ್ರಭುತ್ವವು ನಿರಂಕುಶಶಾಹಿ ಆಗುವ ಪ್ರವೃತ್ತಿ ಪ್ರಬಲವಾಗಿ ಮುಂದುವರಿಯುತ್ತಿದೆ' ಎಂದು ಆಧಾರಸಹಿತ ಮಂಡಿಸಿದೆ. ಚಾಲ್ತಿಯಲ್ಲಿರುವ ಪ್ರಜಾತಂತ್ರದ ಗುಣಮಟ್ಟ ಕುರಿತ ವಿ-ಡೆಮ್ ಸಂಸ್ಥೆಯ ಶೋಧನೆ, ವಿಶ್ಲೇಷಣೆಯಲ್ಲಿ ಪ್ರಜಾಪ್ರಭುತ್ವವಾದಿಗಳು ಆತಂಕಪಡಲು ಬಹಳಷ್ಟು ಸಾಮಗ್ರಿ ಇದೆ.

ವರದಿಯಲ್ಲಿ ಉಲ್ಲೇಖಿಸಿದಂತೆ, 2.8 ಶತಕೋಟಿ ಪ್ರಜೆಗಳನ್ನು ಒಳಗೊಂಡ 47 ದೇಶಗಳಲ್ಲಿ ನಿರಂಕುಶೀಕರಣ ಪ್ರಕ್ರಿಯೆ ಜಾರಿಯಲ್ಲಿದೆ. ಜಗತ್ತಿನ ಜನಸಂಖ್ಯೆಯ ಪ್ರತಿಶತ 18ರಷ್ಟು ಭಾಗವನ್ನು ಹೊಂದಿರುವ ಭಾರತವು ನಿರಂಕುಶಮುಖೀ ದೇಶಗಳಲ್ಲಿ ನೆಲಸಿರುವ ಜನಸಂಖ್ಯೆಯ ಅರ್ಧ ಭಾಗವನ್ನು ಒಳಗೊಂಡಿದೆ! ಭಾರತ ಅಳವಡಿಸಿಕೊಂಡಿರುವ ಪ್ರಜಾಸತ್ತಾತ್ಮಕ ಆಡಳಿತದ ನಿಜರೂಪದಲ್ಲಿ ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಊಳಿಗಮಾನ್ಯ ಪದ್ಧತಿ ಹಾಗೂ ಸರ್ವಾಧಿಕಾರದ ಛಾಯೆಗಳು ಅವಕಾಶವಿರುವೆಡೆ ಸಮಯಾನುಸಾರ ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಈಗ ಹೊಸದಾಗಿ ಕಾರ್ಪೊರೇಟ್ ವಲಯದ ಹಾವಳಿ ಬೇರೆ ಕಾಲಿರಿಸಿದೆ.

ಮತದಾರರು ಸರಿಯಾದ ನಿರ್ಧಾರ ತೆಗೆದುಕೊಳ್ಳದಿದ್ದರೆ 'ಇದೇ ಕೊನೆಯ ಚುನಾವಣೆ ಆಗಲಿದೆ' ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ದನಿಯಲ್ಲಿ, ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಒದಗಿರುವ ಅಪಾಯದ ಸೂಚನೆಯಿದೆ. ಅವರು ಪ್ರಜಾಪ್ರಭುತ್ವ ಉಳಿಸುವ ಕರ್ತವ್ಯವನ್ನು ಪ್ರಜೆಗಳಿಗೆ ನೆನಪು ಮಾಡಿರುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಪ್ರಜಾತಂತ್ರದ ಜೀವಾಳವಾದ ಚುನಾವಣೆಗಳನ್ನು ಅಡ್ಡದಾರಿ ಹಿಡಿಸುವಲ್ಲಿ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ವಹಿಸುತ್ತಿರುವ ಪಾತ್ರದ ಬಗ್ಗೆ ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಮಾತನಾಡದಷ್ಟು, ನಿಲುವು ತಾಳಲಾರದಷ್ಟು ಜಾಣತನ ತೋರಿದರೆ ಹೇಗೆ? ಇದೀಗ ಲೋಕಸಭಾ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಯಲ್ಲಿ ವಂಶಾಡಳಿತ ಗುಣಗಳು ಎಲ್ಲ ಪಕ್ಷಗಳಲ್ಲೂ ಬಹುಮುಖ್ಯ ಲಕ್ಷಣಗಳಾಗಿ ಹೊಳೆಯುತ್ತಿರುವುದು ಯಾವುದರ ದ್ಯೋತಕ?

ಕೊಡಗು ಜಿಲ್ಲೆಯಲ್ಲಿ ಕೊಡವ ಕುಟುಂಬಗಳ ನಡುವೆ ಪ್ರತಿವರ್ಷ ಅದ್ದೂರಿಯಾಗಿ ಹಾಕಿ ಪಂದ್ಯಾವಳಿ ನಡೆಯುವುದನ್ನು ನೋಡಿದ್ದೇವೆ. ಇದೀಗ ಕರ್ನಾಟಕದಲ್ಲಿ ನಡೆಯುತ್ತಿರುವ ಚುನಾವಣಾ ರಾಜಕಾರಣವನ್ನು ನೋಡಿದರೆ, ನಮ್ಮ ರಾಜಕಾರಣಿಗಳು ಕೊಡವರ ಕುಟುಂಬದ ಹಾಕಿ ಮಾದರಿಯನ್ನು ಅನುಸರಿಸಿದಂತೆ ಕಾಣಿಸುತ್ತದೆ. ರಾಜ್ಯದ ಲೋಕಸಭಾ ಚುನಾವಣೆಯಲ್ಲಿ ಬಹುಪಾಲು ಕೆಲವೇ ಕುಟುಂಬಗಳ ನಡುವೆ ಸ್ಪರ್ಧೆ ಏರ್ಪಡುವ ಮೂಲಕ ವಂಶಾಡಳಿತದ ಹೊಸ ವ್ಯಾಕರಣ ಎಂಬಂತೆ 'ಮಕ್ಕಳಾಟ' ಶುರುವಾಗಿದೆ.

2024ರ ಲೋಕಸಭಾ ಚುನಾವಣೆಯ ಮತ್ತೊಂದು ಅಪರೂಪದ ಬೆಳವಣಿಗೆಯೆಂದರೆ, ಬಹಳಷ್ಟು ಕ್ಷೇತ್ರಗಳಲ್ಲಿ ಯುವಕ-ಯುವತಿಯರಿಗೆ, ಮಹಿಳೆಯರಿಗೆ, ಹೊಸ ಮುಖಗಳಿಗೆ ಸ್ಪರ್ಧಿಸುವ ಅವಕಾಶ ದೊರಕಿದೆ. ಯುವಪೀಳಿಗೆ ಮತ್ತು ಮಹಿಳಾ ಪ್ರಾತಿನಿಧ್ಯ ಪ್ರತಿಪಾದಕರು ಬೆಚ್ಚಿಬೀಳುವಷ್ಟು ಪ್ರಮಾಣದ ಅವಕಾಶ ಈ ಸಮೂಹಗಳಿಗೆ ದೊರಕಿರುವುದು ಸಾಮಾನ್ಯ ಸಂಗತಿ ಅಲ್ಲ. ಆದರೆ ರಾಜಕೀಯ ಪಕ್ಷಗಳ ಟಿಕೆಟ್ ಪಡೆಯುವಲ್ಲಿ ಸಫಲರಾಗಿರುವ ಈ ಹುರಿಯಾಳುಗಳ ಕೌಟುಂಬಿಕ ವಿವರಗಳಿಗೆ ಹೋದಾಗ ಮಾತ್ರ ಅಸಲಿ ಹಕೀಕತ್ತು ಬಿಚ್ಚಿಕೊಳ್ಳುತ್ತದೆ.

ಕಾಂಗ್ರೆಸ್ ಟಿಕೆಟ್ ನೀಡಿರುವ ಯುವ ಮತ್ತು ಮಹಿಳಾ ಅಭ್ಯರ್ಥಿಗಳ ಯಾದಿ ಹೀಗಿದೆ: ಚಿಕ್ಕೋಡಿಯಿಂದ ಪ್ರಿಯಾಂಕಾ ಜಾರಕಿಹೊಳಿ (ಸತೀಶ್ ಜಾರಕಿಹೊಳಿ ಪುತ್ರಿ), ಬೆಳಗಾವಿಯಿಂದ ಮೃಣಾಲ್ ಹೆಬ್ಬಾಳ್ಕರ (ಲಕ್ಷ್ಮಿ ಹೆಬ್ಬಾಳ್ಕರ ಪುತ್ರ), ಬಾಗಲಕೋಟೆಯಿಂದ ಸಂಯುಕ್ತಾ ಪಾಟೀಲ (ಶಿವಾನಂದ ಪಾಟೀಲ ಪುತ್ರಿ), ಬೀದರ್‌ನಿಂದ ಸಾಗರ್ ಖಂಡ್ರೆ (ಈಶ್ವರ್ ಖಂಡ್ರೆ ಪುತ್ರ), ದಾವಣಗೆರೆಯಿಂದ ಪ್ರಭಾ ಮಲ್ಲಿಕಾರ್ಜುನ್ (ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ), ಬೆಂಗಳೂರು ದಕ್ಷಿಣದಿಂದ ಸೌಮ್ಯಾ ರೆಡ್ಡಿ (ರಾಮಲಿಂಗಾರೆಡ್ಡಿ ಪುತ್ರಿ), ಹಾಸನದಿಂದ ಶ್ರೇಯಸ್ ಪಟೇಲ್ (ದಿವಂಗತ ಜಿ.ಪುಟ್ಟಸ್ವಾಮಿಗೌಡರ ಮೊಮ್ಮಗ), ಶಿವಮೊಗ್ಗದಿಂದ ಗೀತಾ ಶಿವರಾಜ್‌ಕುಮಾರ್ (ಮಧು ಬಂಗಾರಪ್ಪ ಸೋದರಿ), ಚಾಮರಾಜನಗರದಿಂದ ಸುನೀಲ್ ಬೋಸ್ (ಎಚ್.ಸಿ.ಮಹಾದೇವಪ್ಪ ಪುತ್ರ), ಚಿಕ್ಕಬಳ್ಳಾಪುರದಿಂದ ರಕ್ಷಾ ರಾಮಯ್ಯ (ಎಂ.ಆರ್.ಸೀತಾರಾಮ್ ಮಗ).

ಕಾಂಗ್ರೆಸ್ ಪಕ್ಷಕ್ಕೆ ಯುವ ಪ್ರಾತಿನಿಧ್ಯ ಮುಖ್ಯ ಅನ್ನಿಸಿದ್ದರೆ, ದಾವಣಗೆರೆ ಕ್ಷೇತ್ರದಲ್ಲಿ ಬಹಳಷ್ಟು ಜನಸಂಪರ್ಕ ಸಾಧಿಸಿದ್ದ ಸಾಮಾನ್ಯ ಕುಟುಂಬದ ಯುವಕ ಜಿ.ಬಿ.ವಿನಯ್ ಕುಮಾರ್ ಅವರಿಗೆ ಟಿಕೆಟ್ ನೀಡುವ ಮೂಲಕ ಭರವಸೆಯ ಹೊಸ ಮುಖವನ್ನು ಬೆಳಕಿಗೆ ತರುವ ಅವಕಾಶವಿತ್ತು. ರಾಜಕಾರಣಕ್ಕೆ ಹೊಸ ವ್ಯಾಖ್ಯಾನ ಬರೆಯಬಲ್ಲ ಇಂತಹ ಎಷ್ಟೋ ಯುವ ಪ್ರತಿಭೆಗಳು ಪ್ರಾತಿನಿಧ್ಯದ ಅಸಾಧ್ಯತೆ ಮನಗಂಡು ರಾಜಕಾರಣಕ್ಕೆ ಬೆನ್ನು ತೋರಿಸುವುದನ್ನು ಗಂಭೀರವಾಗಿ ಗಮನಿಸಬೇಕಿದೆ. ಆದರೆ ಕುಟುಂಬ ರಾಜಕಾರಣದ ನಶೆ ಏರಿಸಿಕೊಂಡಿರುವ ನಾಯಕರಿಂದ ಇದನ್ನು ಅಪೇಕ್ಷಿಸಲು ಸಾಧ್ಯವೇ?

ಬಿಜೆಪಿಯು ದಾವಣಗೆರೆಯಿಂದ ಗಾಯತ್ರಿ ಸಿದ್ಧೇಶ್ವರ (ಜಿ.ಎಂ.ಸಿದ್ಧೇಶ್ವರ ಮಡದಿ), ಶಿವಮೊಗ್ಗದಿಂದ ಬಿ.ವೈ. ರಾಘವೇಂದ್ರ (ಬಿ.ಎಸ್.ಯಡಿಯೂರಪ್ಪ ಪುತ್ರ), ಬೆಂಗಳೂರು ಗ್ರಾಮಾಂತರದಿಂದ ಡಾ. ಸಿ.ಎನ್.ಮಂಜುನಾಥ್ (ಎಚ್.ಡಿ.ದೇವೇಗೌಡರ ಅಳಿಯ) ಅವರಿಗೆ ಅವಕಾಶ ಒದಗಿಸಿದೆ. ಜೆಡಿಎಸ್‌ನಿಂದ ಹಾಸನದ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ (ಎಚ್.ಡಿ.ರೇವಣ್ಣ ಮಗ) ಕಣಕ್ಕೆ ಇಳಿಯಬಹುದು. ಇನ್ನು, ಕೆ.ಎಸ್.ಈಶ್ವರಪ್ಪ ತಮ್ಮ ಮಗ ಕಾಂತೇಶ್‌ಗೆ ಹಾವೇರಿ ಟಿಕೆಟ್ ಕೈತಪ್ಪಿತೆಂದು ಪರಿತಪಿಸಿದರೆ, ಬಾಗಲಕೋಟೆಯಲ್ಲಿ ವೀಣಾ ಕಾಶಪ್ಪನವರ್ (ಶಾಸಕ ವಿಜಯಾನಂದ ಕಾಶಪ್ಪನವರ ಪತ್ನಿ) ಕಣ್ಣೀರಿಟ್ಟಿದ್ದಾರೆ. ತಮ್ಮ ಮಗ ಅಲೋಕ್‌ಗೆ ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ನೀಡದಿದ್ದರೆ ತಾವೇ ಅಭ್ಯರ್ಥಿ ಆಗುವುದಾಗಿ ಯಲಹಂಕದ ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಪಟ್ಟು ಹಿಡಿದದ್ದೂ ಉಂಟು. ಜೊತೆಗೆ ಕಾಂಗ್ರೆಸ್ ಟಿಕೆಟ್ ಪಡೆದು ಕಲಬುರಗಿಯಿಂದ ರಾಧಾಕೃಷ್ಣ ದೊಡ್ಡಮನಿ (ಮಲ್ಲಿಕಾರ್ಜುನ ಖರ್ಗೆ ಅಳಿಯ), ಬೆಂಗಳೂರು ಗ್ರಾಮಾಂತರದಿಂದ ಡಿ.ಕೆ.ಸುರೇಶ್ (ಡಿ.ಕೆ.ಶಿವಕುಮಾರ್ ಸೋದರ), ಮಂಡ್ಯದಿಂದ ಸ್ಟಾರ್ ಚಂದ್ರು (ಗೌರಿಬಿದನೂರು ಶಾಸಕ ಪುಟ್ಟಸ್ವಾಮಿಗೌಡ ಸೋದರ) ಚುನಾವಣೆಯಲ್ಲಿ ಸೆಣಸಲಿದ್ದಾರೆ.

ವಂಶಾಡಳಿತವು ರಾಜ್ಯಕ್ಕಾಗಲೀ ದೇಶಕ್ಕಾಗಲೀ ಹೊಸದೇನಲ್ಲ. ಬಹುಶಃ ರಾಷ್ಟ್ರ ಮಟ್ಟದಲ್ಲಿ ಈ ಆರೋಪಕ್ಕೆ ತುತ್ತಾದ ಮೊದಲ ಕುಟುಂಬ ನೆಹರೂ ಅವರದು. ಐದಾರು ದಶಕಗಳ ಹಿಂದಿನಿಂದಲೂ ಕಾಂಗ್ರೆಸ್ ವಿರೋಧಿ ರಾಜಕಾರಣದ ಬಹುದೊಡ್ಡ ಅಸ್ತ್ರವೇ ಕುಟುಂಬ ರಾಜಕಾರಣದ ಆರೋಪ ಆಗಿತ್ತು. ಕರ್ನಾಟಕದ ಮಟ್ಟಿಗೆ ಎಚ್.ಡಿ.ದೇವೇಗೌಡರ ಕುಟುಂಬದವರು ಈ ಆರೋಪ ಹೊತ್ತವರಲ್ಲಿ ಪ್ರಮುಖರು. ಬದಲಾದ ಪರಿಸ್ಥಿತಿಯಲ್ಲಿ, ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆಯನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಯಡಿಯೂರಪ್ಪ ಒಳಗೊಂಡಂತೆ ಬಹುಪಾಲು ನಾಯಕರು ಉಳಿಸಿಕೊಂಡಿಲ್ಲ.

ಎಂದಿನಂತೆ ಉತ್ತರವಿಲ್ಲದೇ ಉಳಿಯುವ ಪ್ರಶ್ನೆ: ಯಾರು, ಎಲ್ಲಿಂದ ಸರಿಪಡಿಸುವುದು?

ಚುರುಮುರಿ

ಸೀಟ್ ಕಹಾನಿ!

• ಲಿಂಗರಾಜು ಡಿ.ಎಸ್.

'ಸಾ, ಮೆಟ್ರೊ ರೈಲಿನ ಹಳಿಗೆ ಬಿದ್ದು ಸಾಯೋರ ಸಂಖ್ಯೆ ಜಾಸ್ತಿಯಾಗ್ಯದಂತೆ. ಅದುಕ್ಕೆ ಸುರಕ್ಷತೆಗೆ ಅಂತ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ಹಾಕ್ರಿ ಅಂತ ಒತ್ತಾಯ ಮಾಡ್ತಾವ್ರಂತೆ' ಸುದ್ದಿ ಸ್ಫೋಟಿಸಿದೆ.

'ಸಾ, ಈಗ ಬೇಕಾಗಿರದು ರೈಲಿನ ಪಿಎಸ್‌ಡಿ ಪ್ಲಾಟ್‌ಫಾರಂ ಡೋರಲ್ಲ, ಜನ ತೊಂದರೆ ಇಲ್ದಂಗೆ ಬದುಕೋ ಪೀಪಲ್ ಸೆನ್ಸಿಬಲ್ ಡೋರ್' ಅಂದ ಚಂದ್ರು.

'ಹಂಗಂದ್ರೇನಾ?!' ಅಂದ್ರು ಎಲ್ಲಾರೂ ಒಟ್ಟಿಗೆ.

'ಈಗ ಸರ್ಕಾರ ಜನದ ಬಾಯಿಗೆ ನೀರು ಬುಡಕ್ಕಾಗದೆ ಮುಕ್ಕುರಿತಾ ಅದೆ. ಟ್ಯಾಂಕರಿನವರು ಜೈ ಜಲಮೇಜಯ ಅಂತ ಮನಿ ನೀರಾವರಿ ಕೆಲಸದಲ್ಲಿ ಬಿಜಿಯಾಗ್ಯವರೆ' ನನ್ನ ವಿಚಾರಕ್ಕೆ ಎಲ್ಲಾರೂ ಹೌದು ಅಂದ್ರು.

'ರಾಜಕಾರಣಿಗಳು ಅವರ ಸೀಟ್ ಕಹಾನಿಯ ಗಾಳಿಗಂಟಲಲ್ಲಿ ಏದುಸಿರು ಬುಡ್ತಾವ್ರೆ' ಅಂದ ಚಂದ್ರು.

'ಅಲ್ಲ ನೋಡ್ರಿ, ಮೂರೂ ಪಕ್ಷದ ಹಿರಿ ನಾಯಕರು ತಲೆಬುಂಡೆ ಬಲೀದೇ ಇರೋ ತಮ್ಮ ಚೊಟ್ಟುಗಳನ್ನ ಎಳಕ ಬಂದು ರಾಜಕೀಯದಾಟ ಆಡ್ತೋ ತರದೂದಲ್ಲವ್ರೆ. ಇವರ ಅಡಾವುಡೀಲಿ ದೇಸ ಊರ್ಜಿತ ಆದದೋ ಏನೋ ಕಾಣೆ' ಯಂಟಪ್ಪಣ್ಣ ನಿಟ್ಟುಸಿರು ಬುಡ್ತು.

'ಯಂಟಪ್ಪಣ್ಣ 'ನನಗೆ ಟಿಕೆಟ್ ಕೊಡಿ, ಇಲ್ಲ ನನ್ನೆಂಡ್ರಿಗೋ ಮಕ್ಕಳಿಗೋ ಟಿಕೆಟ್ ಕೊಡ್ಲಿಲ್ಲ ಅಂದ್ರೆ ನೋಡ್ರಿ ಆಮೇಲೆ' ಅನ್ನೊಂತಾ ಧಮಕಿ ರಾಜಕಾರಣದ ಪ್ಯಾಥೆಟಿಕ್ ಶೇಮ್‌ಫುಲ್ ಡಿಸ್‌ಆನೆಸ್ಟಿ ಜನಕ್ಕೆ ಬೇಕಾಗಿಲ್ಲ. ಪೊಲಿಟಿಕಲ್ ಸ್ಮಾರ್ಟ್ ಡಿಪ್ಲೊಮಸಿ ಗೊತ್ತೇ ಇಲ್ವಾ ಇವರಿಗೆ ಅಂತ ಜನ ಮಾತಾಡಿಕ್ಯತಾವ್ರೆ' ತುರೇಮಣೆಗೆ ಸಿಟ್ಟು ಬಂದಿತ್ತು.

'ಎಲೆಕ್ಷನ್ ಮುಗಿಯಗಂಟ ಅವರವರೇ ಓಕಳಿ ಇಟ್ಟಾಡಿಸಿಕ್ಯತರೆ' ಅಂತಂದೆ.

'ವಿರೋಧಿಗಳನ್ನ ಬಲಿ ಹಾಕಿ ಜೈಲಿಗೆ ದಬ್ಬೋಕೆ ಅಂತ್ಲೆ ಇ.ಡಿ ಕ್ಯಾಶುಪತಾಸ್ತ್ರ, ಐ.ಟಿ ಗಲಾ ಪಕಡಾಸ್ತ್ರ ಪ್ರಯೋಗಾಯ್ತದೆ. ಇದು ಮನಿ ಮನಿ ಚೀಟ್ ಕಹಾನಿ ಕನ್ರೋ' ತುರೇಮಣೆ ಮಾತಿಗೆ ಎಲ್ಲರೂ 'ಹೇ ರಾಮ್!' ಅಂತ ನಿಟ್ಟುಸಿರುಬುಟ್ವೊ.

ಸಂಗತ

ಸಹಕಾರಿಗಳಿಗೆ ಸಿಗದ 'ಸೌಹಾರ್ದ'

ಸರ್ಕಾರದ ಇತ್ತೀಚಿನ ಆದೇಶವು ಸೌಹಾರ್ದ ಸಹಕಾರಿ ಸಂಘಗಳಿಗೆ ಮಾರಕವಾಗಿದೆ

• ಮನೋಹರ ಮಸ್ಕಿ

ರಾಜ್ಯ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಆದೇಶವೊಂದು, ಐದು ಸಾವಿರಕ್ಕೂ ಹೆಚ್ಚು ಸೌಹಾರ್ದ ಸಹಕಾರಿ ಸಂಘಗಳನ್ನು ದಿಢೀರನೆ ಅಕ್ಷರಶಃ ಗುಲಾಮರನ್ನಾಗಿಸಿ, ಸಹಕಾರ ಇಲಾಖೆ ಅಧಿಕಾರಿಗಳ ಮುಂದೆ ಮಂಡಿಯೂರುವಂತೆ ಮಾಡಿದೆ.

ಈ ಸಂಘಗಳ ಆಡಳಿತ ಮಂಡಳಿಗಳು ಬಡ್ಡಿ ದರವನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ನಿರ್ಧರಿಸುವಂತಿಲ್ಲ. ಒಬ್ಬ ಬೀದಿಬದಿಯ ವ್ಯಾಪಾರಿಗೋ ತರಕಾರಿ ಮಾರುವವರಿಗೋ ಕಿರು ಸಾಲವನ್ನು ಸಹ ನಗದು ರೂಪದಲ್ಲಿ ನೀಡುವಂತಿಲ್ಲ. ಹೆಚ್ಚುವರಿ ಹಣವನ್ನು ಡಿಸಿಸಿ ಮತ್ತು ಅಪೆಕ್ಸ್ ಬ್ಯಾಂಕಿನಲ್ಲಿಯೇ ಇಡಬೇಕು! ಅದಕ್ಕಿಂತ ಹೆಚ್ಚಾಗಿ, ಪ್ರತಿ 3 ತಿಂಗಳಿಗೊಮ್ಮೆ ಇಲಾಖಾ ಅಧಿಕಾರಿಗಳಿಗೆ ವರದಿ ಒಪ್ಪಿಸಬೇಕು! ತಾಲ್ಲೂಕು ಮಟ್ಟದ ಸೌಹಾರ್ದ ಸಹಕಾರ ಸಂಘದ ಕಾರ್ಯವೈಖರಿಯನ್ನು ಪರಿಶೀಲಿಸಲು ತಾಲ್ಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟದ, ಅಂದರೆ ಎಲ್ಲಾ ಹಂತದ ಅಧಿಕಾರಿಗಳಿಗೆ ಈ ಆದೇಶವು ವ್ಯಾಪಕ ಅಧಿಕಾರ ನೀಡುತ್ತದೆ. ಅಂದರೆ ವ್ಯಾಪಕ ಭ್ರಷ್ಟಾಚಾರಕ್ಕೂ ಬಾಗಿಲು ತೆರೆಯುತ್ತದೆ.

ನನ್ನ ಅಜ್ಜಿ ಹೇಳಿದ ಕಥೆಯೊಂದು ಇಲ್ಲಿ ನೆನಪಾಗುತ್ತದೆ. ಒಂದು ಸಣ್ಣ ರಾಜ್ಯವಿತ್ತು. ಅಲ್ಲಿನ ರಾಜನಿಗೆ ತನ್ನ ಪ್ರಜೆಗಳೆಲ್ಲ ಉತ್ತಮ ಆಹಾರ ಸೇವಿಸಬೇಕು ಎನಿಸುತ್ತದೆ. ಈ ಸಂಬಂಧ ಆತ ಆದೇಶವೊಂದನ್ನು ಹೊರಡಿಸುತ್ತಾನೆ. ಅದರ ಪ್ರಕಾರ, ಪ್ರತಿ ಗ್ರಾಮದ ಜನರು ಆಯಾ ವಾರ ನಿಗದಿತ ಅಡುಗೆಯನ್ನೇ ಮಾಡಬೇಕು ಮತ್ತು ಆ ರೀತಿ ಮಾಡಿರುವುದನ್ನು ಅಧಿಕಾರಿಗಳ ಪರಿಶೀಲನೆಗೆ ಹಾಜರುಪಡಿಸಬೇಕು. ಇಂತಹ ಹುಚ್ಚು ಆದೇಶಗಳು ಇತಿಹಾಸದಲ್ಲಿ ಹೊಸವೇನಲ್ಲ. ಈಗ ಸರ್ಕಾರ ಹೊರಡಿಸಿರುವ ಆದೇಶವೂ ಇಂತಹುದೇ ಸಾಲಿನಲ್ಲಿ ನಿಲ್ಲುತ್ತದೆ.

ಸಹಕಾರಿ ಕ್ಷೇತ್ರ ನಿರೀಕ್ಷಿತ ಪ್ರಮಾಣದ ಪ್ರಗತಿ ಸಾಧಿಸದಿರುವುದಕ್ಕೆ ಸಹಕಾರ ಸಂಘಗಳ ದೈನಂದಿನ ಆಡಳಿತದಲ್ಲಿ ರಾಜ್ಯ ಸರ್ಕಾರಗಳ ಅತಿಯಾದ ಹಸ್ತಕ್ಷೇಪವೇ ಕಾರಣ ಎಂದು, ಯೋಜನಾ ಆಯೋಗವು ಕಾಲಕಾಲಕ್ಕೆ ರಚಿಸಿದ್ದ ಅರ್ಧನಾರೀಶ್ವರನ್ ಸಮಿತಿ ಮತ್ತು ಚೌಧರಿ ಬ್ರಹ್ಮ ಪ್ರಕಾಶ ಸಮಿತಿ ಹೇಳಿದ್ದವು. ಈ ಕಾರಣದಿಂದ, ಸಹಕಾರ ಸಂಘಗಳ ಒಂದು ಮಾದರಿ ಕಾಯ್ದೆಯನ್ನು ರೂಪಿಸಲಾಯಿತು. ಅಸ್ತಿತ್ವದಲ್ಲಿದ್ದ ಸಹಕಾರ ಸಂಘಗಳ ಕಾಯ್ದೆಯನ್ನು ರದ್ದುಗೊಳಿಸಿ ಈ ಮಾದರಿ ಕಾಯ್ದೆಯನ್ನು ಅಳವಡಿಸಿಕೊಳ್ಳುವಂತೆ ಆಯೋಗವು ನಿರ್ದೇಶನ ನೀಡಿತ್ತು. ಆದರೆ, ಪ್ರಗತಿ ಆಗದಿದ್ದರೂ ಪರವಾಗಿಲ್ಲ ತನ್ನ ಅಧಿಕಾರವನ್ನು ಮಾತ್ರ ಬಿಟ್ಟುಕೊಡಲು ರಾಜ್ಯ ಸರ್ಕಾರ ಸಿದ್ಧವಿರಲಿಲ್ಲ. ಹೀಗಾಗಿ, ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ಪಡೆಯದ ಸಹಕಾರ ಸಂಸ್ಥೆಗಳಿಗೆ ಮಾತ್ರ ಅನ್ವಯಿಸುವಂತೆ 2001ರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಸಂಘಗಳ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಹೀಗಾಗಿ, ಇದು ರಾಜ್ಯದಲ್ಲಿರುವ ಎರಡನೇ ಸಹಕಾರಿ ಕಾಯ್ದೆಯಾಗಿದೆ.

ಈ ಕಾಯ್ದೆಯ ಮೊದಲ ಪುಟದಲ್ಲಿ ವಿವರಿಸಿರುವ ಉದ್ದೇಶದಲ್ಲಿಯೇ 'ಸರ್ಕಾರವು ಈ ಕಾಯ್ದೆಯಡಿ ನೋಂದಣಿ ಮಾಡುವುದು ಮತ್ತು ನೋಂದಣಿ ರದ್ದು-ಪಡಿಸುವುದನ್ನು ಬಿಟ್ಟು ಬೇರೆ ಯಾವ ಅಧಿಕಾರವನ್ನೂ ಹೊಂದುವುದಿಲ್ಲ ಮತ್ತು ಈ ಸೌಹಾರ್ದ ಸಹಕಾರಿ ಸಂಘಗಳು ತಮ್ಮ ಸದಸ್ಯರಿಂದಲೇ ನಿಯಂತ್ರಿಸಲ್ಪಡುತ್ತವೆ' ಎಂದು ಸ್ಪಷ್ಟವಾಗಿ ಹೇಳಲಾಗಿದೆ. ನಿಯಂತ್ರಣ, ನಿರ್ದೇಶನ ಹಾಗೂ ಶಿಕ್ಷಣ ನೀಡುವುದಕ್ಕಾಗಿ 'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ'ವನ್ನು ರೂಪಿಸಲಾಗಿದೆ. ಆದರೆ ಸರ್ಕಾರ ಇದ್ಯಾವುದನ್ನೂ ಲೆಕ್ಕಿಸದೆ ಹತ್ತಾರು ಷರತ್ತುಗಳನ್ನು ವಿಧಿಸಿದೆ.

25 ವರ್ಷಗಳ ಹಿಂದೆ ಬ್ಯಾಂಕಿನ ಬಡ್ಡಿ ದರಗಳನ್ನು ರಿಸರ್ವ್ ಬ್ಯಾಂಕ್ ನಿರ್ಧರಿಸುತ್ತಿತ್ತು. ಇದು ಸರಿಯಲ್ಲ, ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಆಯಾ ಬ್ಯಾಂಕುಗಳು ಬಡ್ಡಿ ದರ ನಿರ್ಧರಿಸುವುದು ಒಳಿತು ಎಂಬ ಕಾರಣಕ್ಕೆ ರಿಸರ್ವ್ ಬ್ಯಾಂಕ್ ತನ್ನ ಆದೇಶವನ್ನು ಹಿಂತೆಗೆದುಕೊಂಡಿತು. ಆದರೆ ಬಡ್ಡಿ ದರವನ್ನು ನಿಯಂತ್ರಿಸುವ ಸರ್ಕಾರದ ಈಗಿನ ಆದೇಶವು ಸೌಹಾರ್ದ ಸಹಕಾರಿ ಕ್ಷೇತ್ರವನ್ನು 25 ವರ್ಷ ಹಿಂದಕ್ಕೆ ಕೊಂಡೊಯ್ಯುತ್ತದೆ. ಠೇವಣಿಗಳಿಗೆ ಸಂಬಂಧಿಸಿದ ಬಡ್ಡಿಯನ್ನು ಎಸ್‌ಬಿಐ ಬಡ್ಡಿಯೊಂದಿಗೆ ಸಮೀಕರಿಸುವ ಈ ಆದೇಶ ಸಾಲಕ್ಕೆ ಮಾತ್ರ ಶೇ 12ರ ಬಡ್ಡಿಯ ಮಿತಿ ವಿಧಿಸುತ್ತದೆ. ಆದರೆ ಅದೇ ಎಸ್‌ಬಿಐ ವೈಯಕ್ತಿಕ ಸಾಲಗಳಿಗೆ ಶೇ 14.5ರವರೆಗೆ ಬಡ್ಡಿಯನ್ನು ವಿಧಿಸುತ್ತದೆ. ಇಂಥ ಅನೇಕ ಎಡಬಿಡಂಗಿತನಗಳು ಈ ಆದೇಶದಲ್ಲಿವೆ.

ಸೌಹಾರ್ದ ಸಹಕಾರಿ ಸಂಘಗಳಲ್ಲಿಯೂ ತೊಂದರೆ ಇಲ್ಲವೇ ಎಂದರೆ, ಖಂಡಿತ ಇದೆ. ಸರ್ಕಾರವು ಸದುದ್ದೇಶ ಹೊಂದಿದ್ದರೆ, ಸೌಹಾರ್ದ ಸಂಯುಕ್ತ ಸಹಕಾರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲು ಆದೇಶಿಸಬೇಕಿತ್ತು. ಆಗ ಯಾವುದು ಕಾರ್ಯಸಾಧ್ಯ, ಯಾವುದು ಸೂಕ್ತ ಎನ್ನುವ ಬಗ್ಗೆ ಚರ್ಚೆಯಾದರೂ ಆಗುತ್ತಿತ್ತು. ಸಹಕಾರ ಸಚಿವ ರಾಜಣ್ಣ ಅವರು ಸಹಕಾರಿ ಕ್ಷೇತ್ರದಿಂದಲೇ ಬಂದವರಾದರೂ ಇಂತಹ ಸಂವಿಧಾನ ವಿರೋಧಿ ಆದೇಶ ಹೇಗೆ ಬಂದಿತು ಎನ್ನುವುದು ಆಶ್ಚರ್ಯಕರ. ಅಜ್ಜಿ ಹೇಳಿದ ಕಥೆಯಲ್ಲಿ ರಾಜನ ಉದ್ದೇಶ ಉತ್ತಮ-ವಾಗಿತ್ತು. ಆದರೆ ಅದು ಕಾರ್ಯರೂಪಕ್ಕೆ ಬರುವಾಗ ತುಘಲಕ್ ಆದೇಶವಾಗಿತ್ತು.

ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ರಚನೆಯಾದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಂವಾದಕ್ಕೆ ಹಿರಿಯ ಸಹಕಾರಿ ನಾಯಕ ಕುರಿಯನ್ ಅವರನ್ನು ಆಹ್ವಾನಿಸಲಾಗಿತ್ತು. ಸೌಹಾರ್ದ ಕಾಯ್ದೆಯಡಿ ರಿಜಿಸ್ಟ್ರಾರ್ ಆಗಿ ಅದೇತಾನೇ ನೇಮಕವಾಗಿದ್ದ ಐಎಎಸ್ ಅಧಿಕಾರಿಯನ್ನು ಕಾರ್ಯಕ್ರಮಕ್ಕೆ ಮುನ್ನ ಕುರಿಯನ್ ಅವರಿಗೆ ಪರಿಚಯಿಸಲಾಯಿತು. ಆಗ ಅವರು, 'ಹಳೆಯ ಸಹಕಾರಿ ಕಾಯ್ದೆಯಂತೆ ಈ ಸೌಹಾರ್ದ ಕಾಯ್ದೆಗೂ ಮತ್ತೆ ಯಾಕೆ ಐಎಎಸ್ ಅಧಿಕಾರಿ ರಿಜಿಸ್ಟ್ರಾರ್ ಆಗಬೇಕು? ವೈ ನಾಟ್ ಎ ಕೋಆಪರೇಟರ್?' ಎಂದರು. ಈಗ ರಿಜಿಸ್ಟ್ರಾರ್ ಮೂಲಕವೇ ಎಲ್ಲಾ ದೈನಂದಿನ ವ್ಯವಹಾರಗಳನ್ನೂ ಮಾಡುವ ಗುಲಾಮಗಿರಿಗೆ ಸೌಹಾರ್ದ ಸಹಕಾರಿ ಸಂಘಗಳನ್ನು ಸರ್ಕಾರ ದೂಡಿದೆ.

ಲೇಖಕ: ಸಂಸ್ಥಾಪಕ ಅಧ್ಯಕ್ಷ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ವಾಚಕರ ವಾಣಿ

ಕನ್ನಡಕ್ಕೆ ಸ್ವಾತಂತ್ರ್ಯ ಸಿಕ್ಕಿದೆಯೇ?

ಉಡುಪಿ- ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳಾದ ಜಯಪ್ರಕಾಶ್ ಹೆಗ್ಡೆ ಹಾಗೂ ಕೋಟ ಶ್ರೀನಿವಾಸ ಪೂಜಾರಿ ಅವರ ನಡುವೆ ವಾಕ್ಸಮರ ಶುರುವಾಗಿದೆ. ಪೂಜಾರಿಯವರಿಗೆ ಹಿಂದಿ, ಇಂಗ್ಲಿಷ್ ಬರುವುದಿಲ್ಲ, ಅವರು ಲೋಕಸಭೆಯಲ್ಲಿ ಹೇಗೆ ಮಾತನಾಡುತ್ತಾರೆ ಎಂಬುದು ಹೆಗ್ಡೆ ಅವರ ಪ್ರಶ್ನೆ. ಅದಕ್ಕೆ ಪೂಜಾರಿಯವರು ಆರು ತಿಂಗಳೊಳಗೆ ಹಿಂದಿ ಕಲಿಯುವುದಾಗಿ ಸಮಜಾಯಿಷಿ ನೀಡಿದ್ದಾರೆ.

ಇದು ಲೋಕಸಭೆಯಲ್ಲಿ ಹಿಂದಿಯೇತರ ಭಾಷೆಗಳಿಗೆ ಕನ್ನಡಕ್ಕೆ ಇರುವ ದಯನೀಯ ಸ್ಥಿತಿಯನ್ನು ತಿಳಿಸುತ್ತದೆ. ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಇರುವಂತೆ, ಎಲ್ಲಾ ಭಾಷೆಗಳನ್ನು ಸಮಾನವಾಗಿ ಕಾಣುತ್ತೇವೆ ಎಂಬುದು ಬಾಯಿ ಮಾತಾಗಿಯೇ ಉಳಿದಿದೆ. ಇಂತಹ ಸ್ಥಿತಿಯಲ್ಲಿ, ಕರ್ನಾಟಕಕ್ಕೆ, ಕನ್ನಡಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ನಾವು ಹೇಗೆ ಅರ್ಥ ಮಾಡಿಕೊಳ್ಳಬೇಕು?

ಲೋಕಸಭೆಯಲ್ಲಿ ಸಾಂವಿಧಾನಿಕ ಹಕ್ಕನ್ನು ಬಳಸಿಕೊಂಡು ಕನ್ನಡದಲ್ಲಿ ಮಾತನಾಡಲೂ ಧೈರ್ಯವಿಲ್ಲದವರಿಂದ ಏನನ್ನು ನಿರೀಕ್ಷಿಸಲು ಸಾಧ್ಯ? ಹಿಂದಿಯ ಗುಲಾಮಿ ಮನಃಸ್ಥಿತಿ ಕಾಂಗ್ರೆಸ್, ಬಿಜೆಪಿ ಎರಡೂ ರಾಷ್ಟ್ರೀಯ ಪಕ್ಷಗಳಲ್ಲಿದೆ. ಇನ್ನು ಇವರು ಹಿಂದಿ ಹೇರಿಕೆಯನ್ನು ವಿರೋಧಿಸುವುದು ದೂರದ ಮಾತು. ಇದೇ ಮೇ ತಿಂಗಳಲ್ಲಿ ಯುಪಿಎಸ್‌ಸಿ ಮೊದಲ ಹಂತದ ಪೂರ್ವಭಾವಿ ಪರೀಕ್ಷೆ ಹಿಂದಿ, ಇಂಗ್ಲಿಷ್ ಮಾಧ್ಯಮಗಳಲ್ಲಿ ಮಾತ್ರ ನಡೆಯುತ್ತಿದೆ. ಇಂತಹ ವಿಷಯಗಳು ಪಕ್ಷಗಳ ಪ್ರಣಾಳಿಕೆಗಳಲ್ಲಿ ಸ್ಥಾನ ಪಡೆದುಕೊಳ್ಳುವುದಿಲ್ಲ. ಕನ್ನಡಪರ ಸಂಘಟನೆಗಳಿಗೂ ಈ ಬಗ್ಗೆ ಗಂಭೀರ ಗಮನ ಇದ್ದಂತಿಲ್ಲ. ಒಕ್ಕೂಟ ಭಾರತದಲ್ಲಿ ಕನ್ನಡವನ್ನು ಕಾಪಾಡುವವರಾರು?

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ನೀರು ಪೋಲು: ಶಿಕ್ಷೆ ಸೂಕ್ತ

ಬೆಂಗಳೂರಿನ ಅಪಾರ್ಟ್‌ಮೆಂಟ್ ಒಂದರಲ್ಲಿ ಅಪಾರ ಪ್ರಮಾಣದ ನೀರಿಗೆ ಬಣ್ಣ ಹಾಕಿ 'ರೈನ್ ವಾಟರ್ ಡಾನ್ಸ್' ಎನ್ನುವ ಹೆಸರಿನಲ್ಲಿ ಹೋಳಿ ಹಬ್ಬ ಆಚರಿಸಿದ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಇದು ಜಲಮಂಡಳಿ ಆದೇಶದ ಸ್ಪಷ್ಟ ಉಲ್ಲಂಘನೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ನೀರಿನ ಸಮಸ್ಯೆ ತೀವ್ರವಾಗಿದೆ. ಮನೆಗಳು, ಹಾಸ್ಟೆಲ್‌ಗಳು, ಪಿ.ಜಿ.ಗಳಿಗೆ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ. ಸಾವಿರಾರು ರೂಪಾಯಿ ಕೊಡಲು ಸಿದ್ಧರಿರುವವರಿಗೂ ನೀರು ದೊರಕುವುದು ಸುಲಭವಿಲ್ಲ. ಇನ್ನು ಬಡ, ಜನಸಾಮಾನ್ಯರ ಗೋಳು ಕೇಳುವವರೇ ಇಲ್ಲ.

ಹಲವೆಡೆ ಅಡುಗೆಗೆ ಒಂದು ಕೊಡ ನೀರು, ಶೌಚಕ್ಕೆ ತಂಬಿಗೆ ನೀರಿಗೂ ಹಾಹಾಕಾರ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅಪಾರ ಪ್ರಮಾಣದ ನೀರನ್ನು ಹೋಳಿ ಹಬ್ಬದ ಹೆಸರಿನಲ್ಲಿ ಪೋಲು ಮಾಡಿದ್ದು ದುರಹಂಕಾರದ ಪರಮಾವಧಿ, ಬೇಜವಾಬ್ದಾರಿ ನಡವಳಿಕೆ. ಭಾರಿ ಪ್ರಮಾಣದ ನೀರನ್ನು ವ್ಯರ್ಥ ಮಾಡಿದ ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗೆ ದಂಡ ವಿಧಿಸಿ, ಅದರಲ್ಲಿ ಪಾಲ್ಗೊಂಡವರ ಮೇಲೆ ಕಾನೂನಿನ ಅನ್ವಯ ಕ್ರಮ ಜರುಗಿಸಬೇಕು.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಅರ್ಥವಾಗದಿರುವುದೇ ರಾಜಕಾರಣ!

ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ನೀಡಿದ್ದ ಕೆಆರ್‌ಪಿಪಿ ಪಕ್ಷದ ಸ್ಥಾಪಕ, ಶಾಸಕ ಜನಾರ್ದನ ರೆಡ್ಡಿ ಈಗ ಬಿಜೆಪಿ ಸೇರಿದ್ದಾರೆ. ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಕಾಂಗ್ರೆಸ್ ಪರ ಮತ ಹಾಕಿದ್ದರೆ, ಮತ್ತೊಬ್ಬ ಶಾಸಕ ಶಿವರಾಮ ಹೆಬ್ಬಾರ್ ಮತದಾನ ಮಾಡಲೇ ಇಲ್ಲ. ಆದರೂ ಇವರಿಬ್ಬರ ಮೇಲೆ ಯಾವುದೇ ಶಿಸ್ತು ಕ್ರಮ ಜರುಗಲೇ ಇಲ್ಲ. ಲೋಕಸಭಾ ಚುನಾವಣೆಯಲ್ಲಿ ಸ್ವಂತ ಬಲದಿಂದಲೇ ಮೂರು ಕ್ಷೇತ್ರಗಳನ್ನು ಗೆಲ್ಲಬಲ್ಲ ಸಾಧ್ಯತೆ ಇರುವ ಜೆಡಿಎಸ್ ಬರೀ ಮೂರು ಸ್ಥಾನಗಳಿಗಾಗಿ, ಕೆಲವೇ ತಿಂಗಳುಗಳ ಹಿಂದೆ ನಿಂದಿಸುತ್ತಿದ್ದ ಬಿಜೆಪಿಯ ಜೊತೆಗೆ ಮೈತ್ರಿ ಮಾಡಿಕೊಂಡಿದೆ.

'ರಾಜಕಾರಣಿಗಳ ಸಂಗ ಮಾಡಿದರೆ ಓದಿದ್ದೇ ವ್ಯರ್ಥ ಎನಿಸುತ್ತದೆ' ಎಂದು ಭಾಷಣ ಮಾಡಿದ್ದ ಹೃದಯವಂತರು ಲೋಕಸಭಾ ಅಭ್ಯರ್ಥಿಯಾಗಿ ಸ್ವಯಂ ರಾಜಕಾರಣಿ ಆದರು. 'ರಾಜಾ ಪ್ರತ್ಯಕ್ಷ ದೇವತಾ' ಎಂದು ಇಂದಿಗೂ ಭಾವಿಸುವ ಜನರ ನಡುವೆ ರಾಜಕುಮಾರನೇ ಅಭ್ಯರ್ಥಿಯಾಗಿ ಮತದಾರರ ಬಳಿ ಬಂದು ಮತ ಯಾಚಿಸಲಿದ್ದಾರೆ. ಯಾವುದೋ ಕಾರಣಕ್ಕೆ ಪಕ್ಷದಿಂದ ಟಿಕೆಟ್ ಲಭಿಸದಿದ್ದರೆ ಮಾತೃಪಕ್ಷವನ್ನೇ ವಾಚಾಮಗೋಚರ ನಿಂದಿಸಿ ಮತ್ತೊಂದು ಪಕ್ಷ ಸೇರುವವರು, ಅಂತಹವರಿಗೆ ಕೆಂಪುಹಾಸಿನ ಸ್ವಾಗತ ಕೋರುವವರ ಸಂಖ್ಯೆ ಕಡಿಮೆಯೇನಿಲ್ಲ. ಇದನ್ನೆಲ್ಲಾ ನೋಡಿದರೆ, ರಾಜಕಾರಣಿಗಳಿಗೆ ಆತ್ಮಸಾಕ್ಷಿಯೇ ಇಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ಅಂತಿಮವಾಗಿ ಜನಸಾಮಾನ್ಯರಿಗೆ ರಾಜಕಾರಣ ಅರ್ಥವಾಗುವುದೇ ಇಲ್ಲ. ರಾಜಕೀಯ ಅಂದರೆ ಹೀಗೆಯೇ?!

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಜಲವಿವಾದ: ಹೂಳು ತೆಗೆಯುವುದೂ ಪರಿಹಾರ

'ಮುಳುಗುತ್ತಿವೆ' ಜಲಾಶಯಗಳು ಎಂಬುದು ನಾಡಾಭಿಮಾನಿಗಳು ಗಮನಿಸಲೇಬೇಕಾದ ಲೇಖನ (ಪ್ರ.ವಾ., ಮಾರ್ಚ್ 24). ಇಂದು ರಾಜಕೀಯ ಸ್ವಾರ್ಥಕ್ಕಾಗಿ ಹೊಸ ಅಣೆಕಟ್ಟುಗಳನ್ನು ನಿರ್ಮಿಸುವ ಘೋಷಣೆಗಳನ್ನು ಮಾಡುತ್ತಿರುವ ರಾಜಕಾರಣಿಗಳು, ಇರುವ ಅಣೆಕಟ್ಟುಗಳನ್ನು ಉಳಿಸಿಕೊಳ್ಳುವ ಮತ್ತು ಅವುಗಳ ಸಂಗ್ರಹ ಸಾಮರ್ಥ್ಯ ಹೆಚ್ಚಿಸುವ ಬಗ್ಗೆ ಯೋಚಿಸಬೇಕಾದ ಅಗತ್ಯವಿದೆ. 'ಕೆಆರ್‌ಎಸ್ ಆಯಸ್ಸು 100-120 ವರ್ಷ' ಎಂದು ಅದರ ನಿರ್ಮಾತೃ ವಿಶ್ವೇಶ್ವರಯ್ಯನವರು ಹೇಳಿದ್ದರು. ಕನ್ನಡನಾಡು ಕಂಡ ಶ್ರೇಷ್ಠ ನೀರಾವರಿ ತಜ್ಞರಲ್ಲಿ ಒಬ್ಬರಾದ ಎಸ್.ಜಿ.ಬಾಳೇಕುಂದ್ರಿ ಅವರು ಹೊಸಪೇಟೆಯ 'ತುಂಗಭದ್ರಾ ಜಲಾಶಯದಲ್ಲಿ ಮೂರನೇ ಒಂದು ಭಾಗದಷ್ಟು ಹೂಳು ತುಂಬಿದೆ. ಹೂಳು ತೆಗೆಯುವುದು ಕಷ್ಟಸಾಧ್ಯ. ತೆಗೆದರೂ ಅದರ ವಿಲೇವಾರಿ ಇನ್ನೂ ಕಷ್ಟ. ಕಿರು ಚೆಕ್ ಡ್ಯಾಂಗಳನ್ನು ನಿರ್ಮಿಸಬೇಕು ಮತ್ತು ನೀರು ಬರುತ್ತಿರುವಾಗ ಕೆರೆಗಳಿಗೆ ಹರಿಸಬೇಕು' ಎಂದು ಸಲಹೆ ಕೊಟ್ಟಿದ್ದರು.

ನಿಯಮಿತವಾಗಿ ಹೂಳು ತೆಗೆಯುವುದೂ ಜಲವಿವಾದದ ಪರಿಹಾರಕ್ಕೆ ಒಂದು ಕಿರು ಮಾರ್ಗ. ಕಾವೇರಿ ಕೊಳ್ಳದ ಜಲಾಶಯಗಳ ಹೂಳು ತೆಗೆದರೆ 100 ಟಿಎಂಸಿ ಅಡಿ ಹೆಚ್ಚು ನೀರು ಸಂಗ್ರಹಿಸಬಹುದು ಎಂದು ನೀರಾವರಿ ತಜ್ಞರು ಹೇಳುತ್ತಾರೆ. ಮಳೆಗಾಲಕ್ಕೆ ಮುನ್ನ, ತೀವ್ರ ಬರ ಎದುರಿಸುತ್ತಿರುವ ಸಂದರ್ಭದಲ್ಲಿ ಮುಖ್ಯವಾಗಿ ಜನ ಮತ್ತು ಸರ್ಕಾರ ಗಮನಿಸಬೇಕಿರುವ ವಿಚಾರವೆಂದರೆ, ಮಲಿನವಾಗಿರುವ ನದಿಗಳನ್ನು ಸ್ವಚ್ಛಗೊಳಿಸುವುದು.

ರಾ.ನಂ.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಬಿಜೆಪಿ ಸೇರಿ ತನಿಖೆ ತಪ್ಪಿಸಿಕೊಂಡರು’

ಚಿತ್ರ: ಸಂತೋಷ ಸಸಿಹಿತ್ಲು

ಚಂದ್ರಬಾಬು ನಾಯ್ಡು

2023ರ ಸೆಪ್ಟೆಂಬರ್ ಹೊತ್ತಿಗೆ ಟಿಡಿಪಿ ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಆದಾಯ ತೆರಿಗೆ ಇಲಾಖೆಯು ಕಾರಣ ಕೇಳಿ ನೋಟಿಸ್ ಜಾರಿ ಮಾಡಿತ್ತು. ‘ವಿವಿಧ ಮೂಲಸೌಕರ್ಯ ಅಭಿವೃದ್ಧಿ ಕಂಪನಿಗಳಿಂದ ಸುಮಾರು ₹118 ಕೋಟಿ ಲಂಚ ಪಡೆದುಕೊಂಡಿದ್ದೀರಿ. ಈ ಆದಾಯವನ್ನು ನೀವು ಬಹಿರಂಗಗೊಳಿಸಿಲ್ಲ. ಇದಕ್ಕೆ ಕಾರಣ ನೀಡಿ’ ಎಂದು ನೋಟಿಸ್ ನೀಡಲಾಗಿತ್ತು. 2017ರಿಂದಲೂ ಕೌಶಲ ಅಭಿವೃದ್ಧಿ ಹಗರಣದಲ್ಲಿ ನಾಯ್ಡು ಅವರ ವಿರುದ್ಧ ತನಿಖೆ ನಡೆಯುತ್ತಲೇ ಇತ್ತು. ಜಾರಿ ನಿರ್ದೇಶನಾಲಯವೇ ಇಂಥದೊಂದು ಹಗರಣವನ್ನು ಬಯಲಿಗೆಳೆದಿತ್ತು. ಆಂಧ್ರ ಪ್ರದೇಶ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ವಿಶೇಷ ತನಿಖಾ ತಂಡವನ್ನು ನಿಯೋಜಿಸಿದ್ದರು ಮತ್ತು ಈ ಸಂಬಂಧ ನಾಯ್ಡು ಅವರನ್ನು ಬಂಧಿಸಲಾಗಿತ್ತು.

ಆಂಧ್ರ ಪ್ರದೇಶದಲ್ಲಿ ಇದೇ ವರ್ಷ ವಿಧಾನಸಭೆ ಚುನಾವಣೆಯೂ ನಡೆಯಲಿದೆ. ಎನ್‌ಡಿಎ ಮೈತ್ರಿಕೂಟದಿಂದ ಹೊರಬಂದಿದ್ದ ನಾಯ್ಡು ಅವರು ಚುನಾವಣೆಗಳ ಹೊಸ್ತಿಲಿನಲ್ಲಿ ಮತ್ತೊಮ್ಮೆ ಎನ್‌ಡಿಎ ಪಾಳಯವನ್ನು ಸೇರಿಕೊಂಡಿದ್ದಾರೆ. ಅವರ ಮೇಲಿರುವ ಪ್ರಕರಣಗಳ ತನಿಖೆಯಲ್ಲಿ ಯಾವುದೇ ಬೆಳವಣಿಗೆ ಕಂಡಿಲ್ಲ.

ಅಶೋಕ್ ಚವ್ಹಾಣ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ, ರಾಜ್ಯಸಭಾ ಸದಸ್ಯರೂ ಆಗಿದ್ದಾರೆ. ಚವ್ಹಾಣ್ ಅವರು ಕಾಂಗ್ರೆಸ್ ತೊರೆದ ಕುರಿತು ಇತ್ತೀಚೆಗೆ ನಡೆದ ಭಾರತ ಜೋಡೊ ನ್ಯಾಯ ಯಾತ್ರೆಯ ಮುಕ್ತಾಯ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಘಟನೆಯೊಂದನ್ನು ಹಂಚಿಕೊಂಡರು. ‘ಅಶೋಕ್ ಅವರು ತಾಯಿ ಸೋನಿಯಾ ಅವರಿಗೆ ಕರೆ ಮಾಡಿ, ಅತ್ತರು. ನನಗೆ ಜೈಲಿಗೆ ಹೋಗಲು ಇಷ್ಟವಿಲ್ಲ’ ಎಂದು ಹೇಳಿಕೊಂಡಿದ್ದರು’ ಎಂದು ಹೇಳಿದರು. ಆದರೆ, ರಾಹುಲ್ ಅವರ ಈ ಮಾತನ್ನು ಅಶೋಕ್ ಅವರ ನಿರಾಕರಿಸಿದ್ದಾರೆ.

ಅದೇನೇ ಇದ್ದರೂ ‘ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ, ಸಿಬಿಐ ತನಿಖೆಗಳಿಂದ ತಪ್ಪಿಸಿಕೊಳ್ಳಲು, ಭಯಪಟ್ಟು ನಮ್ಮ ಪಕ್ಷದ ನಾಯಕರು ಬಿಜೆಪಿಯನ್ನು ಸೇರಿಕೊಳ್ಳುತ್ತಿದ್ದಾರೆ’ ಎಂದು ವಿರೋಧ ಪಕ್ಷಗಳು ಹೇಳುತ್ತಲೇ ಬಂದಿವೆ. ಇದಕ್ಕೆ ಪುಷ್ಟಿ ಕೊಡುವಂತೆ, ಹಗರಣಗಳನ್ನು ಹೊತ್ತ ರಾಜಕಾರಣಿಗಳು ಬಿಜೆಪಿ ಪಾಳಯವನ್ನು ಸೇರಿಕೊಳ್ಳುತ್ತಿದ್ದಾರೆ. ಕೆಲವರಿಗಂತೂ ಉತ್ತಮ ಅಧಿಕಾರ ಸ್ಥಾನಗಳೂ ದೊರೆತಿವೆ. ಜಾರಿ ನಿರ್ದೇಶನಾಲಯದ್ದೊ, ತೆರಿಗೆ ಇಲಾಖೆಯದ್ದೊ ನೋಟಿಸ್ ಬಂದ ಕೆಲವೇ ತಿಂಗಳಲ್ಲಿ ಹಲವರು ಬಿಜೆಪಿಯನ್ನು ಸೇರಿಕೊಂಡಿದ್ದಾರೆ. ಎನ್‌ಡಿಎಯಿಂದ ಹೊರಬಂದಿದ್ದ ಕೆಲ ಪಕ್ಷಗಳು ಈಗ ಎನ್‌ಡಿಎ ತೆಕ್ಕೆಗೆ ಮರಳಿವೆ.

ರಾಜಕೀಯ ಲಾಭಕ್ಕಾಗಿಯೊ, ತನಿಖೆಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೊ ವಿವಿಧ ರಾಜಕೀಯ ನಾಯಕರು ಬಿಜೆಪಿಯ ಮೊರೆ ಹೋಗುತ್ತಿರುವುದಂತೂ ನಿಜ. ಇಂಥ ಕೆಲವು ಉದಾಹರಣೆಗಳು ಇಲ್ಲಿವೆ

ಆಧಾರ: ಪಿಟಿಐ

ಮುಕುಲ್ ರಾಯ್

ಶಾರದಾ ಚಿಟ್‌ಫಂಡ್ ಹಗರಣ ಹಾಗೂ ನಾರದ ಮಾರುವೇಷದ ಕಾರ್ಯಾಚರಣೆ ಪ್ರಕರಣದಲ್ಲಿ ಸಿಬಿಐ ತನಿಖೆ ಎದುರಿಸುತ್ತಿದ್ದ ಮುಕುಲ್ ರಾಯ್ ಅವರು ಟಿಎಂಸಿಯ ಹಿರಿಯ ನಾಯಕರಾಗಿದ್ದರು. ರಾಯ್ ಅವರು ಶಾರದಾ ಚಿಟ್‌ಫಂಡ್ ಹಗರಣದ ಪ್ರಮುಖ ಆರೋಪಿ ಎಂದು ಸಿಬಿಐ ಆರೋಪಪಟ್ಟಿ ಸಲ್ಲಿಸಿತ್ತು. 2016ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಇದು ದೊಡ್ಡ ಸುದ್ದಿಯಾಯಿತು. ಜಾರಿ ನಿರ್ದೇಶನಾಲಯದ ಅಧಿಕಾರಿಗಳು 2017ರ ನವೆಂಬರ್ ಆರಂಭದಲ್ಲಿ ದಾಳಿ ನಡೆಸಿದರು. ಇದಾದ ಒಂದು ವಾರದ ಬಳಿಕ ರಾಯ್ ಅವರು ಬಿಜೆಪಿ ಸೇರಿಕೊಂಡರು.

ಬಿಜೆಪಿ ಸೇರಿದ ಬಳಿಕ, ಅವರ ಮೇಲೆ ಗಂಭೀರ ಆರೋಪಗಳಿದ್ದರೂ ಯಾವುದೇ ಕ್ರಮವನ್ನು ಅವರ ವಿರುದ್ಧ ಇದುವರೆಗೂ ಕೈಗೊಂಡಿಲ್ಲ. ಬಿಜೆಪಿ ಸೇರಿದ ಬಳಿಕ, ರಾಯ್ ಅವರು ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷನನ್ನಾಗಿ ಮಾಡಲಾಯಿತು. ಫೆಬ್ರುವರಿಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶಾರದಾ ಚಿಟ್‌ಫಂಡ್ ಹಗರಣ ಸಂಬಂಧ ಸಮನ್ಸ್ ಜಾರಿ ಮಾಡಿದ್ದಾರೆ. 2021ರ ವಿಧಾನಸಭಾ ಚುನಾವಣೆಯಲ್ಲಿ ರಾಯ್ ಅವರು ಬಿಜೆಪಿ ಟಿಕೆಟ್‌ನಿಂದಲೇ ಸ್ಪರ್ಧಿಸಿ ಗೆದ್ದು, ಶಾಸಕರಾಗಿದ್ದರು. ಆದರೆ, ಗೆದ್ದ ಬಳಿಕ ಕೆಲವೇ ದಿನಗಳಲ್ಲಿ ತಾನು ಟಿಎಂಸಿ ಜೊತೆ ಇರುವುದಾಗಿ ಕೇಳಿಕೊಂಡರು. ಆದರೆ, ಅವರು ತಮ್ಮ ಶಾಸಕ ಸ್ಥಾನಕ್ಕೆ ಇನ್ನುವರೆಗೂ ರಾಜೀನಾಮೆ ನೀಡಿಲ್ಲ.

ಜಿ. ಜನಾರ್ದನ ರೆಡ್ಡಿ

ಬಳ್ಳಾರಿಯ ಜಿ. ಜನಾರ್ದನ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶಿಸಿದ್ದರು. 2006ರಲ್ಲಿ ಜೆಡಿಎಸ್– ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಲಂಚದ ಆರೋಪ ಮಾಡುವ ಮೂಲಕ ಮುನ್ನೆಲೆಗೆ ಬಂದಿದ್ದರು. ನಂತರ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಪ್ರವಾಸೋದ್ಯಮ ಸಚಿವರಾಗಿದ್ದರು. ಅಕ್ರಮ ಗಣಿಗಾರಿಕೆ ನಡೆಸಿದ ಆರೋಪದಡಿ ದಾಖಲಿಸಿದ್ದ ಪ್ರಕರಣದಲ್ಲಿ ರೆಡ್ಡಿ ಅವರನ್ನು ಸಿಬಿಐ 2011ರಲ್ಲಿ ಬಂಧಿಸಿತ್ತು. ಕೆಲವು ವರ್ಷ ಜೈಲಿನಲ್ಲಿದ್ದ ಅವರು, ಜಾಮೀನಿನ ಮೇಲೆ ಹೊರ ಬಂದಿದ್ದರು. ಅಕ್ರಮ ಗಣಿಗಾರಿಕೆ ಸೇರಿದಂತೆ ವಿವಿಧ ಆರೋಪಗಳಡಿ ದಾಖಲಿಸಿರುವ 20 ಪ್ರಕರಣಗಳು ಜನಾರ್ದನ ರೆಡ್ಡಿ ವಿರುದ್ಧ ಬಾಕಿ ಇವೆ. ಸಿಬಿಐ ದಾಖಲಿಸಿದ ಒಂಬತ್ತು, ಸಿಐಡಿಯ ಒಂದು, ಲೋಕಾಯುಕ್ತದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಎಂಟು, ಆದಾಯ ತೆರಿಗೆ ಇಲಾಖೆಯ ಒಂದು ಮತ್ತು ಕನಕಗಿರಿ ಪೊಲೀಸರು ದಾಖಲಿಸಿರುವ ಒಂದು ಪ್ರಕರಣ ವಿಚಾರಣಾ ಹಂತದಲ್ಲಿವೆ. 2023ರ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ವಿರುದ್ಧ ಬಂಡಾಯ ಸಾರಿದ್ದ ರೆಡ್ಡಿ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಅಸ್ತಿತ್ವಕ್ಕೆ ತಂದಿದ್ದರು. ಕೊಪ್ಪಳ ಜಿಲ್ಲೆಯ ಗಂಗಾವತಿ ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು. 20 ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿರುವಾಗಲೇ ಬಿಜೆಪಿಗೆ ಜಿಗಿದಿದ್ದಾರೆ.

ಯಾಮಿನಿ ಜಾದವ್

ಯಾಮಿನಿ ಅವರು ಅವಿಭಜಿತ ಶಿವಸೇನಾದ ಶಾಸಕಿಯಾಗಿದ್ದವರು. ಅವರ ಪತಿ ಯಶವಂತ್ ಜಾದವ್ ಅವರು ಬೃಹನ್ ಮುನಿಸಿಪಲ್ ಕಾರ್ಪೊರೇಷನ್‌ನ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿದ್ದವರು. ದಂಪತಿ ಮೇಲೆ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ. 2022ರ ಏಪ್ರಿಲ್‌ನಲ್ಲಿ ಆದಾಯ ತೆರಿಗೆ ಇಲಾಖೆಯು ದಂಪತಿಗೆ ಸೇರಿದ 41 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ಇದಾದ ನಾಲ್ಕು ತಿಂಗಳ ಬಳಿಕ, ಯಾಮಿನಿ, ಯಶವಂತ್ ಅವರು ಏಕನಾಥ ಶಿಂದೆಯವರ ಶಿವಸೇನಾವನ್ನು ಸೇರಿಕೊಂಡರು. ಈ ಪ್ರಕರಣದಲ್ಲಿ ತನಿಖೆ ಸ್ಥಗಿತಗೊಂಡಿದೆ.

ಭಾವನಾ ಗವಲೀ

ಅವಿಭಜಿತ ಶಿವಸೇನಾದಲ್ಲಿ ಸಂಸದೆಯಾಗಿದ್ದ ಭಾವನಾ ಗವಲೀ ಅವರು ಪಕ್ಷ ವಿಭಜನೆಯಾದಾಗ ಉದ್ಧವ್ ಠಾಕ್ರೆ ಬಣದಲ್ಲೇ ಉಳಿದಿದ್ದರು. ಹಲವು ಎನ್‌ಜಿಒಗಳನ್ನು ನಡೆಸುತ್ತಿದ್ದ ಅವರ ವಿರುದ್ಧ ಜಾರಿ ನಿರ್ದೇಶನಾಲಯವು 2021ರಲ್ಲಿ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿತು. ‘ಭಾವನಾ ಅವರು ಎನ್‌ಜಿಒ ಒಂದರ ದಾಖಲೆ ಪತ್ರಗಳನ್ನು ತಿದ್ದಿ, ಅದನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದಾರೆ’ ಎಂಬುದು ಅವರ ಮೇಲಿದ್ದ ಪ್ರಮುಖ ಆರೋಪ. ಇದಕ್ಕೆ ಸಂಬಂಧಿಸಿದಂತೆ ಭಾವನಾ ಮತ್ತು ಅವರ ಆಪ್ತರೊಬ್ಬರ ಮೇಲೆ ಜಾರಿ ನಿರ್ದೇಶನಾಲಯವು 2021ರಲ್ಲಿ ಇಸಿಐಆರ್ ದಾಖಲಿಸಿತ್ತು. ಅದಾದ ಕೆಲವೇ ವಾರಗಳಲ್ಲಿ ಉದ್ಧವ್ ಠಾಕ್ರೆ ಬಣವನ್ನು ತೊರೆದ ಭಾವನಾ, ಶಿಂದೆ ಬಣವನ್ನು ಸೇರಿದರು. ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುತ್ತಿದ್ದವರು, ಹೊಗಳಲು ಆರಂಭಿಸಿದರು. 2022ರಲ್ಲಿ ಜಾರಿ ನಿರ್ದೇಶನಾಲಯವು ಭಾವನಾ ಅವರನ್ನು ದೋಷಮುಕ್ತಗೊಳಿಸಿದೆ. ‘ನಡೆದಿದೆ ಎನ್ನಲಾದ ವಂಚನೆಯಲ್ಲಿ ಅಕ್ರಮವಾಗಿ ವರ್ಗಾವಣೆಯಾಗಿರುವ ಹಣವನ್ನು ತಪ್ಪಾಗಿ ಲೆಕ್ಕ ಹಾಕಲಾಗಿದೆ. ಭಾವನಾ ಅವರು ಕಾನೂನಾತ್ಮಕವಾಗಿಯೇ ಹಣವನ್ನು ವರ್ಗಾಯಿಸಿದ್ದಾರೆ. ದೂರಿನಲ್ಲಿ ಹೇಳಿರುವಂತಹ ವಂಚನೆ ನಡೆದಿಲ್ಲ’ ಎಂದು ಹೇಳಿತ್ತು. ಬಿಜೆಪಿ ಮೈತ್ರಿಕೂಟದ ಭಾಗವಾದ ನಂತರವೇ ಭಾವನಾ ವಿರುದ್ಧದ ತನಿಖೆ ಸ್ಥಗಿತಗೊಂಡಿದ್ದು ಮತ್ತು ಅವರಿಗೆ ಕ್ಲೀನ್‌ಚಿಟ್ ದೊರೆತದ್ದು.

ತಪಸ್ ರಾಯ್

ಸ್ಥಳೀಯ ಸಂಸ್ಥೆಗಳಲ್ಲಿನ ನೇಮಕಾತಿ ಹಗರಣ ಸಂಬಂಧ ತಪಸ್ ರಾಯ್ ಅವರಿಗೆ ಸೇರಿದ ಜಾಗಗಳಲ್ಲಿ ಇದೇ ಜನವರಿಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದರು. ಇದೊಂದು ಸುಮಾರು ₹200 ಕೋಟಿ ಹಗರಣ ಎಂದು ಜಾರಿ ನಿರ್ದೇಶನಾಲಯವು ಹೇಳಿತ್ತು. ತಪಸ್ ಅವರು ಟಿಎಂಸಿಯ ಹಿರಿಯ ನಾಯಕ. ಜೊತೆಗೆ, ಐದು ಬಾರಿ ಶಾಸಕರಾಗಿದ್ದ ಅವರು 23–24 ವರ್ಷಗಳಿಂದ ಟಿಎಂಸಿ ಜೊತೆಗಿದ್ದರು. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ ಎರಡು ತಿಂಗಳ ಬಳಿಕ, ತಪಸ್ ಅವರು ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕೋಲ್ಕತ್ತಾ ಉತ್ತರ ಕ್ಷೇತ್ರದಿಂದ ರಾಯ್ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.

ಪೆಮಾ ಖಂಡು

ಪೀಪಲ್ಸ್ ಪಾರ್ಟಿ ಆಫ್ ಅರುಣಾಚಲ ಪ್ರದೇಶದ ಮುಖ್ಯಸ್ಥರಾಗಿದ್ದ ಪೆಮಾ ಖಂಡು 2016ರಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದ್ದರು. ಆದರೆ ಈ ಹಿಂದೆಯೂ ಅವರು ಭ್ರಷ್ಟಾಚಾರ ಎಸಗಿದ ಹಲವು ಆರೋಪಗಳು ಅವರ ಮೇಲಿದ್ದವು. ಪೆಮಾ ಖಂಡು ವಿರುದ್ಧ ಸಿಬಿಐ ತನಿಖೆ ನಡೆಸಬೇಕು ಎಂದು 2010ರಲ್ಲೇ ಸುಪ್ರೀಂ ಕೋರ್ಟ್‌ಗೆ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು.

2016ರಲ್ಲಿ ಅಂತಹ ಇನ್ನಷ್ಟು ಅರ್ಜಿಗಳು ಸಲ್ಲಿಕೆಯಾದವು. ಅವರ ವಿರುದ್ಧ ಸಿಬಿಐ ತನಿಖೆ ಆರಂಭವಾಗೇ ಬಿಡುತ್ತದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿತ್ತು. ಅವರ ರಾಜೀನಾಮೆಗೆ ಪಕ್ಷದಲ್ಲೇ ಒತ್ತಡ ಹೆಚ್ಚಾಗಿತ್ತು. 2016ರ ಡಿಸೆಂಬರ್‌ನಲ್ಲಿ ಅವರು ತಮ್ಮ ಪಕ್ಷದ 33 ಶಾಸಕರೊಂದಿಗೆ ಬಿಜೆಪಿ ಸೇರಿದರು. ಬಿಜೆಪಿ ಅದೇ ಮೊದಲ ಬಾರಿಗೆ ಅರುಣಾಚಲ ಪ್ರದೇಶದಲ್ಲಿ ಸರ್ಕಾರ ರಚಿಸಿತು.

ಪ್ರಕರಣಗಳು: ಭ್ರಷ್ಟಾಚಾರ ಆರೋಪಗಳು, ಮುಖ್ಯಮಂತ್ರಿಯಾಗಿದ್ದಾಗ ತಮ್ಮದೇ ಕಂಪನಿ ಮತ್ತು ತಮ್ಮ ಕುಟುಂಬದ ಸದಸ್ಯರ ಕಂಪನಿಗಳಿಗೆ ಗುತ್ತಿಗೆ ನೀಡಿದ ಆರೋಪ

ಬಿಜೆಪಿ ಸೇರಿದ ನಂತರ: ಮುಖ್ಯಮಂತ್ರಿ ಸ್ಥಾನ ಉಳಿಯಿತು, ಖಂಡು ವಿರುದ್ಧ ಯಾವುದೇ ಪ್ರಕರಣಗಳು ದಾಖಲಾಗಿಲ್ಲ ಮತ್ತು ತನಿಖೆಯೂ ನಡೆಯಲಿಲ್ಲ

ಜ್ಯೋತಿರಾದಿತ್ಯ ಸಿಂಧಿಯಾ

ಪ್ರಕರಣ

- ಕೃಷಿ ಭೂಮಿ ಮಾರಾಟದ ಸಂದರ್ಭದಲ್ಲಿ ದಾಖಲೆಗಳನ್ನು ತಿರುಚಿದ ಮತ್ತು ಫೋರ್ಜರಿ ಸಹಿ ಮಾಡಿದ ಆರೋಪ

ಬಿಜೆಪಿ ಸೇರಿದ ನಂತರ

- ಕೇಂದ್ರ ಸರ್ಕಾರದಲ್ಲಿ ಸಚಿವ ಸ್ಥಾನ
- ಸಿಂಧಿಯಾ ವಿರುದ್ಧದ ಪ್ರಕರಣಗಳಲ್ಲಿ ಕ್ಲೀನ್‌ಚಿಟ್

ಮಧ್ಯಪ್ರದೇಶ ಕಾಂಗ್ರೆಸ್‌ನ ಅತ್ಯಂತ ಮುಖ್ಯ ಯುವ ನಾಯಕರಲ್ಲಿ ಮತ್ತು ರಾಹುಲ್ ಗಾಂಧಿಯ ಆಪ್ತರಲ್ಲಿ ಒಬ್ಬರಾಗಿದ್ದ ಜ್ಯೋತಿರಾದಿತ್ಯ ಸಿಂಧಿಯಾ ವಿರುದ್ಧವೂ ಭ್ರಷ್ಟಾಚಾರದ ಆರೋಪಗಳು ಇದ್ದವು. ರಾಜ್ಯದಲ್ಲಿ ಕಾಂಗ್ರೆಸ್‌ನ ಕಮಲನಾಥ್ ಸರ್ಕಾರ ಇದ್ದ ಸಂದರ್ಭದಲ್ಲೇ ಸಿಂಧಿಯಾ ವಿರುದ್ಧ ಫೋರ್ಜರಿ ಪ್ರಕರಣವೂ ದಾಖಲಾಗಿತ್ತು. ಆ ಪ್ರಕರಣದಲ್ಲಿ ಸಿಂಧಿಯಾ ಅವರ ಕುಟುಂಬದ ಹಲವು ಸದಸ್ಯರೂ ಆರೋಪಿಗಳಾಗಿದ್ದರು.

ಪ್ರಕರಣದ ವಿಚಾರಣೆ ತೀವ್ರಗೊಂಡ ಬೆನ್ನಲ್ಲೇ 2020ರ ಮಾರ್ಚ್‌ನಲ್ಲಿ ಹಲವು ಶಾಸಕರೊಂದಿಗೆ ಸಿಂಧಿಯಾ ಕಾಂಗ್ರೆಸ್ ತೊರೆದರು. ಬಿಜೆಪಿ ಸೇರಿದರು. ಇದರಿಂದ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಪತನವಾಯಿತು, ಬಿಜೆಪಿ ಅಧಿಕಾರ ಹಿಡಿಯಿತು. ಆದರೆ, ಸಿಂಧಿಯಾ ಅವರು ಬಿಜೆಪಿ ಸೇರಿದ ಒಂದು ವಾರದ ಒಳಗೇ ಅವರ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಲಾಯಿತು. ಸಿಂಧಿಯಾ ಅವರಿಗೆ ಕ್ಲೀನ್‌ಚಿಟ್ ನೀಡಲಾಗಿತ್ತು.

ಸಿನಿ ಬಿಟ್ಸ್

ಡಬ್ಬಿಂಗ್ ಪೂರ್ಣಗೊಳಿಸಿದ ‘ಮಾರ್ಟಿನ್’

ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಹಾಗೂ ವೈಭವಿ ಶಾಂಡಿಲ್ಯ ನಟನೆಯ, ಎ.ಪಿ. ಅರ್ಜುನ್ ನಿರ್ದೇಶನದ ‘ಮಾರ್ಟಿನ್’ ಚಿತ್ರದ ಡಬ್ಬಿಂಗ್ ಪೂರ್ಣಗೊಂಡಿದೆ.

ಧ್ರುವ ಸರ್ಜಾ

ಈ ಚಿತ್ರಕ್ಕೆ ಖ್ಯಾತ ಬಹುಭಾಷಾ ನಟ ಅರ್ಜುನ್ ಸರ್ಜಾ ಕಥೆ ಬರೆದಿದ್ದಾರೆ. ವಾಸವಿ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಉದಯ್ ಕೆ. ಮೆಹ್ತಾ ಈ ಚಿತ್ರ ನಿರ್ಮಿಸಿದ್ದಾರೆ. ‘ಮಾರ್ಟಿನ್’ ಚಿತ್ರಕ್ಕೆ ಲೂಪ್ ಸ್ಟುಡಿಯೊದಲ್ಲಿ ಮಾತಿನ ಜೋಡಣೆ ನಡೆದಿದೆ. ಸದ್ಯದಲ್ಲೇ ಚಿತ್ರದ ಪ್ರಥಮಪ್ರತಿ ಸಿದ್ಧವಾಗಲಿದೆ ಎಂದಿದೆ ಚಿತ್ರತಂಡ. 2021ರ ಸೆಪ್ಟೆಂಬರ್‌ನಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಿತ್ತು. ಹೈದರಾಬಾದ್‌ನಲ್ಲಿ ಸೆಟ್ ಹಾಕಿ 45 ದಿನ ಶೂಟ್ ಮಾಡಿದ್ದ ಚಿತ್ರತಂಡ ವೈಜಾಗ್‌ನಲ್ಲಿ ಚೇಸ್ ಸೀನ್ ಹಾಗೂ ಕಾಶ್ಮೀರದಲ್ಲಿ 25 ದಿನದ ಚಿತ್ರೀಕರಣ ನಡೆಸಿತ್ತು. ಒಟ್ಟಾರೆ 240 ದಿನ ಚಿತ್ರದ ಚಿತ್ರೀಕರಣ ನಡೆದಿದೆ. ಮಣಿ ಶರ್ಮ ಅವರ ಸಂಗೀತ ನಿರ್ದೇಶನದಲ್ಲಿ ಚಿತ್ರದ ಹಾಡುಗಳು ಮೂಡಿಬಂದಿದ್ದು, ರವಿ ಬಸ್ರೂರ್ ಹಿನ್ನೆಲೆ ಸಂಗೀತ ನೀಡಿದ್ದಾರೆ.

ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ, ರಾಮ್ ಲಕ್ಷ್ಮಣ್ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚಿತ್ರದ ತಾರಾಬಳಗದಲ್ಲಿ ಅನ್ವೇಶಿ ಜೈನ್, ಜಾರ್ಜಿಯ ಆಂಡ್ರಿಯಾನಿ, ಚಿಕ್ಕಣ್ಣ, ಮಾಳವಿಕ ಅವಿನಾಶ್, ನಿಕ್ತಿನ್ ಧೀರ್, ನವಾಬ್ ಶಾ, ರೋಹಿತ್ ಪಾಠಕ್ ಮುಂತಾದವರಿದ್ದಾರೆ.

‘ಅಶ್ವತ್ಥಾಮ’ನಿಗೆ ಸಚಿನ್ ರವಿ ಸಾರಥಿ

ರಕ್ಷಿತ್ ಶೆಟ್ಟಿ ನಟನೆಯ ‘ಅವನೇ ಶ್ರೀಮನ್ನಾರಾಯಣ’ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದ ಸಚಿನ್ ರವಿ ಪ್ಯಾನ್ ಇಂಡಿಯಾ ಸಿನಿಮಾವೊಂದಕ್ಕೆ ಸಜ್ಜಾಗುತ್ತಿದ್ದಾರೆ.

ಬಾಲಿವುಡ್ ಸ್ಟಾರ್ ಶಾಹಿದ್ ಕಪೂರ್ ನಟಿಸುತ್ತಿರುವ ‘ಅಶ್ವತ್ಥಾಮ-ದಿ ಸಾಗ ಕಂಟಿನ್ಯೂಸ್’ ಸಿನಿಮಾವನ್ನು ಸಚಿನ್ ರವಿ ನಿರ್ದೇಶಿಸುತ್ತಿದ್ದಾರೆ. ಹಲವು ವರ್ಷಗಳಿಂದ ರಕ್ಷಿತ್ ಶೆಟ್ಟಿ ತಂಡದಲ್ಲಿ ಸಚಿನ್ ಗುರುತಿಸಿಕೊಂಡಿದ್ದಾರೆ. ಸಂಕಲನಕಾರರಾಗಿ, ಗ್ರಾಫಿಕ್ಸ್ ಪರಿಣಿತರಾಗಿ ಕೆಲಸ ನಿಭಾಯಿಸಿದ್ದಾರೆ. ಅವರೀಗ ಬಾಲಿವುಡ್ ಕಡೆ ಮುಖ ಮಾಡಿದ್ದಾರೆ. ಈ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿ ನಟಿಸಲಿದ್ದಾರೆ ಎಂದು 2022ರ ಜುಲೈನಲ್ಲಿ ಸಚಿನ್ ರವಿ ತಿಳಿಸಿದ್ದರು. ಇದೀಗ ಶಾಹಿದ್ ಕಪೂರ್ ‘ಅಶ್ವತ್ಥಾಮ’ನಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.

ಶಾಹಿದ್ ಕಪೂರ್

‘ಈ ಕಥೆಯಲ್ಲಿ ಅಶ್ವತ್ಥಾಮ ವರ್ತಮಾನದಲ್ಲಿರುವ ನಾಯಕ. ಅಮರತ್ವದ ಪರಿಕಲ್ಪನೆಯನ್ನು ಶೋಧಿಸುವ ಕೆಲಸ ಆತನದ್ದು. ಇಷ್ಟನ್ನಷ್ಟೇ ಹೇಳಬಲ್ಲೆ. ಆದರೆ ಈ ಚಿತ್ರ ಅದ್ಭುತ ಆ್ಯಕ್ಷನ್ ಇರುವ ಮತ್ತು ಎಲ್ಲಾ ತಲೆಮಾರಿನ ವೀಕ್ಷಕರನ್ನೂ ಸೆಳೆಯಬಲ್ಲ ಚಿತ್ರವಾಗಲಿದೆ. ನನ್ನ ಬಾಲ್ಯದಿಂದಲೂ ಅಶ್ವತ್ಥಾಮನ ಪಾತ್ರ ನನ್ನ ಮೇಲೆ ಬಹಳಷ್ಟು ಪ್ರಭಾವ ಬೀರಿದೆ. ಈ ಪಾತ್ರದ ಬಗ್ಗೆಯೇ ಚಿತ್ರ ಮಾಡುವ ಯೋಜನೆ ಹೊಂದಿದ್ದೆ. ಕಡೆಗೂ ನನ್ನ ಕಲ್ಪನೆಯ ಚಿತ್ರ ಸೆಟ್ಟೇರುತ್ತಿದೆ ಎಂಬ ಸಂಭ್ರಮದಲ್ಲಿದ್ದೇನೆ’ ಎನ್ನುತ್ತಾರೆ ಸಚಿನ್. ‘ಅಶ್ವತ್ಥಾಮ’ ಚಿತ್ರವನ್ನು ಪೂಜಾ ಎಂಟರ್‌ಟೈನ್‌ಮೆಂಟ್ ಕಂಪನಿ ನಿರ್ಮಾಣ ಮಾಡುತ್ತಿದೆ.

ಗುಂಡಣ್ಣ

ಸಣ್ಣ ಮಾತಿನ ದೊಡ್ಡ ಅರ್ಥ

ನುಡಿ ಬೆಳಗು

ಪಿ. ಚಂದ್ರಿಕಾ

ಸಂತನಿಗೆ ದೇವರ ಹುಚ್ಚು; ಸದಾ ದೇವರಲ್ಲಿ ತನ್ನ ಮನಸ್ಸನ್ನು ಇರಿಸಿಕೊಂಡೇ ಇರುತ್ತಿದ್ದ, ‘ಪ್ರಾರ್ಥನೆ ನನ್ನ ಒಳಗನ್ನು ಶುದ್ಧಗೊಳಿಸುತ್ತದೆ’ ಎಂದು ನಂಬಿದ್ದ. ಎಲ್ಲರಿಗೂ ಆತನ ಬಗ್ಗೆ ಅಪಾರವಾದ ಗೌರವ ಇತ್ತು. ಅದು ಅವನನ್ನು ಸಂತೋಷಗೊಳಿಸುವುದೇ ಅಲ್ಲದೆ ಅವನಲ್ಲಿ ಹೆಮ್ಮೆಗೂ ಕಾರಣವಾಗಿತ್ತು.

ಒಮ್ಮೆ ಅವನು ಹೀಗೇ ಪ್ರಾರ್ಥನೆಗೆ ಕುಳಿತಿದ್ದಾಗ ಒಬ್ಬ ಯುವತಿ ಅವನಿಗೆ ತನ್ನ ಕಾಲನ್ನು ತಾಕಿಸಿಕೊಂಡು ಓಡಿ ಹೋದಳು. ಇದರಿಂದ ಆ ಸಂತನಿಗೆ ಕೋಪಬರುತ್ತದೆ. ‘ಜಗತ್ತೇ ಗೌರವಿಸುವ ನಾನಿಲ್ಲಿ ದೇವರ ಪ್ರಾರ್ಥನೆಯಲ್ಲಿ ಕುಳಿತಿರುವಾಗ ಕೆಲಸಕ್ಕೇ ಬಾರದ ಹುಡುಗಿ ನನಗೆ ತನ್ನ ಕಾಲನ್ನು ತಾಗಿಸಿಕೊಂಡು ಹೋಗುವುದು ಎಂದರೆ ಏನು?’ ಎಂದು. ಆಕೆಯ ನಡುಗೆಯಲ್ಲಿ ಹಗುರತನವಿತ್ತು, ಲಾಲಿತ್ಯವಿತ್ತು, ಅಪೂರ್ವವಾದದ್ದನ್ನು ಸಂಧಿಸುತ್ತೇನೆ ಎನ್ನುವ ಅದಮ್ಯ ಉತ್ಸಾಹವಿತ್ತು. ಅದನ್ನು ಕಂಡ ಸಂತನಿಗೆ ಸೃಷ್ಟಿಯ ಅತ್ಯಂತ ಸೌಂದರ್ಯವೆಲ್ಲ ಅವಳಲ್ಲೇ ಇದೆ ಎನ್ನಿಸಿತ್ತು. ಆಗ ಸಂತನಿಗೂ ಒಂದು ಕುತೂಹಲ ಮೂಡಿತು, ಅವಳ ಇಷ್ಟೆಲ್ಲಾ ಉತ್ಸಾಹಕ್ಕೆ ಕಾರಣ ಏನಿರಬಹುದು ಎಂದು ಹಿಂಬಾಲಿಸಿ ಹೊರಡುತ್ತಾನೆ.

ಆ ಯುವತಿ ಸೇನೆಯಲ್ಲಿದ್ದ ತನ್ನ ಪ್ರಿಯಕರ ಯುದ್ಧಕ್ಕಾಗಿ ಆ ಮಾರ್ಗದಲ್ಲಿ ಹೊರಟಿದ್ದನ್ನು ತಿಳಿದು ಅವನನ್ನು ಸಂಧಿಸಲು ಹೊರಟಿದ್ದಳು. ಅವರಿಬ್ಬರು ಒಬ್ಬರನ್ನೊಬ್ಬರು ನೋಡಿ ಸುಮಾರು ಐದು ವರ್ಷಗಳೇ ಕಳೆದಿದ್ದವು. ಅವನನ್ನು ಸಂಧಿಸುತ್ತಿರುವ ಉದ್ವಿಗ್ನತೆ ಅವಳಲ್ಲಿ ಮನೆ ಮಾಡಿತ್ತು. ಅವರಿಬ್ಬರೂ ಸಂಧಿಸಿದ ಆ ಉತ್ಕಟವಾದ ಕ್ಷಣವನ್ನು ಹಿಂಬಾಲಿಸಿದ ಸಂತ ಕಣ್ಣುತುಂಬಿಕೊಂಡ. ಆ ಸಂಧಿಸುವಿಕೆಯ ಅಪೂರ್ವ ಕ್ಷಣದಲ್ಲಿ ಸಂತನೂ ಮೈಮರೆತ. ನಿಜಕ್ಕೂ ಅದೊಂದು ದಿವ್ಯಾನುಭೂತಿಯೇ ಆಗಿತ್ತು.

ಯುವತಿ ಪ್ರಿಯಕರನನ್ನು ಬೀಳ್ಕೊಟ್ಟು ಮನೆಗೆ ಹಿಂದಿರುಗುವಾಗ ಸಂತ ಅವಳನ್ನು ತಡೆದು, ‘ನೀನು ನಿನ್ನ ಪ್ರಿಯಕರನ ಭೇಟಿಯಾಗುವ ಉತ್ಕಟತೆಯಲ್ಲಿ ಪ್ರಾರ್ಥನೆಯಲ್ಲಿದ್ದ ನನಗೆ ಕಾಲನ್ನು ತಗುಲಿಸಿದೆಯಲ್ಲಾ?’ ಎನ್ನುತ್ತಾನೆ. ಆಗ ಯುವತಿ ಅಚ್ಚರಿಯಿಂದ, ‘ಹೌದಾ? ನಾನು ಹಾಗೆ ಮಾಡಿದೆನಾ’ ಎಂದು ಕೇಳುತ್ತಾಳೆ. ಆಗ ಸಂತ, ‘ಇಲ್ಲದಿದ್ದರೆ ನಾನು ಪ್ರಾಆರ್ಥನೆಯನ್ನು ಬಿಟ್ಟು ನಿನ್ನ ಹುಡುಕಿಕೊಂಡು ಬರುತ್ತಿದ್ದೆನಾ?’ ಎನ್ನುತ್ತಾನೆ. ಆಗ ಯುವತಿ ನಕ್ಕು, ‘ಪ್ರೇಮದಲ್ಲಿರುವ ನನಗೆ ಸುತ್ತಲು ಏನಾಗುತ್ತಿದೆ ಎಂದು ಗೊತ್ತಾಗಲಿಲ್ಲ. ಪ್ರಾರ್ಥನೆಯಲ್ಲಿ ತೊಡಗಿದ್ದ ನಿನಗೆ ನಾನು ಓಡಿ ಹೋಗಿದ್ದು, ಕಾಲು ತಗುಲಿದ್ದೂ ಎಲ್ಲವೂ ಗೊತ್ತಾಯಿತು ಎಂದರೆ, ನೀನು ಎಂಥಾ ಪ್ರಾರ್ಥನೆಯಲ್ಲಿ ತೊಡಗಿದ್ದೆ, ಎನ್ನುವುದನ್ನು ನೀನೇ ಲೆಕ್ಕ ಹಾಕು’ ಎನ್ನುತ್ತಾಳೆ. ಅವಳ ಮಾತನ್ನು ಕೇಳಿ ಆ ಸಂತನಿಗೆ ನಾಚಿಕೆ ಎನ್ನಿಸಿತು. ಮತ್ತೂ ಯುವತಿ ಮಾತನ್ನು ಮುಂದುವರಿಸಿ ‘ಪ್ರಾರ್ಥನೆ ಎಂದರೆ ಸರ್ವಸಮರ್ಪಣೆ ನನ್ನ ಪ್ರೀತಿಗೆ ಇರುವ ಸಮರ್ಪಣಾ ಭಾವ ನಿನ್ನ ಪ್ರಾರ್ಥನೆಗೆ ಇಲ್ಲವಲ್ಲ. ದೇವರು ನಿನ್ನ ಬಳಿಗೆ ಹೇಗೆ ಬರುತ್ತಾನೆ?’ ಎನ್ನುತ್ತಾ ಹೊರಟುಹೋಗುತ್ತಾಳೆ. ಅವಳ ಮಾತನ್ನು ಕೇಳಿ ಸಂತ ದಂಗು ಬಡಿಯುತ್ತಾನೆ. ಆ ಉನ್ಮತ್ತತೆ ಆ ಲೀನವಾಗುವಿಕೆ ತನಗೇಕೆ ಬರಲಿಲ್ಲ ಎಂದು ಚಿಂತಿಸತೊಡಗುತ್ತಾನೆ. ಎಲ್ಲದರ ನಡುವೆ ಪ್ರಾರ್ಥನೆ ಎಂದರೆ ಏನೆನ್ನುವ ಅರ್ಥ ಹೊಳೆದು ತನ್ನ ಹಾದಿಯನ್ನು ನಿಖರಗೊಳಿಸಿಕೊಳ್ಳುತ್ತಾನೆ. ಒಂದು ಸಣ್ಣ ಮಾತು ಅವನಲ್ಲಿ ಜ್ಞಾನದ ಕಿಡಿಯನ್ನು ಹೀಗೆ ಹಚ್ಚಿಸಿಬಿಟ್ಟಿತ್ತು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಮಾರ್ಚ್ 26, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಪ್ರತಿಪದ್ ಗಂ. 14-56 ನಕ್ಷತ್ರ: ಹಸ್ತ ಗಂ. 13-34 ಯೋಗ: ಧ್ರುವ ಗಂ. 22-18 ಕರಣ: ಕೌಲವ ಗಂ. 14-56, ಮೀನ ಮಾಸದ 12 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 3. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-33 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 15 ರಂಜಾನ್ ,ದಿನ ವಿಶೇಷ : ವಸಂತೋತ್ಸವ ಅದೃಷ್ಟ ಸಂಖ್ಯೆ : 4, 1

ಮೇಷ: ಕಫ ಪ್ರಕೃತಿಯ ದೇಹ ಹೊಂದಿರುವ ನಿಮಗೆ ಉಸಿರಾಟಕ್ಕೆ ಸಂಬಂಧಿಸಿದಂತೆ ಆರೋಗ್ಯದಲ್ಲಿ ಏರು-ಪೇರು ಅನುಭವಕ್ಕೆ ಬರಲಿದೆ. ಕ್ರೀಡಾಪಟುಗಳಿಗೆ ಇಂದಿನ ಪಂದ್ಯದಲ್ಲಿ ಹೆಚ್ಚಿನ ಜಯ ಪ್ರಾಪ್ತಿಯಾಗುವುದು.

ವೃಷಭ: ಹಣ ಮತ್ತು ಗೌರವದಲ್ಲಿ ಒಂದನ್ನು ಸಂಪಾದಿಸಬಹುದು, ತೀರ್ಮಾನ ನಿಮ್ಮದ್ದಾಗಿರುತ್ತದೆ. ಆರ್ಥಿಕ ಸಂಪತ್ತಿಗಿಂತ ಜನಸಂಪತ್ತು ಮುಖ್ಯವೆಂಬುದನ್ನು ಮರೆಯದಿರಿ. ಹೊಸ ಬಂಡವಾಳ ಹೂಡಿಕೆಗೆ ಉತ್ತಮ ಸಮಯ.

ಮಿಥುನ: ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ ಸಿಗುತ್ತದೆ. ಪ್ರಾಮಾಣಿಕತೆಗೆ ಸರಿಯಾದಂತಹ ಫಲಗಳು ಈ ದಿನ ದೊರೆಯುವುದು. ಅನ್ನದಾನ ಮಾಡುವುದರಿಂದ ಶುಭವಾಗುತ್ತದೆ.

ಕರ್ಕಾಟಕ: ಸಮಾಜದಲ್ಲಿ ಗೌರವ ಹೆಚ್ಚಿಸಿಕೊಳ್ಳುವ ಘಟನೆ ನಡೆಯಲಿದೆ. ಪರರಿಗೆ ವಂಚಿಸುವುದು ನಿಮ್ಮ ಅಭಿವೃದ್ಧಿಗೆ ಅಡ್ಡಿಮಾಡುತ್ತದೆ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಿಂದ ಧನ ಲಾಭ ತರಲಿದೆ.

ಸಿಂಹ: ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಸಂತಸ ಪ್ರಾಪ್ತಿಯಾಗಲಿದೆ. ಕೌಟುಂಬಿಕವಾಗಿ ಈಗಿರುವ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಯಾವ ನಿರ್ಧಾರದಲ್ಲಿಯೂ ಆತುರ ಬೇಡ.

ಕನ್ಯಾ: ಪ್ರಯೋಜನ ಪಡೆದ, ಜೀವನಾನುಭವ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು. ಹಣಕಾಸಿನ ವ್ಯಾಮೋಹ ಹೆಚ್ಚಾಗಿ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ. ಭೂ ವ್ಯವಹಾರದಲ್ಲಿ ಹೆಚ್ಚಿನ ಆದಾಯ ಇರಲಿದೆ.

ತುಲಾ: ಅಧಿಕಾರಿಗಳು ನೀವಿಟ್ಟಿರುವ ಕರ್ತವ್ಯನಿಷ್ಠೆಯ ಬಗ್ಗೆ ಈ ದಿನ ಗಮನಿಸಲ್ಲಿದ್ದಾರೆ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ ಮೂಡುವುದು.

ವೃಶ್ಚಿಕ: ದಿನವನ್ನು ಲಕ್ಷ್ಮಿ ವೆಂಕಟರಮಣ ದೇವರ ದರ್ಶನದಿಂದ ಪ್ರಾರಂಭಿಸಿ. ಅದರಿಂದಾಗಿ ನಿಮ್ಮ ಕೆಲಸ ಕಾರ್ಯಗಳಲ್ಲಿ ಪ್ರಗತಿ ಕಾಣುವಿರಿ. ಆರೋಗ್ಯ ಕಾಪಾಡಿಕೊಳ್ಳುವುದರ ಬಗ್ಗೆ ಮುಂಜಾಗ್ರತೆಯನ್ನು ತೆಗೆದುಕೊಳ್ಳಿರಿ.

ಧನು: ಹೃದಯದ ಭಾವನೆಯು ಒಳ್ಳೆಯ ಧ್ಯೇಯ ಹೊಂದಿದ್ದರೂ ಸಹಚರರಲ್ಲಿ ಆಡುವ ಮಾತುಗಳು ಭಿನ್ನಾಭಿಪ್ರಾಯ ಮೂಡಲು ಕಾರಣವಾಗುತ್ತದೆ. ಸಾಮಾಜಿಕ ಕೆಲಸಗಳಲ್ಲಿ ನಿಮ್ಮ ಪರಿಶ್ರಮ ಸಾರ್ಥಕವಾಗಲಿದೆ.

ಮಕರ: ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು. ಪ್ರವಾಸೋದ್ಯಮ ಮತ್ತು ಸಾರಿಗೆ ಸಂಸ್ಥೆಯವರಿಗೆ ಉತ್ತಮ ವ್ಯವಹಾರಗಳು ಪ್ರಾಪ್ತಿಯಾಗುವುದು.

ಕುಂಭ: ಶೀಘ್ರಕೋಪಿಗಳಾಗುವ ವ್ಯಕ್ತಿತ್ವಕ್ಕೆ ಸ್ವಲ್ಪ ಮಟ್ಟಿನ ಬದಲಾವಣೆಯ ಗಾಳಿ ಬೀಸಲಿದೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗರೂಕತೆ ಬಹಳ ಮುಖ್ಯ. ವ್ಯಾಪಾರದ ಚತುರತೆಯಿಂದ ಧನಲಾಭ ಆಗುತ್ತದೆ.

ಮೀನ: ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ಪುಸ್ತಕ ಓದುವ ಹವ್ಯಾಸ ಹೊಂದಿದವರಿಗೆ ಉತ್ತಮವಾದ ಅಭಿರುಚಿಗೆ ತಕ್ಕಂತಹ ಪುಸ್ತಕವು ದೊರಕುವುದು.

ಪದಬಂಧ 5632

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವಿನ ದಾರ ಉಲ್ಟಾ ಆದಾಗ ಈ ತೊಳಲಾಟ! (4)
3.ಎಲೆ ಮತ್ತು ಹುಲ್ಲಿನಿಂದ ಕಟ್ಟದ ಮನೆ (4)
5.ರಹದಾರಿಯಲ್ಲಿ ಮುಚ್ಚಿಟ್ಟ ಗುಟ್ಟು !(3)
6.ಜಾಸ್ತಿ ದುಡ್ಡುಳ್ಳ ವ್ಯಕ್ತಿ (4)
8.ತಿರುಗಿದಾಗ ಮೆಟ್ಟಿಕೊಂಡಿತೇ ಈ ದೇವ? (2)
9.ಲೋಲುಪನ ಕುಂದು ಇಲ್ಲದ (2)
10.ಹಿಡಿತದಿಂದ ಖರ್ಚು ಮಾಡುವಿಕೆ (4)
13.ಒಂದು ಬಗೆಯ ಆಟದ ಸಾಮಾನು (3)
16.ಅತಿಯಾದ ಸಿಟ್ಟು (4)
17.ನಾಟಕದ ವಿಭಾಗದಲ್ಲಿರುವ ರಿಕಾಪು (4)

ಮೇಲಿಂದ ಕೆಳಕ್ಕೆ

1.ಛಂದೋಬದ್ಧವಾದ ಪದ ರಚನೆ (2)
2.ಜಂಗಮರಿಗೆ ಮಾಡುವ ಆರೋಗಣೆ (3)
3.ಒಂದು ವಿಷಯದಲ್ಲಿ ಬಹಳ ಅಸಕ್ತನಾದವನು (4)
4 . ಬಿಸಿಲು ಬಂದಾಗ ಕಾಣಿಸಿದ ಚಿಕ್ಕ ಕೊಂಬೆ (3)
5.ಯುದ್ಧಭೂಮಿಯಿದು (4)
6.ಹಕ್ಕಿ ರೆಕ್ಕೆಯಲ್ಲಿ ಯೌವ್ವನ ಹುಡುಕಿ! (3)
7.ಈಕೆ ತೆಳ್ಳಗಿನ ಸೊಂಟದವಳು (4)
11.ನಿಷ್ಪ್ರಯೋಜಕ ಮಾತು (4)
12.ದೊಡ್ಡ ಪೆಟ್ಟಿಗೆ (3)
14.ಗಣಿತದಲ್ಲಿ ಗುಣಿಸುವ ಸಂಖ್ಯೆ (3)
15.ಇದರೊಂದಿಗೆ ಗ್ರಹಣವಿದ್ದಾಗ ಮದುವೆ! (2)



5631ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಳ್ಳೆದೆ 2.ನಾರಜನಕ
4.ಸಾಕ್ಷಾತ್ಕಾರ 6.ಕಠಾದಂಡ
7.ತಮ 9.ದಿವಾನ
11.ತಿಲ 13.ನವಸುವ
14.ಕರವಾಲ 15.ಜಗಳಗಂಟ
16.ಪೂರೈಕೆ

ಮೇಲಿಂದ ಕೆಳಕ್ಕೆ:

1.ಅಹಿಂಸಾವ್ರತ 3.ನವದಂಪತಿ
5.ರಶೀದಿ 8.ಮದುವಣಿಗ
10.ನರಕ 12.ಲವಲವಿಕೆ

ಸುಡೊಕು 6017

				6		1		
9							7	8
	8		7			2		6
6		1		5		7		9
			8	9	6			
8				7		5		2
3		9		1				
			6		7	9	3	4
7		8		2			1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6016 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಗುಸುಗುಸು

ಬಿಎಸ್‌ವೈ ಕಟ್ಟಿಹಾಕುವ ತಂತ್ರ

ಬಿ.ಎಸ್. ಯಡಿಯೂರಪ್ಪ ಅವರನ್ನು ಹೊರಗಿಟ್ಟು ವಿಧಾನಸಭೆ ಚುನಾವಣೆ ನಡೆಸಿದ್ದ ಬಿಜೆಪಿ ವರಿಷ್ಠರು, ಈ ಚುನಾವಣೆಯ ಪೂರ್ಣ ಅಧಿಕಾರವನ್ನು ಅವರ ಕೈಗೇ ಕೊಟ್ಟು, ಅವರನ್ನೇ ಕಟ್ಟಿಹಾಕುವ ತಂತ್ರ ಹೆಣೆದಿದ್ದಾರೆಯೇ...

ಯಡಿಯೂರಪ್ಪ ಅವರನ್ನು ಶಿವಮೊಗ್ಗದಲ್ಲೇ ಕಟ್ಟಿ ಹಾಕುವುದು; ಜತೆಗೆ ಅವರ ಮತ್ತು ಬಿ.ವೈ. ವಿಜಯೇಂದ್ರ ಸಾಮರ್ಥ್ಯವನ್ನು ಪರೀಕ್ಷೆಗೆ ಒಡ್ಡಲು ಈ ಚುನಾವಣೆ ಬಳಸಿಕೊಳ್ಳುವುದು ಪಕ್ಷದ ವರಿಷ್ಠರ ಇರಾದೆ. ಇದು ಬಿಜೆಪಿಯ 'ಗರ್ಭಗುಡಿ'ಯಲ್ಲಿನ ಗಹನವಾದ ಚರ್ಚೆ. ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಬಂಡಾಯದ ಬೇಗೆ ಎದುರಿಸುತ್ತಿದೆ. ಅದರಲ್ಲೂ, ಯಡಿಯೂರಪ್ಪನವರ ಶಕ್ತಿಕೇಂದ್ರದಲ್ಲಿ ಅವರ ಒಂದು ಕಾಲದ ಆಪ್ತ, ಹಿಂದುತ್ವದ ಉಗ್ರ ಪ್ರತಿಪಾದಕ ಕೆ.ಎಸ್. ಈಶ್ವರಪ್ಪ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವುದಾಗಿ ಘೋಷಿಸಿದ್ದಾರೆ. ಬ್ರಹ್ಮ ಬಂದರೂ ಹಿಂದೆ ಸರಿಯುವುದಿಲ್ಲ ಎಂದೂ ಹೇಳಿದ್ದಾರೆ. ಹಿಂದುತ್ವವಾದಿ ಈಶ್ವರಪ್ಪ ಹೀಗೆ ಘಂಟಾಘೋಷವಾಗಿ ಅಬ್ಬರಿಸಲು, ಅವರ ಹಿಂದೆ 'ಸಂಘ'ದ ಕಟ್ಟಾಳುಗಳೇ ಇದ್ದಾರೆ ಎಂಬ ಅಂತೆ ಕಂತೆಗಳೂ ಶಿವಮೊಗ್ಗದ ಬಿಬಿ ಸ್ಟ್ರೀಟ್‌ನಲ್ಲಿ (ದೊಡ್ಡ ಬ್ರಾಹ್ಮಣರ ಬೀದಿ) ಹರಿದಾಡುತ್ತಿವೆ. ಇದರ ಹಿಂದಿನ ಏಕೈಕ ಉದ್ದೇಶವೆಂದರೆ, ಶಿವಮೊಗ್ಗ ಬಿಟ್ಟು ಉಳಿದ 27 ಕ್ಷೇತ್ರಗಳ ಕಡೆ ಯಡಿಯೂರಪ್ಪ ಹೆಚ್ಚು ಓಡಾಡದಂತೆ ಕಟ್ಟಿ ಹಾಕುವುದು; ಎಲ್ಲ ಬಲ ಬಳಸಿ ರಾಘವೇಂದ್ರರನ್ನು ಸೋಲಿಸುವುದು. ಅಲ್ಲಿಗೆ ಯಡಿಯೂರಪ್ಪ ಶಕ್ತಿ ದುರ್ಬಲವಾಗಿದೆ ಎಂದೂ ತೋರಿಸಿದಂತಾಗುತ್ತದೆ. ಸ್ವಕ್ಷೇತ್ರದಲ್ಲಿ ಅಣ್ಣನನ್ನೇ ಗೆಲ್ಲಿಸಿಕೊಳ್ಳಲಾಗಲಿಲ್ಲ ಎಂಬ ಹಣೆಪಟ್ಟಿಯನ್ನು ವಿಜಯೇಂದ್ರಗೆ ಕಟ್ಟಿದಂತೆಯೂ ಆಗುತ್ತದೆ; ಇದು ಅಸಲು ಲೆಕ್ಕಾಚಾರವಂತೆ...

ಮತ ಆಮಿಷ: ಆಯೋಗದ ವಶ

₹17.82 ಕೋಟಿ ನಗದು

ಉಚಿತ ಉಡುಗೊರೆ	₹ 30.62 ಲಕ್ಷ
ಮದ್ಯ	₹ 24.53 ಕೋಟಿ (7.70 ಲಕ್ಷ ಲೀ)
ಮಾದಕವಸ್ತು	₹78.18 ಲಕ್ಷ (110.06 ಕೆ.ಜಿ.)
ಚಿನ್ನ ಮತ್ತು ಬೆಳ್ಳಿ	₹ 47.26 ಕೋಟಿ (55.95 ಕೆ.ಜಿ.)

ಎಂಥಾ ಮಾತು!

ಯುವಕರಿಗೆ ಎರಡು ಕೋಟಿ ಉದ್ಯೋಗ ಕೊಡುವುದಾಗಿ ಹೇಳಿ ಪ್ರಧಾನಿ ನರೇಂದ್ರ ಮೋದಿ ಮಾತು ತಪ್ಪಿದ್ದಾರೆ. ಉದ್ಯೋಗ ಕೊಡಿ ಎಂದು ಕೇಳಿದರೆ ಪಕೋಡಾ ಮಾರಲು ಹೋಗಿ ಎಂದಿದ್ದಾರೆ. ಈಗಲೂ ಯುವಕರು ಹಾಗೂ ವಿದ್ಯಾರ್ಥಿಗಳು ಮೋದಿ ಮೋದಿ ಎಂದರೆ ಅವರಿಗೆ ಕಪಾಳಕ್ಕೆ ಹೊಡೆಯಬೇಕು

ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ



ಶಿವರಾಜ ತಂಗಡಗಿ ಅವರು ಸಂಸ್ಕಾರವಿಲ್ಲದ ಸಂಸ್ಕೃತಿ ಸಚಿವರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರನ್ನು ಗೌರವಿಸಿ ಮಾತನಾಡಬೇಕೆನ್ನುವ ಕನಿಷ್ಠ ಸಂಸ್ಕಾರವಿಲ್ಲದ ತಂಗಡಗಿಯವರು ಅವರ ಬಗ್ಗೆ ತುಚ್ಛ ಭಾಷೆ ಬಳಸಿರುವುದು ಖಂಡನಾರ್ಹ

ಭಗವಂತ ಖೂಬಾ, ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ

ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೆಂಬಲಿಸುವ ಯುವ ಪಡೆಗೆ ಕಪಾಳ ಮೋಕ್ಷ ಮಾಡುವ ಶಕ್ತಿ 'ಕೈ'ಗೆ ಇದೆಯೇ? ದೇಶದ ಪ್ರಧಾನಿಯನ್ನು ಹೇಗೆ ಗೌರವಿಸಬೇಕು ಎಂಬ ಸೌಜನ್ಯ ಕಾಂಗ್ರೆಸ್ ನಾಯಕರಿಗೆ ಇಲ್ಲ. ಉಡಾಫೆಯಿಂದ ಮಾತನಾಡುತ್ತಾರೆ. ಇಂಥ ಅಸಹನೀಯ ಪದ ಬಳಕೆಗೆ ಯುವ ಪಡೆಯೇ ಉತ್ತರ ಕೊಡುವ ಸಮಯ ದೂರವಿಲ್ಲ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕ್ಷೇತ್ರ ಮಹಾತ್ಮೆ

ಬೆಂಗಳೂರು ದಕ್ಷಿಣ

ವಿಧಾನಸಭೆ, ಬಿಬಿಎಂಪಿ ಹೀಗೆ ಯಾವುದೇ ಚುನಾವಣೆ ನಡೆದರೂ ಬೆಂಗಳೂರಿನ ವಿಷಯಕ್ಕೆ ಬಂದರೆ ಹಾಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರ ಮಾತೇ ಎಲ್ಲ ಪಕ್ಷಗಳಿಗೂ 'ಮಾಣಿಕ್ಯ'. ಬಿಜೆಪಿ, ಜೆಡಿಎಸ್‌ನವರಿಗೂ ರಾಮಲಿಂಗಾರೆಡ್ಡಿಯವರ ಮಾತಿನ ತೂಕವೇ ಒಂದು ಕೈ ಮಿಗಿಲು. ಸಚಿವರೇ ಲೋಕಸಭೆಗೆ ಹುರಿಯಾಳು ಆಗಬೇಕು ಎಂಬ ಕಾಂಗ್ರೆಸ್ ಹೈಕಮಾಂಡ್‌ನ ಒತ್ತಡಕ್ಕೆ ಮಣಿದ ರೆಡ್ಡಿ, ಈ ಬಾರಿ 'ಮಿತ್ರ'ರ ವಿರುದ್ಧವೇ ಬಡಿದಾಡಿ ತಮ್ಮ ಶಕ್ತಿ ಪ್ರದರ್ಶಿಸಬೇಕಿದೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಹಿಂದುತ್ವದ ಉಗ್ರ ಪ್ರತಿಪಾದಕ, ತೇಜಸ್ವಿ 'ಸೂರ್ಯ' ವಿರುದ್ಧ ತಮ್ಮ ಮಗಳು 'ಸೌಮ್ಯಾ' ಅವರನ್ನು ತಮ್ಮ ಸೌಮ್ಯವಾದ ನಡೆಯಲ್ಲೇ ಗೆಲ್ಲಿಸಿಕೊಳ್ಳಬೇಕಿದೆ. ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ, ಹಾಲಿ ಸಂಸದ ತೇಜಸ್ವಿ ಸೂರ್ಯ ಬೆನ್ನಿಗೆ, ಚಿಕ್ಕಪ್ಪ, ಶಾಸಕ 'ರವಿ'ಸುಬ್ರಹ್ಮಣ್ಯ ನಿಂತಿದ್ದರೆ, ಬಿಜೆಪಿಯ ಬಲಿಷ್ಠ ಮತಬ್ಯಾಂಕ್ ಅವರ ಆಸ್ತಿಯಾಗಿದೆ. ಬಿಜೆಪಿಯ ಕೋಟೆಯಾಗಿದ್ದ ಜಯನಗರ ಕ್ಷೇತ್ರವನ್ನು 2018ರ ವಿಧಾನಸಭೆ ಚುನಾವಣೆಯಲ್ಲಿ ಕಿತ್ತುಕೊಂಡಿದ್ದ ರೆಡ್ಡಿ, ಮಗಳು ಸೌಮ್ಯಾರನ್ನು ಗೆಲ್ಲಿಸಿಕೊಂಡಿದ್ದರು. 2023ರಲ್ಲಿ ಅದು ಕೈತಪ್ಪಿಹೋಯಿತು. ಬೆಂಗಳೂರನ್ನೇ ತಮ್ಮ ಅಂಗೈಯಲ್ಲಿ ಆಡಿಸುವ ರೆಡ್ಡಿಯವರಿಗೆ, ಸೌಮ್ಯವಾಗಿ 'ಸೂರ್ಯ'ರನ್ನು ತಮ್ಮ ಮುಷ್ಟಿಯಲ್ಲಿ ಹಿಡಿದುಕೊಳ್ಳುವ ಅವಕಾಶವನ್ನು ಪಕ್ಷ ಕೊಟ್ಟಿದೆ. ಸೂರ್ಯ ಬೆಳಗುತ್ತಾರೋ, ಹಸ್ತ ಅರಳುತ್ತದೋ ಕಾದು ನೋಡಬೇಕಿದೆ.

ಮತದಾನಕ್ಕಾಗಿ ವೇತನ ಸಹಿತ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಮತ್ತು ವಿಧಾನಸಭೆ ಉಪ ಚುನಾವಣೆಯಲ್ಲಿ ಮತ ಚಲಾಯಿಸಲು ಅನುಕೂಲವಾಗಲು ಕಾರ್ಮಿಕರಿಗೆ ವೇತನ ಸಹಿತ ರಜೆಯನ್ನು ಭಾರತ ಚುನಾವಣಾ ಆಯೋಗವು ಘೋಷಣೆ ಮಾಡಿದೆ. ರಾಜ್ಯದಲ್ಲಿ ಎರಡು ಹಂತದಲ್ಲಿ ಅಂದರೆ ಏ.26 ಮತ್ತು ಮೇ 7ರಂದು ಲೋಕಸಭಾ ಚುನಾವಣೆ ನಡೆಯಲಿದೆ. ಯಾದಗಿರಿ ಜಿಲ್ಲೆಯ ಸುರಪುರ ವಿಧಾನಸಭೆಗೆ ಮೇ 7ರಂದು ಉಪಚುನಾವಣೆ ನಿಗದಿಯಾಗಿದೆ.

ಆಯಾ ಕ್ಷೇತ್ರಗಳ ಮತದಾರರು ಅಂದು ಮತ ಚಲಾಯಿಸಲು ಅನುಕೂಲ ಮಾಡಿಕೊಡಲು ಅಂಗಡಿ, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು, ಇತರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನಸಹಿತ ರಜೆ ನೀಡಬೇಕು ಎಂದು ಆದೇಶ ನೀಡಿದೆ. ತಪ್ಪಿದಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳುವುದಾಗಿ ಆಯೋಗ ಎಚ್ಚರಿಸಿದೆ.

'ಈಶ್ವರಪ್ಪ ಸ್ಪರ್ಧೆ ನಾಮಕಾವಸ್ತೆ'

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

ತೀರ್ಥಹಳ್ಳಿ (ಶಿವಮೊಗ್ಗ): 'ಶಿವಮೊಗ್ಗ ಲೋಕಸಭಾ ಕ್ಷೇತ್ರ ವಿಸ್ತಾರವಾಗಿದೆ. ನಿನ್ನೆ ಮೊನ್ನೆ ಪ್ರಚಾರ ಆರಂಭಿಸಿ ಚುನಾವಣೆ ಎದುರಿಸಲು ಸಾಧ್ಯವಿಲ್ಲ. ಹೀಗಾಗಿ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಅವರ ಸ್ಪರ್ಧೆ ನಾಮಕಾವಸ್ತೆಯಾಗಲಿದೆ' ಎಂದು ಶಾಸಕ ಆರಗ ಜ್ಞಾನೇಂದ್ರ ತಿಳಿಸಿದರು.

'ಕ್ಷೇತ್ರದ ಮೂಲೆ ಮೂಲೆಗೂ ಹೋಗಿ ಜನರನ್ನು ಭೇಟಿ ಮಾಡಲು ಅವರಿಗೆ ಸಾಧ್ಯವಿಲ್ಲ. ಅವರು ಸ್ಪರ್ಧೆಯಿಂದ ಬಹುತೇಕ ಹಿಂದೆ ಸರಿಯುತ್ತಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಲೋಕಸಭೆ: ಸೋತವರು–ಗೆದ್ದವರ ಕಣ

ವಿಧಾನಸಭೆ ಸೋಲಿನ ಬಳಿಕ ಲೋಕಸಭೆ ಕನಸು

ಈಗ ಸ್ಪರ್ಧಿಸಿರುವ ಲೋಕಸಭಾ ಕ್ಷೇತ್ರ   * 2023ರಲ್ಲಿ ಸೋತಿದ್ದ ವಿಧಾನಸಭಾ ಕ್ಷೇತ್ರ

ಚಿಕ್ಕಬಳ್ಳಾಪುರ — ಡಾ. ಕೆ. ಸುಧಾಕರ್ *ಚಿಕ್ಕಬಳ್ಳಾಪುರ
ಉತ್ತರ ಕನ್ನಡ — ವಿಶ್ವೇಶ್ವರ ಹೆಗಡೆ ಕಾಗೇರಿ *ಶಿರಸಿ
ಉತ್ತರ ಕನ್ನಡ — ಅಂಜಲಿ ನಿಂಬಾಳ್ಕರ್ *ಖಾನಾಪುರ
ತುಮಕೂರು — ವಿ. ಸೋಮಣ್ಣ *ಚಾಮರಾಜನಗರ ಮತ್ತು ವರುಣ

ಬೆಂಗಳೂರು ದಕ್ಷಿಣ — ಸೌಮ್ಯಾರೆಡ್ಡಿ *ಜಯನಗರ
ಹಾಸನ — ಶ್ರೇಯಸ್ ಪಟೇಲ್ *ಹೊಳೆನರಸೀಪುರ
ಬೆಳಗಾವಿ — ಜಗದೀಶ ಶೆಟ್ಟರ್ *ಹು–ಧಾ ಕೇಂದ್ರ (ಕಾಂಗ್ರೆಸ್)
ಬಳ್ಳಾರಿ — ಬಿ. ಶ್ರೀರಾಮುಲು *ಬಳ್ಳಾರಿ ಗ್ರಾಮಾಂತರ

ಕಣದಲ್ಲಿರುವ ಶಾಸಕರು

ಹಾವೇರಿ — ಬಸವರಾಜ ಬೊಮ್ಮಾಯಿ, ಶಿಗ್ಗಾವಿ
ಮಂಡ್ಯ — ಎಚ್.ಡಿ.ಕುಮಾರಸ್ವಾಮಿ, ಚನ್ನಪಟ್ಟಣ (ಸಂಭಾವ್ಯ)
ಬಳ್ಳಾರಿ — ಇ. ತುಕಾರಾಂ, ಸಂಡೂರು (ಸಂಭಾವ್ಯ)
ಉಡುಪಿ — ಕೋಟ ಶ್ರೀನಿವಾಸ ಪೂಜಾರಿ (ವಿಧಾನ ಪರಿಷತ್)

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕದಲ್ಲಿ ನಡೆಯಲಿರುವ ಲೋಕಸಭೆಯ ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಆರಂಭಕ್ಕೆ ಇನ್ನು ಎರಡು ದಿನವಷ್ಟೇ ಬಾಕಿ ಇದ್ದು, ಮತಕಣ ದಿನದಿಂದ ದಿನಕ್ಕೆ ರಂಗೇರತೊಡಗಿದೆ.

ಇನ್ನೂ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಯಾಗದೇ ಇದ್ದರೂ, ಘೋಷಣೆಯಾಗಿರುವ ಕ್ಷೇತ್ರಗಳಲ್ಲಿನ ಅಭ್ಯರ್ಥಿಗಳ ರಾಜಕೀಯ ಇತಿಹಾಸವೇ ಬಲು ಸ್ವಾರಸ್ಯಕರವಾಗಿದೆ. ಚುನಾವಣೆಯ 'ಗುಟ್ಟೇ' ಗೊತ್ತಿಲ್ಲದ ಅಭ್ಯರ್ಥಿಗಳು ಕೆಲವು ಕ್ಷೇತ್ರಗಳಲ್ಲಿ ತಾಲೀಮು ಆರಂಭಿಸಿದ್ದರೆ, ಹಲವು ಚುನಾವಣೆಗಳನ್ನು ಎದುರಿಸಿ ಸೋಲು–ಗೆಲುವು ಕಂಡವರು ದೆಹಲಿಯತ್ತ ದೃಷ್ಟಿನೆಟ್ಟು ತಮ್ಮ ಭವಿಷ್ಯ ಹುಡುಕಲಾರಂಭಿಸಿದ್ದಾರೆ.

ಮತಹಾಕುವುದು ಬಿಟ್ಟರೆ ರಾಜಕೀಯ ಪಡಸಾಲೆಯೊಳಗೆ ಎಂದೂ ಇಣುಕದವರು ಲೋಕಸಭೆ ಪ್ರವೇಶಿಸುವ ಮಹದಾಶೆ ಹೊತ್ತು ಅಖಾಡಕ್ಕೆ ಧುಮುಕಿದ್ದಾರೆ. ವಿಧಾನಪರಿಷತ್ತು, ವಿಧಾನಸಭೆಯಷ್ಟನ್ನೇ ಕಂಡವರು, ಸಚಿವರಾಗಿ ಎರಡೂ ಸದನದೊಳಗೆ ಓಡಾಡಿದವರು ಲೋಕಸಭೆಯ ಪದೋನ್ನತಿಗೆ ಕನಸು ಕಟ್ಟಿದ್ದಾರೆ.

ಗೆಲ್ಲುವುದೊಂದೇ 'ಮಾನ'ದಂಡ ಎಂದು ಭಾವಿಸಿದಂತಿರುವ ರಾಜಕೀಯ ಪಕ್ಷಗಳ ನೇತಾರರು, ತಮ್ಮ ಪಕ್ಷದ ಹುರಿಯಾಳುಗಳನ್ನು ಆಯ್ಕೆ ಮಾಡುವಾಗಲೂ ಅಭ್ಯರ್ಥಿಗಳು ಹಿಂದೆ ಅನುಭವಿಸಿದ್ದ ಸೋಲು–ಗೆಲುವುಗಳನ್ನು ಪರಿಗಣಿಸಲು ಹೋಗಿಲ್ಲ. ಬಿಜೆಪಿಯು ಈಗಿರುವ ಸೀಟುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅಳೆದು ತೂಗಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಭಾರಿ ಬದಲಾವಣೆ ಮಾಡಿದೆ. ಇರುವ ಒಂದು ಕ್ಷೇತ್ರವನ್ನು ಕನಿಷ್ಠ 10 ಅಂಕಿಗಾದರೂ ಏರಿಸಿ, ಸಾಧನೆಗೈದು ಬೀಗಬೇಕೆನ್ನುವುದು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಹಂಬಲ.

ವಿಧಾನಪರಿಷತ್ತು, ವಿಧಾನಸಭೆಗಳೆಂಬ ರಾಜ್ಯದ ಸದನಗಳನ್ನು ಕಂಡಿದ್ದ, ಮುಖ್ಯಮಂತ್ರಿಯೂ ಆಗಿದ್ದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ರಾಷ್ಟ್ರ ರಾಜಕಾರಣದತ್ತ ದಾಪುಗಾಲು ಹಾಕಲು, ಅದೃಷ್ಟದ ಮೊರೆ ಹೋಗಿದ್ದಾರೆ. ಲೋಕಸಭೆ ಸದಸ್ಯರಾಗಿ, ವಿಧಾನಸಭೆಯಿಂದ ಆಯ್ಕೆಯಾಗಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ, ಮತ್ತೊಮ್ಮೆ ಕೇಂದ್ರ ಸಚಿವರಾಗುವ ಉಮೇದಿನಲ್ಲಿದ್ದಾರೆ. ಆದರೆ, ಅವರಿನ್ನೂ ತಮ್ಮ ಸ್ಪರ್ಧೆಯನ್ನು ನಿಕ್ಕಿಗೊಳಿಸಿಲ್ಲ.

ವಿಧಾನಸಭೆ, ಪರಿಷತ್ತು, ಸಚಿವ ಸ್ಥಾನ ಎಲ್ಲವನ್ನೂ ಅನುಭವಿಸಿರುವ ವಿ. ಸೋಮಣ್ಣ, ಕೇಂದ್ರದತ್ತ ದೃಷ್ಟಿ ನೆಟ್ಟಿದ್ದಾರೆ. ವರ್ಷದ ಹಿಂದಷ್ಟೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲಿ ಗೆಲ್ಲಲು ಅನೇಕರಿಗೆ ಸಾಧ್ಯವಾಗಿರಲಿಲ್ಲ. ಇಂತಹ ಏಳೆಂಟು ಕ್ಷೇತ್ರಗಳನ್ನು ಒಳಗೊಂಡ ಲೋಕಸಭೆ ಕ್ಷೇತ್ರಕ್ಕೆ ಕಾಲಿಟ್ಟು, ಅಲ್ಲಿಂದ ದಿಲ್ಲಿಗೆ ಜಿಗಿಯಲು ಅನೇಕ ಮಾಜಿ ಶಾಸಕರು ತಮ್ಮ ಕಸರತ್ತು ಶುರು ಮಾಡಿದ್ದಾರೆ. ಇದು ಈ ಚುನಾವಣೆಯ ವೈಶಿಷ್ಟ್ಯ–ವೈವಿಧ್ಯ.

ಮಾಜಿ ಮುಖ್ಯಮಂತ್ರಿಗಳ ಮಕ್ಕಳು

ಶಿವಮೊಗ್ಗ — ಬಿ.ವೈ.ರಾಘವೇಂದ್ರ
ಶಿವಮೊಗ್ಗ — ಗೀತಾ ಶಿವರಾಜ್‌ಕುಮಾರ್

ಸ್ಪರ್ಧೆಗಿಳಿಯದ ಸಂಸದರು

ಕ್ಷೇತ್ರ	ಹೆಸರು	ಪಕ್ಷ
ಉತ್ತರಕನ್ನಡ	ಅನಂತಕುಮಾರ್ ಹೆಗಡೆ	ಬಿಜೆಪಿ
ದಕ್ಷಿಣ ಕನ್ನಡ	ನಳಿನ್ ಕುಮಾರ್ ಕಟೀಲ್	ಬಿಜೆಪಿ
ಮೈಸೂರು	ಪ್ರತಾಪ್ ಸಿಂಹ	ಬಿಜೆಪಿ
ಬೆಂಗಳೂರು ಉತ್ತರ	ಡಿ.ವಿ. ಸದಾನಂದಗೌಡ	ಬಿಜೆಪಿ
ತುಮಕೂರು	ಜಿ.ಎಸ್. ಬಸವರಾಜ್	ಬಿಜೆಪಿ
ಬೆಳಗಾವಿ	ಮಂಗಳಾ ಅಂಗಡಿ	ಬಿಜೆಪಿ
ದಾವಣಗೆರೆ	ಜಿ.ಎಂ. ಸಿದ್ದೇಶ್ವರ	ಬಿಜೆಪಿ
ಚಾಮರಾಜನಗರ	ಶ್ರೀನಿವಾಸ ಪ್ರಸಾದ್	ಬಿಜೆಪಿ
ಚಿಕ್ಕಬಳ್ಳಾಪುರ	ಬಿ.ಎನ್. ಬಚ್ಚೇಗೌಡ	ಬಿಜೆಪಿ
ಕೋಲಾರ	ಎಸ್. ಮುನಿಸ್ವಾಮಿ	ಬಿಜೆಪಿ
ಬಳ್ಳಾರಿ	ದೇವೇಂದ್ರಪ್ಪ	ಬಿಜೆಪಿ
ಕೊಪ್ಪಳ	ಸಂಗಣ್ಣ ಕರಡಿ	ಬಿಜೆಪಿ
ಹಾವೇರಿ	ಶಿವಕುಮಾರ್ ಉದಾಸಿ	ಬಿಜೆಪಿ
ಚಿತ್ರದುರ್ಗ	ಎ. ನಾರಾಯಣಸ್ವಾಮಿ	ಬಿಜೆಪಿ*

*ಇನ್ನೂ ಸ್ಪಷ್ಟವಾಗಿಲ್ಲ

ಬಿಜೆಪಿ ಸೇರಿದ ಜನಾರ್ದನ ರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಧ್ಯಕ್ಷ ಹಾಗೂ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರು ಸೋಮವಾರ ತಮ್ಮ ಬೆಂಬಲಿಗರೊಂದಿಗೆ ಬಿಜೆಪಿ ಸೇರಿದರು.

ಇದೇ ಸಂದರ್ಭದಲ್ಲಿ ಮಾಜಿ ಸಚಿವ ದಿವಂಗತ ಟಿ.ಜಾನ್ ಅವರ ಪುತ್ರ ಡಾ. ಥಾಮಸ್ ಜಾನ್, ಜನಾರ್ದನ ರೆಡ್ಡಿ ಅವರ ಪತ್ನಿ ಅರುಣಾಲಕ್ಷ್ಮಿ ಅವರೂ ಬಿಜೆಪಿಯನ್ನು ಸೇರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಜನಾರ್ದನ ರೆಡ್ಡಿ ತಮ್ಮ ಪಕ್ಷವನ್ನು ಬಿಜೆಪಿಯಲ್ಲಿ ವಿಲೀನ ಗೊಳಿಸಿದ್ದಾರೆ. ಇದರಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಜೆಪಿಗೆ ದೊಡ್ಡ ಶಕ್ತಿ ಬಂದಿದೆ. ಮೋದಿಯವರನ್ನು ಮತ್ತೊಮ್ಮೆ ಪ್ರಧಾನಮಂತ್ರಿ ಮಾಡುವ ಆಶಯದಡಿ ಅವರು ಬಿಜೆಪಿ ಸೇರಿದ್ದಾರೆ ಎಂದರು.

ಜನಾರ್ದನ ರೆಡ್ಡಿ, ಅರುಣಾಲಕ್ಷ್ಮಿ ಮತ್ತು ಡಾ.ಥಾಮಸ್ ಜಾನ್ ಅವರ ಪಕ್ಷ ಸೇರ್ಪಡೆ ವೇಳೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪಕ್ಷದ ಬಾವುಟ ನೀಡಿದರು. ಬಿ.ಎಸ್‌.ಯಡಿಯೂರಪ್ಪ ಇದ್ದರು.

ರಾಜ್ಯದಲ್ಲಿ ಬಿಜೆಪಿ ಪರ ವಾತಾವರಣವಿದೆ. ಮುಂದಿನ ಲೋಕಸಭಾ ಚುನಾವಣೆಯು ದೇಶದ ಭವಿಷ್ಯ ರೂಪಿಸಲಿದೆ. ಪಕ್ಷದ ಹಿತದೃಷ್ಟಿ ಮತ್ತು ಏಳಿಗೆಗಾಗಿ ಎಲ್ಲರನ್ನೂ ಪಕ್ಷದ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುತ್ತೇವೆ ಎಂದು ವಿಜಯೇಂದ್ರ ಹೇಳಿದರು.

ಜನಾರ್ದನ ರೆಡ್ಡಿ ಮಾತನಾಡಿ, 'ದೇಶದ ಸಮಗ್ರತೆ, ಅಭಿವೃದ್ಧಿಗಾಗಿ ಮತ್ತು ಭಾರತವನ್ನು ವಿಶ್ವಗುರು ಮಾಡುವ ಉದ್ದೇಶದಿಂದ ಮೋದಿ ಅವರ ಕೈಬಲಪಡಿಸಲು ಬಿಜೆಪಿ ಸೇರಿದ್ದೇನೆ. ಅಮಿತ್ ಶಾ ಅವರು ದೆಹಲಿಗೆ ಕರೆಸಿ, ಪಕ್ಷವನ್ನು ಸೇರಲು ಸಲಹೆ ನೀಡಿದ್ದರು' ಎಂದು ತಿಳಿಸಿದರು.

'ಪಕ್ಷ ಕೊಡುವ ಯಾವುದೇ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತೇನೆ. ಮನೆಗೆ ಮತ್ತೆ ಬಂದಂತೆ ಭಾಸವಾಗುತ್ತಿದೆ. ನನ್ನ ರಕ್ತದ ಕಣಕಣದಲ್ಲೂ ಬಿಜೆಪಿ ಇತ್ತು. ಪಕ್ಷವೆಂಬ ತಾಯಿಯ ಮಡಿಲಿಗೆ ಕ್ಷೇಮವಾಗಿ ಸೇರಿದ್ದೇನೆ' ಎಂದರು.

ಕಾರ್ಯಕ್ರಮದಲ್ಲಿ ಬಿ.ಎಸ್. ಯಡಿಯೂರಪ್ಪ, ಸಂಸದರಾದ ಪಿ.ಸಿ. ಮೋಹನ್, ದೇವೇಂದ್ರಪ್ಪ, ಬಳ್ಳಾರಿ ಕ್ಷೇತ್ರದ ಅಭ್ಯರ್ಥಿ ಬಿ.ಶ್ರೀರಾಮುಲು ಇದ್ದರು.

ಹಾಸನ ಡಿ.ಸಿ. ವರ್ಗಾವಣೆಗೆ ದೇವೇಗೌಡ ಹುನ್ನಾರ: ಆರೋಪ

ಪ್ರಜಾವಾಣಿ ವಾರ್ತೆ

ತುಮಕೂರು: ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಮತ್ತು ಅಲ್ಲಿಯ ಜಿಲ್ಲಾಧಿಕಾರಿ ಸತ್ಯಭಾಮ ಒಂದೇ ಜಾತಿಯವರು ಎಂದು ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಸತ್ಯಭಾಮ ಅವರನ್ನು ವರ್ಗಾವಣೆ ಮಾಡುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ ಎಂದು ಗೊಲ್ಲ ಸಮುದಾಯದ ಮುಖಂಡರು ಸೋಮವಾರ ಆರೋಪಿಸಿದ್ದಾರೆ.

ಸತ್ಯಭಾಮ ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದು, ವರ್ಗಾವಣೆ ಮಾಡಿ ಎಂದು ಆಯೋಗಕ್ಕೆ ದೂರು ನೀಡಿದ್ದಾರೆ. ಗೊಲ್ಲ ಸಮುದಾಯದ ಮಹಿಳೆಯನ್ನು ಮೂಲೆಗುಂಪು ಮಾಡಲು ಹೊರಟಿರುವ ದೇವೇಗೌಡರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮುದಾಯದ ಮಹಿಳೆಯನ್ನು ಅವಹೇಳನ ಮಾಡುತ್ತಿದ್ದಾರೆ. ಹಿಂದುಳಿದ ಸಮುದಾಯಕ್ಕೆ ಅಧಿಕಾರ ಕೊಡಬಾರದು ಎಂಬ ಉದ್ದೇಶದಿಂದ ಪತ್ರ ಬರೆದಿದ್ದಾರೆ ಎಂದು ಜಿಲ್ಲಾ ಗೊಲ್ಲ ಸಮಾಜ ವೇದಿಕೆಯ ಸಂಘಟನಾ ಕಾರ್ಯದರ್ಶಿ ಎಸ್.ಚಿಕ್ಕರಾಜು ದೂರಿದರು.

ಗೊಲ್ಲ ಸಮುದಾಯದ ನಾಗರಾಜು, ವಿರೂಪಾಕ್ಷ, ವೀರಣ್ಣ ಸಿದ್ದಾಪುರ, ಚಿನ್ನಪ್ಪ, ತಿಮ್ಮಣ್ಣ, ದಯಾನಂದ್, ರಮೇಶ್, ಗಂಗಾಧರ್ ಹಾಜರಿದ್ದರು.

'ಮೋದಿ ಸಾಧನೆಗಳೇ ಚುನಾವಣೆ ಅಸ್ತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿಯವರ 10 ವರ್ಷಗಳ ಸಾಧನೆಯೇ ಬಿಜೆಪಿಗೆ ಬ್ರಹ್ಮಾಸ್ತ್ರ. ಬಡವರು, ರೈತರು, ಮಹಿಳೆಯರು, ಯುವಜನತೆ ಎಂಬ ನಾಲ್ಕು ವರ್ಗಗಳ ಜನರನ್ನು ತಲುಪಿ ಮೋದಿಯವರ ಸಾಧನೆಗಳನ್ನು ತಲುಪಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ನಗರದ ಕ್ಯಾಪಿಟಲ್ ಹೋಟೆಲ್‌ನಲ್ಲಿ ಸೋಮವಾರ ಆಯೋಜಿಸಿದ್ದ ಬಿಜೆಪಿ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣ ವಿಭಾಗದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

'ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಸಕಾರಾತ್ಮಕಅಂಶಗಳನ್ನುಜನರಿಗೆಪರಿಣಾಮಕಾರಿಯಾಗಿ ತಲುಪಿಸಬೇಕು. ಕರ್ನಾಟಕವು ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ಎಂಬುದನ್ನು ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಸಾಬೀತು ಮಾಡಬೇಕಾಗಿದೆ. ಇದಕ್ಕಾಗಿ ನಮ್ಮೆಲ್ಲರ ಶ್ರಮ ಅತ್ಯಗತ್ಯ' ಎಂದು ಹೇಳಿದರು.

'ಮುಂದಿನ ಲೋಕಸಭಾ ಚುನಾವಣೆಯು ದೇಶದ ಭವಿಷ್ಯವನ್ನು ರೂಪಿಸಲಿದೆ. ಬಿಜೆಪಿ–ಜೆಡಿಎಸ್ ಎರಡೂ ಪಕ್ಷಗಳು ಒಗ್ಗಟ್ಟಾಗಿ ಶ್ರಮ ಹಾಕಿ ರಾಜ್ಯದ 28 ಕ್ಷೇತ್ರಗಳನ್ನೂ ಗೆಲ್ಲಬೇಕಾಗಿದೆ. ಈ ಮೂಲಕ ಮೋದಿಯವರ ಕೈ ಬಲಪಡಿಸಬೇಕಾಗಿದೆ' ಎಂದು ವಿಜಯೇಂದ್ರ ತಿಳಿಸಿದರು.

'ದೇಶದೆಲ್ಲೆಡೆ ಬಿಜೆಪಿ ಪರ ಅಲೆ ಇದೆ. ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿ ಆಗುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ವಿರೋಧ ಪಕ್ಷಗಳು ಈಗಾಗಲೇ ತೀರ್ಮಾನ ಮಾಡಿವೆ. ಆದರೂ ನಾವೂ ಚುನಾವಣೆಯನ್ನು ಸವಾಲಾಗಿ, ಗಂಭೀರವಾಗಿ ಸ್ವೀಕರಿಸಬೇಕು' ಎಂದು ಅವರು ತಿಳಿಸಿದರು.

'ಎಲ್ಲ 58 ಸಾವಿರ ಬೂತ್‌ಗಳನ್ನು ನೇರವಾಗಿ ತಲುಪಬೇಕಿದೆ. ಮೋದಿಯವರ ಜನಪ್ರಿಯತೆ, ಜನಪರ ಯೋಜನೆಗಳನ್ನು ಮತವಾಗಿ ಪರಿವರ್ತಿಸುವ ಸವಾಲನ್ನು ಸ್ವೀಕರಿಸಿ' ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲ, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ.ರಾಜೀವ್, ಪ್ರೀತಮ್ ಗೌಡ, ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇದ್ದರು.

'ಡಿ.ಕೆ. ಸುರೇಶ್ ರಾವಣ'

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಪಟ್ಟಣದಲ್ಲಿ ಸೋಮವಾರ ನಡೆದ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಸಮ್ಮಿಲನ ಸಭೆ ಸಂದರ್ಭದಲ್ಲಿ ಬಿಜೆಪಿ ಶಾಸಕ ಮುನಿರತ್ನ ಅವರು ಸಂಸದ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರನ್ನು ರಾವಣನಿಗೆ ಹೋಲಿಸಿದರು. ಇದೇ ವೇಳೆ ಅವರ ಎದುರಾಳಿ, ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಅವರನ್ನು ರಾಮನಿಗೆ ಹೋಲಿಸಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸುರೇಶ್ ಪರವಾಗಿ ಯಾರೇ ಬಂದರೂ ಪರವಾಗಿಲ್ಲ. ರಾವಣ ರಾವಣನೇ, ರಾಮ ರಾಮನೇ. ರಾಮನಿಗೆ ಹೆಚ್ಚು ಮತ ಬರುತ್ತದೊ, ರಾವಣನಿಗೆ ಬರುತ್ತದೊ ಕಾದು ನೋಡೋಣ. ಯಾರು ಏನು ಎಂಬುದರ ತೀರ್ಮಾನವನ್ನು ಜನರಿಗೆ ಬಿಟ್ಟಿದ್ದೇವೆ' ಎಂದರು.

'ಕನಕಪುರದಲ್ಲಿ ಬಿಜೆಪಿ–ಜೆಡಿಎಸ್ ಬೂತ್ ಏಜೆಂಟ್‌ರ ಮೇಲೆ ಡಿ.ಕೆ. ಸಹೋದರರು ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕುತ್ತಾರೆ. ಅವರ ದೌರ್ಜನ್ಯ ತಡೆಯಲು ಕ್ಷೇತ್ರದಲ್ಲಿ ಅರೆ ಸೇನಾಪಡೆ ನಿಯೋಜಿಸಬೇಕು. ಅವರು ಬಂದರೆ ಎಲ್ಲವೂ ಸರಿ ಹೋಗಲಿದೆ. ಈ ಕುರಿತು ಎರಡೂ ಪಕ್ಷಗಳ ವರಿಷ್ಠರು ಆಯೋಗಕ್ಕೆ ಮನವಿ ಮಾಡಿದ್ದಾರೆ' ಎಂದು ಹೇಳಿದರು..

ಹೆಬ್ಬಾರ್ ವಿರುದ್ಧ ಪೋಸ್ಟರ್

ಪ್ರಜಾವಾಣಿ ವಾರ್ತೆ

ಶಿರಸಿ: ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ ಕಾಂಗ್ರೆಸ್ ಸೇರ್ಪಡೆಗೆ ವಿರೋಧ ವ್ಯಕ್ತವಾಗಿದೆ. ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯ ಗೋಡೆಯ ಮೇಲೆ ಸೋಮವಾರ 'ನಮ್ಮ ಪಕ್ಷ, ನಮ್ಮ ಹಕ್ಕು, ಭ್ರಷ್ಟರಿಗಿಲ್ಲಿ ಜಾಗವಿಲ್ಲ' ಎಂಬ ಪೋಸ್ಟರ್ ಅಂಟಿಸಿ, ಕೆಲವರು ಅಸಮಾಧಾನ ಹೊರಹಾಕಿದ್ದಾರೆ.

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಂಜಲಿ ನಿಂಬಾಳ್ಕರ್ ಉಪಸ್ಥಿತಿಯಲ್ಲಿ ಕಾಂಗ್ರೆಸ್ ಜಿಲ್ಲಾ ಕಚೇರಿಯಲ್ಲಿ ನಾಯಕರು, ಕಾರ್ಯಕರ್ತರು ಸಭೆ ಏರ್ಪಾಟಾಗಿತ್ತು. ಈ ಕಾರಣದಿಂದ ಕೆಲವರು ಈ ಕೃತ್ಯವೆಸಗಿದ್ದಾರೆ. ಸಭೆ ಶುರುವಿಗೂ ಮುನ್ನ ಕೆಲವರು ಪೋಸ್ಟರ್ ಅಂಟಿಸುವುದರ ಜೊತೆಗೆ ಚಿತ್ರ, ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರು. 'ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರಿ, ಸಚಿವರಾಗಿದ್ದ ಹೆಬ್ಬಾರ್ ಪುನಃ ಕಾಂಗ್ರೆಸ್ ಸೇರಲು ಪ್ರಯತ್ನ ನಡೆಸಿದ್ದಾರೆ. ಇದಕ್ಕೆ ಕೆಲ ಸಚಿವರು, ಶಾಸಕರ ವಿರೋಧವಿತ್ತು. ಪಕ್ಷದ ಕಾರ್ಯಕರ್ತರು ಕೂಡ ವಿರೋಧ ವ್ಯಕ್ತಪಡಿಸಿದ್ದಾರೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಕಚೇರಿಯ ಗೋಡೆಗೆ ಹೆಬ್ಬಾರ್ ವಿರುದ್ಧ ಅಂಟಿಸಿದ ಪೋಸ್ಟರ್

ಕಾಂಗ್ರೆಸ್ ಕಚೇರಿಯಲ್ಲಿನ ವಿದ್ಯಮಾನಕ್ಕೆ ಕಾಂಗ್ರೆಸ್‌ನವರೇ ಹೊಣೆ. ಪೋಸ್ಟರ್ ಅಂಟಿಸಿದ್ದು ಯಾರು ಎಂಬ ಬಗ್ಗೆ ಮಾಹಿತಿ ಇಲ್ಲದಿರುವಾಗ ಅದಕ್ಕೆ ಪ್ರತಿಕ್ರಿಯೆ ನೀಡುವ ಅಗತ್ಯವಿಲ್ಲ

ಶಿವರಾಮ ಹೆಬ್ಬಾರ್, ಶಾಸಕ, ಯಲ್ಲಾಪುರ

ಕಚೇರಿ ಗೋಡೆಗಳಿಗೆ ಹೆಬ್ಬಾರ್ ವಿರುದ್ಧ ಪೋಸ್ಟರ್ ಅಂಟಿಸಿದ್ದು ಯಾರು ಎಂಬುದು ಗೊತ್ತಿಲ್ಲ. ಕಾಂಗ್ರೆಸ್ ಕಾರ್ಯಕರ್ತರೇ ಪೋಸ್ಟರ್ ಹಚ್ಚಿದ್ದರೆ, ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಸಾಯಿ ಗಾಂವಕರ್, ಅಧ್ಯಕ್ಷ, ಕಾಂಗ್ರೆಸ್ ಜಿಲ್ಲಾ ಘಟಕ

'ಮೈತ್ರಿ' ಮುಖಂಡರ ಜಟಾಪಟಿ!

ಪ್ರಜಾವಾಣಿ ವಾರ್ತೆ

ತುರುವೇಕೆರೆ (ತುಮಕೂರು): ಪಟ್ಟಣದಲ್ಲಿ ಸೋಮವಾರ ನಡೆದ ಬಿಜೆಪಿ- ಜೆಡಿಎಸ್ ಮೈತ್ರಿ ಸಭೆ ಎರಡೂ ಪಕ್ಷಗಳ ಕಾರ್ಯಕರ್ತರು ಮತ್ತು ಮುಖಂಡರ ಮಧ್ಯದ ವಾಗ್ವಾದಕ್ಕೆ ವೇದಿಕೆಯಾಯಿತು.

'ಬಿಜೆಪಿಯ ಕೊಂಡಜ್ಜಿ ವಿಶ್ವನಾಥ್ 2014ರ ಚುನಾವಣೆಯಲ್ಲಿ ಅಂದಿನ ಕಾಂಗ್ರೆಸ್ ಅಭ್ಯರ್ಥಿ ಮುದ್ದಹನುಮೇಗೌಡ ಅವರಿಗೆ ಬೆಂಬಲ ನೀಡಿದ್ದರು. 2018ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನಲ್ಲಿ ಇದ್ದುಕೊಂಡು ನನ್ನ ವಿರುದ್ಧ ಕೆಲಸ ಮಾಡಿದರು. ಈ ಬಾರಿ ಬಿಜೆಪಿ ಅಭ್ಯರ್ಥಿಗೆ ಸಹಕಾರ ನೀಡುತ್ತಾರೆಯೇ ಅಥವಾ ಬೇರೆ ಏನಾದರೂ ಮಾಡುತ್ತಾರೆಯೇ' ಎಂದು ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ಪ್ರಶ್ನಿಸಿದ್ದು ಬಿಜೆಪಿ ಕಾರ್ಯಕರ್ತರನ್ನು ಕೆರಳಿಸಿತು. ಕೃಷ್ಣಪ್ಪ ಹೇಳಿಕೆಗೆ ಸಮಜಾಯಿಷಿ ಕೊಡಲು ಮುಂದಾದ ಕೊಂಡಜ್ಜಿ ವಿಶ್ವನಾಥ್ ಅವರನ್ನು ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ತಡೆದರು. 'ಈಗ ಏನೂ ಮಾತನಾಡುವುದು ಬೇಡ' ಎಂದು ವಾಪಸ್ ಕಳುಹಿಸಿದರು. ಇದರಿಂದಾಗಿ ವೇದಿಕೆ ಮೇಲೆಯೇ ಮುಖಂಡರ ಮಧ್ಯೆ ಕೆಲಕಾಲ ಮಾತಿನ ಚಕಮಕಿ ನಡೆಯಿತು.

ಇದೇ ವೇಳೆ ವೇದಿಕೆಯ ಮುಂಭಾಗದಲ್ಲಿದ್ದ ಬಿಜೆಪಿಯ ಕಡೇಹಳ್ಳಿ ಸಿದ್ದೇಗೌಡ, 'ಕೃಷ್ಣಪ್ಪ ಯಾವಾಗಲೂ ಇಂತಹ ದುರಹಂಕಾರದ ಮಾತುಗಳನ್ನಾಡುತ್ತಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದನ್ನು ಕೇಳಿಸಿಕೊಂಡು ವೇದಿಕೆಯಲ್ಲಿದ್ದ ಜೆಡಿಎಸ್‌ನ ವೆಂಕಟಾಪುರದ ಯೋಗೇಶ್ ಅವರು ಬಿಜೆಪಿ ಮುಖಂಡರ ವಿರುದ್ಧ ಹರಿಹಾಯ್ದರು.

ವೇದಿಕೆಯಲ್ಲಿದ್ದ ಶಾಸಕ ಗೋಪಾಲಯ್ಯ, ಮುಖಂಡರಾದ ಎಂ.ಡಿ.ಲಕ್ಷ್ಮಿನಾರಾಯಣ, ಮಸಾಲೆ ಜಯರಾಂ, ನೆ.ಲ.ನರೇಂದ್ರಬಾಬು ಇತರರು ಎರಡೂ ಪಕ್ಷದ ಮುಖಂಡರನ್ನು ಸಮಾಧಾನ ಪಡಿಸಲು ಯತ್ನಿಸಿದರು.

ನಾಯಕತ್ವ ವಹಿಸಲ್ಲ: ಸಂಗಣ್ಣ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಲೋಕಸಭಾ ಚುನಾವಣೆ ಪ್ರಚಾರ ಕಾರ್ಯದಲ್ಲಿ ನಾಯಕತ್ವ ವಹಿಸುವುದಿಲ್ಲ. ಸಾಮಾನ್ಯ ಕಾರ್ಯಕರ್ತನಾಗಿರುತ್ತೇನೆ' ಎಂದು ಸಂಸದ ಸಂಗಣ್ಣ ಕರಡಿ ಹೇಳಿದ್ದಾರೆ.



ಸಂಗಣ್ಣ ಕರಡಿ

ಎರಡು ಬಾರಿ ಬಿಜೆಪಿಯಿಂದ ಸಂಸದರಾಗಿರುವ ಅವರಿಗೆ ಈ ಬಾರಿ ಟಿಕೆಟ್ ತಪ್ಪಿದೆ. ಇದರಿಂದ ಅಸಮಾಧಾನಗೊಂಡಿರುವ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿ.ಎಸ್. ಯಡಿಯೂರಪ್ಪ, ಪ್ರಲ್ಹಾದ ಜೋಶಿ ಮತ್ತು ಬಸವರಾಜ ಬೊಮ್ಮಾಯಿ ಅವರು ಸೋಮವಾರ ಬೆಂಗಳೂರಿನಲ್ಲಿ ಮನವೊಲಿಸುವ ಪ್ರಯತ್ನ ಮಾಡಿದರು. ಸಭೆಯ ಬಳಿಕ ಸಂಗಣ್ಣ ಕರಡಿ 'ಪ್ರಜಾವಾಣಿ' ಜೊತೆ ಮಾತನಾಡಿ 'ಒಂದು ಕಡೆ ಟಿಕೆಟ್ ಬದಲಿಸಿದರೆ ಬೇರೆ ಕಡೆಯೂ ಇದೇ ಸಮಸ್ಯೆಯಾಗುತ್ತದೆ. ಆದರೂ ಈ ವಿಚಾರ ವರಿಷ್ಠರ ಗಮನಕ್ಕೆ ತರಲಾಗುವುದು ಎಂದು ರಾಜ್ಯದ ಮುಖಂಡರು ಹೇಳಿದ್ದಾರೆ. ಅದು ಏನೇ ಆಗಲಿ ಪಕ್ಷದಲ್ಲಿ ಕಾರ್ಯಕರ್ತನಾಗಿ ಇರುವೆ. ಪಕ್ಷೇತರನಾಗಿ ಸ್ಪರ್ಧೆ ಮಾಡುವುದಿಲ್ಲ. ಪ್ರಚಾರದ ನಾಯಕತ್ವವನ್ನೂ ವಹಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಪಕ್ಷದ ಅಭ್ಯರ್ಥಿಯಾಗಿರುವ ಡಾ. ಬಸವರಾಜ ಕ್ಯಾವಟರ್ 'ಸಂಗಣ್ಣ ಅವರ ನೇತೃತ್ವದಲ್ಲಿಯೇ ಚುನಾವಣೆ ಎದುರಿಸಲಾಗುವುದು' ಎಂದು ಹೇಳಿದ್ದಾರೆ.

ಕಾಂಗ್ರೆಸ್‌ಗೆ ಕೆ.ಸಿ.ನಾರಾಯಣಗೌಡ ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬಿಜೆಪಿ ಮುಖಂಡ ಕೆ.ಸಿ.ನಾರಾಯಣಗೌಡ ಅವರು ಬೆಂಬಲಿಗರೊಂದಿಗೆ ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ. ಸೇರ್ಪಡೆ ದಿನಾಂಕವನ್ನು ಶೀಘ್ರ ಪ್ರಕಟಿಸಲಾಗುವುದು' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ನಾರಾಯಣಗೌಡರು ನಮ್ಮ ಸ್ನೇಹಿತರಾಗಿದ್ದು, ಹಲವು ದಿನಗಳಿಂದಲೂ ಸಂಪರ್ಕದಲ್ಲಿದ್ದರು. ಕೆ.ಆರ್.ಪೇಟೆ ಭಾಗದ ಹಲವು ಮುಖಂಡರು, ಕಾರ್ಯಕರ್ತರೂ ಕಾಂಗ್ರೆಸ್ ಸೇರಲಿದ್ದಾರೆ' ಎಂದರು.

'ಬಿಜೆಪಿ ಟಿಕೆಟ್ ಸಿಗದ ಸಂಸದೆ ಸುಮಲತಾ ಅವರ ನಡೆ ಬಗ್ಗೆ ಗೊತ್ತಿಲ್ಲ. ಪಕ್ಷೇತರರಾಗಿ ಸ್ಪರ್ಧಿಸಿ ಎಂದು ಒತ್ತಾಯಿಸಿಲ್ಲ. ಅವರ ಹಾಗೂ ನಮ್ಮ ನಡುವೆ ವೈಯಕ್ತಿಕವಾಗಿ ಉತ್ತಮ ಸ್ನೇಹ ಸಂಬಂಧವಿದೆ. ರಾಜಕೀಯವಾಗಿ ಯಾವುದೇ ಚರ್ಚೆ ಮಾಡಿಲ್ಲ. ಅವರು ಕಾಂಗ್ರೆಸ್ ಬೆಂಬಲಿಸಿದರೆ ಸ್ವಾಗತಿಸುತ್ತೇವೆ' ಎಂದರು.

'ಎಚ್.ಡಿ.ಕುಮಾರಸ್ವಾಮಿ ಎಲ್ಲಿಗೇ ಹೋದರೂ ಅದೇ ತನ್ನ ಕರ್ಮಭೂಮಿ ಎನ್ನುತ್ತಾರೆ. ಎಚ್.ಡಿ.ದೇವೇಗೌಡರ ಮಗನೆಂಬ ಕಾರಣಕ್ಕೆ ಅವರ ಮೇಲೆ ಗೌರವವಿದೆ. 3 ಬಾರಿ ಮುಖ್ಯಮಂತ್ರಿ ಮಾಡಿದ ರಾಮನಗರವನ್ನು ಪ್ರಾಣ ಹೋದರೂ ಬಿಡುವುದಿಲ್ಲ ಎನ್ನುತ್ತಿದ್ದರು. ಈಗ ಮಂಡ್ಯಕ್ಕೆ ಬರುತ್ತಿರುವುದರಿಂದ ಅಲ್ಲಿನ ಜನ ವಿರೋಧಿಸುತ್ತಿದ್ದಾರೆ. ಯಾರೇ ಅಭ್ಯರ್ಥಿಯಾದರೂ ನಮಗೆ ತೊಂದರೆ ಇಲ್ಲ' ಎಂದರು.

ಬಡವರು, ಮಧ್ಯಮ ವರ್ಗದವರನ್ನು ಕಾಡುತ್ತಿರುವ ಗಗನಮುಖಿ ದರಗಳು • ಕುಟುಂಬ ನಿರ್ವಹಣಾ ವೆಚ್ಚ ಹೆಚ್ಚಳ

ಮತ ಬುಟ್ಟಿ ಅಲ್ಲಾಡಿಸಲಿದೆಯೆ ಬೆಲೆ ಏರಿಕೆ?

• ವಿ.ಎಸ್. ಸುಬ್ರಹ್ಮಣ್ಯ



ಬೆಂಗಳೂರು: ಕೇಂದ್ರದಲ್ಲಿ ಹತ್ತು ವರ್ಷ ನಿರಂತರವಾಗಿ ಆಡಳಿತ ನಡೆಸಿದ್ದ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಮೈತ್ರಿಕೂಟವನ್ನು 2014ರ ಲೋಕಸಭಾ ಚುನಾವಣೆಯಲ್ಲಿ ಬೆಲೆ ಏರಿಕೆ ಮತ್ತು ಹಣದುಬ್ಬರ ತೀವ್ರವಾಗಿ ಕಾಡಿತ್ತು. ನಂತರದ ಹತ್ತು ವರ್ಷಗಳ ಅವಧಿಯಲ್ಲೂ ಅಗತ್ಯ ವಸ್ತುಗಳ ದರ ಏರುಗತಿಯಲ್ಲೇ ಇದೆ. ಪೆಟ್ರೋಲಿಯಂ ಉತ್ಪನ್ನಗಳು ಸೇರಿದಂತೆ ನಿತ್ಯ ಬಳಕೆಯ ವಸ್ತುಗಳ ದರ ಏರಿಕೆ ಬಡವರು, ಮಧ್ಯಮ ವರ್ಗದವರನ್ನು ಬಹುವಾಗಿ ಕಾಡುತ್ತಿದೆ. ಬೆಲೆ ಏರಿಕೆ ವಿಷಯವು 2024ರ ಲೋಕಸಭಾ ಚುನಾವಣೆಯಲ್ಲಿ ವಿವಿಧ ಪಕ್ಷಗಳ ಮತ ಬುಟ್ಟಿಯನ್ನು ಅಲ್ಲಾಡಿಸಲಿದೆಯೇ ಎಂಬ ಕುತೂಹಲ ಗರಿಗೆದರಿದೆ.

ಸಗಟು ಹಣದುಬ್ಬರದಲ್ಲಿ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸುತ್ತಿದ್ದರೂ ಆಹಾರ ಧಾನ್ಯಗಳು, ಈರುಳ್ಳಿ ಸೇರಿದಂತೆ ಅಗತ್ಯ ವಸ್ತುಗಳು, ಖಾದ್ಯ ತೈಲಗಳ ದರ ಗಣನೀಯವಾಗಿ ಏರಿಕೆಯಾಗಿದೆ. ಇದು ನೇರವಾಗಿ ಅಡುಗೆ ಮನೆಯ ವೆಚ್ಚದ ಮೇಲೆ ಪರಿಣಾಮ ಬೀರುತ್ತಿದೆ. ಅಗತ್ಯ ವಸ್ತುಗಳ ದರ ಏರಿಕೆ ಬಿಸಿ ಎಲ್ಲ ಕುಟುಂಬಗಳಿಗೂ ತಟ್ಟಿದ್ದು, ಕುಟುಂಬ ನಿರ್ವಹಣಾ ವೆಚ್ಚದಲ್ಲಿ ಏರಿಕೆಯಾಗಿದೆ. ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯದ ವಾಕ್ಸಮರದಲ್ಲಿ ಆಗಾಗ ಪ್ರಸ್ತಾಪವಾಗುತ್ತಿದ್ದ ಬೆಲೆ ಏರಿಕೆಯ ವಿಷಯ ಚುನಾವಣೆಯ ಅಖಾಡದಲ್ಲಿ ಇನ್ನೂ ಅಷ್ಟರಮಟ್ಟಿಗೆ ಸದ್ದು ಮಾಡಿಲ್ಲ.

2023ರ ಕೊನೆಯ ಭಾಗದಲ್ಲಿ ದೇಶದಲ್ಲಿ ಈರುಳ್ಳಿ ದರ ಗಣನೀಯವಾಗಿ ಏರಿಕೆ ಕಾಣಿಸಿಕೊಂಡಿತ್ತು. ಅದೇ ಅವಧಿಯಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಸನಿಹದಲ್ಲಿತ್ತು. ಉತ್ತರ ಭಾರತದ ಚುನಾವಣಾ ರಾಜಕಾರಣದ ಫಲಿತಾಂಶವನ್ನು ಈರುಳ್ಳಿ ದರ ಹೆಚ್ಚಳ ಹಲವು ಬಾರಿ ಪ್ರಭಾವಿಸಿದ್ದ ಉದಾಹರಣೆಗಳಿವೆ. ಈ ಕಾರಣದಿಂದಾಗಿಯೇ 2023ರ ಅಕ್ಟೋಬರ್‌ನಲ್ಲಿ ಮಾರುಕಟ್ಟೆ ನಿಯಂತ್ರಣಕ್ಕೆ ಮಧ್ಯ ಪ್ರವೇಶಿಸಿದ್ದ ಕೇಂದ್ರ ಸರ್ಕಾರ, ಈರುಳ್ಳಿ ರಫ್ತು ನಿಷೇಧಿಸಿತ್ತು.

ಎಲ್‌ಪಿಜಿ ದರ ಕಾಡುವುದೇ?

2014ರಲ್ಲಿ ಯುಪಿಎ ಮೈತ್ರಿಕೂಟ ಅಧಿಕಾರದಿಂದ ನಿರ್ಗಮಿಸುವ ಮುನ್ನ 14 ಕೆ.ಜಿ. ತೂಕದ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ದರ ₹410ರಷ್ಟಿತ್ತು. ಈಗ ಅಷ್ಟೇ ತೂಕದ ಗೃಹಬಳಕೆ ಸಿಲಿಂಡರ್ ದರ ₹805ರಷ್ಟಿದೆ.

ಹತ್ತು ವರ್ಷಗಳಲ್ಲಿ ಎಲ್‌ಪಿಜಿ ಸಿಲಿಂಡರ್ ದರ ದುಪ್ಪಟ್ಟಾಗಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯನ್ನು ಬಿಜೆಪಿ ನೇತೃತ್ವದ ಎನ್‌ಡಿಎ ದೊಡ್ಡ ಅಸ್ತ್ರ ಮಾಡಿಕೊಂಡಿತ್ತು. ಈಗ ಎಲ್‌ಪಿಜಿ ದರ ಏರಿಕೆಯನ್ನು ವಿರೋಧ ಪಕ್ಷಗಳು ಆಗಾಗ ಪ್ರಸ್ತಾಪಿಸಿವೆ. ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯು ಚುನಾವಣಾ ಅಖಾಡದಲ್ಲಿ ಮಾಡಬಹುದಾದ ಲಾಭ- ನಷ್ಟಗಳ ಲೆಕ್ಕಾಚಾರವೂ ನಡೆಯುತ್ತಿದೆ.

ಭಾರಿ ಪ್ರಮಾಣದ ದಾಸ್ತಾನನ್ನೂ ನಿರ್ಬಂಧಿಸಿತ್ತು. ಆ ಮೂಲಕ ಐದು ರಾಜ್ಯಗಳ ಚುನಾವಣೆಯಲ್ಲಿ ಈರುಳ್ಳಿ ದರ ಚರ್ಚೆಗೆ ಬಾರದಂತೆ ತಡೆಯುವ ಪ್ರಯತ್ನ ಮಾಡಿತ್ತು.

ಕೈಗೆಟುಕದ ಪೆಟ್ರೋಲಿಯಂ ಉತ್ಪನ್ನ: 2009ರಲ್ಲಿ ಯುಪಿಎ ಮೈತ್ರಿಕೂಟ ಮೊದಲ ಬಾರಿ ಅಧಿಕಾರದ ಗದ್ದುಗೆ ಏರಿದ್ದಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ದರ 43.99 ಡಾಲರ್ ಇತ್ತು. ಆಗ ಭಾರತದಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ ₹45.62 ಇದ್ದರೆ, ಡೀಸೆಲ್ ದರ ಲೀಟರ್‌ಗೆ ₹32.86 ಇತ್ತು.

2014ರ ಜೂನ್‌ನಲ್ಲಿ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ದರ ದಾಖಲೆಯ 109 ಡಾಲರ್ ದಾಟಿತ್ತು. ಆಗ ದೇಶದಲ್ಲಿ ಪೆಟ್ರೋಲ್ ದರ ಲೀ.ಗೆ ₹72.26 ಇದ್ದರೆ, ಡೀಸೆಲ್ ದರ ಲೀ.ಗೆ ₹57.28 ಇತ್ತು. ನಂತರ ಕಚ್ಚಾ ತೈಲದ ದರ ಇಳಿಮುಖವಾಗಿತ್ತು. 2016ರಲ್ಲಿ ಕಚ್ಚಾ ತೈಲದ ದರ ಪ್ರತಿ ಬ್ಯಾರೆಲ್‌ಗೆ 43 ಡಾಲರ್‌ಗೆ ಇಳಿಕೆಯಾಗಿದ್ದರೆ, 2020ರಲ್ಲಿ 42 ಡಾಲರ್ ಸಮೀಪಕ್ಕೆ ತಲುಪಿತ್ತು. ಈಗ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ದರ 82 ಡಾಲರ್‌ನಷ್ಟಿದೆ. ಆದರೆ, ಪೆಟ್ರೋಲ್ ದರ ಲೀಟರ್‌ಗೆ ₹100 ಮತ್ತು ಡೀಸೆಲ್ ದರ ಲೀ.ಗೆ ₹86ರಷ್ಟಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ದರ ಇಳಿಕೆಗೆ ಅನುಗುಣವಾಗಿ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಇಳಿಕೆ ಮಾಡುವ ಮೂಲಕ ಅದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕೆಂಬ ಬೇಡಿಕೆ ದೀರ್ಘ ಕಾಲದಿಂದಲೂ ಇದೆ. ಕಾಂಗ್ರೆಸ್ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳು ಈ ಬೇಡಿಕೆಯನ್ನು ಆಗಾಗ ಪ್ರಸ್ತಾಪಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಇಳಿಯುತ್ತಿದ್ದರೂ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆ ಆಗುತ್ತಿರುವುದರಿಂದ ದೇಶದ ಪೆಟ್ರೋಲಿಯಂ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿ ಲಾಭವಾಗಿದೆ. ಆ ಕುರಿತೂ ವಿರೋಧ ಪಕ್ಷಗಳು ಪ್ರಶ್ನೆ ಎತ್ತಿದ್ದವು.

ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯನ್ನು ಆಧರಿಸಿಯೇ ಅಗತ್ಯ ವಸ್ತುಗಳ ಬೆಲೆಯೂ ಏರುತ್ತಿದೆ. ಹೋಟೆಲ್‌ನಲ್ಲಿ ಆಹಾರ ಪದಾರ್ಥಗಳ ದರ ಸೇರಿದಂತೆ ಜೀವನಾವಶ್ಯಕ ವಸ್ತುಗಳ ದರ ಹೆಚ್ಚಳವನ್ನೂ ಇದು ಪ್ರಭಾವಿಸುತ್ತಿದೆ.

'ಭಾರತದಲ್ಲಿ ಹಣದುಬ್ಬರವನ್ನು ನಿರ್ಧರಿಸುವ ವಿಧಾನದಲ್ಲೇ ದೋಷಗಳಿವೆ. 1957ರಿಂದ 30 ವರ್ಷ ಒಂದೇ ವಿಧಾನ ಜಾರಿಯಲ್ಲಿತ್ತು. 1987ರಲ್ಲಿ ಅಳವಡಿಸಿಕೊಂಡ ಹೊಸ ವಿಧಾನದಲ್ಲೂ ದೋಷಗಳಿವೆ. ಅದು ಈಗಲೂ ಬಳಕೆಯಲ್ಲಿದೆ. ಹೀಗಾಗಿ ಹಣದುಬ್ಬರ ಜನಜೀವನದ ಮೇಲೆ ಹೇಗೆ ಪ್ರಭಾವಿಸುತ್ತಿದೆ ಎಂಬುದನ್ನು ನಿಖರವಾಗಿ ಅರಿಯಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ' ಎನ್ನುತ್ತಾರೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ (ಐಸೆಕ್) ಮಾಜಿ ನಿರ್ದೇಶಕ ಪ್ರೊ.ಆರ್.ಎಸ್. ದೇಶಪಾಂಡೆ.

'ನಿತ್ಯ ಬಳಕೆಯ ಕೆಲವು ವಸ್ತುಗಳ ದರದಲ್ಲಿ ಏರಿಕೆ ಆಗಿದೆ. ಅದನ್ನು ಸಗಟು ಹಣದುಬ್ಬರದಂತೆಯೇ ನೋಡಲಾಗದು. ವಿರೋಧ ಪಕ್ಷಗಳು ಬೆಲೆ ಏರಿಕೆಯನ್ನು ಚುನಾವಣೆಯಲ್ಲಿ ಪ್ರಸ್ತಾಪಿಸಬಹುದು. ಆದರೆ, ಅದು ಮತದಾರರ ಮೇಲೆ ಪ್ರಭಾವ ಬೀರುವುದನ್ನು ನಿಖರವಾಗಿ ಅಂದಾಜಿಸಲಾಗದು' ಎಂದು ಹೇಳುತ್ತಾರೆ.

'ಪ್ರಭಾವಿಸುವ ಸಾಧ್ಯತೆ ಕಡಿಮೆ'

'ಈರುಳ್ಳಿ ದರ ಏರಿಕೆ ಉತ್ತರ ಭಾರತದಲ್ಲಿ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಿದ ಉದಾಹರಣೆಗಳಿವೆ. ಆಹಾರ ಹಣದುಬ್ಬರದ ಏರಿಕೆಯು ಕೊಂಚಮಟ್ಟಿಗೆ ಚುನಾವಣೆಯನ್ನು ಪ್ರಭಾವಿಸುವ ಸಾಧ್ಯತೆ ಇರುತ್ತದೆ. ಆದರೆ, ದೇಶದಲ್ಲಿ ಈಗ ಹಣದುಬ್ಬರ ಇಳಿಮುಖವಾಗಿದೆ. ಹೆಚ್ಚು ಚರ್ಚೆಯೂ ಆಗುತ್ತಿಲ್ಲ. ಹೀಗಾಗಿ ಬೆಲೆ ಏರಿಕೆ ಮತ್ತು ಹಣದುಬ್ಬರದ ವಿಚಾರಗಳು ಈ ಲೋಕಸಭಾ ಚುನಾವಣೆಯನ್ನು ಪ್ರಭಾವಿಸುವ ಸಾಧ್ಯತೆ ಕಡಿಮೆ' ಎನ್ನುತ್ತಾರೆ ಅರ್ಥಶಾಸ್ತ್ರ ಪ್ರಾಧ್ಯಾಪಕ ಎಸ್.ಆರ್. ಕೇಶವ್.

ವಯನಾಡ್: ರಾಹುಲ್ ವಿರುದ್ಧ ಸುರೇಂದ್ರನ್ ಕಣಕ್ಕೆ

ತಿರುವನಂತಪುರಂ (ಪಿಟಿಐ): ಕೇರಳದ ಇನ್ನುಳಿದ ಕ್ಷೇತ್ರಗಳಿಗೆ ಬಿಜೆಪಿಯು ಅಭ್ಯರ್ಥಿಗಳನ್ನು ಘೋಷಿಸಿದ್ದು, ವಯನಾಡ್ ಕ್ಷೇತ್ರದಿಂದ ರಾಹುಲ್ ಗಾಂಧಿ ವಿರುದ್ಧ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸುರೇಂದ್ರನ್ ಅವರನ್ನು ಕಣಕ್ಕಿಳಿಸಿದೆ.

ಶಬರಿಮಲೆ ದೇವಸ್ಥಾನದೊಳಗೆ ಮಹಿಳೆಯರ ಪ್ರವೇಶವನ್ನು ವಿರೋಧಿಸಿ ನಡೆದಿದ್ದ ಉಗ್ರ ಹೋರಾಟದ ನೇತೃತ್ವ ವಹಿಸಿದ್ದವರು ಸುರೇಂದ್ರನ್. ಕೇಂದ್ರ ಸಚಿವ ವಿ.ಮುರಳೀಧರನ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸುರೇಂದ್ರನ್, 2019ರಲ್ಲಿ ಪತ್ತನಂತಿಟ್ಟ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು. 2016ರಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಕೇವಲ 89 ಮತಗಳ ಅಂತರದಿಂದ ಸೋತಿದ್ದರು. ಕೊನ್ನಿ ಕ್ಷೇತ್ರದ ಉಪಚುನಾವಣೆಯಲ್ಲಿಯೂ ಸ್ಪರ್ಧಿಸಿ ಪರಾಭವಗೊಂಡಿದ್ದರು. 2020ರಿಂದ ಅವರು ಕೇರಳ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದಾರೆ.

ದಶಕಗಳ ಕಾಲದಿಂದಲೂ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಸಿಪಿಎಂ ನೇತೃತ್ವದ ಎಲ್‌ಡಿಎಫ್ ನಡುವೆ ನೇರ ಹಣಾಹಣಿಯಿದ್ದು, ಈ ಬಾರಿ ಅದನ್ನು ತ್ರಿಕೋನ ಸ್ಪರ್ಧೆಯನ್ನಾಗಿ ಮಾಡಲು ಬಿಜೆಪಿ ಪ್ರಯತ್ನಿಸುತ್ತಿದೆ.

'ಭಾರತ್ ಮಾತಾ ಕಿ ಜೈ' ಘೋಷಣೆ ಕೈಬಿಡುವುದೇ ಆರ್‌ಎಸ್‌ಎಸ್?

ಮಲಪ್ಪುರಂ (ಪಿಟಿಐ): 'ಭಾರತ್ ಮಾತಾ ಕಿ ಜೈ' ಮತ್ತು 'ಜೈ ಹಿಂದ್' ಘೋಷಣೆಗಳನ್ನು ಮೊದಲು ಕೂಗಿದ್ದು ಮುಸ್ಲಿಮರು. ಹಾಗಾಗಿ ಈ ಘೋಷಣೆಗಳನ್ನು ಸಂಘ ಪರಿವಾರವು ಕೈ ಬಿಡುವುದೇ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಶ್ನಿಸಿದ್ದಾರೆ.

ಮುಸ್ಲಿಂ ಬಾಹುಳ್ಯದ ಮಲಪ್ಪುರಂನಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿಸಿ ಸಿಪಿಎಂ ಆಯೋಜಿಸಿದ್ದ ನಾಲ್ಕನೇ ರ‍್ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಭಾರತ್ ಮಾತಾ ಕಿ ಜೈ' ಘೋಷಣೆಯನ್ನು ರೂಪಿಸಿದ್ದು ಅಜೀಮುಲ್ಲಾ ಖಾನ್ ಎನ್ನುವ ಮುಸ್ಲಿಂ ವ್ಯಕ್ತಿ. ಅದೇ ರೀತಿ 'ಜೈ ಹಿಂದ್' ಘೋಷಣೆಯನ್ನು ಮೊದಲು ಕೂಗಿದ್ದು ರಾಜತಾಂತ್ರಿಕ ಅಧಿಕಾರಿಯಾಗಿದ್ದ ಅಬಿದ್ ಹಸನ್. 50 ಉಪನಿಷತ್‌ಗಳನ್ನು ಸಂಸ್ಕೃತದಿಂದ ಪರ್ಷಿಯನ್ ಭಾಷೆಗೆ ಅನುವಾದ ಮಾಡಿಸಿ ಅದು ಜಗತ್ತಿನ ಬೇರೆ ಬೇರೆ ಭಾಗ ಮುಟ್ಟಲು ನೆರವಾದವರು ಮೊಘಲ್ ದೊರೆ ಶಹಜಹಾನ್‌ನ ಮಗ ದಾರಾ ಶಿಖೋ. ಇದರ ಜತೆಗೆ ಮುಸ್ಲಿಮರು ಸ್ವಾತಂತ್ರ್ಯ ಹೋರಾಟದಲ್ಲಿಯೂ ನಿರ್ಣಾಯಕ ಪಾತ್ರ ವಹಿಸಿದ್ದರು. ಬಿಜೆಪಿ ಸರ್ಕಾರವು ಸಿಎಎ ಜಾರಿಗೊಳಿಸುವ ಮೂಲಕ ಮುಸ್ಲಿಮರನ್ನು ದೇಶದ ಎರಡನೇ ದರ್ಜೆ ಪ್ರಜೆಗಳನ್ನಾಗಿಸಲು ಹೊರಟಿದೆ' ಎಂದು ಅವರು ಟೀಕಿಸಿದರು.

ಆರ್‌ಎಸ್‌ಎಸ್ ಮುಖಂಡ ಎಂ.ಎಸ್.ಗೋಲ್ವಾಲ್ಕರ್ ಅವರ ಒಂದು ಪುಸ್ತಕದಿಂದ 'ಕ್ರಿಶ್ಚಿಯನ್ನರು, ಮುಸ್ಲಿಮರು ಮತ್ತು ಕಮ್ಯುನಿಸ್ಟರು ಈ ದೇಶದ ಆಂತರಿಕ ಶತ್ರುಗಳು' ಎಂಬ ಹೇಳಿಕೆಯನ್ನು ಉಲ್ಲೇಖಿಸಿದ ವಿಜಯನ್, 'ಇದನ್ನು ಅವರು ಪ್ರಾಚೀನ ಗ್ರಂಥಗಳು, ಪುರಾಣ, ವೇದ ಅಥವಾ ಮನುಸ್ಮೃತಿಯಿಂದ ತೆಗೆದುಕೊಂಡಿಲ್ಲ. ಬದಲಿಗೆ ಇದನ್ನು ಹಿಟ್ಲರ್‌ನಿಂದ ತೆಗೆದುಕೊಂಡಿದ್ದಾರೆ' ಎಂದು ಹೇಳಿದರು.

'ಇಂಡಿಯಾ' ಕೂಟ, ಬಿಜೆಪಿಗೆ ತಲೆನೋವಾದ ಬಿಎಸ್‌ಪಿ ಅಭ್ಯರ್ಥಿಗಳು

ಮತಗಳು ಹಂಚಿ ಹೋಗುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಉತ್ತರ ಪ್ರದೇಶ

ಲಖನೌ: ಉತ್ತರ ಪ್ರದೇಶದಲ್ಲಿ ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಕಣಕ್ಕಿಳಿಸಿರುವ ಕೆಲವು ಅಭ್ಯರ್ಥಿಗಳು 'ಇಂಡಿಯಾ' ಮೈತ್ರಿಕೂಟ ಮತ್ತು ಬಿಜೆಪಿಗೆ ತಲೆನೋವಾಗಿ ಪರಿಣಮಿಸುವ ಸಾಧ್ಯತೆಗಳಿವೆ.

ಮೊದಲ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿರುವ 25 ಕ್ಷೇತ್ರಗಳಿಗೆ ಮಾಯಾವತಿ ನೇತೃತ್ವದ ಪಕ್ಷವು, ಭಾನುವಾರ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಉತ್ತರ ಪ್ರದೇಶದ ಪಶ್ಚಿಮ ಮತ್ತು ಕೇಂದ್ರ ಭಾಗದಲ್ಲಿರುವ ಏಳು ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೆ ಮಣೆಹಾಕಿದೆ. ಈ ಅಭ್ಯರ್ಥಿಗಳು ಕಾಂಗ್ರೆಸ್- ಎಸ್‌ಪಿಯ ಮುಸ್ಲಿಂ ವೋಟ್‌ಬ್ಯಾಂಕ್‌ಗೆ ಹೊಡೆತ ನೀಡುವುದು ಖಚಿತ.

ಬಿಎಸ್‌ಪಿ ಕಣಕ್ಕಿಳಿಸಿರುವ ಕೆಲವು ಅಭ್ಯರ್ಥಿಗಳು ಮುಸ್ಲಿಂ ಸಮುದಾಯದಲ್ಲಿ ಹೆಚ್ಚಿನ ಪ್ರಭಾವ ಹೊಂದಿರುವವರೇ ಆಗಿದ್ದಾರೆ. ಇದರಿಂದ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ- 'ಇಂಡಿಯಾ' ಮೈತ್ರಿಕೂಟ-ಬಿಎಸ್‌ಪಿ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆ ದಟ್ಟವಾಗಿದೆ.

ಬಿಎಸ್‌ಪಿಯು ಅಮ್ರೋಹಾ ಕ್ಷೇತ್ರಕ್ಕೆ ಡಾ.ಮುಜಾಹಿದ್ ಹುಸೇನ್ ಅವರ ಹೆಸರು ಘೋಷಿಸಿದೆ. ಇಲ್ಲಿನ ಸಂಸದರಾಗಿರುವ ಡ್ಯಾನಿಶ್ ಅಲಿ, ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ.

2019ರ ಚುನಾವಣೆಯಲ್ಲಿ ಎಸ್‌ಪಿ-ಬಿಎಸ್‌ಪಿ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡ್ಯಾನಿಶ್, ಬಿಜೆಪಿಯ ಕನ್ವರ್ ಸಿಂಗ್ ವಿರುದ್ಧ 64 ಸಾವಿರಕ್ಕೂ ಅಧಿಕ ಮತಗಳಿಂದ ಗೆದ್ದಿದ್ದರು. ಈ ಬಾರಿ ಮುಸ್ಲಿಮರ ಮತಗಳು ಹಂಚಿಹೋದರೆ, ಡ್ಯಾನಿಶ್ ಗೆಲುವಿನ ಹಾದಿಗೆ ಅಡ್ಡಿಯಾಗಬಹುದು.

ಮುಸ್ಲಿಮರೇ ಹೆಚ್ಚಿನ ಸಂಖ್ಯೆಯಲ್ಲಿರುವ ರಾಮಪುರ ಕ್ಷೇತ್ರದಲ್ಲಿ ಜೀಶನ್ ಅಲಿ ಅವರನ್ನು ಕಣಕ್ಕಿಳಿಸಿದೆ. ಅವರು ಎಸ್‌ಪಿ ಅಭ್ಯರ್ಥಿಯ ಮತಗಳನ್ನು ಸೆಳೆಯುವ ಸಾಧ್ಯತೆಯಿದೆ. ರಾಮಪುರ ಕ್ಷೇತ್ರವು ಎಸ್‌ಪಿ ಮುಖಂಡ, ಈಗ ಜೈಲಿನಲ್ಲಿರುವ ಆಜಂ ಖಾನ್ ಅವರ ಭದ್ರಕೋಟೆ. ಸಮಾಜವಾದಿ ಪಕ್ಷವು ಈ ಬಾರಿ ಆಜಂ ಅವರ ಕುಟುಂಬದ ಸದಸ್ಯರನ್ನೇ ಕಣಕ್ಕಿಳಿಸಲು ಚಿಂತನೆ ನಡೆಸಿದೆ.

ಬಿಎಸ್‌ಪಿಯು ಸಂಭಲ್, ಮೊರಾದಾಬಾದ್, ಪಿಲಿಭಿತ್, ಆವ್ಲಾ ಮತ್ತು ಸಹಾರನ್‌ಪುರ ಕ್ಷೇತ್ರಗಳಲ್ಲೂ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮಾಯಾವತಿ ಅವರು ಮುಸ್ಲಿಂ ಮತ್ತು ದಲಿತರ ಮತಗಳನ್ನು ಸೆಳೆಯುವ ಲೆಕ್ಕಾಚಾರದೊಂದಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ಸ್ಪಷ್ಟ.

ರಾಜ್ಯದ ಪಶ್ಚಿಮ ಭಾಗದ ಇನ್ನು ಕೆಲವು ಕ್ಷೇತ್ರಗಳಲ್ಲಿ ಜಾಟ್ ಮತ್ತು ಗುರ್ಜರ್ ಸಮುದಾಯದ ಅಭ್ಯರ್ಥಿಗಳಿಗೆ ಮಣೆ ಹಾಕಿರುವುದು, ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಹಾದಿಯನ್ನು ಕಠಿಣಗೊಳಿಸಬಹುದು ಎಂದು ವಿಶ್ಲೇಷಿಸಲಾಗಿದೆ. ಮುಜಫ್ಫರ್‌ನಗರ (ದಾರಾ ಸಿಂಗ್), ಮೀರತ್ (ದೇವವ್ರತ್ ತ್ಯಾಗಿ), ಬಾಗ್ಪತ್ (ಪ್ರವೀಣ್ ಬನ್ಸಲ್) ಮತ್ತು ಬುದ್ಧನಗರ (ರಾಜೇಂದ್ರ ಸಿಂಗ್ ಸೋಲಂಕಿ) ಕ್ಷೇತ್ರಗಳ ಬಿಎಸ್‌ಪಿ ಅಭ್ಯರ್ಥಿಗಳು, ಬಿಜೆಪಿ ಮತಗಳನ್ನು ಸೆಳೆಯುವ ಸಾಧ್ಯತೆಯಿದೆ.

ಬಣ್ಣದ ಹಬ್ಬ

ಸಂಭ್ರಮ

ವಾರಾಣಸಿಯಲ್ಲಿ ಹೋಳಿ ಆಚರಣೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಮುಖವಾಡಗಳನ್ನು ಜನರು ಧರಿಸಿದ್ದರು -ಎಎಫ್‌ಪಿ ಚಿತ್ರ

ಕಾಂಗ್ರೆಸ್ 6ನೇ ಪಟ್ಟಿ ಬಿಡುಗಡೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಸೋಮವಾರ ಆರನೇ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಐದು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಇತ್ತೀಚೆಗೆ ಕಾಂಗ್ರೆಸ್ ಪಕ್ಷ ಸೇರಿದ್ದ ಪ್ರಹ್ಲಾದ್ ಗುಂಜಲ್ ಅವರನ್ನು ಕೋಟಾ ಕ್ಷೇತ್ರದಿಂದ ಕಣಕ್ಕಿಳಿಸುವ ಮೂಲಕ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಅಭ್ಯರ್ಥಿಯನ್ನಾಗಿಸಿದೆ. ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರಿಗೆ ಆಪ್ತರಾಗಿದ್ದ ಪ್ರಹ್ಲಾದ್, ಕೋಟಾ ಉತ್ತರ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿದ್ದರು.

ಅಜ್ಮೀರ್‌ನಿಂದ ರಾಮಚಂದ್ರ ಚೌಧರಿ, ರಾಜ್‌ಸಮಂದ್‌ನಿಂದ ಸುದರ್ಶನ್‌ರಾವತ್, ಭಿಲ್ವಾರಾದಿಂದ ದಾಮೋದರ್ ಗುರ್ಜರ್, ತಿರುನೆಲ್ವೇಲಿಯಿಂದ ಸಿ.ರಾಬರ್ಟ್ ಬ್ರೂಸ್ ಅವರನ್ನು ಕಾಂಗ್ರೆಸ್ ಉಮೇದುವಾರರನ್ನಾಗಿ ಮಾಡಿದೆ. ಇದರೊಂದಿಗೆ ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್ ಒಟ್ಟು 190 ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ.

'ಸಮೀಕ್ಷೆ ಮೂಲಕ ಬಿಜೆಪಿ ಆಮಿಷ'

ಚೆನ್ನೈ (ಪಿಟಿಐ): ಬಿಜೆಪಿಯು ತನ್ನ ವೆಬ್‌ಸೈಟ್‌ನಲ್ಲಿ ಲೋಕಸಭಾ ಚುನಾವಣೆಯ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವವರಿಗೆ ಬೋನಸ್, ಉಡುಗೊರೆ ನೀಡುವ ಮೂಲಕ ಮತದಾರರಿಗೆ ಆಮಿಷವೊಡ್ಡುತ್ತಿದೆ ಎಂದು ಆಡಳಿತಾರೂಢ ಡಿಎಂಕೆ ಆರೋಪಿಸಿದ್ದು, ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

'ರಾಷ್ಟ್ರೀಯ ಪಕ್ಷದ ಚುನಾವಣಾ ಬೋನಸ್ ನೀಡುವ ಪ್ರಚಾರವು ಮತದಾರರನ್ನು ಪ್ರಚೋದಿಸುತ್ತಿದ್ದು, ಅದು ಬಿಜೆಪಿ ಪರವಾಗಿ ಮತ ಚಲಾಯಿಸಲು ಮತದಾರರಿಗೆ ನೇರವಾಗಿ ಹಣ ನೀಡುವುದಕ್ಕಿಂತ ಕಡಿಮೆ ಏನಲ್ಲ' ಎಂದು ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್.ಭಾರತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪಿಲಿಭಿತ್ ಲೋಕಸಭಾ ಕ್ಷೇತ್ರದ ಟಿಕೆಟ್ ನಿರಾಕರಿಸಿದ ಬಿಜೆಪಿ

ವರುಣ್ ಗಾಂಧಿ ಮುಂದಿನ ನಡೆ ಏನು?

• ಸಂಜಯ್ ಪಾಂಡೆ

ಬಿಜೆಪಿ ಹೈಕಮಾಂಡ್ ನಿರ್ಧಾರವನ್ನು ಒಪ್ಪಿಕೊಂಡು ವರುಣ್ ಗಾಂಧಿ ಸುಮ್ಮನೇ ಕೂರುವರೇ ಅಥವಾ ಬೇರೊಂದು ಮಾರ್ಗದಲ್ಲಿ ಲೋಕಸಭಾ ಚುನಾವಣೆಯ ಕಣಕ್ಕೆ ಧುಮುಕುವರೇ ಎನ್ನುವುದು ಮುಂದಿನ ದಿನಗಳಲ್ಲಿ ತಿಳಿಯಲಿದೆ

ಲಖನೌ: ಉತ್ತರ ಪ್ರದೇಶದ ಪಿಲಿಭಿತ್ ಲೋಕಸಭಾ ಕ್ಷೇತ್ರದಿಂದ ವರುಣ್ ಗಾಂಧಿಗೆ ಬಿಜೆಪಿಯು ಟಿಕೆಟ್ ನಿರಾಕರಿಸಿದೆ. ಇದು ಅವರ ಮುಂದಿನ ರಾಜಕೀಯ ನಡೆ ಏನು ಎನ್ನುವ ಪ್ರಶ್ನೆ ಹುಟ್ಟುಹಾಕಿದೆ.

ಸಮಯ ಸಿಕ್ಕಾಗಲೆಲ್ಲ ತಮ್ಮದೇ ಪಕ್ಷದ ವಿರುದ್ಧ ಟೀಕೆ ಮಾಡುತ್ತಿದ್ದ ವರುಣ್ ಗಾಂಧಿ ವಿಚಾರದಲ್ಲಿ ಇದು ನಿರೀಕ್ಷಿತವೇ ಆಗಿತ್ತು. ಕೆಲವು ದಿನಗಳ ಹಿಂದೆ ತನ್ನ ಬೆಂಬಲಿಗನೊಬ್ಬನ ಮೂಲಕ ವರುಣ್ ನಾಲ್ಕು ಪ್ರತಿ ನಾಮಪತ್ರಗಳನ್ನು ತರಿಸಿಕೊಂಡಿದ್ದರು. ಅದು ಅವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಬಹುದೆನ್ನುವ ಊಹಾಪೋಹಕ್ಕೆ ಕಾರಣವಾಗಿತ್ತು.

ಚುನಾವಣಾ ಆಯೋಗವು ಮತದಾನದ ದಿನಾಂಕ ಘೋಷಣೆ ಮಾಡಿದಂದಿನಿಂದಲೂ, ಎರಡು ಅವಧಿಯ (2009, 2019) ಬಿಜೆಪಿ ಸಂಸದ ವರುಣ್ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ.

ವರುಣ್ ತಮ್ಮನ್ನು ಸಂಪರ್ಕಿಸಿದರೆ ಅವರಿಗೆ ಸಮಾಜವಾದಿ ಪಕ್ಷದಿಂದ ಪಿಲಿಭಿತ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ನೀಡಲು ಸಿದ್ಧ ಎನ್ನುವ ಸೂಚನೆಯನ್ನು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ನೀಡಿದ್ದರು. ಮರುದಿನವೇ ಪಿಲಿಭಿತ್ ಕ್ಷೇತ್ರಕ್ಕೆ ಎಸ್‌ಪಿ ಅಭ್ಯರ್ಥಿಯಾಗಿ ಭಾಗವತ್ ಶರಣ್ ಗಂಗವಾರ್ ಅವರ ಹೆಸರನ್ನು ಘೋಷಣೆ ಮಾಡಲಾಯಿತು.

ರಾಹುಲ್ ವಯನಾಡ್‌ನಿಂದ ಮಾತ್ರ ಸ್ಪರ್ಧಿಸಿದರೆ ನೆಹರೂ ಮನೆತನದವರೇ ಆದ ವರುಣ್ ಗಾಂಧಿ ಅವರನ್ನು ಅಮೇಠಿಯಿಂದ ಕಣಕ್ಕಿಳಿಸಬೇಕು ಎಂದು ಕಾಂಗ್ರೆಸ್‌ನ ಸ್ಥಳೀಯ ಮುಖಂಡರು ಒತ್ತಾಯಿಸಿದ್ದರು. ಆದರೆ, ವರುಣ್ ತಾಯಿ ಮತ್ತು ಮಾಜಿ ಕೇಂದ್ರ ಸಚಿವೆ ಮೇನಕಾ ಗಾಂಧಿ ಅವರನ್ನು ಸುಲ್ತಾನ್‌ಪುರ ಕ್ಷೇತ್ರದಿಂದ ಬಿಜೆಪಿಯು ಕಣಕ್ಕಿಳಿಸುವ ಮೂಲಕ ಈ ಎಲ್ಲ ಊಹಾಪೋಹಗಳಿಗೂ ತೆರೆ ಎಳೆದಿದೆ.

'ವರುಣ್ ಗಾಂಧಿ ತಮ್ಮ ಮನಸ್ಸಿನಲ್ಲಿರುವುದನ್ನು ನೇರವಾಗಿ ಹೇಳುವ ವ್ಯಕ್ತಿ. ತಮ್ಮದೇ ಪಕ್ಷದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಬಹಿರಂಗವಾಗಿ ಟೀಕಿಸುವವರು. ಅವರ ನಡೆಯನ್ನು ಊಹಿಸುವುದು ಕಷ್ಟ' ಎಂದು ಲಖನೌ ಮೂಲದ ರಾಜಕೀಯ ವಿಶ್ಲೇಷಕರೊಬ್ಬರು 'ಪ್ರಜಾವಾಣಿ'ಗೆ ಹೇಳಿದರು. ವರುಣ್ ಅವರ ಸದ್ಯದ ಸ್ಥಿತಿಗೆ ಅವರೇ ಕಾರಣ ಎನ್ನುವುದು ಉತ್ತರ ಪ್ರದೇಶದ ಬಿಜೆಪಿ ಮುಖಂಡರೊಬ್ಬರ ಅಭಿಪ್ರಾಯ.

ವರುಣ್ ಅವರ ಮಾತು ಹೇಗಿರುತ್ತದೆ ಎಂಬುದಕ್ಕೆ ಬಿಜೆಪಿ ಮುಖಂಡರು ಒಂದು ಘಟನೆಯನ್ನು ಉದಾಹರಿಸುತ್ತಾರೆ. ಒಮ್ಮೆ ಪಿಲಿಭಿತ್‌ನ ಸಾರ್ವಜನಿಕ ಸಮಾರಂಭವೊಂದರಲ್ಲಿ ವರುಣ್ ಗಾಂಧಿ ಭಾಷಣ ಮಾಡುತ್ತಿದ್ದರು. ಆಗ, ವೇದಿಕೆಯ ಮೇಲಿದ್ದ ಸಾಧುವೊಬ್ಬರ ಮೊಬೈಲ್ ರಿಂಗ್ ಆಯಿತು. ಕರೆ ಸ್ವೀಕರಿಸುವುದೋ ಬೇಡವೋ ಎನ್ನುವ ಗೊಂದಲದಿಂದ ಸಾಧು ಚಡಪಡಿಸತೊಡಗಿದರು. ಆಗ ಅವರ ಕಡೆಗೆ ತಿರುಗಿದ ವರುಣ್, 'ಕರೆ ತಿರಸ್ಕರಿಸಬೇಡಿ. ಯಾರಿಗೆ ಗೊತ್ತು ಸಾಧು ಒಂದು ದಿನ ರಾಜ್ಯದ ಮುಖ್ಯಮಂತ್ರಿ ಆಗಬಹುದು. ಆಗ ನನ್ನ ಕಥೆ ಏನು?' ಎಂದು ಪ್ರತಿಕ್ರಿಯಿಸಿದ್ದರು. ಆ ಮೂಲಕ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ವ್ಯಂಗ್ಯ ಮಾಡಿದ್ದರು.

ಭಾರತವು ಸದ್ಯದಲ್ಲಿಯೇ ಐದು ಟ್ರಿಲಿಯನ್ ಆರ್ಥಿಕತೆಯ ದೇಶವಾಗುತ್ತದೆ ಎಂಬ ಪ್ರಧಾನಿ ನರೇಂದ್ರ ಮೋದಿ ಹೇಳಿಕೆಯ ಬಗ್ಗೆಯೂ ವರುಣ್ ಅಣಕ ಮಾಡಿದ್ದರು. 2022ರಲ್ಲಿ ನಡೆದಿದ್ದ ರೈತರ ಪ್ರತಿಭಟನೆಗೆ ಬೆಂಬಲ ನೀಡಿದ್ದ ವರುಣ್, ಉತ್ತರ ಪ್ರದೇಶ ಸರ್ಕಾರವು ಅಬಕಾರಿಯಿಂದ ಹೆಚ್ಚಿನ ಆದಾಯ ಗಳಿಸಿದ್ದರ ಬಗೆಗಿನ ಪ್ರಚಾರವನ್ನೂ ಟೀಕಿಸಿದ್ದರು.

ಚುಟುಕು

ಸಂದೇಶ್‌ಖಾಲಿ: ಬಿಜೆಪಿ ಅಭ್ಯರ್ಥಿ ವಿರುದ್ಧ ಪೋಸ್ಟರ್ ಸಮರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಬಿಜೆಪಿ ಕಣಕ್ಕಿಳಿಸಿರುವುದನ್ನು ವಿರೋಧಿಸಿ ವಿವಿಧೆಡೆ ಕೈಬರಹದ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ.

ಟಿಎಂಸಿಯಿಂದ ಅಮಾನತುಗೊಂಡಿರುವ ಮುಖಂಡ ಶಾಜಹಾನ್ ಶೇಖ್ ಮತ್ತು ಬೆಂಬಲಿಗರು ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪ ಮಾಡಿದ್ದ ರೇಖಾ ಪಾತ್ರಾ ಎಂಬುವವರನ್ನು ಬಿಜೆಪಿಯು ಬಸಿರ್‌ಹಾಟ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಘೋಷಿಸಿತ್ತು. ಸಂದೇಶ್‌ಖಾಲಿ ಕೂಡ ಈ ಕ್ಷೇತ್ರಕ್ಕೆ ಸೇರಿದೆ.

'ರೇಖಾ ಅವರು ಅಭ್ಯರ್ಥಿಯಾಗುವುದನ್ನು ನಾವು ಬಯಸುವುದಿಲ್ಲ' ಎಂಬ ಘೋಷವಾಕ್ಯವಿರುವ ಪೋಸ್ಟರ್‌ಗಳು ಕ್ಷೇತ್ರದ ವಿವಿಧೆಡೆ ಕಂಡುಬಂದಿವೆ.

ಫ್ಲೆಕ್ಸ್‌ನಲ್ಲಿ ದೇವರ ಚಿತ್ರ ಬಳಕೆ ವಿ.ಮುರಳೀಧರನ್ ವಿರುದ್ಧ ದೂರು

ತಿರುವನಂತಪುರ (ಪಿಟಿಐ): ಬಿಜೆಪಿ ಮುಖಂಡ ಹಾಗೂ ಕೇಂದ್ರ ಸಚಿವ ವಿ.ಮುರಳೀಧರನ್ ಅವರು ಚುನಾವಣಾ ಪ್ರಚಾರದ ಫ್ಲೆಕ್ಸ್‌ನಲ್ಲಿ ದೇವರ ಚಿತ್ರವನ್ನು ಬಳಕೆ ಮಾಡಿದ್ದು, ಚುನಾವಣಾ ಆಯೋಗವು ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಡಳಿತಾರೂಢ ಸಿಪಿಎಂ ಸೋಮವಾರ ಆಗ್ರಹಿಸಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಮುರಳೀಧರನ್ ಅವರು ಜೊತೆಗಿರುವ ಫ್ಲೆಕ್ಸ್‌ನಲ್ಲಿ ವರ್ಕಲದ ಜನಾರ್ದನ ಸ್ವಾಮಿಯ ವಿಗ್ರಹದ ಚಿತ್ರವನ್ನು ಬಳಸಲಾಗಿದೆ ಎಂದು ಆರೋಪಿಸಿ ಸಿಪಿಎಂ ಮುಖ್ಯ ಚುನಾವಣಾ ಅಧಿಕಾರಿಗೆ ದೂರು ನೀಡಿದೆ. ಮುರಳೀಧರನ್ ಅವರು ಆಟ್ಟಿಂಗಲ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ಎಂಥಾ ಮಾತು!

ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಹಾಗೂ ಅವರನ್ನು ಒಪ್ಪಿಕೊಳ್ಳುವುದರಲ್ಲಿ ಒಡಿಶಾ ರಾಜ್ಯವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಹಲವು ಸಮೀಕ್ಷೆಗಳು ಇದನ್ನು ದೃಢಪಡಿಸಿವೆ. ಕಳೆದ 10 ವರ್ಷಗಳಲ್ಲಿ ಈ ರಾಜ್ಯಕ್ಕೆ ಕೇಂದ್ರ ಸರ್ಕಾರವು ₹18 ಲಕ್ಷ ಕೋಟಿ ಅನುದಾನ ಮಂಜೂರು ಮಾಡಿದೆ. ಈ ಬಾರಿ ಬಿಜೆಪಿಯು ಇಲ್ಲಿ 15ರಿಂದ 18 ಸ್ಥಾನಗಳಲ್ಲಿ ಗೆಲ್ಲುವ ವಿಶ್ವಾಸವಿದೆ

ಧರ್ಮೇಂದ್ರ ಪ್ರಧಾನ್, ಕೇಂದ್ರ ಸಚಿವ

ನನ್ನ ವಿಶ್ವಾಸಾರ್ಹತೆ ಬಗ್ಗೆ ನನಗೆ ಖಚಿತತೆಯಿಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ವಿಶ್ವಾಸಾರ್ಹತೆಗೆ ಸಾಟಿಯೇ ಇಲ್ಲ. ಸಾಮಾನ್ಯ ಜನರು, ಬಡವರು ಮತ್ತು ರೈತರ ನಡುವೆ ಮೋದಿ ಅವರ ವಿಶ್ವಾಸಾರ್ಹತೆ ಉನ್ನತ ಮಟ್ಟದಲ್ಲಿದೆ. ಅವರಿಂದಾಗಿ ಬಿಹಾರದಲ್ಲಿ ಬೇಗುಸರಾಯ್ ಒಳಗೊಂಡಂತೆ 40 ಲೋಕಸಭಾ ಕ್ಷೇತ್ರಗಳಲ್ಲೂ ಎನ್‌ಡಿಎ ಜಯ ಸಾಧಿಸಲಿದೆ. ಯುಪಿಎ ಅವಧಿಯಲ್ಲಿ ಬೇಗುಸರಾಯ್ ಕ್ಷೇತ್ರವನ್ನು ಕಡೆಗಣಿಸಲಾಗಿತ್ತು.

ಗಿರಿರಾಜ್ ಸಿಂಗ್, ಕೇಂದ್ರ ಸಚಿವ

ಕ್ಷೇತ್ರ ಮಹಾತ್ಮೆ

ಗೋಡಂಬಿ ಉದ್ಯಮಕ್ಕೆ ಹೆಸರುವಾಸಿಯಾಗಿರುವ ಕೇರಳದ ಕೊಲ್ಲಂ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ಏರುತ್ತಿದ್ದು, ಎಲ್‌ಡಿಎಫ್ ಮತ್ತು ರೆವೆಲ್ಯುಷನರಿ ಸೋಷಿಯಲಿಸ್ಟ್ ಪಕ್ಷದ (ಆರ್‌ಎಸ್‌ಪಿ) ಅಭ್ಯರ್ಥಿಗಳ ನಡುವಣ ನೇರ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ.
ಈ ಕ್ಷೇತ್ರದಿಂದ ನಾಲ್ಕು ಬಾರಿ ಸಂಸದರಾಗಿ ಗೆದ್ದು ಬೀಗುತ್ತಿರುವ ಆರ್‌ಎಸ್‌ಪಿ ನಾಯಕ ಎನ್.ಕೆ. ಪ್ರೇಮಚಂದ್ರನ್ ಈ ಬಾರಿಯೂ ಕಣಕ್ಕಿಳಿದಿದ್ದಾರೆ. ಇವರ ಗೆಲುವಿನ ಓಟಕ್ಕೆ ಕಡಿವಾಣ ಹಾಕಲು ಆಡಳಿತಾರೂಢ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟವು ಸದ್ಯ ಶಾಸಕರಾಗಿರುವ, ಸಿನಿಮಾ ನಟ ಮುಕೇಶ್ ಅವರನ್ನು ಅಖಾಡಕ್ಕಿಳಿಸಿದೆ. ಆರ್‌ಎಸ್‌ಪಿಯು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿ ಕೂಟದ ಜೊತೆಗಿದೆ. ಈ ಬಾರಿ ರಾಜ್ಯದ ಕೆಲವು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತೇವೆಂಬ ವಿಶ್ವಾಸದಲ್ಲಿರುವ ಬಿಜೆಪಿಯು ಸಿನಿಮಾ ನಟ ಜಿ. ಕೃಷ್ಣಕುಮಾರ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದೆ. ಕೊಲ್ಲಂ ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಎಂನಿಂದ ಗೆದ್ದು ಶಾಸಕರಾಗಿರುವ ಮುಕೇಶ್ ಅವರು ಕ್ಷೇತ್ರದಲ್ಲಿ ಪ್ರಭಾವಿಯಾಗಿರುವುದರಿಂದ ಈ ಬಾರಿ ಗೆದ್ದೇ ಗೆಲ್ಲುತ್ತಾರೆಂಬ ನಂಬಿಕೆ ಎಲ್‌ಡಿಎಫ್‌ಗಿದೆ. ಇದು ಹಿಂದೂ ಪ್ರಾಬಲ್ಯವಿರುವ ಕ್ಷೇತ್ರವಾಗಿರುವುದರಿಂದ ಕೃಷ್ಣಕುಮಾರ್ ಕೂಡ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯು ಮೂರನೇ ಸ್ಥಾನ ಗಳಿಸಿತ್ತು. ಪ್ರೇಮಚಂದ್ರನ್ ಅವರು 4,99,677 ಮತಗಳನ್ನು ಪಡೆದು ಜಯಗಳಿಸಿದ್ದರು.

ಮುಖಾಮುಖಿ

ಬಹರಾಂಪುರ (ಪಶ್ಚಿಮ ಬಂಗಾಳ)

ಅಧೀರ್ ರಂಜನ್ ಚೌಧರಿ
ಕಾಂಗ್ರೆಸ್

ಪಶ್ಚಿಮ ಬಂಗಾಳದ ಬಹರಾಂಪುರ ಲೋಕಸಭಾ ಕ್ಷೇತ್ರವು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರ ಭದ್ರಕೋಟೆ. ಈ ಕ್ಷೇತ್ರದಿಂದ ಐದು ಸಲ ಸಂಸತ್‌ಗೆ ಆಯ್ಕೆಯಾಗಿರುವ ಅವರು, ಈ ಬಾರಿಯೂ ಸುಲಭ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. 1999ರಲ್ಲಿ ಮೊದಲ ಬಾರಿ ಅವರು ಇಲ್ಲಿಂದ ಗೆದ್ದಿದ್ದರು. 67 ವರ್ಷದ ಚೌಧರಿ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೂ ಹೌದು. ರಾಜ್ಯದ ಪ್ರಭಾವಿ ಕಾಂಗ್ರೆಸ್ ನಾಯಕರಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. 2016ರಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗ ಮತ್ತು ಕಾಂಗ್ರೆಸ್ ನಡುವೆ ಮೈತ್ರಿ ರಚನೆಯಾಗುವಲ್ಲಿ ಇವರು ಮುಖ್ಯ ರೂವಾರಿಯಾಗಿದ್ದರು. ಇವರು ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಕಟು ಟೀಕಾಕಾರರೂ ಹೌದು. 2019ರ ಚುನಾವಣೆಯಲ್ಲಿ ಅವರು ಟಿಎಂಸಿ ಅಭ್ಯರ್ಥಿಯ ವಿರುದ್ಧ 80,000 ಮತಗಳ ಅಂತರದಿಂದ ಗೆದ್ದಿದ್ದರು.

V/S

ಯೂಸುಫ್ ಪಠಾಣ್
ತೃಣಮೂಲ ಕಾಂಗ್ರೆಸ್

ಬಹರಾಂಪುರ ಕ್ಷೇತ್ರದಲ್ಲಿ ಅಧೀರ್ ರಂಜನ್ ಚೌಧರಿ ಅವರಂತಹ ಪ್ರಬಲ ಅಭ್ಯರ್ಥಿಯನ್ನು ಮಣಿಸಲು ಟಿಎಂಸಿ, ಈ ಬಾರಿ ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಅವರನ್ನು ಅಖಾಡಕ್ಕಿಳಿಸಿದೆ. ಟಿಎಂಸಿ ಅಭ್ಯರ್ಥಿಯಾಗಿ 41ವರ್ಷದ ಯೂಸುಫ್ ಅವರ ಹೆಸರನ್ನು ಘೋಷಿಸಿದ ಕೂಡಲೇ ಪ್ರತಿಸ್ಪರ್ಧಿಗಳು ಅವರಿಗೆ ಹೊರಗಿನವರೆಂಬ ಹಣೆಪಟ್ಟಿ ನೀಡಿದ್ದಾರೆ. ಗುಜರಾತ್‌ನ ವಡೋದರದ ಯೂಸುಫ್, 2021ರಲ್ಲಿ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಯೂಸುಫ್ ಅವರಿಗೆ ಪಕ್ಷದಿಂದ ಟಿಕೆಟ್ ನೀಡಿದ್ದಕ್ಕೆ ಟಿಎಂಸಿಯ ಕೆಲವು ನಾಯಕರು ಆರಂಭದಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಮುಸ್ಲಿಂ ಮತಗಳನ್ನು ವಿಭಜಿಸುವ ಉದ್ದೇಶದಿಂದ ಯೂಸುಫ್ ಅವರನ್ನು ಕಣಕ್ಕಿಳಿಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ರಾಜಕೀಯದಲ್ಲಿ ಅನನುಭವಿಯಾಗಿರುವ ಯೂಸುಫ್ ಅವರು ಅನುಭವಿ ರಾಜಕಾರಣಿ ಚೌಧರಿ ಅವರನ್ನು ಮಣಿಸುತ್ತಾರೋ ಎಂಬುದನ್ನು ಕಾದು ನೋಡಬೇಕಿದೆ.

ಅನಿವಾಸಿ ಭಾರತೀಯರಿಗೆ ಪೂರೈಸುವ ಗುರಿ

ಅಮೆರಿಕದಲ್ಲಿ ಅಮೂಲ್ ತಾಜಾ ಹಾಲು ಮಾರಾಟ

ನವದೆಹಲಿ (ಪಿಟಿಐ): ದೇಶದ ಅಮೂಲ್ ತಾಜಾ ಹಾಲು ಮೊದಲ ಬಾರಿಗೆ ಭಾರತದ ಹೊರಗಡೆ ಲಭ್ಯವಾಗಲಿದೆ.

ಅಮೆರಿಕದ ಮಾರುಕಟ್ಟೆಯಲ್ಲಿ ಒಂದು ವಾರದೊಳಗೆ ಅಮೂಲ್ ತಾಜಾ ಹಾಲು ದೊರೆಯಲಿದೆ. ಗುಜರಾತ್ ಸಹಕಾರಿ ಹಾಲು ಮಾರಾಟ ಮಹಾಮಂಡಳ (ಜಿಸಿಎಂಎಂಎಫ್) ನಾಲ್ಕು ಮಾದರಿಯ ಹಾಲಿನ ಮಾರಾಟ ಆರಂಭಿಸಲಿದೆ. ಇದಕ್ಕಾಗಿ ಜಿಸಿಎಂಎಂಎಫ್, ಮಿಷಿಗನ್ ಹಾಲು ಉತ್ಪಾದಕರ ಸಂಘದೊಂದಿಗೆ (ಎಂಎಂಪಿಎ) ಒಪ್ಪಂದ ಮಾಡಿಕೊಂಡಿದೆ. ಹಾಲಿನ ಸಂಗ್ರಹಣೆ ಮತ್ತು ಸಂಸ್ಕರಣೆ ಎಂಎಂಪಿಎ ಮಾಡಲಿದ್ದು, ಜಿಸಿಎಂಎಂಎಫ್ ಹಾಲಿನ ಮಾರುಕಟ್ಟೆ ನಿರ್ವಹಣೆ ಮತ್ತು ಪ್ರಚಾರ ಮಾಡಲಿದೆ.

‘ಹಲವಾರು ದಶಕಗಳಿಂದ ಡೇರಿ ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದೇವೆ. ಆದರೆ ಮೊದಲ ಬಾರಿಗೆ ಭಾರತದ ಹೊರಗಡೆ ತಾಜಾ ಹಾಲಿನ ಮಾರಾಟ ಇದಾಗಿದೆ’ ಎಂದು ಜಿಸಿಎಂಎಂಎಫ್ ವ್ಯವಸ್ಥಾಪಕ ನಿರ್ದೇಶಕ ಜಯೆನ್ ಮೆಹ್ತಾ ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಅಮೂಲ್ ತಾಜಾ, ಅಮೂಲ್ ಗೋಲ್ಡ್, ಅಮೂಲ್ ಶಕ್ತಿ ಮತ್ತು ಅಮೂಲ್ ಸ್ಲಿಮ್ ಎನ್ ಟ್ರಿಂ ಬಗೆಯ ಹಾಲು, ನ್ಯೂಯಾರ್ಕ್, ನ್ಯೂಜೆರ್ಸಿ, ಷಿಕಾಗೊ, ವಾಷಿಂಗ್ಟನ್, ಡಲ್ಲಾಸ್ ಮತ್ತು ಟೆಕ್ಸಾಸ್ ಸೇರಿದಂತೆ ವಿವಿಧ ನಗರದ ಮಾರುಕಟ್ಟೆಯಲ್ಲಿ ದೊರೆಯಲಿವೆ ಎಂದು ಮೆಹ್ತಾ ತಿಳಿಸಿದ್ದಾರೆ.

‘ಅನಿವಾಸಿ ಭಾರತೀಯರು (ಎನ್‌ಆರ್‌ಐ) ಮತ್ತು ಏಷ್ಯಾದ ಜನರಿಗೆ ಉತ್ಪನ್ನಗಳನ್ನು ತಲುಪಿಸಲು ಗುರಿ ಹಾಕಿಕೊಂಡಿದ್ದೇವೆ. ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಹಾಲಿನ ಉತ್ಪನ್ನಗಳಾದ ಪನ್ನೀರು, ಮೊಸರು ಮತ್ತು ಮಜ್ಜಿಗೆಯ ಮಾರಾಟ ಸಹ ಆರಂಭಿಸಲಿದ್ದೇವೆ’ ಎಂದರು.

2022–23ರ ಹಣಕಾಸು ವರ್ಷದಲ್ಲಿ ಜಿಸಿಎಂಎಂಎಫ್ ವಹಿವಾಟು ₹55 ಸಾವಿರ ಕೋಟಿಯಷ್ಟಿತ್ತು. ಇದು ಹಿಂದಿನ ಇದೇ ಅವಧಿಗೆ ಹೋಲಿಸಿದರೆ ಶೇ 18.5ರಷ್ಟು ಏರಿಕೆ ಆಗಿದೆ ಎಂದು ತಿಳಿಸಿದರು. ಜಿಸಿಎಂಎಂಎಫ್ ಈಗಾಗಲೇ 50 ರಾಷ್ಟ್ರಗಳಿಗೆ ಡೇರಿ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹14000
ಎಸಿ	₹8065
ಆರ್‌ಪಿ	₹14200
ಆರ್‌ಸಿ	₹8775

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹200-448
ದ್ವಿತಳಿ (ಬಿ.ವಿ)	₹300-567

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಬೆಂಗಳೂರು	₹10800-11200
ಕೆ.ಆರ್.ಪೇಟೆ	₹9100-9100
ಪುತ್ತೂರು	₹5500-8600
ತಿಪಟೂರು	₹7000-9200
ತುರುವೇಕೆರೆ	₹8600-9000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹178.50
ಆರ್‌ಎಸ್‌ಎಸ್-5	₹171.50
ಗುಡ್ ಲಾಟ್	₹161.50

ಉತ್ಪನ್ನ ಖರೀದಿಸಿದ ದಿನವೇ ಹಣ ಪಾವತಿಸಲು ವರ್ತಕರ ಸಂಘ ಒಪ್ಪಿಗೆ

ಬಳ್ಳಾರಿ ಎಪಿಎಂಸಿ: ಇಂದಿನಿಂದ ವಹಿವಾಟು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ಮಂಗಳವಾರದಿಂದ ಪೂರ್ಣ ಪ್ರಮಾಣದ ವಹಿವಾಟು ಆರಂಭವಾಗಲಿದೆ. ದಲ್ಲಾಳಿ ಸಂಘ, ವರ್ತಕರ ಸಂಘ ಮತ್ತು ಎಪಿಎಂಸಿ ಕಾರ್ಯದರ್ಶಿ ಮಧ್ಯಸ್ಥಿಕೆಯಲ್ಲಿ ಸೋಮವಾರ ಎಪಿಎಂಸಿ ಆವರಣದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ವರ್ತಕರೊಬ್ಬರು ದಲ್ಲಾಳಿಗಳ ಮೂಲಕ ರೈತರಿಂದ ₹3 ಕೋಟಿ ಮೌಲ್ಯದ ಶೇಂಗಾ ಖರೀದಿಸಿ, ಹಣ ಪಾವತಿಸದೇ ತಲೆ ಮರೆಸಿಕೊಂಡ ಕಾರಣ ದಲ್ಲಾಳಿಗಳ ಸಂಘವು ಮಾರ್ಚ್ 20ರಿಂದ ಎಪಿಎಂಸಿಯಲ್ಲಿ ವಹಿವಾಟು ಸ್ಥಗಿತಗೊಳಿಸಿತ್ತು. ಮೂರು ತಿಂಗಳಿನಿಂದ ವರ್ತಕರು ಬಾಕಿ ಉಳಿಸಿಕೊಂಡಿರುವ ₹8 ಕೋಟಿ ಹಣ ಪಾವತಿಸಲು ಆಗ್ರಹಿಸಿತ್ತು.

‘ವರ್ತಕರು ಹಣ ಬಾಕಿ ಉಳಿಸಿಕೊಂಡಿದ್ದು, ಪಾವತಿಗೂ ವಿಳಂಬ ಮಾಡುತ್ತಾರೆ. ಇದರಿಂದ ರೈತರಿಗೆ ಹಣ ಪಾವತಿಸಲು ತೊಂದರೆಯಾಗುತ್ತಿದೆ. ಉತ್ಪನ್ನ ಖರೀದಿಸಿದ ದಿನವೇ ಹಣ ಪಾವತಿಸಬೇಕು’ ಎಂದು ದಲ್ಲಾಳಿಗಳ ಸಂಘದ ಮುಖಂಡರು ಒತ್ತಾಯಿಸಿದರು. ಇದಕ್ಕೆ ವರ್ತಕರ ಸಂಘದ ಮುಖಂಡರು ಒಪ್ಪಿದರು.

‘ಶೇಂಗಾ ಖರೀದಿಸಿ, ಹಣ ಪಾವತಿಸದೇ ತಲೆಮರೆಸಿಕೊಂಡಿರುವ ವರ್ತಕ ಸೀನಪ್ಪ ಮತ್ತು ಮುಂದೆ ನಿಂತು ಶೇಂಗಾ ಕೊಡಿಸಿದ ಗೋವಿಂದಪ್ಪ ಎಂಬುಬವರಿಗೆ ಸಂಬಂಧಿಸಿದ ಕಂಪನಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಂಡು ದಲ್ಲಾಳಿಗಳಿಗೆ ಹಣ ಸಂದಾಯ ಮಾಡಬೇಕು’ ಎಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಇದಕ್ಕೆ ವರ್ತಕರು, ದಲ್ಲಾಳಿಗಳು ಸಮ್ಮತಿಸಿದರು.

‘ಹಲವು ವರ್ತಕರು ಹಣ ಬಾಕಿ ಉಳಿಸಿಕೊಂಡಿದ್ದು, ಅವರ ಕಂಪನಿಗಳಿಗೆ ಸಂಬಂಧಿಸಿದ ಆಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಎಪಿಎಂಸಿ ಕಾರ್ಯದರ್ಶಿಗೆ ದೂರು ನೀಡಲಾಗಿದೆ’ ಎಂದು ದಲ್ಲಾಳಿಗಳ ಸಂಘದ ಮುಖಂಡ ಗುರುಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

ದಲ್ಲಾಳಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ, ವರ್ತಕರ ಸಂಘದ ಅಧ್ಯಕ್ಷ ರಮೇಶ್, ವರ್ತಕರ ಸಂಘದ ಮುಖಂಡ ಪಾಲಣ್ಣ ಸಭೆಯಲ್ಲಿ ಭಾಗವಹಿಸಿದ್ದರು.

ಬಳ್ಳಾರಿ ಎಪಿಎಂಸಿ ಸಭಾಂಗಣದಲ್ಲಿ ಸೋಮವಾರ ದಲ್ಲಾಳಿ ಸಂಘ ಮತ್ತು ವರ್ತಕರ ಸಂಘದ ಪದಾಧಿಕಾರಿಗಳ ಸಭೆ ನಡೆಯಿತು

ಉತ್ಪನ್ನ ಖರೀದಿಸಿದ ದಿನವೇ ವರ್ತಕರು ದಲ್ಲಾಳಿಗಳಿಗೆ ಹಣ ಪಾವತಿಸಬೇಕು. ದಲ್ಲಾಳಿ ಅದೇ ದಿನ ರೈತನಿಗೆ ಹಣ ನೀಡಬೇಕು ಎಂದು ಸೂಚಿಸಲಾಗಿದೆ

ಎಂ. ನಂಜುಂಡ ಸ್ವಾಮಿ, ಕಾರ್ಯದರ್ಶಿ, ಎಪಿಎಂಸಿ

ಆರು ಮಸೂದೆಗಳಿಗೆ ಅಂಕಿತ

ಕೊನೆಗೂ ಸಹಿ ಹಾಕಿದ ರಾಜ್ಯಪಾಲ ಥಾವರಚಂದ್ ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡುವ ಮೊದಲೇ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆಗಳಿಗೆ ಅನುಮೋದನೆ ಪಡೆದು, ಅಂಕಿತಕ್ಕೆ ಸಲ್ಲಿಸುವ ರಾಜ್ಯ ಸರ್ಕಾರದ ನಡೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕಾರಣಕ್ಕೆ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ್ದ ನಾಲ್ಕು ಮತ್ತು ಬಜೆಟ್ ಅಧಿವೇಶನದಲ್ಲಿ ಮಂಡಿಸಿದ್ದ ಎರಡು ಸೇರಿ ಒಟ್ಟು ಆರು ಮಸೂದೆಗಳನ್ನು ರಾಜ್ಯಪಾಲರು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಇನ್ನು ಮುಂದೆ ಹೀಗಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ ಬಳಿಕ ಒಪ್ಪಿಗೆ ನೀಡಿದ್ದಾರೆ. ಅಲ್ಲದೆ, ಚುನಾವಣಾ ಆಯೋಗದಿಂದ ಅನುಮತಿ ಪಡೆದು ಗೆಜೆಟ್ ಹೊರಡಿಸುವಂತೆ ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಕರಡು ಮಸೂದೆಗಳನ್ನು ತುರ್ತು ವಿಷಯವೆಂಬ ಕಾರಣಕ್ಕೆ ಮುಖ್ಯಮಂತ್ರಿಯ ಒಪ್ಪಿಗೆ ಮೇಲೆ ಅಧಿವೇಶನದಲ್ಲಿ ಮಂಡಿಸಲಾಗಿತ್ತು. ಈ ರೀತಿ ಮಂಡಿಸಲು ‘ಕರ್ನಾಟಕ ಸರ್ಕಾರದ ವ್ಯವಹಾರ ನಿರ್ವಹಣೆಯ ನಿಯಮಗಳು– 1977’ರಲ್ಲಿ ಅವಕಾಶ ಇಲ್ಲ. ಈ ರೀತಿ ಮಾಡುವುದಾದರೆ ಈ ನಿಯಮಕ್ಕೆ ತಿದ್ದುಪಡಿ ತರಬೇಕು ಎಂದು ರಾಜ್ಯಪಾಲರು ಜ. 4 ಮತ್ತು ಮಾರ್ಚ್ 13ರಂದು ಬರೆದ ಪತ್ರದಲ್ಲಿ ಸಲಹೆ ನೀಡಿದ್ದರು.

ರಾಜ್ಯಪಾಲರ ಪತ್ರಕ್ಕೆ ಇದೇ 18ರಂದು ಮರು ಪತ್ರ ಬರೆದಿರುವ ಮುಖ್ಯಮಂತ್ರಿ, ‘ನಿಮ್ಮ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು. ನಿಯಮ ತಿದ್ದುಪಡಿಗೆ ಕ್ರಮ ತೆಗೆದು ಕೊಳ್ಳಲಾಗುತ್ತಿದೆ. ಈಗಾಗಲೇ ಸಲ್ಲಿಸಿರುವ ಮಸೂದೆಗಳಿಗೆ ಒಪ್ಪಿಗೆ ನೀಡಬೇಕು’ ಎಂದು ಮನವಿ ಮಾಡಿದ್ದರು.

ಯಾವೆಲ್ಲ ಮಸೂದೆಗಳಿಗೆ ಅಂಕಿತ?

- ‘ಕರ್ನಾಟಕ ವಕೀಲರುಗಳ ಮೇಲಿನ ಹಿಂಸಾಚಾರ ನಿಷೇಧ ಮಸೂದೆ
- ಕರ್ನಾಟಕ ಹೈಕೋರ್ಟ್ (ತಿದ್ದುಪಡಿ) ಮಸೂದೆ
- ಕರ್ನಾಟಕ ಸಿವಿಲ್ ಕೋರ್ಟ್‌ಗಳ (ತಿದ್ದುಪಡಿ) ಮಸೂದೆ
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಎರಡನೇ ತಿದ್ದುಪಡಿ) ಮಸೂದೆ
- ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ಮಸೂದೆ
- ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-44000
ಚಿತ್ರದುರ್ಗ	
ಅಪಿ	46829-47269
ಬೆಟ್ಟೆ	33819-34299
ಕೆಂಪುಗೋಟು	28510-28989
ರಾಶಿ	46339-46799
ಶಿವಮೊಗ್ಗ	
ಬೆಟ್ಟೆ	46500-54400
ಗೊರಬಲು	26099-31859
ರಾಶಿ	29099-47709
ಸರಕು	77700-82610
ಶಿರಸಿ	
ಬೆಟ್ಟೆ	37989-42891
ಬಿಳಿಗೋಟು	23309-30270
ಚಾಲಿ	31699-35799
ಕೆಂಪುಗೋಟು	23696-31899
ರಾಶಿ	42608-47799

ತಿರುವನಂತಪುರದಿಂದ ಬೆಂಗಳೂರಿಗೆ 31ರಿಂದ ನಿತ್ಯ 10 ವಿಮಾನ ಸಂಚಾರ

ತಿರುವನಂತಪುರ (ಪಿಟಿಐ): ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೇಸಿಗೆ ಅವಧಿಯಲ್ಲಿ ಪ್ರತಿನಿತ್ಯ 10 ವಿಮಾನಗಳು ಸಂಚರಿಸಲಿವೆ.

ಹೊಸ ವೇಳಾಪಟ್ಟಿಯ ಪ್ರಕಾರ ಬೆಂಗಳೂರು, ನವದೆಹಲಿ ಮತ್ತು ಹೈದರಾಬಾದ್‌ಗೆ ಹೆಚ್ಚುವರಿ ವಿಮಾನ ಸೇವೆಗಳು ಲಭ್ಯವಾಗಲಿವೆ. ಅಬುಧಾಬಿ, ದಮ್ಮಾಮ್, ಕುವೈತ್, ಕ್ವಾಲಾಲಂಪುರಕ್ಕೂ ಹೆಚ್ಚುವರಿ ಸೇವೆಗಳನ್ನು ಹೊಸ ವೇಳಾಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಪಟ್ಟಿಯಲ್ಲಿ ಹೊಸದಾಗಿ ಮಾಲ್ದೀವ್ಸ್‌ನ ಹನಿಮಾಧು ಸೇರ್ಪಡೆಯಾಗಿದೆ. ಈ ಬೇಸಿಗೆ ವೇಳಾಪಟ್ಟಿ ಮಾರ್ಚ್ 31ರಿಂದ ಅಕ್ಟೋಬರ್ 24ರವರೆಗೆ ಇರಲಿದೆ.

ಚಳಿಗಾಲದ ವೇಳಾಪಟ್ಟಿಗಿಂತ ಬೇಸಿಗೆ ಅವಧಿಯಲ್ಲಿ ವಿಮಾನ ಕಾರ್ಯಾಚರಣೆ ಶೇ 17ರಷ್ಟು ಹೆಚ್ಚಿರಲಿದೆ. ಚಳಿಗಾಲದಲ್ಲಿ ಒಟ್ಟು 612 ವಿಮಾನಗಳು ಕಾರ್ಯಾಚರಣೆ ನಡೆಸಿದ್ದವು. ಅದು ಈಗ 716ಕ್ಕೇರಲಿದೆ ಎಂದು ತಿರುವಂತನಪುರ ವಿಮಾನ ನಿಲ್ದಾಣ ಪ್ರಾಧಿಕಾರವು ಸೋಮವಾರ ತಿಳಿಸಿದೆ.

ಅಂತರರಾಷ್ಟ್ರೀಯ ವಿಮಾನಗಳು ಚಳಿಗಾಲದಲ್ಲಿ ವಾರಕ್ಕೆ 268 ಸಂಚಾರ ನಡೆಸಿದ್ದರೆ, ಬೇಸಿಗೆಯಲ್ಲಿ 324 ವಿಮಾನಗಳು ಸಂಚರಿಸಲಿವೆ. ಶೇ 21ರಷ್ಟು ಏರಿಕೆ ಆಗಲಿವೆ. ದೇಶೀಯ ವಿಮಾನಗಳ ಸಂಖ್ಯೆ 344ರಿಂದ 392ಕ್ಕೆ (ಶೇ 14) ಹೆಚ್ಚಳವಾಗಲಿದೆ ಎಂದು ತಿಳಿಸಿದೆ.

ಇಪಿಎಫ್‌ಒ: 16 ಲಕ್ಷ ಚಂದಾದಾರರ ಸೇರ್ಪಡೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) 2024ರ ಜನವರಿಯಲ್ಲಿ 16.02 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ.

ಜನವರಿಯಲ್ಲಿ ಸುಮಾರು 8.08 ಲಕ್ಷ ಸದಸ್ಯರು ಮೊದಲ ಬಾರಿಗೆ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಕಾರ್ಮಿಕ ಸಚಿವಾಲಯ ತಿಳಿಸಿದೆ.

18–25ರ ವಯೋಮಾನದವರ ನೋಂದಣಿಯು, ಸೇರ್ಪಡೆಗೊಂಡ ಹೊಸ ಸದಸ್ಯರಲ್ಲಿ ಶೇ 56.41ರಷ್ಟಿದೆ. ಇದು ಹೆಚ್ಚಿನ ಯುವಜನರು ಕೆಲಸಕ್ಕೆ ಸೇರ್ಪಡೆಯಾಗುತ್ತಿರುವುದನ್ನು ಸೂಚಿಸುತ್ತದೆ. ಅಂದಾಜು 12.17 ಲಕ್ಷ ಸದಸ್ಯರು ಇಪಿಎಫ್‌ಒದಿಂದ ಹೊರ ನಡೆದಿದ್ದಾರೆ ಮತ್ತು ನಂತರ ಮರು ಸೇರ್ಪಡೆಯಾಗಿದ್ದಾರೆ ಎಂದು ವೇತನದಾರರ ಅಂಕಿ ಅಂಶಗಳು ತಿಳಿಸಿವೆ.

8.08 ಲಕ್ಷ ಹೊಸ ಸದಸ್ಯರಲ್ಲಿ 2.05 ಲಕ್ಷ ಮಹಿಳೆಯರಿದ್ದಾರೆ.

ಉದ್ಯಮವಾರು ಮಾಸಿಕ ಅಂಕಿ ಅಂಶವು, ತಯಾರಿಕೆ, ಮಾರುಕಟ್ಟೆ ಸೇವೆ, ಆಸ್ಪತ್ರೆಗಳು ಇತ್ಯಾದಿ ಕೆಲಸದಲ್ಲಿ ತೊಡಗಿರುವವರ ವಿವರ ನೀಡುತ್ತಿದೆ. ಒಟ್ಟು ಸದಸ್ಯತ್ವದಲ್ಲಿ, ಸುಮಾರು ಶೇ 40.71ರಷ್ಟು ಪರಿಣತ ಸೇವೆಗಳನ್ನು ಒಳಗೊಂಡಿದೆ.

‘ಬದಲಾವಣೆ’ ಅಕಾಡೆಮಿಯಲ್ಲೇ ಆಗಲಿ’

ಸಮಿತಿಯಲ್ಲಿ ಬ್ರಾಹ್ಮಣರು, ನಿಮ್ಮ ನಿಷ್ಠರೇ ಇದ್ದಾರೆ – ರಂಜನಿ, ಗಾಯತ್ರಿ

ಪ್ರಜಾವಾಣಿ ವಾರ್ತೆ

ಚೆನ್ನೈ: ‘ಭಿನ್ನ ಜಾತಿ, ಸಮುದಾಯದ ಸಭಿಕರು ಒಟ್ಟಾಗಿ ಸಂಗೀತ ಕಛೇರಿಯಲ್ಲಿ ಗಾಯನ ಆಲಿಸುವುದನ್ನು ನೋಡಲು ನಾವು ಬಯಸುತ್ತೇವೆ. ಅಂತಹ ‘ಬದಲಾವಣೆ’ ಅಕಾಡೆಮಿಯಿಂದ, ಪದಾಧಿಕಾರಿಗಳಿಂದಲೇ ಆರಂಭವಾಗಲಿ’ ಎಂದು ಕರ್ನಾಟಕ ಸಂಗೀತ ಗಾಯಕಿಯರಾದ ರಂಜನಿ ಮತ್ತು ಗಾಯತ್ರಿ ಹೇಳಿದ್ದಾರೆ.

‘ಮ್ಯೂಸಿಕ್ ಅಕಾಡೆಮಿಯ ಕಾರ್ಯಕಾರಿ ಸಮಿತಿ ಈಗ ಕೇವಲ ಬ್ರಾಹ್ಮಣರು ಮತ್ತು ನಿಮ್ಮ ನಿಷ್ಠರಿಂದಲೇ ತುಂಬಿದೆ. ಎರಡು ದಶಕಗಳಿಂದ ಈ ಸಮಿತಿಯೇ ಮುನ್ನಡೆಸುತ್ತಿದೆ. ಎಲ್ಲರೂ ಬಯಸುವ ‘ಬದಲಾವಣೆ’ಯನ್ನು ಸಮಿತಿಯ ತಕ್ಷಣದ ನಿರ್ಧಾರ, ಹಲವರ ರಾಜೀನಾಮೆಯಿಂದ ತರಬಹುದು’ ಎಂದು ಸಲಹೆ ನೀಡಿದ್ದಾರೆ.

ಸಂಗೀತಗಾರ, ಸಾಮಾಜಿಕ ಹೋರಾಟಗಾರ ಟಿ.ಎಂ. ಕೃಷ್ಣ ಅವರಿಗೆ ‘ಸಂಗೀತ ಕಲಾನಿಧಿ’ ಪ್ರಶಸ್ತಿ ಘೋಷಣೆ ಸಂಬಂಧ ನೀಡಿದ್ದ ಹೇಳಿಕೆಗೆ ಮ್ಯೂಸಿಕ್ ಅಕಾಡೆಮಿಯ ಅಧ್ಯಕ್ಷ ಎನ್.ಮುರಳಿ ಅವರ ಪ್ರತಿ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ, ರಂಜನಿ ಮತ್ತು ಗಾಯತ್ರಿ ಸಹೋದರಿಯರು ಹೀಗೆ ತೀಕ್ಷ್ಣವಾಗಿ ಮಾತನಾಡಿದ್ದಾರೆ.

‘ಗಾಯಕಿ ಸಹೋದರಿಯರದು ಅನಪೇಕ್ಷಿತ ಮತ್ತು ನಿಂದನಾತ್ಮಕವಾದ ಹೇಳಿಕೆ’ ಎಂದು ಮುರಳಿ ಅವರು ಕಳೆದ ವಾರ ಪ್ರತಿಕ್ರಿಯಿಸಿದ್ದರು.

‘ಕಲಾವಿದರ ಸಾಧನೆಯ ಹಿಂದೆ ದೀರ್ಘಾವಧಿಯ ಕಠಿಣ ಶ್ರಮ ಇರುತ್ತದೆ. ಆದರೆ, ಎಲ್ಲರೂ ಬಯಸುತ್ತಿರುವ ‘ಬದಲಾವಣೆ’ಯನ್ನು ತಕ್ಷಣದಲ್ಲಿ ಒಂದು ನಿರ್ಣಯದಿಂದಲೇ ಸಾಧಿಸಬಹುದು. ಇದಕ್ಕೆ ನೀವೇ ಮಾದರಿಯಾಗಿ. ಇಲ್ಲದಿದ್ದರೆ ನಿಮ್ಮದು ಕೇವಲ ಬಾಯಿಮಾತಿನ ಹೇಳಿಕೆ, ನೀವು ಮತಾಂಧರು, ಜಾತಿವಾದಿಗಳ ಒಕ್ಕೂಟ ಎಂದು ಸಮಾಜ ಹೇಳೀತು’ ಎಂದು ಕುಟುಕಿದ್ದಾರೆ. ‘ಪ್ರಶಸ್ತಿಗೆ ಆಯ್ಕೆ ಮಾಡುವ ಅಕಾಡೆಮಿಯ ವಿವೇಚನಾಧಿಕಾರವನ್ನು ನಾವು ಎಂದಿಗೂ ಪ್ರಶ್ನಿಸಿಲ್ಲ. ಡಿಸೆಂಬರ್‌ನಲ್ಲಿ ನಡೆಯಲಿರುವ ಸಂಗೀತ ಉತ್ಸವದಲ್ಲಿ ಕಛೇರಿ ನೀಡುವುದರಿಂದ ಹಿಂದೆ ಸರಿಯುವ ನಮ್ಮ ವಿವೇಚನಾಧಿಕಾರವನ್ನಷ್ಟೇ ಬಳಸಿದ್ದೇವೆ’ ಎಂದು ಸ್ಪಷ್ಟಪಡಿಸಿದ್ದಾರೆ.

‘ನಾವು ಪ್ರಶ್ನಿಸದೇ ಇರುವ ಅಂಶಗಳಿಗೂ ಉತ್ತರಿಸುವ ಮೂಲಕ ನಿಮಗೆ ಅನುಕೂಲಕರವಾದ ರೂಪಕವನ್ನು ಸೃಷ್ಟಿಸಲು ಹಾಗೂ ನಮ್ಮ ಮೇಲೆ ಜಾತಿ ಕಳಂಕವನ್ನು ಹಚ್ಚಲು ಮುಂದಾಗಿದ್ದೀರಿ. ಮಾಧ್ಯಮಗಳಿಗೆ ನೀವು ನೀಡಿರುವ ಹೇಳಿಕೆಯು ಅಪ್ರಾಮಾಣಿಕ ಮತ್ತು ಅನೈತಿಕವಾದುದಾಗಿದೆ. ನಿಮ್ಮ ಹೇಳಿಕೆಯು ಪ್ರಶಸ್ತಿ ಪುರಸ್ಕೃತರ ವಕ್ತಾರರ ರೀತಿ ಇದೆ ಎಂಬುದೇ ಆಶ್ಚರ್ಯಕರ. ಎನ್.ರಾಮ್ ಅವರೂ ಈ ಅಭಿಯಾನದ ಅಘೋಷಿತ ವಕ್ತಾರರಂತೆ ಸೇರಿದ್ದು, ನಮ್ಮನ್ನು ಜಾತಿವಾದಿಗಳಂತೆ ಬಿಂಬಿಸಲಾಗುತ್ತಿದೆ’ ಎಂದು ಹೇಳಿದ್ದಾರೆ.

‘ಈ ಸಂಸ್ಥೆಯ ಬಗ್ಗೆ ಉನ್ನತ ಗೌರವವಿದೆ. ಅಲಕ್ಷಿತ ಸಮುದಾಯದಿಂದ ತಾರಾ ಕಲಾವಿದರು ಉದಯಿಸುವುದು ಹಾಗೂ ಸಂಗೀತ ವೇದಿಕೆ ಆವರಿಸುವುದನ್ನು ನೋಡುವುದು ನಮಗೆ ಹಾಗೂ ಅಸಂಖ್ಯಾತ ಜನರಿಗೆ ಸಂತೋಷ ನೀಡುವ ದಿನವಾಗಿರುತ್ತದೆ. ಟಿಟಿಕೆ ಸಭಾಂಗಣವು ಎಲ್ಲ ಜಾತಿ, ಧಾರ್ಮಿಕ ಅಲ್ಪಸಂಖ್ಯಾತ ಸಭಿಕರಿಂದ ತುಂಬಿರುವ ದಿನವನ್ನು ನೋಡಲು ನಾವೂ ಬಯಸುತ್ತೇವೆ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಪ್ರಚಾರ ನೀಡಲು ಬಯಸುವುದಿಲ್ಲ’: ‘ನಾವು ಏನನ್ನು ಹೇಳಬೇಕಾಗಿತ್ತೊ, ಅದನ್ನು ಮಾರ್ಚ್ 21ರಂದು ಅವರಿಗೆ (ರಂಜನಿ, ಗಾಯತ್ರಿ) ಬರೆದಿರುವ ಪತ್ರದಲ್ಲಿಯೇ ಹೇಳಿದ್ದೇವೆ. ಮತ್ತೆ ಪ್ರತಿಕ್ರಿಯೆ ನೀಡಿ, ಆ ಇಬ್ಬರಿಗೆ ಪ್ರಚಾರವನ್ನು ನೀಡಲು ಬಯಸುವುದಿಲ್ಲ’ ಎಂದು ಎನ್. ಮುರಳಿ ಪ್ರತಿಕ್ರಿಯಿಸಿದ್ದಾರೆ.

ಗಾಯಕಿ ಸಹೋದರಿಯರ ಹೇಳಿಕೆಗೆ ಪ್ರತಿಕ್ರಿಯೆಯನ್ನು ಬಯಸಿದಾಗ, ಅವರು ಹೀಗೆ ಹೇಳಿದರು.

ಕೃಷ್ಣ ಅವರಿಗೆ ‘ಸಂಗೀತ ಕಲಾನಿಧಿ ಪ್ರಶಸ್ತಿ’ ನೀಡುವುದನ್ನು ವಿರೋಧಿಸಿ, ಅಕಾಡೆಮಿಯ ವಾರ್ಷಿಕ ಸಂಗೀತ ಕಾರ್ಯಕ್ರಮದಲ್ಲಿ ನಾವು ಕಛೇರಿಯನ್ನು ನೀಡುವುದಿಲ್ಲ ಎಂದು ಸಹೋದರಿಯರು ಘೋಷಿಸಿದ್ದರು.

ತಮ್ಮ ನಡೆಗೆ ಅವರು ನೀಡಿದ್ದ ಕಾರಣಗಳಲ್ಲಿ, ‘ಕೃಷ್ಣ ಅವರು ಸಮಾಜ ಸುಧಾರಕ ಇ.ವಿ.ಆರ್. ಪೆರಿಯಾರ್ ಅವರನ್ನು ಶ್ಲಾಘಿಸುತ್ತಾರೆ. ಪೆರಿಯಾರ್ ಅವರು ‘ಬ್ರಾಹ್ಮಣರ ನರಮೇಧಕ್ಕೆ ಕರೆ ನೀಡಿದ್ದವರು’ ಎಂಬುದೂ ಸೇರಿತ್ತು.

ಗಂಗಾಧರೇಶ್ವರ ಮಹಾ ರಥೋತ್ಸವ

ಪ್ರಜಾವಾಣಿ ವಾರ್ತೆ

ನಾಗಮಂಗಲ: ಆದಿಚುಂಚನಗಿರಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಬೆಳಗಿನ ಜಾವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಗಂಗಾಧರೇಶ್ವರ ಮಹಾ ರಥೋತ್ಸವವು ಸಂಭ್ರಮದಿಂದ ಜರುಗಿತು.

ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಅಡ್ಡಪಲ್ಲಕ್ಕಿಯಲ್ಲಿ ಆಗಮಿಸಿ, ರಥಕ್ಕೆ ವಿಶೇಷ ಪೂಜೆ ಸಲ್ಲಿಸಿದ ನಂತರ ಸಾಂಪ್ರದಾಯಿಕ, ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ನಂತರ ಅವರನ್ನು ಕುಳ್ಳಿರಿಸಿದ್ದ ಅಲಂಕೃತ ಅಡ್ಡಪಲ್ಲಕ್ಕಿ ಉತ್ಸವವು ರಥದ ಬೀದಿಯಲ್ಲಿ ನೆರೆದಿದ್ದ ಭಕ್ತರ ಜಯಘೋಷದೊಂದಿಗೆ ಮುಂದೆ ಸಾಗಿತು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು ಗಂಗಾಧರೇಶ್ವರ ಸ್ವಾಮಿಯ ಮಹಾರಥವನ್ನು ಎಳೆಯುತ್ತಾ ಮುಂದೆ ಸಾಗಿದರು.

ಗಂಗಾಧರೇಶ್ವರ ಮತ್ತು ಕಾಲಭೈರವೇಶ್ವರ ಸ್ವಾಮಿ ಸೇರಿದಂತೆ ಕ್ಷೇತ್ರದ ದೇವತೆಗಳಿಗೆ ಭಕ್ತರು ಜೈಕಾರ ಹಾಕಿದರು. ರಥಕ್ಕೆ ಬಾಳೆಹಣ್ಣು ಮತ್ತು ಜವನವನ್ನು ಎಸೆದು ಹರಕೆ ತೀರಿಸಿದರು. ಗಿರಿಯ ಮೇಲೇರಿ ಕ್ಷೇತ್ರದ ದೀಪಾಲಂಕಾರವನ್ನು ಕಣ್ತುಂಬಿಕೊಂಡರು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಸೋಮವಾರ ಬೆಳಗಿನ ಜಾವ ಲಕ್ಷಾಂತರ ಭಕ್ತರ ನಡುವೆ ಗಂಗಾಧರೇಶ್ವರ ಸ್ವಾಮಿ ಮಹಾರಥೋತ್ಸವ ಜರುಗಿತು

ಪುಷ್ಕರಣಿಯಲ್ಲಿ ತೆಪ್ಪೋತ್ಸವ

ನಾಗಮಂಗಲ: ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಕಾಲಭೈರವೇಶ್ವರ ಪುಷ್ಕರಣಿಯಲ್ಲಿ ಭಾನುವಾರ ರಾತ್ರಿ ತೆಪ್ಪೋತ್ಸವ ಸಂಭ್ರಮದಿಂದ ಜರುಗಿತು. ಸರ್ವಾಲಂಕಾರ ಮಾಡಲಾಗಿದ್ದ ತೆಪ್ಪದಲ್ಲಿ ದಸರೀಘಟ್ಟ ಚೌಡೇಶ್ವರಿ ಉತ್ಸವ ಮೂರ್ತಿ ಮತ್ತು ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿ ಪುತ್ಥಳಿಯನ್ನು ಇರಿಸಲಾಗಿತ್ತು.

ನಂತರ ನಿರ್ಮಲಾನಂದನಾಥ ಸ್ವಾಮೀಜಿ ಅವರು ತೆಪ್ಪದಲ್ಲಿ ಪುಷ್ಕರಣಿಯಲ್ಲಿ ಮೂರು ಸುತ್ತು ಪ್ರದಕ್ಷಿಣೆ ಮಾಡುವ ಮೂಲಕ ಭಕ್ತರಿಗೆ ದರ್ಶನ ನೀಡಿದರು. ಅಲ್ಲದೇ ಕಾಲ ಭೈರವೇಶ್ವರ ಸ್ವಾಮಿ ತಿರುಗಣಿ ಉತ್ಸವವು ಜರುಗಿತು. ಭಕ್ತರಿಗೆ 10ಕ್ಕೂ ಹೆಚ್ಚಿನ ಕಡೆ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ಅಹಿತಕರ ಘಟನೆಗಳು ಜರುಗದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಜಾತ್ರೆಯಲ್ಲಿ ಸೇರಿದ್ದ ಅಂಗಡಿ ಮಳಿಗೆಗಳು, ಆಟಿಕೆಗಳು, ತಿಂಡಿತಿನಿಸುಗಳ ಮಳಿಗೆಗಳು ಜಾತ್ರೆಯ ಮೆರುಗನ್ನು ಹೆಚ್ಚಿಸಿದ್ದವು. ಜೊತೆಗೆ ಭಾನುವಾರ ರಾತ್ರಿಯೇ ಬಂದಿದ್ದ ಭಕ್ತರ ಮನರಂಜನೆಗಾಗಿ ಕ್ಷೇತ್ರದ ಮೂರು ಕಡೆಗಳಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನ ಆಯೋಜಿಸಲಾಗಿತ್ತು.

4 ವರ್ಷದ ಪದವಿ: ಅಭಿಪ್ರಾಯ ಸಂಗ್ರಹಣೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ವರ್ಷದ ಪದವಿಗೆ ಅವಕಾಶ ಇಲ್ಲ ಎಂದು ಹೇಳುತ್ತಾ ಬಂದಿದ್ದ ರಾಜ್ಯ ಸರ್ಕಾರ ಈಗ ಮೂರನೇ ವರ್ಷದ ಪದವಿ ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹಣೆಗೆ ಮುಂದಾಗಿದೆ.

ನಾಲ್ಕು ವರ್ಷದ ಪದವಿ ಬೇಕೋ ಅಥವಾ ಬೇಡವೋ ಎಂದು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯ (ಯುಯುಸಿಎಂಎಸ್) ಮೂಲಕ ಅಭಿಪ್ರಾಯ ದಾಖಲಿಸಲು ಸೂಚಿಸಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು ಹಿಂದೆ ಇದ್ದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಜಾರಿಗೆ ತಂದಿತ್ತು. ನಾಲ್ಕು ವರ್ಷಗಳ ಆನರ್ಸ್ ಪದವಿಗೆ ಅವಕಾಶ ಕಲ್ಪಿಸಿತ್ತು. ಅಲ್ಲದೇ, ಪ್ರತಿ ವರ್ಷದ ಕೋರ್ಸ್‌ಗೂ ಪ್ರತ್ಯೇಕ ಪ್ರಮಾಣಪತ್ರ ಪಡೆಯಲು ಅವಕಾಶ ನೀಡಿ, ಬಹು ಪ್ರವೇಶ–ನಿರ್ಗಮನದ ವ್ಯವಸ್ಥೆ ಜಾರಿಗೊಳಿಸಿತ್ತು.

ಎನ್‌ಇಪಿ ಸೇರಿದಂತೆ ಇಂತಹ ವ್ಯವಸ್ಥೆ ರದ್ದು ಮಾಡುವುದಾಗಿ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲೇ ಭರವಸೆ ನೀಡಿತ್ತು. ರಾಜ್ಯದ ಪದವಿ ಕಾಲೇಜುಗಳಲ್ಲಿ ಹಿಂದೆ ಇದ್ದಂತೆ 3 ವರ್ಷಗಳ ಪದವಿಯನ್ನೇ ಮುಂದುವರಿಸುವಂತೆ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಆಯೋಗವು ತನ್ನ ಮೊದಲ ಸಲಹಾ ವರದಿಯಲ್ಲಿ ಶಿಫಾರಸು ಮಾಡಿದೆ. ಆದರೂ, ವಿದ್ಯಾರ್ಥಿಗಳಿಂದ ಅಭಿಪ್ರಾಯ ಸಂಗ್ರಹಿಸಲು ಮುಂದಾಗಿರುವ ಉನ್ನತ ಶಿಕ್ಷಣ ಇಲಾಖೆಯ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಅಂದು ಎನ್‌ಇಪಿ ಜಾರಿಯಾದಾಗ 2021–22ನೇ ಸಾಲಿನಲ್ಲಿ ಪ್ರವೇಶ ಪಡೆದಿದ್ದ ಮೊದಲ ಸೆಮಿಸ್ಟರ್ ಪದವಿ ವಿದ್ಯಾರ್ಥಿಗಳು ಈಗ ಐದನೇ ಸೆಮಿಸ್ಟರ್ ಪೂರೈಸಿದ್ದಾರೆ. ವಿದ್ಯಾರ್ಥಿಗಳ 6ನೇ ಸೆಮಿಸ್ಟರ್ ಇದೇ ಜುಲೈ ಒಳಗೆ ಪೂರ್ಣಗೊಳ್ಳಲಿದೆ. ಇಂತಹ ಸಮಯದಲ್ಲಿ ಸರ್ಕಾರ ಕೊಟ್ಟ ಮಾತಿನಂತೆ ನಾಲ್ಕು ವರ್ಷಗಳ ಪದವಿ ರದ್ದು ಮಾಡದೇ ಮತ್ತೆ ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹಿಸುತ್ತಿದೆ. ರಾಜ್ಯದ ಬಹುತೇಕ ಕಾಲೇಜುಗಳು ಮೂಲಸೌಕರ್ಯ, ಪ್ರಾಧ್ಯಾಪಕರ ಕೊರತೆ ಎದುರಿಸುತ್ತಿವೆ. ನಾಲ್ಕು ವರ್ಷಗಳ ಪದವಿಗೆ ಅಗತ್ಯ ಸೌಲಭ್ಯಗಳೇ ಇಲ್ಲ ಎಂದು ಕೆಲ ಶಿಕ್ಷಣ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಸರ್ಕಾರದ ಇಂತಹ ನಡೆ ವಿದ್ಯಾರ್ಥಿಗಳ ಭವಿಷ್ಯವನ್ನು ಅತಂತ್ರಕ್ಕೆ ದೂಡಿದೆ. ಈ ರೀತಿ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಬಾರದು. ಕೂಡಲೇ ನಾಲ್ಕು ವರ್ಷದ ಪದವಿ ರದ್ದು ಮಾಡಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯ’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಿಂಗಪುರ ಪ್ರಧಾನಿ, ಜೈಶಂಕರ್ ಭೇಟಿ

ಸಿಂಗಪುರ (ಪಿಟಿಐ): ಸಿಂಗಪುರ ಪ್ರವಾಸದಲ್ಲಿರುವ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಲ್ಲಿಯ ಪ್ರಧಾನಿ ಲೀ ಸೀಯೆನ್ ಲೂಂಗ್ ಅವರನ್ನು ಸೋಮವಾರ ಭೇಟಿ ಮಾಡಿದರು. ಈ ವೇಳೆ, ಭಾರತ ಮತ್ತು ಸಿಂಗಪುರ ನಡುವಿನ ಪಾಲುಗಾರಿಕೆ ಉತ್ತಮಪಡಿಸುವ ಕುರಿತು ಉಭಯ ದೇಶಗಳ ನಾಯಕರು ಚರ್ಚೆ ನಡೆಸಿದರು.

ಭೇಟಿ ವೇಳೆ ಸಿಂಗಪುರದ ವಿದೇಶಾಂಗ ಸಚಿವ ವಿವಿಯನ್ ಬಾಲಕೃಷ್ಣ ಮತ್ತು ಇತರ ಹಿರಿಯ ಸಚಿವರೂ ಉಪಸ್ಥಿತರಿದ್ದರು. ಇಂಡೋ–ಪೆಸಿಫಿಕ್ ಮತ್ತು ಪೂರ್ವ ಏಷ್ಯಾ ಪ್ರದೇಶದ ಸ್ಥಿತಿಗತಿ ಕುರಿತೂ ಚರ್ಚಿಸಲಾಯಿತು. ‘ಭಾರತ ಮತ್ತು ಸಿಂಗಪುರ ನಡುವಣ ದ್ವಿಪಕ್ಷೀಯ ಸಂಬಂಧದ ಕುರಿತು ಲೀ ಅವರಿಗಿರುವ ಸಕಾರಾತ್ಮಕ ಮನೋಭಾವವೇ ನಮ್ಮ ಬಾಂಧವ್ಯಕ್ಕೆ ಬಲ’ ಎಂದು ಎಕ್ಸ್‌ನಲ್ಲಿ ಜೈಶಂಕರ್ ಪೋಸ್ಟ್ ಮಾಡಿದ್ದಾರೆ.

ಅಪಘಾತ: ನೀತಿ ಆಯೋಗದ ಮಾಜಿ ಸಿಬ್ಬಂದಿ ಸಾವು

ಲಂಡನ್ (ಪಿಟಿಐ): ನೀತಿ ಆಯೋಗದ ಮಾಜಿ ನೌಕರರಾದ ಚೆಯಿಸ್ತಾ ಕೋಚರ್ (33) ಅವರು ಇಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಅವರು ಇಲ್ಲಿನ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ (ಎಲ್‌ಎಸ್‌ಇ) ಪಿಎಚ್.ಡಿ ಮಾಡುತ್ತಿದ್ದರು.

ವಿಶ್ವವಿದ್ಯಾಲಯದಿಂದ ಮನೆಗೆ ಸೈಕಲ್‌ನಲ್ಲಿ ತೆರಳುತ್ತಿದ್ದಾಗ ಲಾರಿಯೊಂದು ಡಿಕ್ಕಿ ಹೊಡೆಯಿತು. ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಹರಿಯಾಣದ ಗುರುಗ್ರಾಮದಿಂದ ಕಳೆದ ವರ್ಷವಷ್ಟೇ ಅವರು ಲಂಡನ್‌ಗೆ ಸ್ಥಳಾಂತರಗೊಂಡಿದ್ದರು.

ಅರುಣಾಚಲ ಪ್ರದೇಶ ನಮ್ಮದು: ಚೀನಾದಿಂದ ಮತ್ತೆ ಪ್ರತಿಪಾದನೆ

ಬೀಜಿಂಗ್ (ಪಿಟಿಐ): ‘ಅರುಣಾಚಲ ಪ್ರದೇಶ ಭೌಗೋಳಿಕವಾಗಿ ತನ್ನ ಗಡಿಗೇ ಸೇರಿದ್ದಾಗಿದೆ’ ಎಂದು ಚೀನಾ ಮತ್ತೊಮ್ಮೆ ಪ್ರತಿಪಾದಿಸಿದೆ. ಈ ಹಿಂದೆಯೂ ಚೀನಾ ಹೀಗೆ ಪ್ರತಿಪಾದಿಸಿತ್ತು. ಆಗ, ‘ಇದು ಅಸಂಬದ್ಧ ಹಾಗೂ ಹಾಸ್ಯಾಸ್ಪದ’ ಎಂದು ಭಾರತ ತಳ್ಳಿಹಾಕಿತ್ತು.

ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ನೀಡಿದ್ದ ಹೇಳಿಕೆಗೆ ಸೋಮವಾರ ಪ್ರತಿಕ್ರಿಯಿಸಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್, ಅರುಣಾಚಲ ಪ್ರದೇಶ ತಮ್ಮ ದೇಶಕ್ಕೇ ಸೇರಿದ್ದು ಎಂದು ಪುನರುಚ್ಚರಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Holiday Package Tours
15.04.2024, 4ದಿನಗಳು ಎ/ಸಿ ಬಸ್ಸಿನಲ್ಲಿ ಮಂತ್ರಾಲಯ, ಶ್ರೀಶೈಲಾ, ಅಹೋಬಲ, ಮಹಾನಂದಿ ಇತ್ಯಾದಿ. 27-04-2024, 2ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಬಾಬಾಬುಡನಗಿರಿ, ಹೆಬ್ಬೆಫಾಲ್ಸ್, ಕಲ್ಹತ್ತಿಫಾಲ್ಸ್ ಇತ್ಯಾದಿ. 9481433157
9 ದಿನಗಳ ಅಯೋಧ್ಯ ಕಾಶಿ, ಚಿತ್ರಕೂಟ ಮತ್ತು 7 ದಿನಗಳ ಅಮರನಾಥಯಾತ್ರೆ 13 ದಿನಗಳ ಚಾರ್‌ಧಾಮ್‌ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್. 9980270467 9740228186
Travel
6 ದಿನಗಳ ಬಾಲಿ. 8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 6 ದಿನಗಳ ಶ್ರೀಲಂಕಾ. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080793
ವೈವಾಹಿಕ
Matrimonial Bureaus
ಎಲ್ಲಾ ಜಾತಿಗಳ ವಧು ವರರಿಗೆ ಮತ್ತು ಮರು ಮದುವೆಗಾಗಿ widow, divorcee, ವೈವಾಹಿಕ ಮಾಹಿತಿಗಾಗಿ ವಿವರ, ಫೋಟೋ ವಾಟ್ಸಪ್ ಮಾಡಿ 9019566555
ಉದ್ಯೋಗಾವಕಾಶ
Part-Time Jobs
ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ, ಫಾರಂ ತುಂಬುವ ಮೂಲಕ, ತಿಂಗಳಿಗೆ, 18,000-20,000.ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8050064327, 8050064328.
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತಊಟ ವಸತಿ ಸಂಬಳ 15,000/- ರಿಂದ 20,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56. ಸಂಪರ್ಕಿಸಿ: 9606385001, 9606523337
General
ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930
ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com ಬುಕ್ ಮಾಡಿ *Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: +91 9731810277 | +91 9886213331 +91 9845114560 | +91 9900428036
EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
DIPLOMA IN COMPUTER DATA ENTRY OPERATOR
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555
www.thercss.com Email : info@thercss.com
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ರಿಮಿನಲ್ ಪ್ರಕರಣಗಳಲ್ಲಿ ಜಾಮೀನು: ರಾಜಕೀಯ ಚಟುವಟಿಕೆಗಳಿಗೆ ನಿರ್ಬಂಧ

ಜಾಮೀನು ಷರತ್ತಿಗೆ ಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ರಿಮಿನಲ್ ಪ್ರಕರಣಗಳಲ್ಲಿ ಜಾಮೀನು ನೀಡುವಾಗ, ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಇಲ್ಲ ಎಂಬ ಷರತ್ತು ವಿಧಿಸುವುದು ಸಲ್ಲದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ರೀತಿಯ ಷರತ್ತು ವಿಧಿಸುವುದು ವ್ಯಕ್ತಿಯ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತೆ ಆಗುತ್ತದೆ ಎಂದು ಕೋರ್ಟ್ ಹೇಳಿದೆ.

ಬಿಜೆಪಿ ಮುಖಂಡ ಮತ್ತು ಬರಹಾಂಪುರ ಮುನಿಸಿಪಲ್ ಕಾರ್ಪೊರೇಷನ್‌ನ ಮಾಜಿ ಮೇಯರ್ ಶಿಬ ಶಂಕರ್ ದಾಸ್ ಅಲಿಯಾಸ್ ಪಿಂಟು ಅವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ವಿಭಾಗೀಯ ಪೀಠವು ಮಾನ್ಯ ಮಾಡಿದೆ.

ಇಂತಹ ಷರತ್ತು ವಿಧಿಸಿರುವುದನ್ನು ಹಿಂಪಡೆಯಬೇಕು ಎಂಬ ಕೋರಿಕೆಯೊಂದಿಗೆ ದಾಸ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಒರಿಸ್ಸಾ ಹೈಕೋರ್ಟ್ ಜನವರಿಯಲ್ಲಿ ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ದಾಸ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

'ಅರ್ಜಿದಾರರು ಸಾರ್ವಜನಿಕ ಸ್ಥಳಗಳಲ್ಲಿ ಅಹಿತಕರವಾದ ಪರಿಸ್ಥಿತಿಯನ್ನು ಸೃಷ್ಟಿಸಬಾರದು. ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು' ಎಂದು ಹೈಕೋರ್ಟ್ ಹೇಳಿತ್ತು. ಇದರ ಸಿಂಧುತ್ವವನ್ನು ದಾಸ್ ಅವರು ಪ್ರಶ್ನಿಸಿದ್ದರು.

'ಇಂತಹ ಷರತ್ತನ್ನು ವಿಧಿಸುವುದರಿಂದ ಅರ್ಜಿದಾರರ ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗುತ್ತದೆ. ಇಂತಹ ಷರತ್ತು ವಿಧಿಸಲು ಅವಕಾಶ ಇಲ್ಲ. ಹೀಗಾಗಿ ನಾವು ಹೈಕೋರ್ಟ್ ವಿಧಿಸಿರುವ ಷರತ್ತನ್ನು ರದ್ದುಗೊಳಿಸುತ್ತಿದ್ದೇವೆ' ಎಂದು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ಹೇಳಿದೆ.

ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗಲು ಅರ್ಜಿದಾರರಿಗೆ ಅವಕಾಶ ಕಲ್ಪಿಸುವ ರೀತಿಯಲ್ಲಿ ಜಾಮೀನಿನ ಷರತ್ತುಗಳನ್ನು ಬದಲಾಯಿಸುವುದು ಸಮರ್ಥನೀಯ ಆಗುವುದಿಲ್ಲ. ಏಕೆಂದರೆ ಅರ್ಜಿದಾರರ ವಿರುದ್ಧವೇ 57 ಕ್ರಿಮಿನಲ್ ಪ್ರಕರಣಗಳು ಇವೆ ಹಾಗೂ ಅರ್ಜಿದಾರರು 2023ರ ಅಕ್ಟೋಬರ್‌ನಲ್ಲಿ ದಾಳಿಗೆ ತುತ್ತಾಗಿದ್ದರು ಎಂದು ಹೈಕೋರ್ಟ್ ಹೇಳಿತ್ತು.

ಇತ್ಯರ್ಥ ಕಾಣದ ಅಪರಾಧ ಪ್ರಕರಣಗಳಿಂದ ವಿಶ್ವಾಸಕ್ಕೆ ಧಕ್ಕೆ

ನವದೆಹಲಿ: ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖೆಯು ನ್ಯಾಯ ಸಮ್ಮತವಾಗಿಯೂ ಇರಬೇಕು ಪರಿಣಾಮಕಾರಿಯೂ ಆಗಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪ್ರಕರಣಗಳು ಇತ್ಯರ್ಥ ಕಾಣದೆ ಇದ್ದರೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ರಚಿಸಿರುವ ಸಂಸ್ಥೆಗಳಲ್ಲಿ ಜನ ವಿಶ್ವಾಸ ಕಳೆದುಕೊಳ್ಳುತ್ತಾರೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ಸುಧಾಂಶು ಧುಲಿಯಾ ಅವರು ಇದ್ದ ವಿಭಾಗೀಯ ಪೀಠವು, 2013ರಲ್ಲಿ ದೆಹಲಿಯಲ್ಲಿ ನಡೆದ ಮಣಿಪುರದ ಯುವತಿಯೊಬ್ಬಳ ಸಾವಿನ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಲು ಆದೇಶಿಸಿದೆ.

ಸಾವಿನ ಪ್ರಕರಣದ ಬಗ್ಗೆ ವಿಶೇಷ ತನಿಖಾ ತಂಡವೊಂದು ನಡೆಸುತ್ತಿರುವ ತನಿಖೆಯು ಪರಿಣಾಮಕಾರಿಯಾಗಿಲ್ಲ. ಹೀಗಾಗಿ, ಯುವತಿಯ ಸಂಬಂಧಿಕರು ಸಲ್ಲಿಸಿದ್ದ ಅರ್ಜಿಯನ್ನು ಪೀಠವು ಮಾನ್ಯ ಮಾಡಿದೆ.

ಯುವತಿಯ ಸಾವಿನ ವಿಚಾರವಾಗಿ ದೆಹಲಿ ಪೊಲೀಸರು ಆರಂಭದಲ್ಲಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ನಂತರದಲ್ಲಿ ಅದನ್ನು ಕೊಲೆ ಪ್ರಕರಣವನ್ನಾಗಿ ಮಾರ್ಪಾಡು ಮಾಡಲಾಯಿತು. ಆದರೆ ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರವೂ ಸಾವಿಗೆ ನಿಖರ ಕಾರಣ ಗೊತ್ತಾಗಲಿಲ್ಲ.

'25 ವರ್ಷ ವಯಸ್ಸಿನ ಆ ಯುವತಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಗಳು ಇರಲಿಲ್ಲ ಅನ್ನಿಸುತ್ತದೆ. ಮೇಲ್ನೋಟಕ್ಕೆ ಇದು ಆತ್ಮಹತ್ಯೆಯ ಪ್ರಕರಣದಂತೆ ಕಾಣುತ್ತಿಲ್ಲ. ಅಪರಾಧ ನಡೆದ ಸ್ಥಳದಲ್ಲಿ ನೆಲದ ಮೇಲೆ ರಕ್ತದ ಕಲೆಗಳು ಇದ್ದವು. ಬೆಡ್‌ಶೀಟ್ ರಕ್ತದಿಂದ ಒದ್ದೆಯಾಗಿತ್ತು. ಇದು ಕೊಲೆಯಂತೆ ಅನ್ನಿಸುತ್ತಿದೆ, ಅಪರಾಧಿಗಳನ್ನು ಸೆರೆಹಿಡಿಯಬೇಕು' ಎಂದು ಪೀಠವು ಹೇಳಿದೆ.

ಬಹಿರಂಗ ಚರ್ಚೆಗೆ ಬನ್ನಿ: ಸವಾಲು

ವಿಶೇಷ ಅನುದಾನ ಕುರಿತು ಚರ್ಚೆಗೆ ಸಿದ್ಧ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯ ಮತ್ತು ಹಣಕಾಸು ಆಯೋಗದ ವರದಿ ಹೇಳಿದ್ದರೂ ವಿಶೇಷ ಅನುದಾನ ನೀಡದಿರುವ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜತೆ ಬಹಿರಂಗ ಚರ್ಚೆಗೆ ಸಿದ್ಧನಿದ್ದು, ಅಗತ್ಯ ದಾಖಲೆಗಳೊಂದಿಗೆ ಚರ್ಚೆಗೆ ಬರಲಿ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸವಾಲು ಹಾಕಿದರು.



ಕೃಷ್ಣ ಬೈರೇಗೌಡ

ವಿಕಾಸಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕರ್ನಾಟಕಕ್ಕೆ ಒಂದು ಪೈಸೆ ಬಾಕಿ ಉಳಿಸಿಕೊಂಡಿಲ್ಲ ಎಂದು ನಿರ್ಮಲಾ ಹೇಳಿದ್ದಾರೆ. ಆದರೆ, ಅವರ ಹೇಳಿಕೆಗಳು ಸತ್ಯದಿಂದ ಕೂಡಿಲ್ಲ. ಇದೇ 31ಕ್ಕೆ ಮೈಸೂರಿಗೆ ಬರುವ ಅವರು ಚರ್ಚೆಗೆ ಸಿದ್ಧರಾಗಲಿ. ಒಂದೇ ವೇದಿಕೆ ಯಲ್ಲಿ ಚರ್ಚೆ ನಡೆಯಲಿ' ಎಂದು ಆಹ್ವಾನವಿತ್ತರು.

'ನಾವು ಕರ್ನಾಟಕಕ್ಕೆ ನ್ಯಾಯ ಕೇಳುತ್ತಿದ್ದೇವೆಯೇ ಹೊರತು ಭಿಕ್ಷಾಪಾತ್ರೆ ಹಿಡಿದು ಭಿಕ್ಷೆ ಕೇಳುತ್ತಿಲ್ಲ. ಅತಿ ಹೆಚ್ಚು ತೆರಿಗೆ ಕಟ್ಟುವ ಎರಡನೇ ರಾಜ್ಯ ನಮ್ಮದು. ನಮ್ಮ ಹಕ್ಕು ಕೇಳಿದರೆ ನಮ್ಮ ಮೇಲೆಯೇ ಗೂಬೆ ಕೂರಿಸುತ್ತಾರೆ. ಸತ್ಯ ಜನರಿಗೆ ತಿಳಿಯಬೇಕು. ಆದ್ದರಿಂದ, ಮೈಸೂರು ಅಥವಾ ಬೆಂಗಳೂರೇ ಆಗಲಿ. ಎಲ್ಲಿ ಬೇಕಾದರೂ ಚರ್ಚೆಗೆ ಸಿದ್ಧನಿದ್ದೇನೆ. ಸತ್ಯ ಯಾವುದು, ಸುಳ್ಳು ಯಾವುದು ಎಂಬುದನ್ನು ಜನರ ತೀರ್ಮಾನಕ್ಕೆ ಬಿಡೋಣ' ಎಂದರು.

'ನಾವು ಗ್ಯಾರಂಟಿ ಯೋಜನೆಗಳಿಗಾಗಿ ನಯಾಪೈಸೆ ಕೇಳುತ್ತಿಲ್ಲ. ಅವರಿಂದ ಒಂದು ಪೈಸೆಯೂ ಬೇಕಾಗಿಲ್ಲ. ರಾಜ್ಯದ ಪಿಂಚಣಿ ಮತ್ತು ಸಾಮಾಜಿಕ ಭದ್ರತೆಗಾಗಿ ₹11,200 ಕೋಟಿ ಖರ್ಚು ಮಾಡುತ್ತಿದ್ದೇವೆ. ಇದಕ್ಕೆ ಕೇಂದ್ರ ಕೊಡುತ್ತಿರುವುದು ಕೇವಲ ₹550 ಕೋಟಿ. ಅಲ್ಲದೇ, ಕಷ್ಟದಲ್ಲಿರುವ ಜನರ ಸಹಾಯ ಮಾಡಲೆಂದು ₹72,000 ಕೋಟಿಯನ್ನು ರಾಜ್ಯವೇ ವೆಚ್ಚ ಮಾಡುತ್ತಿದೆ. ನಾವು ಕೇಳುತ್ತಿರುವುದು ನಮ್ಮ ತೆರಿಗೆ ಪಾಲು ಮತ್ತು ಬರ ಪರಿಹಾರದ ಹಣ. ಅದನ್ನು ಪಡೆಯುವುದು ನಮ್ಮ ಸಂವಿಧಾನಬದ್ಧ ಹಕ್ಕು. ನಿಮ್ಮ ಔದಾರ್ಯ ಬೇಕಾಗಿಲ್ಲ. ಕರ್ನಾಟಕದ ಜನ ತೆರಿಗೆ ನೋಟು ಕಟ್ಟೋದಕ್ಕೆ, ಓಟು ಹಾಕೋದಕ್ಕೆ ಇರೋದು ಅಲ್ಲ' ಎಂದರು.

'ಗ್ಯಾರಂಟಿ ಯೋಜನೆಗಳಿಗೆ ನಾವೇ ಹಣ ಹೊಂದಿಸಿಕೊಳ್ಳುತ್ತೇವೆ. ವಿಶೇಷ ಅನುದಾನ ₹11,472 ಕೋಟಿ ಬಿಡುಗಡೆ ಮಾಡಲಿ. 2020–21 ರಲ್ಲಿ 15ನೇ ಹಣಕಾಸು ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಕರ್ನಾಟಕ, ತೆಲಂಗಾಣ, ಮಿಜೋರಾಂ ರಾಜ್ಯಗಳಿಗೆ ಒಟ್ಟು ವಿಶೇಷ ಅನುದಾನ ₹6,764 ಕೋಟಿ ನೀಡುವಂತೆ ಶಿಫಾರಸು ಮಾಡಿತ್ತು. ನಮ್ಮ ರಾಜ್ಯಕ್ಕೆ ₹5,495 ಕೋಟಿ, ತೆಲಂಗಾಣಕ್ಕೆ ₹723 ಕೋಟಿ ಹಾಗೂ ಮಿಜೋರಾಂಗೆ ₹546 ಕೋಟಿ ಎಂದು ನಿಗದಿ ಮಾಡಿತ್ತು. ಆದರೆ, ಮೂರೂ ರಾಜ್ಯಗಳಿಗೆ ಹಣ ನೀಡಲೇ ಇಲ್ಲ' ಎಂದರು.

'ನಮಗೆ ಬರಬೇಕಾಗಿರುವ ಬಾಕಿಯ ಬಗ್ಗೆ ಮನವರಿಕೆ ಮಾಡಲು ಸಾಧ್ಯವಾಗದ ಕಾರಣ ನಿರ್ಮಲಾ ಅವರು ಗೊಂದಲ ಮೂಡಿಸುತ್ತಿದ್ದಾರೆ. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ (2020) ಅವರೂ ವಿಶೇಷ ಅನುದಾನ ಬಿಡುಗಡೆ ಮಾಡುವಂತೆ ಕೇಂದ್ರ ಹಣಕಾಸು ಸಚಿವರಿಗೆ ಪತ್ರ ಬರೆದಿದ್ದರು. ಹಾಗಿದ್ದರೆ ಯಡಿಯೂರಪ್ಪ ಸುಳ್ಳು ಹೇಳಿದ್ದರಾ? ಬಸವರಾಜ ಬೊಮ್ಮಾಯಿ ಅವರೂ ಪತ್ರ ಬರೆದಿದ್ದರು. ಆಗ ಅದಕ್ಕೆ ಉತ್ತರ ನೀಡಿದ್ದ ನಿರ್ಮಲಾ ಸೀತಾರಾಮನ್ ಅವರು ವಿಶೇಷ ಅನುದಾನಕ್ಕೆ ಸಂಪನ್ಮೂಲವನ್ನು ನೀವೇ ಹೊಂದಾಣಿಕೆ ಮಾಡಿಕೊಳ್ಳಿ ಎಂದಿದ್ದರು' ಎಂದು ಕೃಷ್ಣ ಬೈರೇಗೌಡ ಹೇಳಿದರು.

'ಡಿಪಿ' ಬದಲಿಸಿ ಬೆಂಬಲ ನೀಡುವಂತೆ ಜನರಲ್ಲಿ ಮನವಿ

ಜಾಲತಾಣದಲ್ಲಿ ಎಎಪಿ ಅಭಿಯಾನ

ನವದೆಹಲಿ (ಪಿಟಿಐ): 'ದೇಶದ ಸಂವಿಧಾನ ಹಾಗೂ ಪ್ರಜಾಪ್ರಭುತ್ವವನ್ನು ಕಾಪಾಡಲು' ಬೆಂಬಲ ನೀಡುವಂತೆ ಕೋರಿ ಎಎಪಿ ಸೋಮವಾರ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಆರಂಭಿಸಿದೆ.

ಆತಿಶಿ

ಸಾಮಾಜಿಕ ಜಾಲತಾಣ ಖಾತೆಗಳಲ್ಲಿ 'ಡಿಪಿ' ಬದಲಾಯಿಸುವ ಮೂಲಕ ಅಭಿಯಾನಕ್ಕೆ ಬೆಂಬಲ ನೀಡುವಂತೆ ಎಎಪಿ ನಾಯಕಿ, ದೆಹಲಿ ಸಚಿವೆ ಆತಿಶಿ ಅವರು ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

ಎಎಪಿಯ ಎಲ್ಲ ನಾಯಕರು ಹಾಗೂ ಕಾರ್ಯಕರ್ತರು ತಮ್ಮ ಸಾಮಾಜಿಕ ಜಾಲತಾಣ 'ಎಕ್ಸ್', ಫೇಸ್‌ಬುಕ್, ವಾಟ್ಸ್‌ಆ್ಯಪ್ ಮತ್ತು ಇತರ ಖಾತೆಗಳಲ್ಲಿ 'ಮೋದಿಯವರು ಹೆಚ್ಚು ಭಯಪಡುವ ವ್ಯಕ್ತಿ ಕೇಜ್ರಿವಾಲ್' ಎಂಬ ಶೀರ್ಷಿಕೆಯೊಂದಿಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಕಂಬಿಗಳ ಹಿಂದಿರುವ ಚಿತ್ರವನ್ನು ನೂತನ ಪ್ರೊಫೈಲ್ ಚಿತ್ರವನ್ನಾಗಿ ಬದಲಾಯಿಸುತ್ತಾರೆ ಎಂದು ಆತಿಶಿ ಅವರು ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರಿಗೆ ಸವಾಲು ಹಾಕುವ ದೇಶದ ಏಕೈಕ ನಾಯಕ ಅರವಿಂದ ಕೇಜ್ರಿವಾಲ್. ಹೀಗಾಗಿಯೇ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ ಲೋಕಸಭೆ ಚುನಾವಣೆ ಘೋಷಣೆಯಾಗುತ್ತಿದ್ದಂತೆ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ. ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಇ.ಡಿ ಎರಡು ವರ್ಷಗಳಿಂದ ತನಿಖೆ ನಡೆಸುತ್ತಿದ್ದರೂ 'ಒಂದು ಪೈಸೆ' ಸಾಕ್ಷ್ಯಾಧಾರವನ್ನು ನೀಡಲೂ ಸಾಧ್ಯವಾಗಿಲ್ಲ ಎಂದು ಹೇಳಿದರು.

ಮೋದಿ ಮತ್ತು ಬಿಜೆಪಿ, ಕೇಜ್ರಿವಾಲ್ ಅವರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ದೇಶದಲ್ಲಿ ಸರ್ವಾಧಿಕಾರದ ವಿರುದ್ಧ ಎಎಪಿ ಸಮರ ಸಾರಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವ ಕಾಪಾಡುವುದು ಕೇಜ್ರಿವಾಲ್ ಅವರದಷ್ಟೇ ಜವಾಬ್ದಾರಿ ಅಲ್ಲ. ಸಾಮಾಜಿಕ ಜಾಲತಾಣ ಖಾತೆಗಳ 'ಡಿಪಿ' ಬದಲಾಯಿಸುವ ಮೂಲಕ ಜನರು ಅಭಿಯಾನದಲ್ಲಿ ಪಾಲ್ಗೊಂಡು ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಮೋದಿ ನಿಂದನೆ; ಸಚಿವರ ವಿರುದ್ಧ ಪ್ರಕರಣ

ಚೆನ್ನೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಮೇಲೆ ತಮಿಳುನಾಡು ಮೀನುಗಾರಿಕೆ ಸಚಿವ ಅನಿತ ಆರ್. ರಾಧಾಕೃಷ್ಣನ್ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದರು.

ತೂತುಕುಡಿ ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್. ಸಿದ್ಧರಂಗಥಾನ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 249 ಬಿ (ಸಾರ್ವಜನಿಕವಾಗಿ ಅಸಭ್ಯ ಪದಗಳ ಬಳಕೆ) ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ತಿಳಿಸಿದರು.

'ಥಾಂಡಪಟ್ಟುವಿನಲ್ಲಿ ಈಚೆಗೆ ನಡೆದ ಡಿಎಂಕೆ ಪಕ್ಷದ ಸಾರ್ವಜನಿಕ ಸಭೆಯಲ್ಲಿ ಅನಿತ ಅವರು ಮೋದಿ ಕುರಿತು ಅಸಭ್ಯವಾಗಿ ಮಾತನಾಡಿದರು. ರಾಜ್ಯದ ಮಾಜಿ ಮುಖ್ಯಮಂತ್ರಿ ಕಾಮರಾಜ್ ಅವರನ್ನು ಹೊಗಳಿದ್ದಕ್ಕಾಗಿ ಮೋದಿ ಅವರನ್ನು ಅನಿತ ಟೀಕಿಸಿದ್ದರು. ಈ ವೇಳೆ ಆಕ್ಷೇಪಾರ್ಹ ಪದಗಳನ್ನು ಬಳಸಿದರು. ಅನಿತ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಜಿಲ್ಲಾ ಚುನಾವಣಾ ಅಧಿಕಾರಿ ಮತ್ತು ಜಿಲ್ಲಾಧಿಕಾರಿಗೆ ಕೂಡಲೇ ದೂರು ನೀಡಿದೆ. ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ' ಎಂದು ಸಿದ್ಧರಂಗಥಾನ್ ಅವರು ಹೇಳಿದರು.

ಇದೇ ಪ್ರಕರಣದ ಕುರಿತು ಮುಖ್ಯ ಚುನಾವಣಾ ಅಧಿಕಾರಿಗೆ ದೂರು ನೀಡಿರುವ ತಮಿಳುನಾಡು ಬಿಜೆಪಿ ಉಪಾಧ್ಯಕ್ಷ ಕಾರು ನಾಗರಾಜನ್ ಅವರು ಅನಿತ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಕರ್ನಾಟಕಕ್ಕೆ ಸಿಗಬೇಕಿದ್ದ ಹಣ ತಡೆಹಿಡಿದ ಕೇಂದ್ರ: ಆರೋಪ

ನವದೆಹಲಿ (ಪಿಟಿಐ): ಕರ್ನಾಟಕಕ್ಕೆ ನ್ಯಾಯಯುತವಾಗಿ ಸಿಗಬೇಕಿದ್ದ ಹಣವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ತಡೆಹಿಡಿದಿದೆ ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ. ಕರ್ನಾಟಕದ ಜನರು ತಮ್ಮ ಪ್ರಜಾತಾಂತ್ರಿಕ ಹಕ್ಕು ಚಲಾಯಿಸಿ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಚುನಾಯಿಸಿದ್ದಕ್ಕಾಗಿ ಈ ಬೆಲೆ ತೆರುವಂತೆ ಮಾಡಲಾಗಿದೆ ಎಂದು ಕಿಡಿಕಾರಿದೆ.



ಜೈರಾಮ್ ರಮೇಶ್

ರಾಜ್ಯಗಳ ಹಣಕಾಸಿನ ವ್ಯವಸ್ಥೆಯ ಉಸಿರುಗಟ್ಟಿಸುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಅವರು ನಿರಂತರವಾಗಿ ಮಾಡುತ್ತಿರುತ್ತಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸುಳ್ಳುಗಳನ್ನು ಹೇಳಿ ಜನರ ದಾರಿತಪ್ಪಿಸುವ ಹತಾಶ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್' ವೇದಿಕೆಯಲ್ಲಿ ಬರೆದ ನಂತರದಲ್ಲಿ ರಮೇಶ್ ಅವರು ಈ ಮಾತು ಹೇಳಿದ್ದಾರೆ.

'15ನೇ ಹಣಕಾಸು ಆಯೋಗವು 2020–21ರ ಮಧ್ಯಂತರ ವರದಿಯಲ್ಲಿ ಕರ್ನಾಟಕ ಸೇರಿದಂತೆ ಮೂರು ರಾಜ್ಯಗಳಿಗೆ ವಿಶೇಷ ಅನುದಾನ ₹6,764 ಕೋಟಿ (ರಾಜ್ಯಕ್ಕೆ ₹5,495 ಕೋಟಿ, ತೆಲಂಗಾಣಕ್ಕೆ ₹723 ಕೋಟಿ ಹಾಗೂ ಮಿಜೋರಾಂಗೆ ₹546 ಕೋಟಿ) ನೀಡುವಂತೆ ಶಿಫಾರಸು ಮಾಡಿತ್ತು. ಇದು ನಮ್ಮ ಮೇಲಿನ ವಿಶೇಷ ಪ್ರೀತಿ ಇಲ್ಲವೇ ಔದಾರ್ಯದಿಂದ ಮಾಡಿರುವ ಶಿಫಾರಸುಗಳಲ್ಲ. ಇವೆಲ್ಲವೂ ತೆರಿಗೆ ಹಂಚಿಕೆಯಲ್ಲಿನ ಅನ್ಯಾಯಕ್ಕೆ ನೀಡಿರುವ ಪರಿಹಾರ ಅಷ್ಟೆ' ಎಂದು ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

> **ನಿರ್ಮಲಾ ಅವರೇ, ಗ್ಯಾರಂಟಿ ಯೋಜನೆಗಳಿಗೆ ಅನುದಾನ ಕೊಡಿ ಎಂದು ಕೇಂದ್ರವನ್ನು ಬೇಡುತ್ತಿಲ್ಲ. ಇವುಗಳಿಗಾಗಿ ಬಜೆಟ್‌ನಲ್ಲೇ ಅನುದಾನ ಮೀಸಲಿಟ್ಟಿದ್ದೇವೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

15ನೇ ಹಣಕಾಸು ಆಯೋಗವು ಅಂತಿಮ ವರದಿಯಲ್ಲಿ ಕರ್ನಾಟಕಕ್ಕೆ ₹6,000 ಕೋಟಿ ಶಿಫಾರಸು ಮಾಡಿತ್ತು, ಇದರಲ್ಲಿ ₹3,000 ಕೋಟಿಯನ್ನು ಜಲಮೂಲಗಳ ಸಂರಕ್ಷಣೆಗೆ ಹಾಗೂ ₹3,000 ಕೋಟಿಯನ್ನು ಬೆಂಗಳೂರಿನ ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ನೀಡುವಂತೆ ಶಿಫಾರಸು ಮಾಡಿತ್ತು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಈ ಎರಡು ಶಿಫಾರಸುಗಳನ್ನು ಒಪ್ಪಿಕೊಳ್ಳಲು ಕೇಂದ್ರ ಹಣಕಾಸು ಸಚಿವಾಲಯ ನಿರಾಕರಿಸಿತು. ಆ ಮೂಲಕ ಕರ್ನಾಟಕಕ್ಕೆ ನ್ಯಾಯಯುತವಾಗಿ ಸಿಗಬೇಕಿದ್ದ ಪಾಲನ್ನು ನಿರಾಕರಿಸಲಾಯಿತು ಎಂದು ಸಿದ್ದರಾಮಯ್ಯ ದೂರಿದ್ದಾರೆ.

ದ್ವೇಷಸಾಧನೆಗೆ ಸಚಿವರ ಯತ್ನ: ಸಿದ್ದರಾಮಯ್ಯ ಅವರು ಬರೆದಿರುವುದನ್ನು ಟ್ಯಾಗ್ ಮಾಡಿರುವ ರಮೇಶ್ ಅವರು, 'ಮೋದಿ ನೇತೃತ್ವದ ಸರ್ಕಾರ ಹಾಗೂ ಅದರ ರಿಮೋಟ್ ಕಂಟ್ರೋಲ್ ನಿಯಂತ್ರಿತ ಸಚಿವರು ಒಕ್ಕೂಟ ವ್ಯವಸ್ಥೆಯ ಆಶಯವನ್ನು ಉಲ್ಲಂಘಿಸಲು, ಸಾಂವಿಧಾನಿಕ ಸಂಸ್ಥೆಗಳ ಶಿಫಾರಸುಗಳನ್ನು ಬದಿಗೆ ತಳ್ಳಲು ಹಾಗೂ ರಾಜಕೀಯ ದ್ವೇಷಸಾಧನೆಗೆ ಎಲ್ಲ ಮಿತಿಗಳನ್ನೂ ಮೀರುವ ಕೆಲಸ ಮಾಡುತ್ತಾರೆ' ಎಂದು ಆರೋಪಿಸಿದ್ದಾರೆ.

ಕರ್ನಾಟಕವು ತೆರಿಗೆ ನಿಧಿಗೆ ಪ್ರತಿವರ್ಷ ₹4.3 ಲಕ್ಷ ಕೋಟಿ ನೀಡುತ್ತಿದ್ದರೂ, ಕರ್ನಾಟಕದಿಂದಲೇ ರಾಜ್ಯಸಭೆ ಪ್ರವೇಶಿಸಿರುವ ನಿರ್ಮಲಾ ಅವರು ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ಸಲ್ಲಬೇಕಿರುವ ಸರಿಸುಮಾರು ₹12 ಸಾವಿರ ಕೋಟಿ ಮೊತ್ತವನ್ನು ತಡೆಹಿಡಿದಿದ್ದಾರೆ ಎಂದು ರಮೇಶ್ ಹೇಳಿದ್ದಾರೆ.

ರಾಜ್ಯಗಳಿಗೆ ನೀಡಬೇಕಿರುವ ತೆರಿಗೆ ಪಾಲನ್ನು ಕಡಿಮೆ ಮಾಡುವಂತೆ ಮೋದಿ ನೇತೃತ್ವದ ಸರ್ಕಾರವು 14ನೇ ಹಣಕಾಸು ಆಯೋಗವನ್ನು ಬೆದರಿಸುವ ಕೆಲಸ ಮಾಡಿತ್ತು ಎಂಬುದನ್ನು ನೀತಿ ಆಯೋಗದ ಅಧಿಕಾರಿಯೊಬ್ಬರು ಕೆಲವು ತಿಂಗಳುಗಳ ಹಿಂದೆ ಬಹಿರಂಗಪಡಿಸಿದ್ದರು ಎಂದೂ ರಮೇಶ್ ಹೇಳಿದ್ದಾರೆ.

ಮಾಜಿ ಐಪಿಎಸ್ ಅಧಿಕಾರಿ ವಿರುದ್ಧ ಲುಕ್‌ಔಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಫೋನ್ ಕದ್ದಾಲಿಕೆ ಪ್ರಕರಣಕ್ಕೆ ಸಂಬಂಧಿಸಿ ವಿಶೇಷ ಗುಪ್ತಚರ ದಳದ (ಎಸ್‌ಐಬಿ) ಮಾಜಿ ಮುಖ್ಯಸ್ಥ ಟಿ. ಪ್ರಭಾಕರ್ ರಾವ್ ಮತ್ತು ಮಾಜಿ ವಿಶೇಷ ಕರ್ತವ್ಯ ಅಧಿಕಾರಿ ರಾಧಾ ಕೃಷ್ಣ ರಾವ್ ಅವರ ವಿರುದ್ಧ ತೆಲಂಗಾಣ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿ ಮಾಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಉಪ ಪೊಲೀಸ್ ಆಯುಕ್ತ (ಎಡಿಸಿಪಿ) ತಿರುಪತಣ್ಣ ಮತ್ತು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಭುಜಂಗ ರಾವ್ ಅವರನ್ನು ಬಂಧಿಸಲಾಗಿದೆ.

ಪ್ರಕರಣ ಸಂಬಂಧ ಪಂಜಗುತ್ತಾ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ಮಾಜಿ ಐಪಿಎಸ್ ಅಧಿಕಾರಿ ಪ್ರಭಾಕರ್ ರಾವ್ ಮೊದಲನೇ ಆರೋಪಿ ಮತ್ತು ರಾಧಾ ಕೃಷ್ಣ ರಾವ್ ಎರಡನೇ ಆರೋಪಿ ಎಂದು ಹೇಳಿದ್ದಾರೆ. ಲುಕ್‌ಔಟ್ ನೋಟಿಸ್ ಬೆನ್ನಲ್ಲೇ ಇಬ್ಬರೂ ದೇಶ ತೊರೆದಿದ್ದಾರೆ. ವಿಪಕ್ಷಗಳ ನಾಯಕರು, ಇತರರ ಫೋನ್ ಕದ್ದಾಲಿಸಲು ಪ್ರಭಾಕರ್ ಅವರ ಸೂಚನೆಗಳನ್ನು ಮತ್ತೊಬ್ಬ ಆರೋಪಿ ಪ್ರಣೀತ್ ರಾವ್ ಅನುಸರಿಸಿದ್ದರು ಎಂದು ಆರೋಪಿಸಲಾಗಿದೆ.

ಬಣ್ಣವರಳಿ... ಗುಜರಾತ್‌ನ ಸಾರಂಗಪುರ್‌ನ ದೇವಸ್ಥಾನವೊಂದರ ಆವರಣದಲ್ಲಿ ಜನರು ಸೋಮವಾರ ಬಣ್ಣದ ಹಬ್ಬ ಹೋಳಿ ಆಚರಿಸಿದ ಪರಿ ಇದು –ಪಿಟಿಐ ಚಿತ್ರ

ಅಯೋಧ್ಯೆಯಲ್ಲಿ ಹೋಳಿ ಸಂಭ್ರಮ

ಅಯೋಧ್ಯೆ (ಪಿಟಿಐ): ಉತ್ತರ ಪ್ರದೇಶದ ಅಯೋಧ್ಯೆಯ ರಾಮ ಮಂದಿರದಲ್ಲಿ ಸೋಮವಾರ ಸಂಭ್ರಮದಿಂದ ಹೋಳಿ ಹಬ್ಬವನ್ನು ಆಚರಿಸಲಾಯಿತು.

ವಿವಿಧ ಭಾಗಗಳಿಂದ ಮುಂಜಾನೆಯೇ ದೇಗುಲಕ್ಕೆ ಬಂದಿದ್ದ ಜನರು ರಾಮನ ಮೂರ್ತಿಗೆ ಬಣ್ಣ ಮತ್ತು ಗುಲಾಲ್ ಅರ್ಪಿಸಿದರು. ಇಡೀ ರಾಮಜನ್ಮ ಭೂಮಿ ಆವರಣವೇ ಬಣ್ಣಗಳಿಂದ ಕಂಗೊಳಿಸುತ್ತಿತ್ತು.

ದೇಗುಲದ ಅರ್ಚಕರು ರಾಮನ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ನಂತರ ಭಕ್ತರೊಂದಿಗೆ ಹೋಳಿ ಆಚರಿಸಿದರು. ಬಾಲರಾಮನ ಮೂರ್ತಿ ಎದುರು ಹಾಡು ಹಾಡುತ್ತಾ, ನೃತ್ಯ ಮಾಡುತ್ತಾ ಸಂಭ್ರಮಿಸಿದರು. ನಂತರ 56 ವಿವಿಧ ಆಹಾರ ಪದಾರ್ಥಗಳನ್ನು ವಿಗ್ರಹಕ್ಕೆ ಅರ್ಪಿಸಿದರು.

'ದೇಗುಲ ಉದ್ಘಾಟನೆ ಬಳಿಕ ಬಾಲ ರಾಮ ಮೊದಲ ಹೋಳಿ ಆಚರಿಸುತ್ತಿದ್ದು ಮೂರ್ತಿಯನ್ನು ಹೂವು, ಗುಲಾಲ್‌ನಿಂದ ಅಲಂಕರಿಸಲಾಗಿದೆ. ಈ ದಿನ ರಾಮನಿಗೆ ಗುಲಾಬಿ ಬಣ್ಣದ ವಸ್ತ್ರ ತೊಡಿಸಲಾಗಿದೆ' ಎಂದು ದೇಗುಲದ ಆಡಳಿತ ಮಂಡಳಿಯ ಮುಖ್ಯಸ್ಥ ಆಚಾರ್ಯ ಸತ್ಯೇಂದ್ರ ದಾಸ್ ಅವರು ತಿಳಿಸಿದರು.

ಗೋವಾ ಯೋಜನೆಗೆ ಇಲ್ಲ ರಾಜ್ಯದ 435 ಎಕರೆ ಕಾಡು

ಒಂದನೇ ಪುಟದಿಂದ...

ಸಚಿವರ ನಿರ್ದೇಶನದ ಹಿನ್ನೆಲೆಯಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಅವರು ಪಿಸಿಸಿಎಫ್ ಅವರಿಗೆ ಮಾರ್ಚ್ 16ರಂದು ಪತ್ರ ಬರೆದು, ಅರಣ್ಯ ಹಾಗೂ ಪರಿಸರ ಸಂರಕ್ಷಣೆ ಉದ್ದೇಶದಿಂದ ಭವಿಷ್ಯದಲ್ಲಿ ಇಂತಹ ಪ್ರಸ್ತಾವಗಳನ್ನು ಪ್ರಾಥಮಿಕ ಹಂತದಲ್ಲೇ ತಿರಸ್ಕರಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ. ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ ಈ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದರೆ ವಿವಾದ ಸೃಷ್ಟಿಯಾಗಬಹುದು ಎಂಬ ಕಾರಣಕ್ಕೆ ಸಚಿವರು ತಡೆ ಒಡ್ಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೋರ್ಟ್ ಮೆಟ್ಟಿಲೇರಿದ್ದ ಗೋವಾ ಫೌಂಡೇಷನ್: ವಿದ್ಯುತ್ ಮಾರ್ಗಕ್ಕೆ ಅರಣ್ಯ ಬಳಸಲು ಅನುಮತಿ ನೀಡುವಂತೆ 'ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್' ಕರ್ನಾಟಕ ಸರ್ಕಾರಕ್ಕೆ 2019ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. 2020ರಲ್ಲಿ ಕೆನರಾ ವೃತ್ತದ ಸಿಸಿಎಫ್ ಸ್ಥಳ ಪರಿಶೀಲನೆ ನಡೆಸಿ, 'ಪಶ್ಚಿಮಘಟ್ಟದ ದಟ್ಟ ಅರಣ್ಯದಲ್ಲಿ ಈ ಯೋಜನೆ ಹಾದು ಹೋಗಲಿದೆ. ಈ ಯೋಜನೆಯಿಂದ ಹುಲಿ ಆವಾಸಸ್ಥಾನದ ಮೇಲೂ ಪರಿಣಾಮ ಬೀರಲಿದೆ. ಈ ಪ್ರಸ್ತಾವವನ್ನು ತಿರಸ್ಕರಿಸಬೇಕು' ಎಂದು ಶಿಫಾರಸು ಮಾಡಿದ್ದರು. ಯೋಜನೆಯ ಪ್ರಸ್ತಾವವನ್ನು ತಿರಸ್ಕರಿಸುವುದು ಉತ್ತಮ ಎಂದೂ ಪಿಸಿಸಿಎಫ್ 2021ರಲ್ಲಿ ವರದಿ ಸಲ್ಲಿಸಿದ್ದರು.

ಯೋಜನೆಯ ಅನುಷ್ಠಾನಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿ 'ಗೋವಾ ಫೌಂಡೇಷನ್' ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಕುರಿತು ವರದಿ ನೀಡುವಂತೆ ಸಿಇಸಿಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. 'ಈ ಮಾರ್ಗದಲ್ಲಿ ಈಗಾಗಲೇ 220 ಕೆ.ವಿ.ಮಾರ್ಗ ಇದೆ. ಹೊಸಮಾರ್ಗ ನಿರ್ಮಾಣಕ್ಕೆ ಸಾವಿರಾರು ಮರಗಳನ್ನು ಕಡಿಯಬೇಕಾಗುತ್ತದೆ. ಅದರ ಬದಲು ಈಗಿರುವ ಮಾರ್ಗ ಬಳಸುವುದು ಉತ್ತಮ. ಅಲ್ಲದೆ, ಕರ್ನಾಟಕ ಸರ್ಕಾರದ ಅನುಮತಿ ಪಡೆದೇ ಮುಂದುವರಿಯಬೇಕು' ಎಂದು ಸಿಇಸಿ ಶಿಫಾರಸು ಮಾಡಿತ್ತು. ಬಳಿಕ ಸಂಸ್ಥೆಯು ಹೊಸದಾಗಿ ಪ್ರಸ್ತಾವ ಸಲ್ಲಿಸಿತ್ತು. ಆ ಪ್ರಸ್ತಾವಕ್ಕೆ ಒಪ್ಪಿಗೆ ನೀಡಬಹುದು ಎಂದು ಪಿಸಿಸಿಎಫ್, ಸಿಸಿಎಫ್ ಶಿಫಾರಸು ಮಾಡಿದ್ದರು.

ಯಾವ ಅರಣ್ಯ ಬಳಕೆಗೆ ಪ್ರಸ್ತಾವ (ಹೆಕ್ಟೇರ್‌ಗಳಲ್ಲಿ)

7.75	ಧಾರವಾಡ ವಿಭಾಗ
70	ಬೆಳಗಾವಿ ವಿಭಾಗ
68	ಹಳಿಯಾಳ ವಿಭಾಗ
35	ದಾಂಡೇಲಿ ವಿಭಾಗ

ಮಹಾಕಾಲ ದೇಗುಲದಲ್ಲಿ ಅಗ್ನಿ ಅವಘಡ

ಒಂದನೇ ಪುಟದಿಂದ...

'ಗರ್ಭಗುಡಿಯಲ್ಲಿ ಉರಿಯುತ್ತಿದ್ದ ಕರ್ಪೂರ ಇದ್ದ ಪೂಜಾ ತಟ್ಟೆಯ ಮೇಲೆ 'ಗುಲಾಲ್' (ಬಣ್ಣದ ಪುಡಿ) ಬಿದ್ದಾಗ ಬೆಂಕಿ ಹೊತ್ತಿಕೊಂಡು ನಂತರ ಅದು ಇತರೆಡೆ ವ್ಯಾಪಿಸಿ ಅವಘಡ ಸಂಭವಿಸಿದೆ' ಎಂದು ತಿಳಿಸಿದರು.

'ಬೆಳ್ಳಿ ಲೇಪಿತ ಗರ್ಭಗುಡಿಯ ಗೋಡೆಯನ್ನು ಗುಲಾಲ್‌ನಿಂದ ರಕ್ಷಿಸಲು ಪೇಪರ್ ಅಂಟಿಸಲಾಗಿತ್ತು. ಅರ್ಚಕ ಸಂಜೀವ್ ಅವರು ಆರತಿ ಬೆಳಗುತ್ತಿದ್ದ ವೇಳೆ ಕೆಲ ಭಕ್ತರು ಅವರತ್ತ ಗುಲಾಲ್ ಚೆಲ್ಲಿದರು. ರಾಸಾಯನಿಕ ಮಿಶ್ರಣವಾಗಿತ್ತು ಎನ್ನಲಾದ ಗುಲಾಲ್, ಆರತಿ ತಟ್ಟೆ ಮೇಲೆ ಬಿದ್ದ ತಕ್ಷಣ ಬೆಂಕಿ ಹೊತ್ತಿಕೊಂಡಿತು. ಆರು ವರ್ಷಗಳ ಹಿಂದೆ ಹೋಳಿ ಹಬ್ಬದಂದು ಇಂಥದ್ದೇ ಘಟನೆ ನಡೆದಿತ್ತು' ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.

ಸ್ಥಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಮೋಹನ್ ಯಾದವ್, ಗಾಯಾಳುಗಳಿಗೆ ಉಚಿತ ಚಿಕಿತ್ಸೆ ಜೊತೆಗೆ ತಲಾ ₹1 ಲಕ್ಷ ನೆರವು ನೀಡುವುದಾಗಿ ಘೋಷಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ಮಾಡಿ ಘಟನೆ ಬಗ್ಗೆ ಮಾಹಿತಿ ಪಡೆದರು ಎಂದರು. 'ಭಸ್ಮ ಆರತಿ'ಗೆ ಗುಲಾಲ್ ಬಳಸುವುದು ಪದ್ಧತಿ. ದುರದೃಷ್ಟವಶಾತ್ ಅದು ಆರತಿ ತಟ್ಟೆಯ ಮೇಲೆ ಬಿದ್ದು ಅವಘಡ ಸಂಭವಿಸಿದೆ. ಇದರ ಹಿಂದೆ ಯಾವುದೇ ಸಂಚು ಇದ್ದಂತೆ ಮೇಲ್ನೋಟಕ್ಕೆ ಕಾಣುತ್ತಿಲ್ಲ. ಘಟನೆ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ' ಎಂದರು.

> **ಮಹಾಕಾಲ ದೇಗುಲದಲ್ಲಿ ಅಗ್ನಿ ಅವಘಡ ಸಂಭವಿಸಿದ್ದು ತೀವ್ರ ನೋವುಂಟು ಮಾಡಿದೆ. ಗಾಯಗೊಂಡ ಭಕ್ತರು ಶೀಘ್ರ ಗುಣಮುಖ ಆಗಲಿ ಎಂದು ಪ್ರಾರ್ಥಿಸುತ್ತೇನೆ**
> **ನರೇಂದ್ರ ಮೋದಿ,** ಪ್ರಧಾನಿ

ಸಂಕ್ಷಿಪ್ತ ಸುದ್ದಿ

ಪುಲ್ವಾಮಾ: ನಾಲ್ವರು ಉಗ್ರರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ

ಶ್ರೀನಗರ (ಪಿಟಿಐ): ಒಬ್ಬ ಪಾಕಿಸ್ತಾನಿ ಸೇರಿದಂತೆ ನಾಲ್ವರು ಭಯೋತ್ಪಾದಕರ ವಿರುದ್ಧ ರಾಜ್ಯ ಗುಪ್ತದಳ ವಿಭಾಗವು (ಎಸ್‌ಐಯು) ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಎನ್‌ಐಎ (ರಾಷ್ಟ್ರೀಯ ತನಿಖಾ ಏಜೆನ್ಸಿ) ನ್ಯಾಯಾಲಯದಲ್ಲಿ ಸೋಮವಾರ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಎಹ್ಸಾನ್ ಉಲ್ ಹಕ್ ಶೇಕ್, ಒವೈಸಿ ಫಿರೋಜ್ ಮಿರ್ (ಸದ್ಯ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿದ್ದಾನೆ) ಮತ್ತು ಪಾಕಿಸ್ತಾನದ ಅಬ್ರಾರುಲ್ ಇಸ್ಲಾಮ್ ಹಾಗೂ ಕಸ್ಟಡಿಯಲ್ಲಿರುವ ಇಷ್ತಿಯಾಕ್ ನಾಜಿರ್ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಹೋಳಿ ಬಳಿಕ ಸ್ನಾನಕ್ಕೆ ತೆರಳಿದ್ದ ನಾಲ್ವರು ಯುವಕರ ಸಾವು

ಹೈದರಾಬಾದ್ (ಪಿಟಿಐ): ಹೋಳಿ ಹಬ್ಬ ಆಚರಿಸಿದ ಬಳಿಕ ಸ್ನಾನ ಮಾಡಲು ನದಿಗೆ ತೆರಳಿದ್ದ ನಾಲ್ವರು ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಕುಮುರಮ್ ಭೀಮ್ ಆಸಿಫಾಬಾದ್ ಜಿಲ್ಲೆಯ ತಾಟಿಪಲ್ಲಿ ಗ್ರಾಮದ ಯುವಕರು ವಾರ್ಧಾ ನದಿಯಲ್ಲಿ ಸ್ನಾನ ಮಾಡಲು ತೆರಳಿದ್ದ ವೇಳೆ ಸೋಮವಾರ ಈ ಘಟನೆ ನಡೆದಿದೆ.

ಹೋಳಿ ಆಚರಣೆ ನಂತರ ಸ್ನಾನಕ್ಕೆಂದು ನದಿಗೆ ಇಳಿದ ನಾಲ್ವರು ಯುವಕರಲ್ಲಿ ಯಾರಿಗೂ ಈಜು ಬರುತ್ತಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ಯುವಕರು 22 ರಿಂದ 25 ವರ್ಷ ವಯಸ್ಸಿನವರು ಎನ್ನಲಾಗಿದೆ.

ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಚುನಾವಣೆ

ಎಡ ಬೆಂಬಲಿತ ಧನಂಜಯ್ ಅಧ್ಯಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಹೆಸರಾಂತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆ (ಜೆಎನ್‌ಯುಎಸ್‌ಯು) ಅಧ್ಯಕ್ಷರಾಗಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ (ಎಐಎಸ್‌ಎ) ಅಭ್ಯರ್ಥಿ ಧನಂಜಯ್ ಆಯ್ಕೆ ಆಗಿದ್ದಾರೆ.

ಅವರು 2,598 ಮತ ಗಳಿಸಿದರು. ಇವರ ಸಮೀಪದ ಪ್ರತಿಸ್ಪರ್ಧಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ಅಭ್ಯರ್ಥಿ ಉಮೇಶ್ ಸಿ.ಅಜ್ಮೀರಾ 1,676 ಮತ ಪಡೆದಿದ್ದು, ಪರಾಭವಗೊಂಡರು.

ನೂತನ ಅಧ್ಯಕ್ಷ, ಎಐಎಸ್‌ಎ ಅಭ್ಯರ್ಥಿ ಧನಂಜಯ್ ಅವರು ದಲಿತ ವರ್ಗಕ್ಕೆ ಸೇರಿದವರು. ಈ ಮೂಲಕ ವಿದ್ಯಾರ್ಥಿ ಸಂಘಕ್ಕೆ ಮೂರು ದಶಕದ ಬಳಿಕ ಈ ವರ್ಗದವರು ಅಧ್ಯಕ್ಷರಾದಂತಾಗಿದೆ. ಇವರು ಮೂಲತಃ ಬಿಹಾರದ ಗಯಾ ನಿವಾಸಿ. ಈ ಹಿಂದೆ ದಲಿತ ವರ್ಗಕ್ಕೆ ಸೇರಿದ್ದ ಭಟ್ಟಿ ಲಾಲ್ ಬೈರ್ವಾ ಅವರು 1996–97ರಲ್ಲಿ ಅಧ್ಯಕ್ಷರಾಗಿದ್ದರು.

ಆರ್‌ಎಸ್‌ಎಸ್‌ನ ವಿದ್ಯಾರ್ಥಿ ಸಂಘಟನೆ ಎಬಿವಿಪಿಯ ಅಭ್ಯರ್ಥಿಗಳು ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಸ್ಥಾನ ಗೆಲ್ಲಲೂ ವಿಫಲರಾದರು. ಕುತೂಹಲ ಕೆರಳಿಸಿದ್ದ ಈ ಚುನಾವಣೆಯಲ್ಲಿ ಎಬಿವಿಪಿ ನೀರಸ ಪ್ರದರ್ಶನ ನೀಡಿದಂತಾಗಿದೆ.

'ಕ್ಯಾಂಪಸ್‌ನಲ್ಲಿ ಮಹಿಳೆಯರ ರಕ್ಷಣೆ, ವಿದ್ಯಾರ್ಥಿವೇತನ ಏರಿಕೆ, ಅನುದಾನ ಕಡಿತ ವಿರುದ್ಧ ಹೋರಾಟ, ಮೂಲಸೌಕರ್ಯ ಕಲ್ಪಿಸಲು ಒತ್ತಾಯ ಹಾಗೂ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ವಿದ್ಯಾರ್ಥಿ ಸಂಘಟನೆಯ ಆದ್ಯತೆಗಳಾಗಿವೆ' ಎಂದು ಧನಂಜಯ್ ಆಯ್ಕೆಯ ಬಳಿಕ ತಿಳಿಸಿದರು.

ಜೆಎನ್‌ಯುಎಸ್‌ಯು ಫಲಿತಾಂಶ

ಹೆಸರು	ಪಡೆದ ಮತ	ವಿದ್ಯಾರ್ಥಿ ಸಂಘಟನೆ
ಅಧ್ಯಕ್ಷ ಸ್ಥಾನ		
ಧನಂಜಯ್	2,598	ಎಐಎಸ್‌ಎ
ಉಮೇಶ್ ಸಿ.ಅಜ್ಮೀರಾ	1,678	ಎಬಿವಿಪಿ
ಉಪಾಧ್ಯಕ್ಷ ಸ್ಥಾನ		
ಅವಿಜಿತ್ ಘೋಷ್	2,409	ಎಸ್‌ಎಫ್‌ಐ
ದೀಪಿಕಾ ಶರ್ಮಾ	1,482	ಎಬಿವಿಪಿ
ಪ್ರಧಾನ ಕಾರ್ಯದರ್ಶಿ		
ಪ್ರಿಯವಂಶಿ ಆರ್ಯ	2,887	ಬಿಎಪಿಎಸ್‌ಎ
ಅರ್ಜುನ್ ಆನಂದ್	1,961	ಎಬಿವಿಪಿ

> **ದ್ವೇಷ ಮತ್ತು ಹಿಂಸೆಯ ರಾಜಕಾರಣವನ್ನು ತಿರಸ್ಕರಿಸುತ್ತೇವೆ ಎಂದು ಜೆಎನ್‌ಯು ವಿದ್ಯಾರ್ಥಿಗಳು ನೀಡಿದ ಜನಾದೇಶ ಈ ಫಲಿತಾಂಶ. ವಿದ್ಯಾರ್ಥಿಗಳ ಹಕ್ಕುಗಳು, ಹಿತಾಸಕ್ತಿ ರಕ್ಷಿಸಲು ನಮ್ಮ ಹೋರಾಟ ನಿರಂತರವಾಗಿರುತ್ತದೆ**
> **ಧನಂಜಯ್,** ಜೆಎನ್‌ಯುಎಸ್‌ಯು ಚುನಾಯಿತ ಅಧ್ಯಕ್ಷ

ಹೈಕೋರ್ಟ್ ಆದೇಶಕ್ಕೆ ತಲೆಬಾಗುವಂತೆ ಪುರಾತತ್ವಶಾಸ್ತ್ರಜ್ಞ ಮನವಿ

'ಭೋಜಶಾಲಾದಲ್ಲಿ ಇದ್ದಿದ್ದು ವಾಗ್ದೇವಿ ದೇಗುಲ'

ಗ್ವಾಲಿಯರ್ (ಪಿಟಿಐ): ಮಧ್ಯಪ್ರದೇಶದ ಧರ್ ಜಿಲ್ಲೆಯಲ್ಲಿ ಇರುವ ವಿವಾದಿತ ಭೋಜಶಾಲಾ/ಕಮಲ ಮೌಲಾ ಮಸೀದಿ ಸಂಕೀರ್ಣವು ಸರಸ್ವತಿಯ ದೇವಸ್ಥಾನ ಆಗಿತ್ತು, ಅದನ್ನು ನಂತರದಲ್ಲಿ ಇಸ್ಲಾಮಿಕ್ ಪ್ರಾರ್ಥನಾ ಸ್ಥಳವನ್ನಾಗಿ ಪರಿವರ್ತಿಸಲಾಯಿತು ಎಂದು ಖ್ಯಾತ ಪುರಾತತ್ವಶಾಸ್ತ್ರಜ್ಞ ಕೆ.ಕೆ. ಮುಹಮ್ಮದ್ ಹೇಳಿದ್ದಾರೆ.



ಕೆ.ಕೆ. ಮುಹಮ್ಮದ್

ಇಂತಹ ಸ್ಥಳಗಳ ವಿಚಾರವಾಗಿ ಹಿಂದೂಗಳು ಮತ್ತು ಮುಸ್ಲಿಮರು ನ್ಯಾಯಾಲಯ ನೀಡುವ ಆದೇಶವನ್ನು ಪಾಲಿಸಬೇಕು, ಪೂಜಾ ಸ್ಥಳಗಳ ಕಾಯ್ದೆ–1991 ಅನ್ನು ಗೌರವಿಸಬೇಕು, ಒಟ್ಟಾಗಿ ಕುಳಿತು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. ಮಥುರಾ ಮತ್ತು ಕಾಶಿಯ ವಿಚಾರವಾಗಿ ಹಿಂದೂಗಳ ಭಾವನೆಯನ್ನು ಗೌರವಿಸುವ ಕೆಲಸವನ್ನು ಮುಸ್ಲಿಮರು ಮಾಡಬೇಕು ಎಂದು ಕೂಡ ಮುಹಮ್ಮದ್ ಅವರು ಭಾನುವಾರ ಹೇಳಿದ್ದಾರೆ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ವಿವಾದಿತ ಭೋಜಶಾಲಾ ಸಂಕೀರ್ಣದ ಸಮೀಕ್ಷೆಯನ್ನು ಮಧ್ಯಪ್ರದೇಶ ಹೈಕೋರ್ಟ್‌ನ ಸೂಚನೆಯ ಅನುಸಾರ ನಡೆಸುತ್ತಿದೆ. ಅಲ್ಲಿ ಇರುವುದು ವಾಗ್ದೇವಿ (ಸರಸ್ವತಿ) ದೇವಸ್ಥಾನ ಎಂಬುದು ಹಿಂದೂಗಳ ನಂಬಿಕೆ. ಅದು ಕಮಲ ಮೌಲಾ ಮಸೀದಿ ಎಂದು ಮುಸ್ಲಿಮರು ನಂಬುತ್ತಾರೆ.

ಮುಖ್ಯಾಂಶಗಳು

- ಪೂಜಾ ಸ್ಥಳಗಳ ಕಾಯ್ದೆಯನ್ನು ಗೌರವಿಸಬೇಕು
- ಕಾಶಿ, ಮಥುರಾ: ಹಿಂದೂ ಭಾವನೆಗೆ ಬೆಲೆ ಕೊಡಬೇಕು
- ಸರಸ್ವತಿ ದೇವಸ್ಥಾನ ಇತ್ತು ಎಂಬುದರಲ್ಲಿ ಅನುಮಾನವೇ ಇಲ್ಲ

'ಭೋಜಶಾಲಾ ಸರಸ್ವತಿಯ ದೇವಸ್ಥಾನ ಆಗಿತ್ತು ಎಂಬುದು ಅದರ ಕುರಿತ ಐತಿಹಾಸಿಕ ಸತ್ಯ. ಅದನ್ನು ಇಸ್ಲಾಮಿಕ್ ಮಸೀದಿಯಾಗಿ ಪರಿವರ್ತಿಸಲಾಯಿತು. ಆದರೆ, ಪೂಜಾ ಸ್ಥಳಗಳ ಕಾಯ್ದೆ–1991ರ ಅನ್ವಯ 1947ರಲ್ಲಿ ಅದು ಮಸೀದಿಯಾಗಿತ್ತು ಎಂದಾದರೆ ಅದು ಮಸೀದಿಯೇ ಆಗುತ್ತದೆ, 1947ರಲ್ಲಿ ಅದು ದೇವಸ್ಥಾನ ಆಗಿತ್ತು ಎಂದಾದರೆ ಅದು ದೇವಸ್ಥಾನವೇ ಆಗುತ್ತದೆ' ಎಂದು ಮುಹಮ್ಮದ್ ಅವರು ವಿವರಿಸಿದ್ದಾರೆ.

1976–77ರಲ್ಲಿ ಅಯೋಧ್ಯೆಯಲ್ಲಿ ಉತ್ಖನನ ನಡೆಸಿದ ಪ್ರೊಫೆಸರ್ ಬಿ.ಬಿ. ಲಾಲ್ ಅವರ ತಂಡದಲ್ಲಿ ಮುಹಮ್ಮದ್ ಅವರೂ ಇದ್ದರು. ಬಾಬರಿ ಮಸೀದಿಯ ಅಡಿಯಲ್ಲಿ ರಾಮ ಮಂದಿರದ ಅವಶೇಷ ಇದ್ದಿದ್ದನ್ನು ಮೊದಲು ಕಂಡಿದ್ದು ತಾವು ಎಂದು ಮುಹಮ್ಮದ್ ಅವರು ಈ ಮುನ್ನ ಹೇಳಿದ್ದರು.



ಭೋಜಶಾಲಾ ಆವರಣ

'ಎರಡೂ ಸಮುದಾಯಗಳು ಕಾಯ್ದೆಗೆ ಬದ್ಧತೆ ತೋರಬೇಕು. ಎಲ್ಲ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡು ಹೈಕೋರ್ಟ್ ಒಂದು ತೀರ್ಮಾನ ನೀಡುತ್ತದೆ. ಅದನ್ನು ಎಲ್ಲರೂ ಪಾಲಿಸಬೇಕು. ಅದೊಂದೇ ಪರಿಹಾರ' ಎಂದು ಅವರು ಹೇಳಿದ್ದಾರೆ. ಆ ಸ್ಥಳವು ಸರಸ್ವತಿಯ ದೇವಸ್ಥಾನ ಆಗಿತ್ತು ಎಂಬುದರಲ್ಲಿ ಅನುಮಾನವೇ ಇಲ್ಲ ಎಂದು ಕೂಡ ಮುಹಮ್ಮದ್ ಸ್ಪಷ್ಟವಾಗಿ ಹೇಳಿದ್ದಾರೆ.

ಎಲ್ಲರಿಗೂ ಸಮಸ್ಯೆ ಸೃಷ್ಟಿಸುವ ಯಾವುದೇ ಕೆಲಸವನ್ನು ಎರಡೂ ಕಡೆಯವರು ಮಾಡಬಾರದು ಎಂದು ಅವರು ಕಿವಿಮಾತು ಹೇಳಿದ್ದಾರೆ.

ಮುಸ್ಲಿಮರಿಗೆ ಮೆಕ್ಕಾ ಮತ್ತು ಮದೀನಾ ಎಷ್ಟು ಮುಖ್ಯವೋ, ಮಥುರಾ ಮತ್ತು ಕಾಶಿ ಹಿಂದೂಗಳಿಗೆ ಅಷ್ಟೇ ಮುಖ್ಯ ಎಂದು ಮುಹಮ್ಮದ್ ಹೇಳಿದ್ದಾರೆ. 'ಹಿಂದೂಗಳ ಭಾವನೆಯನ್ನು ಮುಸ್ಲಿಮರು ಅರ್ಥ ಮಾಡಿಕೊಳ್ಳಬೇಕು. ಕಾಶಿಯು ಶಿವನೊಂದಿಗೆ ನಂಟು ಹೊಂದಿದೆ, ಮಥುರಾ ಶ್ರೀಕೃಷ್ಣನ ಜನ್ಮಸ್ಥಳ. ಇವನ್ನು ಹಿಂದೂಗಳು ಬೇರೊಂದು ಸ್ಥಳಕ್ಕೆ ವರ್ಗಾಯಿಸಲು ಆಗುವುದಿಲ್ಲ. ಆದರೆ ಇವು ಮುಸ್ಲಿಮರ ಪಾಲಿಗೆ ಮಸೀದಿಗಳು ಮಾತ್ರ. ಇವು ಪ್ರವಾದಿ ಮೊಹಮ್ಮದ್ ಅವರೊಂದಿಗಾಗಲಿ, ಔಲಿಯಾಗಳೊಂದಿಗಾಗಲಿ ನೇರವಾಗಿ ಸಂಬಂಧ ಹೊಂದಿಲ್ಲ. ಇವುಗಳನ್ನು ಬೇರೆಡೆ ಸ್ಥಳಾಂತರಿಸಬಹುದು' ಎಂದು ಅವರು ಹೇಳಿದ್ದಾರೆ.

'ಹಿಂದೂಗಳು ತಾವು ಪೂಜಾ ಸ್ಥಳಗಳ ದೊಡ್ಡ ಪಟ್ಟಿಯೊಂದನ್ನು ಹಿಡಿದುಕೊಂಡು ಬರುವುದು ಸಲ್ಲದು ಎಂಬುದನ್ನು ಕೂಡ ಪರಿಗಣನೆಯಲ್ಲಿ ಇಟ್ಟುಕೊಳ್ಳಬೇಕು. ನಾವು ದೇಶವನ್ನು ಬಲಪಡಿಸಬೇಕು, ದೇಶವನ್ನು ಮುಂದಕ್ಕೆ ಒಯ್ಯಬೇಕು. ಇದಕ್ಕಾಗಿ ಎರಡೂ ಸಮುದಾಯಗಳು ಒಟ್ಟಾಗಿ ಮಾತುಕತೆ ನಡೆಸಬೇಕು' ಎಂದಿದ್ದಾರೆ.

> **ವಿವಾದಗಳನ್ನು ಹಿಂದೂಗಳು, ಮುಸ್ಲಿಮರು ಬಗೆಹರಿಸಿಕೊಳ್ಳದೆ ಇದ್ದರೆ ದೊಡ್ಡ ಸಮಸ್ಯೆ ಸೃಷ್ಟಿ ಆಗುತ್ತದೆ.**
> **ಕೆ.ಕೆ. ಮುಹಮ್ಮದ್,** ಪುರಾತತ್ವಶಾಸ್ತ್ರಜ್ಞ

ಕಿಂಗ್ ಕೊಹ್ಲಿ ಅಬ್ಬರ; ದಿನೇಶ್ ಕಾರ್ತಿಕ್ ಮಿಂಚಿನ ಬ್ಯಾಟಿಂಗ್; ಸೋತ ಪಂಜಾಬ್ ಕಿಂಗ್ಸ್

ಹೋಳಿ ದಿನ ಬೆಂಗಳೂರಿಗೆ ಗೆಲುವಿನ ರಂಗು

ಕೊಹ್ಲಿಗೆ ಆರೇಂಜ್ ಕ್ಯಾಪ್

ಟೂರ್ನಿಯಲ್ಲಿ ಎರಡು ಪಂದ್ಯಗಳಿಂದ ಒಟ್ಟು 98 ರನ್ ಗಳಿಸಿರುವ ವಿರಾಟ್ ಕೊಹ್ಲಿ ಅವರು ಆರೇಂಜ್ ಕ್ಯಾಪ್ ಪಡೆದರು.

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಖರಿ –ಚಿತ್ರ/ರಂಜು ಪಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಬೆಂಗಳೂರು: ಸೋಮವಾರ ಹೋಳಿ ಹಬ್ಬದ ಸಂಭ್ರಮದಲ್ಲಿದ್ದ ಅಭಿಮಾನಿಗಳಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗೆಲುವಿನ ಸಿಹಿ ಹೋಳಿಗೆ ಉಣಬಡಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ (77; 49ಎ, 4X11, 6X2) ಅರ್ಧಶತಕ ಮತ್ತು ಫಿನಿಷರ್ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ ದಿನೇಶ್ ಕಾರ್ತಿಕ್ (ಅಜೇಯ 28; 10ಎ) ಅವರಿಂದಾಗಿ ಬೆಂಗಳೂರು ತಂಡವು 4 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಗೆದ್ದಿತು. ಚೆನ್ನೈನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಸೋತಿದ್ದ ಆರ್‌ಸಿಬಿ ತಂಡವು ಇಲ್ಲಿ ಜಯಿಸಿತು. ಇಂಪ್ಯಾಕ್ಟ್ ಪ್ಲೇಯರ್ ಮಹಿಪಾಲ್ ಲೊಮ್ರೊರ್ ಅವರೂ 8 ಎಸೆತಗಳಲ್ಲಿ 17 ರನ್ ಗಳಿಸಿದರು.

177 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆರ್‌ಸಿಬಿ 19.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 178 ರನ್ ಗಳಿಸಿತು. ಇದಕ್ಕೆ ಪ್ರಮುಖವಾಗಿ ಕಾರಣವಾಗಿದ್ದು ಕೊಹ್ಲಿ ಅವರಿಗೆ ಪಂಜಾಬ್ ಫೀಲ್ಡರ್‌ಗಳು ನೀಡಿದ ಎರಡು ಜೀವದಾನಗಳು. ಮೊದಲ ಓವರ್‌ನಲ್ಲಿ ಫೀಲ್ಡರ್ ಜಾನಿ ಬೆಸ್ಟೊ ಸುಲಭ ಕ್ಯಾಚ್ ಕೈಚೆಲ್ಲಿದರು. ಆರನೇ ಓವರ್‌ನಲ್ಲಿ ಫೀಲ್ಡರ್ ಚಾಹರ್ ಅವರು ಕ್ಯಾಚ್ ಪಡೆಯಲು ಮಾಡಿದ ಪ್ರಯತ್ನ ಫಲಪ್ರದವಾಗಲಿಲ್ಲ. ಇದರಿಂದಾಗಿ ವಿರಾಟ್ ತಮ್ಮ ಅಭಿಮಾನಿಗಳಿಗೆ ಬ್ಯಾಟಿಂಗ್ ರಸದೌತಣ ನೀಡಿದರು.

ಆದರೆ 16ನೇ ಓವರ್‌ನಲ್ಲಿ ವಿರಾಟ್ ವಿಕೆಟ್ ಗಳಿಸುವಲ್ಲಿ ಹರ್ಷಲ್ ಪಟೇಲ್ ಸಫಲರಾದರು. ಆಗ ಗ್ಯಾಲರಿಯಲ್ಲಿದ್ದ ಅಭಿಮಾನಿಗಳು ಆತಂಕಕ್ಕೆ ಜಾರಿದ್ದರು. ಎರಡು ಎಸೆತಗಳ ನಂತರ ಅನುಜ್ ರಾವತ್ (11; 14ಎ) ಕೂಡ ಔಟಾದರು.

ಆಗ ತಂಡದ ಗೆಲುವಿಗೆ 22 ಎಸೆತಗಳಲ್ಲಿ 47 ರನ್‌ಗಳ ಅಗತ್ಯವಿತ್ತು. ಆದರೆ, ಪಂಜಾಬ್ ಬೌಲರ್‌ಗಳ ಉತ್ಸಾಹಕ್ಕೆ ದಿನೇಶ್ ಮತ್ತು ಲೊಮ್ರೊರ್ ತಣ್ಣೀರೆರಚಿದರು. ಅದರಲ್ಲಿಯೂ ಕೊನೆಯ ಎರಡು ಓವರ್‌ಗಳಲ್ಲಿ 24 ರನ್‌ಗಳು ಬೇಕಿದ್ದ ಸಂದರ್ಭವು ಕುತೂಹಲ ಕೆರಳಿಸಿತು. ದಿನೇಶ್ ಅಬ್ಬರಿಸಿದರು. ಹರ್ಷಲ್ ಹಾಕಿದ 19ನೇ ಓವರ್‌ನಲ್ಲಿ ಒಂದು ಬೌಂಡರಿ, ಒಂದು ಸಿಕ್ಸರ್ ಹೊಡದರು. ಇದೊಂದೇ ಓವರ್‌ನಲ್ಲಿ ಒಟ್ಟು 14 ರನ್ ತಂಡದ ಖಾತೆ ಸೇರಿದವು. ಅರ್ಷದೀಪ್ ಹಾಕಿದ ಕೊನೆಯ ಓವರ್‌ನ ಮೊದಲ ಎಸೆತವನ್ನೇ ಪುಲ್ ಮಾಡಿದ ದಿನೇಶ್ ಹೊಡೆತಕ್ಕೆ ಸಿಕ್ಸರ್ ದಾಖಲಿಸಿದರು. ಇನ್ನೊಂದು ಎಸೆತವನ್ನು ಬೌಂಡರಿಗೆ ಕಳಿಸಿ ಜಯದ ಸಂಭ್ರಮ ಆಚರಿಸಿದರು.

ಶಿಖರ್ ಬ್ಯಾಟಿಂಗ್: ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ಆರಂಭದಲ್ಲಿಯೇ ಆಘಾತ ಅನುಭವಿಸಿತು. ಸಿರಾಜ್ ಅವರು ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಜಾನಿ ಬೇಸ್ಟೊ ಅವರ ವಿಕೆಟ್ ಕಬಳಿಸಿದರು. ಈ ಹಂತದಲ್ಲಿ ನಾಯಕ ಶಿಖರ್ ಧವನ್ (45; 37ಎ, 4X5, 6X1) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಪ್ರಭಸಿಮ್ರನ್ ಸಿಂಗ್ ಅವರೊಂದಿಗೆ 55 ರನ್ ಸೇರಿಸಿದರು. ಮ್ಯಾಕ್ಸ್‌ವೆಲ್ ಹಾಕಿದ 13ನೇ ಓವರ್‌ನಲ್ಲಿ ಶಿಖರ್ ಔಟಾದರು. ಮ್ಯಾಕ್ಸ್‌ವೆಲ್ (3–0–29–2) ಅವರ ಕೈಚಳಕದಿಂದಾಗಿ ಪಂಜಾಬ್ ತಂಡವು 98 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದ ಸ್ಯಾಮ್ ಕರನ್ ಮತ್ತು ಜಿತೇಶ್ ಶರ್ಮಾ ಐದನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ಇದರಿಂದಾಗಿ ತಂಡವು ಕೊನೆಯ ಎಂಟು ಓವರ್‌ಗಳಲ್ಲಿ 78 ರನ್ ಸೂರೆ ಮಾಡಲು ಸಾಧ್ಯವಾಯಿತು. ಆರ್‌ಸಿಬಿ ಬೌಲರ್‌ಗಳು ಕೊನೆಯ ಹಂತದ ಓವರ್‌ಗಳಲ್ಲಿ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಲಿಲ್ಲ.

ವಿರಾಟ್ ಟಿ20 ಕ್ರಿಕೆಟ್‌ನಲ್ಲಿ 50ಕ್ಕಿಂತ ಹೆಚ್ಚು ಸ್ಕೋರ್‌ಗಳ ಶತಕ ದಾಖಲಿಸಿದರು. ರೋಹಿತ್ ಶರ್ಮಾ (81)ಹಾಗೂ ಶಿಖರ್ ಧವನ್ (71) ನಂತರದ ಸ್ಥಾನಗಳಲಿದ್ದಾರೆ. ವಿರಾಟ್, ಟಿ20 ಕ್ರಿಕೆಟ್‌ನಲ್ಲಿ ಒಟ್ಟು 173 ಕ್ಯಾಚ್ ಗಳಿಸಿದರು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 6ಕ್ಕೆ176 (20 ಓವರುಗಳಲ್ಲಿ)
ಶಿಖರ್ ಸಿ ಕೊಹ್ಲಿ ಬಿ ಮ್ಯಾಕ್ಸ್‌ವೆಲ್ 45 (37ಎ, 4x5, 6x1)
ಬೇಸ್ಟೊ ಸಿ ಕೊಹ್ಲಿ ಬಿ ಸಿರಾಜ್ 8 (6ಎ, 4x2)
ಪ್ರಭಸಿಮ್ರನ್ ಸಿ ರಾವತ್ ಬಿ ಮ್ಯಾಕ್ಸ್‌ವೆಲ್ 25 (17ಎ, 4x2, 6x2)
ಲಿವಿಂಗ್‌ಸ್ಟೋನ್ ಸಿ ರಾವತ್ ಬಿ ಜೋಸೆಫ್ 17 (13ಎ, 4x1, 6x1)
ಕರನ್ ಸಿ ರಾವತ್ ಬಿ ದಯಾಳ್ 23 (17ಎ, 4x3)
ಜಿತೇಶ್ ಸಿ ರಾವತ್ ಬಿ ಸಿರಾಜ್ 27 (20ಎ, 4x1, 6x2)
ಶಶಾಂಕ್ ಔಟಾಗದೇ 21 (8ಎ, 4x1, 6x2)
ಹರ್‌ಪ್ರೀತ್ ಔಟಾಗದೇ 2 (2ಎ)
ಇತರೆ: 8(ಬೈ1, ಲೆಗ್‌ಬೈ1, ವೈಡ್ 6)
ವಿಕೆಟ್ ಪತನ: 1–17 (ಜಾನಿ ಬೇಸ್ಟೊ, 2.3), 2–72 (ಪ್ರಭಸಿಮ್ರನ್ ಸಿಂಗ್, 8.5), 3–98 (ಲಿಯಾಮ್ ಲಿವಿಂಗ್‌ಸ್ಟೋನ್, 11.6), 4–98 (ಶಿಖರ್ ಧವನ್, 12.1), 5–150 (ಸ್ಯಾಮ್ ಕರನ್, 17.5), 6–154 (ಜಿತೇಶ್, 18.4).
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–26–2; ಯಶ್ ದಯಾಳ್ 4–0–23–1; ಅಲ್ಝರಿ ಜೋಸೆಫ್ 4–0–43–1; ಕ್ಯಾಮರಾನ್ ಗ್ರೀನ್ 2–0–19–0; ಮಯಂಕ್ ದಾಗರ್ 3–0–34–0; ಗ್ಲೆನ್ ಮ್ಯಾಕ್ಸ್‌ಬೆಲ್ 3–0–29–2.

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 178 (19.2 ಓವರ್)
ವಿರಾಟ್ ಸಿ ಹರ್‌ಪ್ರೀತ್ ಬಿ ಹರ್ಷಲ್ 77 (49ಎ, 4X11, 6X2)
ಫಫ್ ಸಿ ಕರನ್ ಬಿ ರಬಾಡ 3 (7ಎ)
ಗ್ರೀನ್ ಸಿ ಶರ್ಮಾ ಬಿ ರಬಾಡ 3 (5ಎ)
ರಜತ್ ಬಿ ಹರಪ್ರೀತ್ 18 (18ಎ, 4x1, 6x1)
ಮ್ಯಾಕ್ಸ್‌ವೆಲ್ ಬಿ ಹರ್‌ಪ್ರೀತ್ 3 (5ಎ)
ಅನುಜ್ ಬಿ ಸ್ಯಾಮ್ ಕರನ್ 11 (14ಎ, 4X1)
ದಿನೇಶ್ ಔಟಾಗದೇ 28 (10ಎ)
ಮಹಿಪಾಲ್ ಔಟಾಗದೇ 17 (8ಎ)
ಇತರೆ: 18 (ಬೈ2, ಲೆಗ್‌ಬೈ 9, ವೈಡ್7)
ವಿಕೆಟ್ ಪತನ: 1-26 (ಫಫ್ ಡು ಪ್ಲೆಸ್; 2.4), 2-43 (ಕ್ಯಾಮರಾನ್ ಗ್ರೀನ್; 4.4), 3-86 (ರಜತ್ ಪಾಟೀದಾರ್; 10.3), 4-103 (ಗ್ಲೆನ್ ಮ್ಯಾಕ್ಸ್‌ವೆಲ್; 12.1), 5–130 (ವಿರಾಟ್ ಕೊಹ್ಲಿ, 15.6), 6–130 (ಅನುಜ್ ರಾವತ್, 16.2)
ಬೌಲಿಂಗ್: ಸ್ಯಾಮ್ ಕರನ್ 3–0–30–1, ಅರ್ಷದೀಪ್ ಸಿಂಗ್ 3.2–40–0, ಕಗಿಸೊ ರಬಾಡ 4–0–23–2, ಹರಪ್ರೀತ್ ಬ್ರಾರ್ 4–0–13–2, ಹರ್ಷಲ್ ಪಟೇಲ್ 4–0–45–1, ರಾಹುಲ್ ಚಾಹರ್ 1–0–16–0
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ

ಪಿಚ್‌ಗೆ ನುಗ್ಗಿದ ಕೊಹ್ಲಿ ಅಭಿಮಾನಿ

ಗುರಿ ಬೆನ್ನಟ್ಟಿದ ಆರ್‌ಸಿಬಿಯ ಇನಿಂಗ್ಸ್ ಆರಂಭವಾಗುವ ಹೊತ್ತಿನಲ್ಲಿ ಗ್ಯಾಲರಿಯಲ್ಲಿದ್ದ ಅಭಿಮಾನಿಯೊಬ್ಬ ಪಿಚ್‌ಗೆ ನುಗ್ಗಿದ ಘಟನೆ ನಡೆಯಿತು.

ಕ್ರೀಸ್‌ಗೆ ಬಂದು ಗಾರ್ಡ್ ತೆಗೆದುಕೊಳ್ಳುತ್ತಿದ್ದ ವಿರಾಟ್ ಕೊಹ್ಲಿ ಅವರ ಬಳಿ ಸಾಗಿದ ಅಭಿಮಾನಿ ಕಾಲು ಮುಟ್ಟಿ ನಮಸ್ಕರಿಸಿದ. ಭದ್ರತಾ ಸಿಬ್ಬಂದಿಯು ಧಾವಿಸಿ ಆ ಯುವಕನನ್ನು ಹೊರಗೆ ಕರೆದುಕೊಂಡು ಹೋದರು.

ಮೇ 26ಕ್ಕೆ ಫೈನಲ್

ನವದೆಹಲಿ (ಎಎಫ್‌ಪಿ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಐಪಿಎಲ್ ಟೂರ್ನಿಯ ಸಂಪೂರ್ಣ ವೇಳಾಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಫೈನಲ್ ಮೇ 26ರಂದು ಚೆನ್ನೈನಲ್ಲಿ ನಡೆಯಲಿದೆ. ಚಿಪಾಕ್‌ನಲ್ಲೇ ಮೇ 24ರಂದು ಎರಡನೇ ಕ್ವಾಲಿಫೈರ್ ಪಂದ್ಯ ನಿಗದಿಯಾಗಿದೆ.

ಮಾರ್ಚ್ 22ರಂದು ಟೂರ್ನಿ ಆರಂಭವಾಗಿದ್ದು, ಏಪ್ರಿಲ್ 7ರವರೆಗಿನ ಮೊದಲ ಹಂತದ ವೇಳಾಪಟ್ಟಿಯನ್ನು ಈ ಹಿಂದೆಯೇ ಬಿಡುಗಡೆ ಮಾಡಲಾಗಿತ್ತು. ಲೋಕ ಸಭಾ ಚುನಾವಣೆಯ ಮಧ್ಯದಲ್ಲೇ ಈ ಬಾರಿ ಐಪಿಎಲ್ ಕೂಡ ನಡೆಯುತ್ತಿದೆ.

ಫೈನಲ್ ಮೊದಲಿನ ಇತರ ಎರಡು ನಿರ್ಣಾಯಕ ಪಂದ್ಯಗಳು ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಮೊದಲ ಕ್ವಾಲಿಫೈರ್ ಮೇ 21ರಂದು ಹಾಗೂ ಎಲಿಮಿನೇಟರ್ ಪಂದ್ಯ ಮೇ 22ರಂದು ನಿಗದಿಯಾಗಿವೆ.

ಲೋಕಸಭೆ ಚುನಾವಣೆ ದಿನಾಂಕ ಮತ್ತು ಸ್ಥಳಗಳನ್ನು ಗಮನದಲ್ಲಿಟ್ಟುಕೊಂಡು ವೇಳಾಪಟ್ಟಿ ರೂಪಿಸಲಾಗಿದೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೀಗ್ ಪಂದ್ಯಗಳು ಮೇ 19ರವರೆಗೆ ನಡೆಯಲಿವೆ. 20ರಂದು ವಿಶ್ರಾಂತಿ ದಿನ. 21ರಂದು ಮೊದಲ ಎರಡು ಸ್ಥಾನ ಪಡೆದ ತಂಡಗಳು ಮೊದಲ ಕ್ವಾಲಿಫೈರ್‌ನಲ್ಲಿ ಆಡಲಿವೆ. ಮರುದಿನ ಎಲಿಮಿನೇಟರ್ ಪಂದ್ಯ ನಿಗದಿಯಾಗಿದೆ. 24ರಂದು ಎರಡನೆ ಕ್ವಾಲಿಫೈರ್ ಹಾಗೂ 26ರಂದು (ಭಾನುವಾರ) ಫೈನಲ್ ನಿಗದಿಯಾಗಿವೆ ಎಂದು ತಿಳಿಸಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ (ಡಿಸಿ) ತಂಡ ವಿಶಾಖಪಟ್ಟಣದಲ್ಲಿ ತನ್ನ ಮೊದಲ ಎರಡು (ಮಾರ್ಚ್ 31 ಮತ್ತು ಏ. 3ರಂದು) ತವರು ಪಂದ್ಯಗಳನ್ನು ಆಡಲಿದೆ. ನಂತರದ ಐದು ಪಂದ್ಯಗಳನ್ನು (ಏ. 20, 24, 27, ಮೇ 7 ಮತ್ತು 14) ತವರಿನಲ್ಲಿ ಆಡಲಿದೆ. ದೆಹಲಿಯ ಏಳು ಸ್ಥಾನಗಳಿಗೆ ಲೋಕಸಭಾ ಚುಮಾವಣೆ ಮೇ 25ರಂದು ನಡೆಯಲಿದೆ.

ರಾಜಸ್ಥಾನ ರಾಯಲ್ಸ್ (ಆರ್‌ಆರ್) ತಂಡ ತನ್ನ ಕೆಲವು ಪಂದ್ಯಗಳನ್ನು ಗುವಾಹಟಿಯಲ್ಲಿ ಆಡಲಿದೆ. ಪಂಜಾಬ್ ಕಿಂಗ್ಸ್ (ಪಿಬಿಕೆಎಸ್) ತನ್ನ ಎರಡು ಪಂದ್ಯಗಳನ್ನು ಧರ್ಮಶಾಲಾದಲ್ಲಿ ಆಡಲಿದೆ. ಉಳಿದ ಪಂದ್ಯಗಳನ್ನು ಮುಲ್ಲನಪುರದಲ್ಲಿ ನಿರ್ಮಿಸಲಾಗಿರುವ ಕ್ರೀಡಾಂಗಣದಲ್ಲಿ ಆಡಲಿದೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನ ವೇಳಾಪಟ್ಟಿ

ದಿನಾಂಕ	ತಂಡಗಳು	ಸಮಯ	ಸ್ಥಳ
ಏ.8	ಸಿಎಸ್‌ಕೆ – ಕೆಕೆಆರ್	7.30	ಚೆನ್ನೈ
ಏ.9	ಪಂಜಾಬ್ ಕಿಂಗ್ಸ್ – ಎಸ್‌ಆರ್‌ಎಚ್	7.30	ಮುಲ್ಲನ್‌ಪುರ
ಏ.10	ಆರ್‌ಆರ್ – ಜಿಟಿ	7.30	ಜೈಪುರ
ಏ.11	ಎಂಐ – ಆರ್‌ಸಿಬಿ	7.30	ಮುಂಬೈ
ಏ.12	ಎಲ್‌ಎಸ್‌ಜಿ – ಡಿಸಿ	7.30	ಲಖನೌ
ಏ.13	ಪಂಜಾಬ್ ಕಿಂಗ್ಸ್ - ಆರ್‌ಆರ್	7.30	ಮುಲ್ಲನ್‌ಪುರ
ಏ.14	ಕೆಕೆಆರ್ – ಎಲ್‌ಎಸ್‌ಜಿ	3.30	ಕೋಲ್ಕತ್ತ
ಏ.14	ಎಂಐ – ಸಿಎಸ್‌ಕೆ	7.30	ಮುಂಬೈ
ಏ.15	ಆರ್‌ಸಿಬಿ – ಎಸ್‌ಆರ್‌ಎಚ್	7.30	ಬೆಂಗಳೂರು
ಏ.16	ಜಿಟಿ – ಡಿಸಿ	7.30	ಅಹಮದಾಬಾದ್
ಏ.17	ಕೆಕೆಆರ್ – ಆರ್‌ಆರ್	7.30	ಕೋಲ್ಕತ್ತ
ಏ.18	ಪಂಜಾಬ್ ಕಿಂಗ್ಸ್ – ಎಂಐ	7.30	ಮುಲ್ಲನ್‌ಪುರ
ಏ.19	ಎಲ್‌ಎಸ್‌ಜಿ – ಸಿಎಸ್‌ಕೆ	7.30	ಲಖನೌ
ಏ.20	ಡಿಸಿ – ಎಸ್‌ಆರ್‌ಎಚ್	7.30	ದೆಹಲಿ
ಏ.21	ಕೆಕೆಆರ್ – ಆರ್‌ಸಿಬಿ	3.30	ಕೋಲ್ಕತ್ತ
ಏ.21	ಪಂಜಾಬ್ ಕಿಂಗ್ಸ್ – ಜಿಟಿ	7.30	ಮುಲ್ಲನ್‌ಪುರ
ಏ.22	ಆರ್‌ಆರ್ – ಎಂಐ	7.30	ಜೈಪುರ
ಏ.23	ಸಿಎಸ್‌ಕೆ – ಎಲ್‌ಎಸ್‌ಜಿ	7.30	ಚೆನ್ನೈ
ಏ.24	ಡಿಸಿ – ಜಿಟಿ	7.30	ದೆಹಲಿ
ಏ.25	ಎಸ್‌ಆರ್‌ಎಚ್ – ಆರ್‌ಸಿಬಿ	7.30	ಹೈದರಾಬಾದ್
ಏ.26	ಕೆಕೆಆರ್ – ಪಂಜಾಬ್ ಕಿಂಗ್ಸ್	7.30	ಕೋಲ್ಕತ್ತ
ಏ.27	ಡಿಸಿ – ಎಂಐ	3.30	ದೆಹಲಿ
ಏ.27	ಎಲ್‌ಎಸ್‌ಜಿ – ಆರ್‌ಆರ್	7.30	ಲಖನೌ
ಏ.28	ಜಿಟಿ – ಆರ್‌ಸಿಬಿ	3.30	ಅಹಮದಾಬಾದ್
ಏ.28	ಸಿಎಸ್‌ಕೆ – ಎಸ್‌ಆರ್‌ಎಚ್	7.30	ಚೆನ್ನೈ
ಏ.29	ಕೆಕೆಆರ್ – ಡಿಸಿ	7.30	ಕೋಲ್ಕತ್ತ
ಏ.30	ಎಲ್‌ಎಸ್‌ಜಿ – ಎಂಐ	7.30	ಲಖನೌ
ಮೇ 1	ಸಿಎಸ್‌ಕೆ – ಪಂಜಾಬ್ ಕಿಂಗ್ಸ್	7.30	ಚೆನ್ನೈ
ಮೇ 2	ಎಸ್‌ಆರ್‌ಎಚ್ – ಆರ್‌ಆರ್	7.30	ಹೈದರಾಬಾದ್
ಮೇ 3	ಎಂಐ – ಕೆಕೆಆರ್	7.30	ಮುಂಬೈ
ಮೇ 4	ಆರ್‌ಸಿಬಿ – ಜಿಟಿ	7.30	ಬೆಂಗಳೂರು
ಮೇ 5	ಪಂಜಾಬ್ ಕಿಂಗ್ಸ್ – ಸಿಎಸ್‌ಕೆ	3.30	ಧರ್ಮಶಾಲಾ
ಮೇ 5	ಎಲ್‌ಎಸ್‌ಜಿ – ಕೆಕೆಆರ್	7.30	ಲಖನೌ
ಮೇ 6	ಎಂಐ – ಎಸ್‌ಆರ್‌ಎಚ್	7.30	ಮುಂಬೈ
ಮೇ 7	ಡಿಸಿ – ಆರ್‌ಆರ್	7.30	ದೆಹಲಿ
ಮೇ 8	ಎಸ್‌ಆರ್‌ಎಚ್ – ಎಲ್‌ಎಸ್‌ಜಿ	7.30	ಹೈದರಾಬಾದ್
ಮೇ 9	ಪಂಜಾಬ್ ಕಿಂಗ್ಸ್ – ಆರ್‌ಸಿಬಿ	7.30	ಧರ್ಮಶಾಲಾ
ಮೇ 10	ಜಿಟಿ – ಸಿಎಸ್‌ಕೆ	7.30	ಅಹಮದಾಬಾದ್
ಮೇ 11	ಕೆಕೆಆರ್ – ಎಂಐ	7.30	ಕೋಲ್ಕತ್ತ
ಮೇ 12	ಸಿಎಸ್‌ಕೆ – ಆರ್‌ಆರ್	3.30	ಚೆನ್ನೈ
ಮೇ 12	ಆರ್‌ಸಿಬಿ – ಡಿಸಿ	7.30	ಬೆಂಗಳೂರು
ಮೇ 13	ಜಿಟಿ – ಕೆಕೆಆರ್	7.30	ಅಹಮದಾಬಾದ್
ಮೇ 14	ಡಿಸಿ – ಎಲ್‌ಎಸ್‌ಜಿ	7.30	ದೆಹಲಿ
ಮೇ 15	ಆರ್‌ಆರ್ – ಪಂಜಾಬ್ ಕಿಂಗ್	7.30	ಗುವಾಹಟಿ
ಮೇ 16	ಎಸ್‌ಆರ್‌ಎಚ್ – ಜಿಟಿ	7.30	ಹೈದರಾಬಾದ್
ಮೇ 17	ಎಂಐ – ಎಲ್‌ಎಸ್‌ಜಿ	7.30	ಮುಂಬೈ
ಮೇ 18	ಆರ್‌ಸಿಬಿ – ಸಿಎಸ್‌ಕೆ	7.30	ಬೆಂಗಳೂರು
ಮೇ 19	ಎಸ್‌ಆರ್‌ಎಚ್ – ಪಂಜಾಬ್ ಕಿಂಗ್ಸ್	3.30	ಹೈದರಾಬಾದ್
ಮೇ 19	ಆರ್‌ಆರ್ – ಕೆಕೆಆರ್	7.30	ಗುವಾಹಟಿ
ಮೇ 21	ಕ್ವಾಲಿಫೈಯರ್ 1	7.30	ಅಹಮದಾಬಾದ್
ಮೇ 22	ಎಲಿಮಿನೇಟರ್	7.30	ಅಹಮದಾಬಾದ್
ಮೇ 24	ಕ್ವಾಲಿಫೈಯರ್ 2	7.30	ಚೆನ್ನೈ
ಮೇ 26	ಫೈನಲ್	7.30	ಚೆನ್ನೈ

ಇಶಾನ್–ಜಯ್ ಶಾ ಮಾತುಕತೆ

ಅಹಮದಾಬಾದ್ (ಪಿಟಿಐ): ವಿಕೆಟ್‌ಕೀಪರ್ –ಬ್ಯಾಟರ್ ಇಶಾನ್ ಕಿಶನ್ ಅವರೊಂದಿಗೆ ಭಾನುವಾರ ಐಪಿಎಲ್ ಪಂದ್ಯದ ನಂತರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಅವರು ಕೆಲಹೊತ್ತು ಮಾತುಕತೆ ನಡೆಸಿದರು.

ಇತ್ತೀಚೆಗಷ್ಟೇ ಇಶಾನ್ ಕಿಶನ್ ಅವರನ್ನು ಬಿಸಿಸಿಐ ಕೇಂದ್ರ ಗುತ್ತಿಗೆಯಿಂದ ಕೈಬಿಡಲಾಗಿತ್ತು. ದಕ್ಷಿಣ ಆಫ್ರಿಕಾ ಟೆಸ್ಟ್ ಸರಣಿಗೆ ಆಯ್ಕೆಯಾಗಿದ್ದ ಇಶಾನ್ ಅವರು ವೈಯಕ್ತಿಕ ಕಾರಣ ನೀಡಿ ಹಿಂದೆ ಸರಿದಿದ್ದರು. ಆದರೆ ಅದರ ನಂತರ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿದ್ದರು. ಅಲ್ಲದೇ ಫ್ರ್ಯಾಂಚೈಸಿ ಕ್ರಿಕೆಟ್‌ನಲ್ಲಿಯೂ ಆಡಿದ್ದರು.

ಅಲ್ಲದೇ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುವಂತೆ ಬಿಸಿಸಿಐ ನೀಡಿದ್ದ ಸೂಚನೆ ಯನ್ನೂ ಇಶಾನ್ ಪಾಲಿಸಿ ರಲಿಲ್ಲ. ಇದ ರಿಂದಾಗಿ ಅವ ರನ್ನು ಕೇಂದ್ರ ಗುತ್ತಿ ಗೆ ಯಿಂದ ಕೈಬಿಡಲಾಗಿತ್ತು.

ಪಂದ್ಯದ ನಂತರ ಅವರೊಂದಿಗೆ ಜಯ್ ಶಾ ಮಾತನಾಡಿದರು. ಇದರಿಂದಾಗಿ ಇಶಾನ್ ಅವರು ಭಾರತ ತಂಡಕ್ಕೆ ಮರಳುವ ಕುರಿತು ಆಶಾಭಾವನೆ ಮೂಡಿದೆ ಎಂದು ಮೂಲಗಳು ಹೇಳಿವೆ.

ಹಾಕಿ ಕೋಚ್: ಮುನ್ನೆಲೆಗೆ ಹರೇಂದ್ರ

ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ಅವರ ರಾಜೀನಾಮೆಯಿಂದ ತೆರವಾಗಿರುವ ಸ್ಥಾನಕ್ಕೆ ಹರೇಂದ್ರ ಸಿಂಗ್ ಮುಂಚೂಣಿಯಲ್ಲಿದ್ದಾರೆ. 2021ರಲ್ಲಿ ಅಮೆರಿಕ ಪುರುಷರ ತಂಡದ ತರಬೇತುದಾರರಾಗಿ ನೇಮಕಗೊಳ್ಳುವ ಮೊದಲು ಹರೇಂದ್ರ, ಮಹಿಳಾ ತಂಡದ ತರಬೇತುದಾರರಾಗಿ ಕಾರ್ಯನಿರ್ವಹಿಸಿದ್ದರು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಮಹಿಳಾ ತಂಡ ವಿಫಲ ವಾಗಿತ್ತು. ಇತ್ತೀಚೆಗೆ ಹರೇಂದ್ರ ಸಿಂಗ್ ಸಂದರ್ಶನ ನಡೆಸಿರುವ ಹಾಕಿ ಇಂಡಿಯಾ, ತಂಡ ಬಲಪಡಿಸಲು ಅತ್ಯು ತ್ತಮ ವ್ಯಕ್ತಿ ಎಂದು ಅಭಿಪ್ರಾಯಪಟ್ಟಿದೆ.

ಹರೇಂದ್ರ ಸಿಂಗ್

'ಶೋಪ್‌ಮನ್ ಬದಲಿಗೆ ಹರೇಂದ್ರ ಅವರನ್ನು ನೇಮಕ ಮಾಡಲು ಹಾಕಿ ಇಂಡಿಯಾ ಉತ್ಸುಕವಾಗಿದೆ. ಈ ಹಿಂದೆ ಪುರುಷರ ಮತ್ತು ಮಹಿಳಾ ತಂಡ ಗಳಿಗೆ ತರಬೇತುದಾರರಾಗಿದ್ದ ಅವರು ಭಾರತ ಹಾಕಿ ವ್ಯವಸ್ಥೆಯನ್ನು ತಿಳಿದಿದ್ದಾರೆ. ಮಹಿಳಾ ತಂಡವನ್ನು ಉನ್ನತ ಮಟ್ಟಕ್ಕೆ ಒಯ್ಯಲು ಅವರು ಅತ್ಯುತ್ತಮ ವ್ಯಕ್ತಿ' ಎಂದು ರಾಷ್ಟ್ರೀಯ ಫೆಡರೇಷನ್ ಮೂಲಗಳು ಪಿಟಿಐಗೆ ತಿಳಿಸಿವೆ.

ಚೆಟ್ರಿಗೆ ಮೈಲಿಗಲ್ಲು ಪಂದ್ಯ

ಗುವಾಹಟಿ: ಭಾರತದ ಫುಟ್‌ಬಾಲ್ ತಾರೆ ಸುನೀಲ್ ಚೆಟ್ರಿ ಅವರು ಮಂಗಳವಾರ ಇಲ್ಲಿ 150ನೇ ಅಂತರರಾಷ್ಟ್ರೀಯ ಪಂದ್ಯವನ್ನು ಆಡಲಿದ್ದಾರೆ. ಭಾರತ ತಂಡವು ಫೀಫಾ ವಿಶ್ವಕಪ್ 'ಎ' ಗುಂಪಿನ ಅರ್ಹತಾ ಸುತ್ತಿನ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವನ್ನು ಎದುರಿಸಲಿದ್ದು ನಾಯಕ ಚೆಟ್ರಿ ಅವರೇ ಆಕರ್ಷಣೆಯ ಕೇಂದ್ರವಾಗಿದ್ದಾರೆ.

ಆದರೆ ಮುಂದಿನ ಸುತ್ತಿಗೆ ಮುನ್ನಡೆಯಲು ಭಾರತ ಈ ಪಂದ್ಯದಲ್ಲಿ ಗೋಲಿನ ಎದುರು ಪರದಾಟದಿಂದ ಹೊರಬರಬೇಕಾಗಿದೆ.

ಸೌದಿ ಅರೇಬಿಯಾದ ಅಭಾದಲ್ಲಿ ಮಾರ್ಚ್ 22ರಂದು ನಡೆದ ಪಂದ್ಯದಲ್ಲಿ ತನಗಿಂತ ಕೆಳಕ್ರಮಾಂಕದ ಅಫ್ಗಾನಿಸ್ತಾನ ವಿರುದ್ಧ ಭಾರತ ಗೋಲುರಹಿತ 'ಡ್ರಾ' ಸಾಧಿಸಲಷ್ಟೇ ಶಕ್ತವಾಗಿತ್ತು.

ಭಾರತ ನವೆಂಬರ್‌ನಲ್ಲಿ ಕುವೈತ್ ಎದುರಿನ ಪಂದ್ಯದಲ್ಲಿ ಕೊನೆಯ ಬಾರಿ ಗೋಲು ಗಳಿಸಿತ್ತು.

ನಂತರ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಗೋಲು ಗಳಿಸಲು ಸಾಧ್ಯವಾಗಿಲ್ಲ.

ಹೀಗಾಗಿ ಇಂದಿರಾ ಗಾಂಧಿ ಅಥ್ಲೆಟಿಕ್ ಸ್ಟೇಡಿಯಂನಲ್ಲಿ, ತಮ್ಮ ಮೈಲಿಗಲ್ಲಿನ ಪಂದ್ಯ ಆಡಲಿರುವ ಚೆಟ್ರಿ ಅವರು ಆ ಸಂದರ್ಭವನ್ನು ಸ್ಮರಣೀಯಗೊಳಿಸಿ ಭಾರತ ತಂಡದ ಗೆಲುವಿಗೆ ನೆರವಾಗಬಲ್ಲರೇ ಎಂಬ ಕುತೂಹಲವಿದೆ.

2005ರಲ್ಲಿ ಮೊದಲ ಅಂತರರಾಷ್ಟ್ರೀಯ ಪಂದ್ಯ ಆಡಿದ್ದ ಚೆಟ್ರಿ 149 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 93 ಗೋಲುಗಳನ್ನು ಹೊಡೆದಿದ್ದಾರೆ. ಆದರೆ ಭಾರತದ ಇತರ ಫಾರ್ವರ್ಡ್ ಆಟಗಾರರೂ ಈ ನಿರ್ಣಾಯಕ ಪಂದ್ಯದಲ್ಲಿ ಹೊಣೆಯಿಂದ ಆಡಬೇಕಾಗಿದೆ.

ಪಂದ್ಯ ಆರಂಭ: ರಾತ್ರಿ 7 ಗಂಟೆ.

ಗಿಲ್– ಗಾಯಕವಾಡಗೆ ಸತ್ವಪರೀಕ್ಷೆ • ಟೈಟನ್ಸ್– ಸಿಎಸ್‌ಕೆ ಪಂದ್ಯ ಇಂದು

ಹೊಸ ನಾಯಕರ ಮುಖಾಮುಖಿ

ಚೆನ್ನೈ (ಪಿಟಿಐ): ತಮ್ಮ ಮೊದಲ ಪಂದ್ಯ ಗೆದ್ದುಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಮಂಗಳವಾರ ಇಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯವು ಎರಡು ಹೊಸ ನಾಯಕರಿಗೆ– ಶುಭಮನ್ ಗಿಲ್ ಮತ್ತು ಋತುರಾಜ್ ಗಾಯಕವಾಡ ಅವರಿಗೆ ಸತ್ವಪರೀಕ್ಷೆಯಾಗಿದೆ.

ಆಕರ್ಷಕ ಹೊಡೆತಗಳನ್ನು ಆಡಬಲ್ಲ ಇಬ್ಬರೂ ತಂಡದ ಆರಂಭ ಆಟಗಾರರು ಕೂಡ. ಉದ್ಘಾಟನಾ ಪಂದ್ಯಕ್ಕೆ ಮುನ್ನಾದಿನ ಎಂ.ಎಸ್. ಧೋನಿ ಪದತ್ಯಾಗ ಮಾಡಿದ್ದರಿಂದ ಗಾಯಕವಾಡ ಅವರಿಗೆ ನಾಯಕತ್ವ ಒಲಿಯಿತು. ಹಾರ್ದಿಕ್ ಪಾಂಡ್ಯ, ಕಳೆದ ನವೆಂಬರ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ದಿಢೀರ್ ವರ್ಗಾವಣೆಯಾದ ಕಾರಣ, ತೆರವಾದ ಸ್ಥಾನಕ್ಕೆ ಗಿಲ್ ನಾಯಕರಾದರು. 24 ವರ್ಷದ ಗಿಲ್ ಪ್ರಸಕ್ತ ಐಪಿಎಲ್‌ನ ಅತಿ ಕಿರಿಯ ನಾಯಕ.

ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ಗಿಲ್ ನಾಯಕತ್ವದ ಕೌಶಲ ಪ್ರದರ್ಶಿಸಿದ್ದಾರೆ. ಹೆಡ್ ಕೋಚ್ ಆಶಿಷ್ ನೆಹ್ರಾ, ಅನುಭವಿ ಡೇವಿಡ್ ಮಿಲ್ಲರ್ ಮತ್ತು ನ್ಯೂಜಿಲೆಂಡ್‌ನ ನಾಯಕ ಕೇನ್ ವಿಲಿಯಮ್ಸನ್ ಅವರ ಬೆನ್ನಿಗಿದ್ದಾರೆ. ಗಾಯಕವಾಡ ಇನ್ನೊಂದೆಡೆ, ಚೆನ್ನೈ ತಂಡದ 'ಹಿರಿಯಣ್ಣ' ಧೋನಿ ಮಾರ್ಗದರ್ಶನದಲ್ಲಿ ಮೊದಲ ಪಂದ್ಯದಲ್ಲೇ ಗಮನಸೆಳೆದಿದ್ದಾರೆ.



ಶುಭಮನ್ ಗಿಲ್

ಋತುರಾಜ್ ಗಾಯಕವಾಡ

ಚೆನ್ನೈ ತಂಡ ಚಿಂತೆಯಿರುವುದು ಬೌಲಿಂಗ್ ವಿಭಾಗದಲ್ಲಿ. ವೇಗಿ ತುಷಾರ್ ದೇಶಪಾಂಡೆ ತುಂಬಾ ದುಬಾರಿಯಾಗಿದ್ದರು. ಶಾರ್ದೂಲ್ ಠಾಕೂರ್ ಕೂಡ ಪರಿಣಾಮಕಾರಿ ಆಗಿರಲಿಲ್ಲ. ಹೀಗಾಗಿ ಆರ್‌ಸಿಬಿಯ ದಿನೇಶ್ ಕಾರ್ತಿಕ್ ಮತ್ತು ಅನುಜ್ ರಾವತ್ ಇವರೆದುರು ಬಿರುಸಿನ ಆಟವಾಡಿದ್ದರು. ಮುಸ್ತಫಿಜುರ್ ರೆಹಮಾನ್ ಒಬ್ಬರೇ ಪ್ರಭಾವಶಾಲಿಯಾಗಿ ನಾಲ್ಕು ವಿಕೆಟ್ ಪಡೆದಿದ್ದರು. ಹೀಗಾಗಿ ಎಡಗೈ ವೇಗಿ ಮುಕೇಶ್ ಚೌಧರಿ ಅವಕಾಶದ ನಿರೀಕ್ಷೆಯಲ್ಲಿದ್ದಾರೆ.

ಮಂಡಿರಜ್ಜು ನೋವಿನಿಂದ ಅಲಭ್ಯರಾಗಿದ್ದ ವೇಗದ ಬೌಲರ್ ಮತೀಶ ಪಥಿರಾಣ ಈ ಪಂದ್ಯದಲ್ಲಿ ಆಡುವ ನಿರೀಕ್ಷೆಯಿದೆ. ರಚಿನ್ ರವೀಂದ್ರ ಅವರೂ ಬೌಲಿಂಗ್ ಪಡೆಯಬಹುದು.

ಬ್ಯಾಟಿಂಗ್‌ನಲ್ಲಿ ಸಿಎಸ್‌ಕೆಗೆ ಅಷ್ಟೇನೂ ಸಮಸ್ಯೆಯಿಲ್ಲ. ನ್ಯೂಜಿಲೆಂಡ್ ಆಟಗಾರ ರವೀಂದ್ರ ಮೊದಲ ಪಂದ್ಯದಲ್ಲೇ ಗಮನ ಸೆಳೆದಿದ್ದಾರೆ. ಯುವ ಬ್ಯಾಟರ್ ಸಮೀರ್ ರಿಜ್ವಿ ಮೊದಲ ಪಂದ್ಯಕ್ಕೆ ಆಯ್ಕೆಯಾದರೂ ಬ್ಯಾಟಿಂಗ್ ಪಡೆದಿರಲಿಲ್ಲ. ಧೋನಿ ಸಹ ಬ್ಯಾಟಿಂಗಿಗೆ ಇಳಿದಿರಲಿಲ್ಲ.

ಇನ್ನೊಂದೆಡೆ ಟೈಟನ್ಸ್ ಬ್ಯಾಟರ್‌ಗಳು ಉತ್ತಮ ಆರಂಭದ ಲಾಭ ಪಡೆಯಲು ವಿಫಲರಾಗಿದ್ದರು. ಗಿಲ್ ಮತ್ತು ಹಿರಿಯ ವಿಕೆಟ್ ಕೀಪರ್ –ಬ್ಯಾಟರ್ ವೃದ್ಧಿಮಾನ್ ಸಹ ಅವರಿಂದ ಬಿರುಸಿನ ಆರಂಭ ಸಿಗ ಬೇಕಾಗಿದೆ. ಮಧ್ಯಮ ಕ್ರಮಾಂಕದಲ್ಲಿ ಅಜ್ಮತ್‌ಉಲ್ಲಾ ಒಮರ್‌ಝೈ, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯಾ ಕೂಡ ಬೀಸು ಹೊಡೆತದ ಆಟ ಆಡಬಲ್ಲವರು. ಗುಜರಾತ್ ತಂಡದಲ್ಲಿರುವ ಚೆನ್ನೈ ಮೂಲದ ಸಾಯಿ ಸುದರ್ಶನ್ ಉತ್ತಮ ಲಯದಲ್ಲಿದ್ದಾರೆ. ಮೊಹಮ್ಮದ್ ಶಮಿ ಗೈರಿನಲ್ಲಿ ವೇಗ–ಸ್ಪಿನ್ ಬೌಲರ್‌ಗಳು ಮುಂಬೈ ಎದುರು ಸಾಂಘಿಕ ಪ್ರದರ್ಶನ ನೀಡಿದ್ದರು. ಚಿಪಾಕ್‌ನ ಮಂದಗತಿಯ ಪಿಚ್‌ನಲ್ಲಿ ಸ್ಪಿನ್ನರ್‌ಗಳು ಪ್ರಮುಖ ಪಾತ್ರ ವಹಿಸಬಹುದು.

ಪಂದ್ಯ ಆರಂಭ: ರಾತ್ರಿ 7.30.

ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾದ ಹಾರ್ದಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಬಾರಿಯ ಐಪಿಎಲ್ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ನಾಯಕತ್ವ ವಹಿಸಿಕೊಂಡ ಹಾರ್ದಿಕ್ ಪಾಂಡ್ಯ ಅವರು ಈಗ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಭಾನುವಾರ ರಾತ್ರಿ ಐಪಿಎಲ್ ಪಂದ್ಯ ನಡೆದ ಅಹಮದಾಬಾದಿನ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೇರಿದ್ದ ಸುಮಾರು ಒಂದು ಲಕ್ಷ ಪ್ರೇಕ್ಷಕರಿದ್ದ ಗ್ಯಾಲರಿಗಳಿಂದ ಹಾರ್ದಿಕ್ ಅವರನ್ನು ಬೂ..ಬೂ.. ಎಂದು ಗೇಲಿ ಮಾಡಿದರು. ಈ ಪಂದ್ಯದಲ್ಲಿ ಮುಂಬೈ ತಂಡವು ಗುಜರಾತ್ ಟೈಟನ್ಸ್ ವಿರುದ್ಧ ಸೋತಿತು. ಎರಡೂ ತಂಡಗಳ ಅಭಿಮಾನಿಗಳಿಂದಲೂ ಹಾರ್ದಿಕ್ ಟೀಕೆಗೆ ಗುರಿಯಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅವರ ಬಗ್ಗೆ ಟೀಕೆಗಳ ಮಹಾಪೂರವೇ ಹರಿಯುತ್ತಿದೆ. ಗುಜರಾತ್ ಎದುರಿನ ಪಂದ್ಯದಲ್ಲಿ ಮುಂಬೈ ಸೋಲಿಗೆ ಹಾರ್ದಿಕ್ ಮತ್ತು ತಿಲಕ್ ವರ್ಮಾ ಅವರ ಆಟದ ವೈಖರಿಯೇ ಕಾರಣ ಎಂದೂ ಟೀಕಿಸಿದ್ದಾರೆ.

ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಮುಂಬೈ ತಂಡದ ನಿಕಟಪೂರ್ವ ನಾಯಕ ರೋಹಿತ್ ಶರ್ಮಾ ಅವರೊಂದಿಗಿನ ಹಾರ್ದಿಕ್ ಅವರ ನಡವಳಿಕೆಯು ಟೀಕೆಗೊಳಗಾಗಿದೆ. ಭಾರತ ತಂಡದ ನಾಯಕರೂ ಆಗಿರುವ ರೋಹಿತ್ ಅವರನ್ನು ಲಾಂಗ್ ಆನ್‌ನಲ್ಲಿ ಫೀಲ್ಡಿಂಗ್‌ಗೆ ಕಳಿಸಿದ್ದು, ಪದೇ ಪದೇ ಅವರ ಪೊಸಿಷನ್ ಬದಲಾವಣೆ ಮಾಡಿದ್ದು ಟೀಕೆಗೊಳಗಾಗಿದೆ. ರೋಹಿತ್ ಅವರು ಹೆಚ್ಚಾಗಿ 30 ಯಾರ್ಡ್ ವೃತ್ತದೊಳಗೇ ಫೀಲ್ಡಿಂಗ್ ಮಾಡುವುದು ರೂಢಿ. ಅವರನ್ನು ದಿಢೀರ್ ಆಗಿ 'ಲಾಂಗ್ ಆನ್‌ಗೆ ಹೋಗು ' ಎಂದು ಹಾರ್ದಿಕ್ ಹೇಳಿದ ರೀತಿಯಿಂದ ಸ್ವತಃ ರೋಹಿತ್ ಕೂಡ ಅಚ್ಚರಿಗೊಂಡಿದ್ದರು. ಆದರೆ ರೋಹಿತ್ ಯಾವುದೇ ಗೊಂದಲಕ್ಕೆ ಅವಕಾಶ ಕೊಡದೇ ಫೀಲ್ಡಿಂಗ್ ಮಾಡಿದರು. ಗುಜರಾತ್ ಬ್ಯಾಟರ್ ಶುಭಮನ್ ಗಿಲ್ ಅವರ ಕ್ಯಾಚ್ ಕೂಡ ಪಡೆದರು. ನಂತರ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ ರೋಹಿತ್ ಅವರಿಗೆ ಪ್ರೇಕ್ಷಕರು ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಅವರ ಪರವಾಗಿ ಘೋಷಣೆಗಳನ್ನು ಕೂಗಿದರು.

ಸಾಮಾಜಿಕ ಜಾಲತಾಣಗಳಲ್ಲಿ ರೋಹಿತ್ ಅವರ ಪರವಾಗಿ ದೊಡ್ಡಮಟ್ಟದ ಪ್ರಚಾರ ಶುರುವಾಗಿದೆ. ಹಾರ್ದಿಕ್ ಅವರ ನಡೆ ಅಹಂಕಾರದ್ದು ಎಂದು ಟೀಕಿಸಲಾಗುತ್ತಿದೆ. ಬಾಹುಬಲಿ ಚಲನಚಿತ್ರದ ನಾಯಕನಿಗೆ ರೋಹಿತ್ ಅವರನ್ನೂ ಖಳನಾಯಕನ ಪಾತ್ರಧಾರಿಯನ್ನು ಹಾರ್ದಿಕ್ ಅವರಿಗೂ ಹೋಲಿಕೆ ಮಾಡಿ ರಚಿಸಲಾಗಿರುವ ವಿಡಿಯೊಗಳು ಮತ್ತು ಮಿಮ್‌ಗಳು ಗಮನ ಸೆಳೆಯುತ್ತಿವೆ.

ಹಾರ್ದಿಕ್ ಪಾಂಡ್ಯ ಹಾಗೂ ರೋಹಿತ್ ಶರ್ಮಾ ಕುರಿತು ಸಾಮಾಜಿಕ ಜಾಲತಾಣದಲ್ಲಿ ಬಾಹುಬಲಿ ಚಿತ್ರದ ಹೋಲಿಕೆಯ ವಿಡಿಯೊ –ಎಕ್ಸ್ ಚಿತ್ರ

ಮೊದಲ ಟೆಸ್ಟ್: ಬಾಂಗ್ಲಾದೇಶ ತಂಡಕ್ಕೆ ಸೋಲು

ಲಂಕಾ ಗೆಲುವಿನಲ್ಲಿ ಮಿಂಚಿದ ರೆಜಿತಾ

ಸಿಲ್ಹೆಟ್ (ಎಪಿ): ಕಸುನ್ ರೆಜಿತಾ (56ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಶ್ರೀಲಂಕಾ ತಂಡವು ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 328 ರನ್‌ಗಳ ಜಯ ಸಾಧಿಸಿತು.

ಮೊದಲ ಇನಿಂಗ್ಸ್‌ನಲ್ಲಿ 92 ರನ್‌ಗಳ ಮುನ್ನಡೆ ಪಡೆದಿದ್ದ ಲಂಕಾ ಪಡೆಯು, ಎರಡನೇ ಇನಿಂಗ್ಸ್‌ನಲ್ಲಿ 418 ರನ್ ಕಲೆಹಾಕಿ ಆತಿಥೇಯ ತಂಡದ ಗೆಲುವಿಗೆ 511 ರನ್‌ಗಳ ಗುರಿಯನ್ನು ನೀಡಿತ್ತು. ಕಠಿಣ ಸವಾಲನ್ನು ಬೆನ್ನಟ್ಟಿದ ಬಾಂಗ್ಲಾ ತಂಡವು ನಾಲ್ಕನೇ ದಿನವಾದ ಸೋಮವಾರ 49.2 ಓವರ್‌ಗಳಲ್ಲಿ 182 ರನ್‌ಗೆ ಕುಸಿಯಿತು.

ಮೊದಲ ಇನಿಂಗ್ಸ್‌ನಲ್ಲಿ 56ಕ್ಕೆ ಮೂರು ವಿಕೆಟ್ ಪಡೆದಿದ್ದ ರಜಿತಾ, ಒಟ್ಟಾರೆ 112 ರನ್‌ಗೆ ಎಂಟು ವಿಕೆಟ್ ಪಡೆದು ಜೀವನ ಶ್ರೇಷ್ಠ ಸಾಧನೆ ಮೆರೆದರು.

ಮೂರನೇ ದಿನದಾಟಕ್ಕೆ 47 ರನ್‌ಗೆ 5 ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿದ್ದ ಬಾಂಗ್ಲಾ ತಂಡದ ಪರ ಮೊಮಿನುಲ್ ಹಕ್ (87; 148ಎ, 4x12, 6x1) ಹೋರಾಟ ತೋರಿದರು. ಅವರಿಗೆ ಮೆಹಿದಿ ಹಸನ್ ಮಿರಾಜ್ (33; 50ಎ) ಹೊರತುಪಡಿಸಿ ಉಳಿದವರಿಂದ ಬೆಂಬಲ ಸಿಗಲಿಲ್ಲ. ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಬಾರಿಸಿದ್ದ ಧನಂಜಯ ಡಿಸಿಲ್ವ ಪಂದ್ಯದ ಆಟಗಾರ ಗೌರವ ಪಡೆದರು.

ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಶ್ರೀಲಂಕಾ ತಂಡವು 1–0 ಯಿಂದ ಮುನ್ನಡೆ ಪಡೆದಿದೆ. ಎರಡನೇ ಪಂದ್ಯವು ಚತ್ತೋಗ್ರಾಮ್‌ನಲ್ಲಿ (ಚಿತ್ತಗಾಂಗ್) ಮಾರ್ಚ್ 30ರಿಂದ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಶ್ರೀಲಂಕಾ 280; ಬಾಂಗ್ಲಾದೇಶ 188; ಎರಡನೇ ಇನಿಂಗ್ಸ್: ಶ್ರೀಲಂಕಾ: 418; ಬಾಂಗ್ಲಾದೇಶ: 49.2 ಓವರ್‌ಗಳಲ್ಲಿ 182 (ಮೊಮಿನುಲ್ ಹಕ್ 87, ಮೆಹಿದಿ ಹಸನ್ ಮಿರಾಜ್ 33; ಕಸುನ್ ರೆಜಿತಾ 56ಕ್ಕೆ 5, ವಿಶ್ವ ಫೆರ್ನಾಂಡೊ 36ಕ್ಕೆ 3, ಲಾಹಿರು ಕುಮಾರ 39ಕ್ಕೆ 2).

ವಿಕೆಟ್ ಪಡೆದ ಸಂಭ್ರಮದಲ್ಲಿ ಶ್ರೀಲಂಕಾದ ಕಸುನ್ ರೆಜಿತಾ –ಎಎಫ್‌ಪಿ ಚಿತ್ರ

ಬಾರ್ಡರ್–ಗಾವಸ್ಕರ್ ಸರಣಿ: ಐದು ಪಂದ್ಯ

ನವದೆಹಲಿ (ಪಿಟಿಐ): ಮುಂಬರುವ ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಐದು ಟೆಸ್ಟ್ ಪಂದ್ಯಗಳನ್ನು ಆಡಿಸಲಾಗುವುದು ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಹೇಳಿದೆ.

ಈ ವರ್ಷಾಂತ್ಯದಲ್ಲಿ ನಡೆಯಲಿರುವ 2024–25ನೇ ಸಾಲಿನ ಸರಣಿಯ ವೇಳಾಪಟ್ಟಿ ಶೀಘ್ರ ಬಿಡುಗಡೆ ಮಾಡಲಾಗುವುದು. 1991–92ರಿಂದ ಇಲ್ಲಿಯವರೆಗೆ ನಡೆದ ಟೂರ್ನಿಯಲ್ಲಿ ಇದೇ ಮೊದಲ ಸಲ ಐದು ಪಂದ್ಯಗಳು ಸೇರ್ಪಡೆಯಾಗಿವೆ. ಇದುವರೆಗೆ ನಾಲ್ಕು ಪಂದ್ಯಗಳ ಸರಣಿ ಮಾತ್ರ ನಡೆಯುತ್ತಿತ್ತು.

'ಮೊಟ್ಟಮೊದಲ ಬಾರಿಗೆ ಐದು ಟೆಸ್ಟ್‌ಗಳು ನಡೆಯುತ್ತಿವೆ. ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ಬಿಡುಗಡೆ ಮಾಡಲಾಗುವುದು' ಎಂದು ಸಿಎ ಹಾಗೂ ಬಿಸಿಸಿಐ ಜಂಟಿಯಾಗಿ ಘೋಷಿಸಿವೆ.

ಟೇಬಲ್ ಟೆನಿಸ್: ಮಾನವ್– ಮನುಷ್ ಜೋಡಿಗೆ ಪ್ರಶಸ್ತಿ

ಶ್ರೀಜಾಗೆ ಸಿಂಗಲ್ಸ್ ಕಿರೀಟ

ನವದೆಹಲಿ (ಪಿಟಿಐ): ಭಾರತದ ಶ್ರೀಜಾ ಅಕುಲಾ ಅವರು ಲೆಬನಾನ್‌ನ ರಾಜಧಾನಿ ಬೇರೂತ್‌ನಲ್ಲಿ ನಡೆದ ಡಬ್ಲ್ಯುಟಿಟಿ ಫೀಡರ್ ಸರಣಿಯ ಟೂರ್ನಿಯಲ್ಲಿ ಮಹಿಳೆಯರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಪುರುಷರ ಡಬಲ್ಸ್‌ನಲ್ಲಿ ಮಾನವ್ ಠಕ್ಕರ್– ಮನುಷ್ ಉತ್ಪಲ್‌ಭಾಯ್ ಷಾ ಜೋಡಿಯು ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ವಿಶ್ವದ 47ನೇ ರ‍್ಯಾಂಕ್‌ನ ಶ್ರೀಜಾ ಅವರು 6-11, 12-10, 11-5, 11-9 ರಿಂದ ಲಕ್ಸೆಂಬರ್ಗ್‌ನ ಸಾರಾ ಡಿ ನಟ್ಟೆ ಅವರನ್ನು ಮಣಿಸಿದರು.

ಶ್ರೀಜಾ ಅಕುಲಾ

ಆದರೆ, ಮಹಿಳೆಯರ ಡಬಲ್ಸ್‌ನಲ್ಲಿ ಶ್ರೀಜಾ ನಿರಾಸೆ ಅನುಭವಿಸಿದರು. ಫೈನಲ್ ಹಣಾಹಣಿಯಲ್ಲಿ ಶ್ರೀಜಾ ಮತ್ತು ದಿಯಾ ಚಿತಾಲೆ ಜೋಡಿಯು 11–4, 9–11, 7–11, 6–11ರಿಂದ ಹಾಂಗ್‌ಕಾಂಗ್‌ನ ಡೂ ಹೊಯ್ ಕೆಮ್ ಮತ್ತು ಝು ಚೆಂಗ್‌ಝು ವಿರುದ್ಧ ಸೋತು ರನ್ನರ್ಸ್ ಅಪ್ ಸ್ಥಾನ ಪಡೆಯಿತು.

ಪುರುಷರ ಡಬಲ್ಸ್‌ನ ಫೈನಲ್‌ನಲ್ಲಿ ಮಾನವ್ ಮತ್ತು ಮನುಷ್ 11-7, 11-5, 9-11, 11-6ರಿಂದ ಸ್ವದೇಶದ ಮುದಿತ್ ದಾನಿ ಮತ್ತು ಆಕಾಶ್ ಪಾಲ್ ಅವರನ್ನು ಸೋಲಿಸಿದರು.

ಭಾರತದ ಪಯಮಂಟಿ ಬೈಸ್ಯಾ ಮತ್ತು ಆಕಾಶ್ ಪಾಲ್ ಜೋಡಿಯು 11-9, 7-11, 11-9, 11-0 ರಿಂದ ಸ್ವದೇಶದ ಅನುಭವಿ ಜೋಡಿಯಾದ ಸತ್ಯನ್ ಜ್ಞಾನಶೇಖರನ್ ಮತ್ತು ಮಣಿಕಾ ಬಾತ್ರಾ ಅವರನ್ನು ಸೋಲಿಸಿ ಮಿಕ್ಸೆಡ್ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.